
ಅಲೆಮಾರಿವೈದ್ಯನ ಆತ್ಮಕತೆ



ಡಾ. ಎಂ.ಬಿ. ಮರಕಿಣಿ

ಶ್ರೀನಿವಾಸ ಪುಸ್ತಕ ಪ್ರಕಾಶನ

ಅಲೆಮಾರಿವೈದ್ಯನ ಆತ್ಮಕತೆ

ಡಾ. ಎಂ.ಬಿ. ಮರಕಿಣಿ

ಶ್ರೀನಿವಾಸ ಪುಸ್ತಕ ಪ್ರಕಾಶನ
ನಂ. 164/A, ಮೊದಲನೇ ಮಹಡಿ, ಎಂ.ಆರ್.ಎನ್. ಬಿಲ್ಡಿಂಗ್
ಕನಕಪುರ ಮುಖ್ಯರಸ್ತೆ, ಬಸವನಗುಡಿ, ಬೆಂಗಳೂರು - 560 004.

ALEMARI VAIDYANA ATMAKATHE
(A Collection of articles)

By
Dr. M.B. Marakini

Published by
K.S. Krishnamurthy, on behalf of **Srinivasa Pustaka Prakashana**,
164/A, 1st Floor, M.R.N. Building, Kanakapura Main Road,
Basavanagudi, Bangalore - 560 004.
Mob : 9844774531, 9844048406

First Edition : 2012

Pages : 188 + iv

Price : Rs. 95 ಬೆಲೆ : ರೂ. ೯೫

No. of Copies : 1000

70 GSM N.S. Maplitho – 1/8 Demy

Cover Design : **Bagur Markandeya**

Typeset at : **Page Designers**
Bangalore - 560 004. Ph : 41691270 E-mail: bsmadhu75@gmail.com

Printed at : **Jagruthi Printers**
56/1-6, Narasimhaiah Garden, Kottigepalya, Magadi Main Road,
Bangalore - 560 091. Phone : 23583850

ಸಮರ್ಪಣೆ



ಡಾ। ಸಬಿತಾ ಮರಕಿಣಿಯವರಿಗೆ

ನಿವೇದನೆ

ಚಿಕ್ಕಂದಿನಿಂದಲೂ ಅಲೆಮಾರಿತನದ ಒಡನಾಡಿಯಾಗಿದ್ದೇನೆ. ಎಸ್. ಎಸ್. ಎಲ್. ಸಿ. ಪರೀಕ್ಷೆ ಕಟ್ಟವಷ್ಟರಲ್ಲಿ ಎಂಟುಬಾರಿ ವಸತಿಗಳನ್ನು ಬದಲಾಯಿಸಬೇಕಾಯಿತು. ಮೈಸೂರು-ಬೆಂಗಳೂರಲ್ಲಿ ವೈದ್ಯಶಿಕ್ಷಣದ ಸಮಯದಲ್ಲಿ ಕೂಡ ಸುಮಾರು ಇಷ್ಟೆ ಸಂಖ್ಯೆಯಲ್ಲಿ ವಸತಿಗಳನ್ನು ಬದಲಾಯಿಸಬೇಕಾಯಿತು. ಮುಂದೆ ಮುಂದೆ ವೈದ್ಯ ವೃತಿಯಲ್ಲಿ ತೊಡಗಿ ಸ್ವಂತ ಚಿಕಿತ್ಸಾಲಯವನ್ನೇ ನಡೆಸಿದರೂ 3 ಬಾರಿ 'ವರ್ಗ'ವಾಗ ಬೇಕಾಯಿತು. ಸ್ವಯಂ ಸೇವಾ ಸಂಸ್ಥೆಗಳ ಮೂಲಕ ಗ್ರಾಮ ವಿಕಾಸ-ಆರೋಗ್ಯ ರಕ್ಷಣೆಯ ಕಾರ್ಯಕ್ರಮಗಳನ್ನು ನಿರ್ವಹಿಸುವಾಗಲಂತೂ 10 ಊರುಗಳಲ್ಲಿ ಡೇರೆ ಹೊಡೆಯುವುದು ಅನಿವಾರ್ಯವಾಯಿತು.

-ಹೀಗೆ ಅಲೆಮಾರಿತನ ನನ್ನ ಬದುಕಿನ ಒಂದು ಭಾಗವೇ ಆಗಿ ಬಿಟ್ಟಿತು ಎನ್ನಬಹುದು.

ಅಲೆಮಾರಿ ಬದುಕಿನಲ್ಲೂ ನನ್ನನ್ನು ಪ್ರೀತಿ ವಿಶ್ವಾಸದಿಂದ ನೋಡಿಕೊಂಡ ಹಲವಾರು ಬಾಲ್ಯ ಸ್ನೇಹಿತರ ಚಿತ್ರ ಕಣ್ಣ ಮುಂದೆ ನಿಲ್ಲುತ್ತದೆ. ಮುಖ್ಯವಾಗಿ ಅ. ನರಸಿಂಹ ಭಟ್, ಎನ್. ರಘುನಾಥ ರೆಡ್ಡಿ, ಸೇಸಪ್ಪ ಆಚಾರ್, ಅ.ಕೃ.ಭ ಹೈಸ್ಕೂಲ್ ದಿನಗಳಿಂದಲೂ ಮಿತ್ರರಾಗಿರುವ ಮುಳಿಯ ಕೃಷ್ಣ-ರಾಮಣ್ಣ, ಕಜೆ ಈಶ್ವರ, ಪಾರ್ಪಕಜೆ ಈಶ್ವರ, ವಿ.ಎಸ್ ರಾಮ ಮತ್ತು ಯರ್ಮುಂಜ ರಾಮಚಂದ್ರ, ವಯಸ್ಸಿನಲ್ಲಿ ಸ್ವಲ್ಪ ಹಿರಿಯರಾದರೂ ನಮ್ಮೊಂದಿಗೆ ಸರಿಸಮಾನರಾಗಿದ್ದ ಪ.ಗೋ ಹಾಗೂ ಬೋಳಂತ ಕೋಡಿ ಈಶ್ವರ ಭಟ್ಟರನ್ನು ಮರೆಯುವುದು ಸಾಧ್ಯವೇ ಇಲ್ಲ.

ನಮ್ಮೂರ ಪ್ರಾಥಮಿಕ ಶಾಲೆಯಲ್ಲಿ ಅಕ್ಷರಾಭ್ಯಾಸ ಮಾಡಿಸಿದ ಮುಳಿಯಾಲ ಸುಬ್ರಾಯಮಾಷ್ಟ್ರು, ತಿಮ್ಮಣ್ಣ ಮಾಷ್ಟ್ರು, ಹೆಡ್ಮಾಷ್ಟ್ರು ಕೃಷ್ಣಯ್ಯ, ವಿಷ್ಣು ಭಟ್ಟರು, ಬಿ. ಗಣಪ್ಪಯ್ಯನವರು, ಸರ್ವಜ್ಞ ಕೃಷ್ಣ ಮಾಷ್ಟ್ರು ಹಾಗೂ ಮುಳಿಯಾಲ ಕೃಷ್ಣಮಾಷ್ಟ್ರು ಇವರೆಲ್ಲರಿಗೆ ಭಕ್ತಿಪೂರ್ವಕ ನಮನಗಳನ್ನೂ ಸಲ್ಲಿಸುತ್ತೇನೆ. ಹೈಸ್ಕೂಲ್‌ನಲ್ಲಿ ಶ್ರೀಯುತ ಪದಕ್ಕಣ್ಣಾಯರು, ಸ್ಕೌಟ್ ಮುಖ್ಯಸ್ತರಾದ ಬಿ.ಎಲ್. ಭಟ್ಟರು ಹಾಗೂ ಕನ್ನಡದ ಹಿರಿಯಣ್ಣ ಕಡವ ಶಂಭುಶರ್ಮ ಮೊದಲಾದವರಿಗೆ ಕೃತಜ್ಞತಾ ಪೂರ್ವಕ ವಂದನೆಗಳನ್ನು ಸಲ್ಲಿಸುತ್ತೇನೆ.

ವಿವಿಧ ಸ್ವಯಂಸೇವಾಸಂಸ್ಥೆಗಳ ಮೂಲಕ ಗ್ರಾಮಾಭಿವೃದ್ಧಿ ಹಾಗೂ ಆರೋಗ್ಯ ರಕ್ಷಣೆಯ ಕಾರ್ಯಕ್ರಮಗಳನ್ನು 25 ವರ್ಷಗಳ ಕಾಲ ವಿವಿಧ ಪ್ರದೇಶಗಳಲ್ಲಿ ನಿರ್ವಹಿಸುತ್ತಿದ್ದಾಗ ಪ್ರೋತ್ಸಾಹ ನೀಡಿದ ಸರ್ವಶ್ರೀ ಅಲೋಶಿಯಸ್ ಫೆರ್ನಾಂಡಿಸ್ (ಮೈರಾಡ), ಜಗನ್ನಾಥರಾವ್ ಚಂಡ್ರಿಕಿ, ಎ. ಎಚ್ ರಾಮರಾವ್ (ರಾಮಸುಧಾ) ಹಾಗೂ

ಬಿಹಾರ್ ಜಾರ್ಖಂಡಗಳಲ್ಲಿದ್ದಾಗ ವಿಶೇಷ ನೆರವು ನೀಡಿದ ಡೇಮಿಯನ್ ಫೌಂಡೇಶನ್ನಿನ ಡಾ|| ಕೃಷ್ಣಮೂರ್ತಿಯವರಿಗೂ ಡಾ|| ಎಂ. ವಿ. ಭಟ್ಟರಿಗೂ ನನ್ನ ನಮಸ್ಕಾರಗಳು.

ಆರ್ಥಿಕ ಸಂಕಷ್ಟವನ್ನೆದುರಿಸಿದ್ದಾಗಲೂ ನನ್ನ ವಿದ್ಯಾಭ್ಯಾಸಕ್ಕೆ ಅಡಚಣೆ ಉಂಟಾಗದಂತೆ ನೋಡಿಕೊಂಡ ಕುಟುಂಬದ ಎಲ್ಲ ಸದಸ್ಯರನ್ನೂ, ನನ್ನ ಸಲುವಾಗಿ ಅವರು ಮಾಡಿದ ಬಹು ವಿಧದ ತ್ಯಾಗಗಳನ್ನು ನಾನು ಮರೆಯುವುದಕ್ಕೆ ಸಾಧ್ಯವಿಲ್ಲ-ಕೃತಜ್ಞತೆ ಎಂದಷ್ಟೇ ಹೇಳಬಲ್ಲೆ.

ನಾನೀಗ 80ರ ಸೀಮಾರೇಖೆಯೊಳಗೆ ಕಾಲಿಟ್ಟಿದ್ದೇನೆ 8 ವರ್ಷಗಳ ಹಿಂದೆ, ಅಲೆಮಾರಿ ಬದುಕಿಗೆ ವಿದಾಯ ಹೇಳಿ ನೆಲೆವೂರಲು ನಿರ್ಧರಿಸಿ, ನೆಲಮಂಗಲದ ಬಳಿಯ ಅರಸಿನಕುಂಟೆ ಗ್ರಾಮದ (ಆದರ್ಶನಗರಲ್ಲಿ) ಒಂದು ಸ್ವಂತ ಕುಟೀರವನ್ನು ನಿರ್ಮಿಸಿ, ವಿಶ್ರಾಂತಿ ಜೀವನವನ್ನು ಕಳೆಯಲು ನಿರ್ಧರಿಸಿದ್ದಾಯಿತು. ಅದರಂತೆ 20-10-2003 ರಂದು 'ಮಾನಸ' ಕುಟೀರದಲ್ಲಿ ಕಾಲೂರಿಯೂ ಆಯಿತು. ಇನ್ನುಳಿದ ದಿನಗಳನ್ನು ನಮ್ಮ ಚಿಕ್ಕ ಕುಟುಂಬವಾದ ಮಗ-ಸೊಸೆ ಮೊಮ್ಮಕ್ಕಳ ಜತೆ ಕಳೆಯುತ್ತಾ ಕೌಟುಂಬಿಕ ವಾತ್ಸಲ್ಯದ ನೆರಳಲ್ಲಿ ಕಳೆಯಲು ನಿರ್ಧರಿಸಿದೆವು. ಆದರೆ ನಮ್ಮ ಆಸೆ ಸಫಲವಾಗಲಿಲ್ಲ. ಗೃಹಪ್ರದೇಶದ ವಾರದೊಳಗಾಗಿ ನಾರಾಯಣನಿಗೆ ಉದ್ಯೋಗದಲ್ಲಿ ಬಡ್ತಿ ನೀಡಿ ಕಾರವಾರದ ಆಕಾಶವಾಣಿ ಕೇಂದ್ರಕ್ಕೆ ವರ್ಗಾಯಿಸಿದ್ದರಿಂದ ಅವರು ಹೊರಟು ಹೋದರು. ವೃದ್ಧ ದಂಪತಿ ಮಾತ್ರ ಮಾನಸದ ನಿವಾಸಿಗಳಾದೆವು.

ಬಾಳಸಂಜೆಯ ದಿನಗಳಲ್ಲಿ ಮತ್ತೆ ಲೇಖನಿ ಎತ್ತುವುದಕ್ಕೆ ಮುಂದಾದೆ. ನಾಲ್ಕಾರು ಪುಸ್ತಕಗಳು ಪ್ರಕಟವಾದವು. ಹವಿಗನ್ನಡದ ಮೊದಲ ಕಾದಂಬರೀ ಕಾರ್ತಿ ಎಂಬ ಹೆಗ್ಗಳಿಕೆ ಪಡೆದ ಸಬಿತ 3 ಕಾದಂಬರಿಗಳನ್ನೂ ಒಂದು ಕಥಾಸಂಕಲನವನ್ನು ಈ ಅವಧಿಯಲ್ಲಿ ಬರೆದು ಪ್ರಕಟಸಿದ್ದರಿಂದ ಸಾಹಿತ್ಯ ಪ್ರಶಸ್ತಿ ಕೂಡ ದೊರಕಿತು. ನಾನು 'ನೆನಪುಗಳಕಂತೆ'ಯನ್ನು ಬರೆಯಲು ನಿರ್ಧರಿಸಿದೆ; ಅಷ್ಟಿಷ್ಟು ಅಲ್ಲಲ್ಲಿ ಎಂಬಂತೆ ಬಿಡಿ ಬಿಡಿಯಾಗಿ ನೀಡಿದೆ. ಓದಿದ ಸಬಿತಾ ಬೇಗನೆ ಅಚ್ಚಿಸುವ ವ್ಯವಸ್ಥೆ ಆಗಲಿ ಎಂದು ನಸುನಗುವಿನಿಂದಲೇ ಸೂಚಿಸಿದಳು (ಕಾರಣ ಇಷ್ಟೇ- ನನ್ನ ಅಷ್ಟಾವಕ್ರ ಕೈ ಬರಹವನ್ನು ಓದಲು ಪ್ರಯತ್ನಿಸಿ ವಿಫಲವಾದದ್ದು) 'ನಿನ್ನ ನೆನಪುಗಳನ್ನು ಬರೆ. ಒಟ್ಟಿಗೇ ಅಚ್ಚಿಸೋಣ ಎಂದೆ. ಅದಕ್ಕೆ 'ಹುಂ' ಎಂದು ಸಮ್ಮತಿ ಸೂಚಿಸಿದರೂ ಲೇಖನಿ ಹಿಡಿಯುವುದು ಸಾಧ್ಯವಾಗಲಿಲ್ಲ.

ಈಗಷ್ಟೇ 'ಅಲೆಮಾರಿಯಕತೆ' ಪುಸ್ತಕ ರೂಪದಲ್ಲಿ ಅಚ್ಚಾಗಿದೆ- ಆದರೆ, ಓದಲು ಸಬಿತಾ ಇನ್ನಿಲ್ಲ! ದಿನಾಂಕ 1 ಫೆಬ್ರವರಿ 2011 ರಂದು ಹೃದಯಾಘಾತದಿಂದ ಸಬಿತಾ ನಿಧನರಾದರು. ನಾನು ಕರಗಿಹೋದೆ! ಈಗ ಸಬಿತಾ ನೆನಪಿಗೆ ಕಿರುಕಾಣಿಕೆಯಾಗಿ ಈ ಪುಸ್ತಕವನ್ನು ಸಮರ್ಪಿಸುತ್ತೇನೆ.

- ಯಂ.ಬಿ. ಮರಕಿಣಿ

ಚರವಾಣಿ: 9845277977

11-11-2011

ಒಳಪುಟಗಳಲ್ಲಿ....

ಭಾಗ–1

1 ಬಾಲ್ಯಕಾಲದ ದಿನಗಳು ಮತ್ತು ವಿದ್ಯಾಭ್ಯಾಸ
ನಮ್ಮ ಊರು – ನಮ್ಮಶಾಲೆ 11

2 ಆಯುರ್ವೇದ ಮತ್ತು ಆಧುನಿಕ ವೈದ್ಯಶಾಸ್ತ್ರದ ಸಂಯುಕ್ತ ಶಿಕ್ಷಣ
ಎಲ್. ಎ. ಎಂ. ಎಸ್. ಕೋರ್ಸ್ ಮೈಸೂರಿನಲ್ಲಿ ಮೆಡಿಕೋ 22

3 ವೈದ್ಯಶಿಕ್ಷಣದ ಹಸಿರು ನೆನಪುಗಳು ಹಳೇಕಾಲೇಜು : ಹೊಸಚೈತನ್ಯ 27

4 ಸಾಂಸ್ಕೃತಿಕ ಚಟುವಟಿಕೆಗಳು ಮತ್ತು ಸಾಹಿತ್ಯ ಸೇವೆ
ವಿದ್ಯಾರ್ಥಿಜೀವನದ ಇನ್ನೊಂದುಪಾರ್ಶ್ವ 40

5 ವೈದ್ಯಜೀವನದ ಒಳನೋಟ ಹುಟ್ಟೂರಲ್ಲಿ ಗ್ರಾಮೀಣ ಕ್ಲಿನಿಕ್ ತೆರೆದೆ 48

6 ಹ್ಯಾಂಬರ್ಗ್ ಮತ್ತು ಲಂಡನ್‌ನಲ್ಲಿ ಡಿ.ಟಿ.ಎಂ, ಸಿ.ಸಿ.ಎಫ್.ತರಬೇತಿ
ಮುಗಿಸಿಕೊಂಡು ಸ್ವದೇಶಕ್ಕೆ ಮರಳಿ ಬಂದ ಮೇಲೆ 99

7 ಮಂತ್ರಾಲಯಂ ರೋಡ್ ಸ್ಟೇಶನ್ ಬಳಿಯ ಪ್ರೇಮಾಯತನ ಆಶ್ರಮದಲ್ಲಿ
ದಿ॥ ಪಂಡಿತ ತಾರಾನಾಥರ ಪ್ರೇಮಚಿಕಿತ್ಸಾಲಯ ಪುನರಾರಂಭ 106

8 ಹೈದ್ರಾಬಾದ್ ಕರ್ನಾಟಕದ ಹಿಂದುಳಿದ ಚಿತ್ತಾಪುರದಲ್ಲಿ ಮೈಸೂರು
ದವಾಖಾನೆ – ಚಿತ್ತಾಪುರದ ಮಿತ್ರರು 111

ಭಾಗ–2

1 ಗಿರಿಜನ– ಹರಿಜನ ಅಭಿವೃದ್ಧಿ ಕಾರ್ಯಕ್ರಮ ಅವೇರಿನ ತೇರು 117

2 ದಟ್ಟಡವಿಯ ನಿವಾಸಿಗಳಿಗೂ ಚಿಕಿತ್ಸಾಸೌಲಭ್ಯ 'ಜೀವನಸ್ರವಂತಿ'
ಪ್ರಾಜೆಕ್ಟ್ ಗೋದಾವರಿನದಿಯ ದೋಣಿಆಸ್ಪತ್ರೆ 130

3 ಡೆನ್‌ಮಾರ್ಕ್‌ನಲ್ಲಿ ಭಾರತಮಿತ್ರ ಗುಂಪುಗಳೊಂದಿಗೆ ಸಂವಾದ 132

4 ಮೈರಾಡ– ಸ್ವಿಸ್ ದೆವಲಪ್‌ಮೆಂಟ್ ಕೋಪರೇಶನ್ ಸಹಯೋಗದ
ಪ್ರಾಜೆಕ್ಟ್ ಕಮಲಾಪುರದ ಜಲದಾಹಕ್ಕೆ ಕಡಿವಾಣ: ಪಿಡೊ 136

5 ನಿರ್ಲಕ್ಷಿತ ಜನರ ಮಕ್ಕಳೆಡೆಗೆ ನೆರವಿನತ್ತ ಹೆಚ್.ಡಿ.ಕೋಟೆ ಪ್ರಾಜೆಕ್ಟ್
ಮೈರಾಡದ ಮೈತ್ರಿಪಥ 150
6 ಹೈದರಾಬಾದ್ ಕರ್ನಾಟಕದಲ್ಲಿ ರಾಷ್ಟ್ರವೀರ ಸ್ವಾಮಿ ರಾಮಾನಂದ ತೀರ್ಥ
ಟ್ರಸ್ಟ್ ನಿಜಾಂಶಾಹಿ ವಿರುದ್ಧ ಹೋರಾಟ ನಡೆಸಿದ ಸ್ವಾತಂತ್ರ್ಯವೀರರ
ಸಂಸ್ಮರಣೆ 156
7 ಮಹಾನಗರದ ನೆರೆಹೊರೆಯ ಗ್ರಾಮಗಳಲ್ಲಿ ರಾಮಸುಧಾ ಟ್ರಸ್ಟ್
ಮಹಿಳಾ ಸಮೃದ್ಧಿಯೋಜನೆ 159
8 ಕುಷ್ಠರೋಗ ನಿರ್ಮೂಲಕ್ಕೆ ಸೆ.ವಿಶ್ವ ಆರೋಗ್ಯ ಸಂಸ್ಥೆಯ ಕಾರ್ಯಕ್ರಮ
ಬಿಹಾರ- ಜಾರ್ಖಂಡ ಆದಿವಾಸಿಗಳಿಗೆ ಎಂ.ಡಿ.ಟಿ. ಚಿಕಿತ್ಸೆ 164
9 ಪಶ್ಚಿಮ ಕರಾವಳಿಯಲ್ಲಿ ಫ್ರೀಡಂ ಫೌಂಡೇಶನ್ ಪ್ರಾಜೆಕ್ಟ್
ಏಡ್ಸ್‌ರೋಗಿಗಳ ಶುಶ್ರೂಷಾಕೇಂದ್ರದ ನಿರ್ವಹಣೆ 167

ಭಾಗ–3

ನೆಲಮಂಗಲದ ಬಳಿ ಅರಸಿನ ಕುಂಟೆ ಗ್ರಾಮದಲ್ಲಿ
'ಮಾನಸ' ಮನೆಯಲ್ಲಿ ನೆಲೆಯೂರಿದಾಗ
ಬಾಳಸಂಜೆಯ ದಿನಗಳು 173

ಭಾಗ - I

ದಕ್ಷಿಣಕನ್ನಡದಿಂದ
ಬಂಗ್ಲಾದೇಶದ ಗಡಿವರೆಗೆ

೧

ಬಾಲ್ಯಕಾಲದ ದಿನಗಳು ಮತ್ತು ವಿದ್ಯಾಭ್ಯಾಸ

ನಮ್ಮ ಊರು – ನಮ್ಮಶಾಲೆ

ನಮ್ಮ ದೇಶ ಸ್ವತಂತ್ರವಾಗುವುದಕ್ಕೆ 16 ವರ್ಷಗಳ ಮೊದಲು ನಾನು ಹುಟ್ಟಿದೆ (1931). ಅದು ಹಳ್ಳಿಯೂರು. ಮಂಗಳೂರಿನಿಂದ ಕಾಸರಗೋಡಿಗೆ ಹೋಗುವ ರಸ್ತೆಯಲ್ಲಿ ವಿಟ್ಲದಿಂದ ಮುಂದಕ್ಕೆ ಈಗಿನ ಕೇರಳ–ಕರ್ನಾಟಕಗಳ ಗಡಿಯಲ್ಲಿರುವ ಅಡ್ಯನಡ್ಕದ ಸಮೀಪ 'ಮರಕಿಣಿಮನೆ'; 'ಗುರಿಕ್ಕಾರ' ವಂಶ; ಮಧ್ಯಮವರ್ಗದ ಕೃಷಿಕ ಕುಟುಂಬ. ಸಜ್ಜನ ಗುರಿಕ್ಕಾರರೆಂದು ಹೆಸರುವಾಸಿಯಾಗಿದ್ದ ಅಜ್ಜ ದೈವಭಕ್ತರು; ಸಂಪ್ರದಾಯನಿಷ್ಠರು. ಅವರು ಊರಿನ – ಪರಊರಿನ ದೇವಸ್ಥಾನ, ಭೂತಸ್ಥಾನ, ನಾಗಬನ ಮೊದಲಾದವುಗಳ ಜಾತ್ರೆ, ಕೋಲ, ತಂಬಲ, ಮುಂತಾದುವು ಕಾಲಕಾಲಕ್ಕೆ ನಡೆಯುವಂತೆ ಶ್ರದ್ಧೆವಹಿಸುತ್ತಿದ್ದವರು. ಜತೆಗೆ ಶಿಕ್ಷಣ– ಎಂದರೆ ಸಂಸ್ಕೃತ ವೇದಪಾಠದಲ್ಲಿಯೂ ಆಸಕ್ತಿ ಇದ್ದವರು. ಮಣಿಮುಂಡದ ಶಾಸ್ತ್ರಿಗಳ ಮಗಳು ಗೌರಮ್ಮನನ್ನು ತಮ್ಮ ಮನೆಯ ಸೊಸೆಯಾಗಿಸಿಕೊಂಡ ಬಾಂಧವ್ಯದ ಮೂಲಕವೋ ಏನೋ – ಅಲ್ಲಿ ನಡೆಯುತ್ತಿದ್ದ ವೇದಪಾಠ ಕಾರ್ಯವನ್ನು ಶಾಲೆಯ ರೂಪದಲ್ಲಿ ಮೊದಲು ಮರಕಿಣಿಗೂ ಅನಂತರ ಅಡ್ಯನಡ್ಕಕ್ಕೂ ಸ್ಥಳಾಂತರಿಸಿ, ನಡೆಸಿಕೊಂಡು ಹೋದರು. ಕಾಲಾನುಕ್ರಮದಲ್ಲಿ ಅದು 'ಪ್ರಾಥಮಿಕಶಾಲೆ' ಆಯಿತು– ಈಗ 'ಕಾಲೇಜು' ಆಗಿ ಬೆಳೆದಿದೆ. ವಾರ್ಣಾಶಿ ಸುಬ್ರಾಯಭಟ್ಟ, ಲಕ್ಷ್ಮಣದಾಸಪ್ಪೈ, ಉಳಯ ಸುಬ್ಬಪ್ಪು ಮಣಿಯಾಣಿ ಹಾಗು ಸಾಯಕೃಷ್ಣಭಟ್ಟ ಮೊದಲಾದವರ ಸತತ ಪ್ರಯತ್ನದಿಂದ ಈ ಪ್ರಗತಿ ಸಾಧ್ಯವಾಯಿತು. ನಮ್ಮ ತಂದೆ ಮರಕಿಣಿ ಗುರಿಕ್ಕಾರ ನಾರಾಯಣ ಭಟ್ಟರು ಪ್ರಗತಿಪರ ಗೃಹಸ್ಥರಾಗಿದ್ದರು. ಗ್ರಾಮದ ಸಮಗ್ರ ವಿಕಾಸಕ್ಕೂ ಸಮಾಜದ ಉನ್ನತಿಗೂ ಸಹಾಯಕವಾದ ಹತ್ತಾರು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದರು. ಗ್ರಾಮಪಂಚಾಯಿತಿ, ಸಹಕಾರಸಂಘ ಹಾಗೂ ಕೃಷಿಸಂಬಂಧಿತ ಚಟುವಟಿಕೆಗಳಲ್ಲಿ ಹೆಚ್ಚಿನ ಉತ್ಸಾಹದಿಂದ ಸಹಯೋಗ ನೀಡುತ್ತಿದ್ದರು. ಮೊದಲನೇ ಮಹಾಯುದ್ಧದ

ತರುವಾಯ ಉಂಟಾದ ಆರ್ಥಿಕಕುಸಿತ, ಅಡಿಕೆತೋಟಕ್ಕೆ ಹಬ್ಬಿದ 'ಕೊಳೆರೋಗ' ಅದರ ನಿವಾರಣೆಗಾಗಿ ಪ್ರಚಾರಕ್ಕೆ ಬಂದ ಔಷಧಿ- 'ಬೋರ್ಡೊ' ಮಿಶ್ರಣ ಸಿಂಪರಣೆ, ಸಿಂಪಡಿಸುವುದಕ್ಕಾಗಿ ಕೊಯಂಬತ್ತೂರಿನಲ್ಲಿ ತಯಾರಾಗುತ್ತಿದ್ದ 'ಪೀಪೆ ಪಂಪ್'ನ್ನು ಸ್ವತಃ ಅಲ್ಲಿಗೆ ಹೋಗಿ, ನೋಡಿ, ಬಳಕೆಗೆ ತಂದಿದ್ದರು. ಕಾಂಗ್ರೆಸಿಗರಲ್ಲದಿದ್ದರೂ ಗಾಂಧೀ ತತ್ವಗಳಲ್ಲಿ ವಿಶ್ವಾಸವುಳ್ಳವರಾಗಿದ್ದರು. ಅಡ್ಯನಡ್ಕ ಶಾಲೆಯಲ್ಲಿ 'ಹರಿಜನ' ಮಕ್ಕಳಿಗೆ ಪ್ರತ್ಯೇಕ ಸ್ಥಳದಲ್ಲಿ ಪಾಠನಡೆಯುತ್ತಿದ್ದುದನ್ನು ನಿಲ್ಲಿಸಿ ಕ್ಲಾಸಿನಲ್ಲಿ ಎಲ್ಲರಂತೆ ಕುಳಿತು ಓದುಬರಹ ಕಲಿಯುವ ಅವಕಾಶ ಪ್ರಾರಂಭಿಸಲು ಒತ್ತಾಯಿಸಿದ್ದಲ್ಲದೆ, ಅದು ಸಾಧ್ಯವಾಗುವಂತೆ ಮಾಡಿದ ಆಗಿನ ಶಾಲಾಶಿಕ್ಷಕ- ವ್ಯವಸ್ಥಾಪಕರಾಗಿದ್ದ ತಿಮ್ಮಣ್ಣ ಭಟ್ಟರನ್ನು ಬೆಂಬಲಿಸಿದ್ದರು.

ಆಗ ಅಡ್ಯನಡ್ಕ ಶಾಲೆ ಒಂದು ಉತ್ತಮವರ್ಗದ ಶಿಕ್ಷಣ ಸಂಸ್ಥೆಯಾಗಿತ್ತು. ಶಾಲೆಗೊಂದು ಸ್ವಂತ ಕಟ್ಟಡ, ವಿಶಾಲವಾದ ಆಟದಬಯಲು, ಕೈಮಗ್ಗ- ನೂಲುವ ಉಪವೃತ್ತಿ ಕಲಿಸಲು ವ್ಯವಸ್ಥೆಗಳಿದ್ದವು. ಹೂಗಿಡಗಳ ಕೈತೋಟಗಳು ಶಾಲೆಯ ಆವರಣವನ್ನು ಅಂದಗೊಳಿಸಿದ್ದವು. ಪಾಠ ಪ್ರವಚನಗಳ ಜತೆಗೆ 'ತಿಂಗಳಹಬ್ಬ', ವಿದ್ಯಾರ್ಥಿಗಳ ಚರ್ಚಾಕೂಟ ಇತ್ಯಾದಿಗಳು, ಶಾಲೆಯ ಸಹಾಯಧನಕ್ಕಾಗಿ ದೀಪಾವಳಿ ತಿರುಗಾಟವಿತ್ತು, ಆಗೊಮ್ಮೆ ಈಗೊಮ್ಮೆ ನಡೆಯುವ ಭಜನಾ ಕೂಟಗಳು ವರ್ಷಾವಧಿಯ 'ಶಾರದಾಪೂಜೆ' (ವಿಜಯದಶಮಿ) ತಾಳಮದ್ದಳೆ, ಹರಿಕಥೆಗಳು; ಎಂದೋ ಒಮ್ಮೆ ನಡೆಯುತ್ತಿದ್ದ ಪುರಾಣವಾಚನ, ಜಲತರಂಗ ಕಾರ್ಯಕ್ರಮ, ಜಾದೂಪ್ರದರ್ಶನ- ಹೀಗೆ ಮನರಂಜನೆ ಮತ್ತು ಶಿಕ್ಷಣ ಜತೆಜತೆಯಾಗಿಯೇ ಸಾಗುತ್ತಿದ್ದುವು. ಶಾಲಾ ಶಿಕ್ಷಣದಲ್ಲಿ ಶಿವರಾಮ ಕಾರಂತರು ಆದಿನಗಳಲ್ಲಿ ಏರ್ಪಡಿಸುತ್ತಿದ್ದ ಬೇಸಿಗೆ ಶಿಬಿರ (ಮಕ್ಕಳ ಕೂಟ) ಹಾಗೂ ಅನೌಪಚಾರಿಕ ಬೋಧನಾ ವಿಧಾನಗಳ ಪ್ರಭಾವವಿತ್ತು. ಅವರು ಒಂದೆರಡು ಬಾರಿ ನಮ್ಮಶಾಲೆಗೂ ಭೇಟಿ ನೀಡಿದ್ದರು. ಶಾಲೆಯಲ್ಲಿ ನಮ್ಮ ತಂದೆಯವರುಕೂಡ ಕೆಲಕಾಲ ಶಿಕ್ಷಕರಾಗಿಯೂ ದುಡಿದಿದ್ದರು. ಆಡಳಿತ ಮಂಡಳಿಯ ಪ್ರಮುಖ ಸದಸ್ಯರೂ ಆಗಿದ್ದರು.

ನಮ್ಮ ತಂದೆಯವರಿಗೆ ಅಣ್ಣತಮ್ಮಂದಿರಿರಲಿಲ್ಲ. ಮೂರುಜನ ಸೋದರಿಯರಿದ್ದರು. ಅವರ ಪರಿವಾರ ಹೆಚ್ಚಿನಮಟ್ಟಿಗೆ ನಮ್ಮಮನೆಯನ್ನೇ ಆಧರಿಸಿಕೊಂಡಿತ್ತು. ಆರ್ಥಿಕ ಸಂಕಷ್ಟವಿದ್ದ ಆದಿನಗಳಲ್ಲಿ ಆಕುಟುಂಬಗಳಿಗೆ ನೆರವಾಗಲು ಅಪ್ಪ ಅನೇಕ ಪ್ರಯತ್ನಗಳನ್ನು ನಡೆಸಿದರೂ ಪ್ರಯೋಜನ ಅಷ್ಟಾಗಿ ದೊರಕಲಿಲ್ಲ. ಸಾಲದಹೊರೆ ನಮ್ಮ ಜೀವನವನ್ನು ಇನ್ನಷ್ಟು ಕಷ್ಟಕರವಾಗಿಸಿತು.

ನಮ್ಮದು ಮಂಗಳೂರು ಹೆಂಚಿನ ಉಪ್ಪರಿಗೆಮನೆ; ಅದು ರಸ್ತೆಗಿಂತ ಸ್ವಲ್ಪ ತಗ್ಗಿನ ಕಣಿವೆಯಲ್ಲಿತ್ತು. ಎದುರುಭಾಗದಲ್ಲಿ ಸಾಲು ತೋಟಗಳು. ಹಿಂದಕ್ಕೂ ಉತ್ತರ

ಭಾಗಕ್ಕೂ ಚಿಕ್ಕಚಿಕ್ಕ ಗುಡ್ಡಗಳು. ಹಳೆಯಮನೆ ಇಲ್ಲೇ ಇತ್ತು. ಹೊಸಮನೆಯನ್ನು 1920ರ ಸುಮಾರಿಗೆ ಅಜ್ಜನ ಅಪೇಕ್ಷೆಯಂತೆ ಕಟ್ಟಲು ಪ್ರಾರಂಭಿಸಿದರು. ದೊಡ್ಡ ಮಾಳಿಗೆಮನೆ ನಿರ್ಮಿಸಿದರು (ಜತೆಗೆ ಮೊದಲೇ ಇದ್ದ ಸಾಲ ಇನ್ನಷ್ಟು ದೊಡ್ಡದಾಯಿತು). ಮನೆಯಲ್ಲಿ ಸಂತಾನವೃದ್ಧಿ, ಸಾಮಾಜಿಕ ಕಾರ್ಯಕ್ರಮಗಳು, ಕೌಟುಂಬಿಕ ಹಾಗೂ ಸಾಂಪ್ರದಾಯಿಕ ಹಬ್ಬ ಹುಣ್ಣಿಮೆಗಳು, ಪೂಜೆ ಪುನಸ್ಕಾರಗಳು ಮದುವೆ- ಉಪನಯನ ಅಂತ ಖರ್ಚುವೆಚ್ಚ ಹೆಚ್ಚುತ್ತಿದ್ದುದರಿಂದ ನಮ್ಮ ಅಡಿಕೆ ತೋಟಕ್ಕೆ ಹೊಂದಿಕೊಂಡಿದ್ದ ಕೆಲವು ಗದ್ದೆಗಳನ್ನು ಖರೀದಿಸಿ ಅಡಿಕೆಸಸಿಗಳನ್ನು ನೆಟ್ಟು ತೋಟವನ್ನು ವಿಸ್ತರಿಸಿದರು. ಅಡಿಕೆ 'ಫಸಲು' (ಮೊದಲನೆಯ ಸಲ) ಕೈಗೆ ಬರಲು ಕನಿಷ್ಟ ಎಂಟುವರ್ಷಗಳು ಬೇಕು. ಹೊಸ ಆಸ್ತಿ ಖರೀದಿಸಲೂ ಸಾಲ ಮಾಡಿದ್ದಾಗಿತ್ತು. ಕೃಷಿಗೆ, ತೋಟಗಳ ನಿರ್ವಹಣೆಗೆ ಅಂತ ಸಾಲದ ಮೊತ್ತ ಏರುತ್ತಲೇ ಹೋಯಿತು.

ನಾನು ಪ್ರಾಥಮಿಕ ಶಾಲೆಯ 6ನೇ ತರಗತಿಯನ್ನು ಪ್ರವೇಶಿಸಿದಾಗ, ಮನೆಯ ಆರ್ಥಿಕ ಪರಿಸ್ಥಿತಿ ತೀರಕಂಗೆಟ್ಟಿತ್ತು. ಸಾಲದ ಬಡ್ಡಿ ಕೊಡಲಿಕ್ಕೂ ಸಾಧ್ಯವಾಗದ ಪರಿಸ್ಥಿತಿಯಿತ್ತು. ಸಾಲ ವಸೂಲಿಗಾಗಿ ಕೋರ್ಟಿನಲ್ಲಿ ದಾವೆ ಹೂಡಿದ್ದರು. ಆಗ ರಾಜಿಮಾಡಿಕೊಂಡು ಐದು ವರ್ಷಗಳಿಗೆ ಮರಕಿಣಿ ಮನೆ, ತೋಟ ಮೊದಲಾದುವನ್ನೆಲ್ಲಾ ಸಾಲಿಗರ ವಶಕ್ಕೆ ಬಿಟ್ಟುಕೊಟ್ಟರು ('ಇಳಿದು ಆರುವಾರ' ಎಂಬ ಪದ್ದತಿ). ಅದರ ಉತ್ಪನ್ನದಲ್ಲಿ ಸಾಲದ ಬಡ್ಡಿ ಹಾಗೂ ಆಸ್ತಿಯ ನಿರ್ವಹಣೆ ನಡೆಸಿ ವಾಯಿದೆಯ ಅವಧಿ ಮುಗಿಯುವಾಗ ಸಾಲದ ಮೊತ್ತವನ್ನು ಅವರಿಗೆ ಕೊಟ್ಟು ಆಸ್ತಿ ಮನೆಗಳನ್ನು ಮರಳಿ ವಶಕ್ಕೆ ಪಡೆದುಕೊಳ್ಳಬೇಕೆಂಬ ವ್ಯವಸ್ಥೆಗೆ ಅಪ್ಪ ಒಪ್ಪಿಕೊಂಡರು.

ಇಲ್ಲಿಂದ ಪ್ರಾರಂಭವಾಯಿತು ನಮ್ಮ ಪರಿವಾರದ 'ಸಂಚಾರಿ ಬಿಡಾರ'. ಮೊದಲಿಗೆ ಊರಲ್ಲೇ ಇದ್ದ- ಹಿಂದೆ ಎಂದೋ ಖರಿದಿಸಿ, ಅಷ್ಟಿಷ್ಟು ಬೇಸಾಯ ಮಾಡುತ್ತಿದ್ದ ಗುಡ್ಡದ ಆಚೆಗಿನ ಮಿತ್ತಡ್ಕದಲ್ಲಿ ಬಿಡಾರ ಮಾಡಿದ್ದಾಯಿತು. ಮುಂದಿನವರ್ಷ ಮಲೆನಾಡು ಪ್ರದೇಶದ ಹೊಸಮಠದ ಬಳಿ ಶ್ರೀಮಂತರೊಬ್ಬರ ಅಡಿಕೆ ತೋಟದ ಕೃಷಿಯನ್ನು ನಿರ್ವಹಿಸಲು ಒಪ್ಪಿಕೊಂಡು ಸಂಸಾರವನ್ನು ಅಲ್ಲಿಗೆ ಸಾಗಿಸಿದರು. ಅಲ್ಲಿನ ಹವೆಗೆ ಹೊಂದಿಕೊಳ್ಳಲು ಸಾಧ್ಯವಾಗದೆ ಮಕ್ಕಳೂ ಇತರರೂ ನರಳುವಂತಾದಾಗ ಮತ್ತೆ ಬಿಡಾರ ಬದಲಾಯಿಸಿ ಊರಿಗೆ ಹಿಂತಿರುಗಿದರು. ನೆಗಳಗುಳಿಯ ಬಳಿಯ ಚಾಕಟೆಮೂಲೆಯಲ್ಲಿಯೂ ಅಲ್ಲಿಂದ ಮುಂದೆ ಮರಕಿಣಿಗೆ ತೀರ ಸಮೀಪ ಸಾಂತಪದವು ವೆಂಕಟೇಶ್ವರ ಭಟ್ಟರು ಒದಗಿಸಿಕೊಟ್ಟ ಬಾಳುಕಟ್ಟದ ಚಿಕ್ಕಮನೆಯೊಂದರಲ್ಲಿ ವಾಸಮಾಡಿದ್ದೂ ಆಯಿತು. ಒಪ್ಪಂದದ ವಾಯಿದೆ ಮುಗಿಯುತ್ತಿದ್ದಂತೆಯೇ ಇನ್ನೊಂದು 'ಕುಳವಾರು' ಕಡೆಯಿಂದ ಹೆಚ್ಚಿನ ಬಡ್ಡಿಗೆ

ಸಾಲ ತೆಗೆದುಕೊಂಡು ಮರಕಿಣಿ ಆಸ್ತಿಯನ್ನು ಮನೆಸಹಿತ ಸಾಲಿಗರ ಕೈಯಿಂದ ಬಿಡಿಸಿಕೊಂಡದ್ದೂ ಆಯಿತು. 1946ರ ಸುಮಾರಿಗೆ ನಾವು 'ಮರಕಿಣಿಮನೆ'ಗೆ ಮತ್ತೆ ಮರಳಿ ಸೇರಿದೆವು.

ಈ ವೇಳೆಗಾಗಲೆ ನಮ್ಮ ಇಬ್ಬರು ಸೋದರಿಯರು– ಅಷ್ಟೇ ಅಲ್ಲದೆ ನಮ್ಮ ಅಮ್ಮ ಕೂಡ ಗರ್ಭಿಣಿ. ಹೆರಿಗೆ, ಬಾಣಂತನ ಸಂಬಂಧವಾಗಿ ಸರಿಯಾದ ಚಿಕಿತ್ಸೋಪಚಾರದ ಅನುಕೂಲತೆ ದೊರಕದ್ದರಿಂದ ಅಕಾಲಮರಣಕ್ಕೆ ತುತ್ತಾದರು. ಹತ್ತುಜನ ಮಕ್ಕಳ ಪೈಕಿ ಇಬ್ಬರು ಹೆಣ್ಣುಮಕ್ಕಳು, ಒಬ್ಬ ಚಿಕ್ಕಬಾಲಕ (ಶಿಶು) ಮತ್ತು ಐದು ಮಂದಿ ಗಂಡು ಮಕ್ಕಳು. ಅಪ್ಪ ಹಾಗು ವೃದ್ಧಅಜ್ಜಿ (ವಯಸ್ಸು ಸುಮಾರು 65) ಇಷ್ಟೇ ಜನ ಮರಕಿಣಿಮನೆಗೆ ಮರಳಿಸೇರಿದ್ದು. ನಾನು ಆಗ ಹೈಸ್ಕೂಲಿನಲ್ಲಿ ಓದುತ್ತಿದ್ದೆ. ತಮ್ಮಂದಿರು ಮತ್ತು ಒಬ್ಬಳು ತಂಗಿ ಅಡ್ಯನಡ್ಕದ ಶಾಲೆಗೆ ಸೇರಿದರು. ಅಕ್ಕನಿಗೆ ಲಗ್ನವಾಗಿತ್ತು. ಅಣ್ಣ ಎಂಟನೇ ತರಗತಿಗೇ ಓದನ್ನು ನಿಲ್ಲಿಸಬೇಕಾಯಿತು. ಅಷ್ಟೆಅಲ್ಲದೆ ಬೆಳ್ಳಾರೆಯ ಡಾ|| ಪಿ.ಎಂ. ಭಟ್ಟರಲ್ಲಿ 'ಕಾಂಪೌಂಡರ್' ಆಗಿ ದುಡಿಯತೊಡಗಿದ್ದರು. ಅವರು ತಿಂಗಳಿಗೊಮ್ಮೆ ತಮ್ಮ ತಿಂಗಳ ಸಂಬಳ 15 ರೂಪಾಯಿಯಲ್ಲಿ 10 ರೂಪಾಯಿ ನನಗೆ ಕಳುಹಿಸಿ ಕೊಡುತ್ತಿದ್ದುದರಿಂದ ನನ್ನ ಹೈಸ್ಕೂಲ್ ಶಿಕ್ಷಣ ಪುತ್ತೂರಿನಲ್ಲಿ ಸಾಗುತ್ತಿತ್ತು. ದಕ್ಷಿಣ ಕನ್ನಡ ದ್ರಾವಿಡ ಬ್ರಾಹ್ಮಣ ವಿದ್ಯಾರ್ಥಿನಿಲಯದಲ್ಲಿ ಊಟವಸತಿ ಆಗುತ್ತಿತ್ತು. ಎಂಟನೇ ತರಗತಿಯವರೆಗೆ ಅಡ್ಯನಡ್ಕ ಶಾಲೆಯಲ್ಲಿ (ಒಂದು ವರ್ಷ ಕನ್ಯಾನದಲ್ಲಿ) ಓದಿ 'ಇ.ಎಸ್.ಎಲ್.ಸಿ' (Elementary School Leaving Certificate) ಪರಿಕ್ಷೆಗೆ ಕುಳಿತಾಗ ನಾನು 'ಚಿಕನ್‌ಪೊಕ್ಸ್'ನಿಂದ ಆಗತಾನೆ ಚೇತರಿಸಿಕೊಳ್ಳುತ್ತಿದ್ದರೂ ಪರಿಕ್ಷೆಯಲ್ಲಿ ಉತ್ತಮ ಅಂಕಗಳಿಸಿ ಪಾಸಾಗಿದ್ದುದರಿಂದ ಹೈಸ್ಕೂಲಿಗೆ ಸೇರಿದೆ.

ಮೊದಲಬಾರಿಗೆ ಹಳ್ಳಿಯಿಂದ ಬಂದು ಪುತ್ತೂರು ಪೇಟೆಯಲ್ಲಿ ಊಟದ ಹೋಟೆಲ್ ಒಂದರಲ್ಲಿ ತಾತ್ಕಾಲಿಕ ವಾಸ್ತವ್ಯದ ವ್ಯವಸ್ಥೆಯೊಂದಿಗೆ ಪಟ್ಟಣವಾಸದ ಹೊಸಜಗತ್ತು ನನ್ನನ್ನು ಬೆರಗು ಗೊಳಿಸಿತು. ಕೆಲವು ವಾರಗಳ ನಂತರ ಹಾಸ್ಟಲ್ ಸೇರಿದಮೇಲೆ ಪಾರೆ ವೆಂಕಪ್ಪಯ್ಯ, ಮಂಚಿಕಜೆ ಮಹಾಬಲ ಭಟ್ಟ ಮೊದಲಾದವರು ತಮ್ಮ ಕೊಠಡಿಯಲ್ಲಿರಲು ಅವಕಾಶ ನೀಡಿದ್ದರಿಂದ ವಾಸಿಸತೊಡಗಿದೆ. ಓದು– ಅದಕ್ಕೂ ಮಿಗಿಲಾಗಿ ಪಠ್ಯೇತರ ಚಟುವಟಿಕೆಗಳಲ್ಲಿ ಭಾಗವಹಿಸಲು ಮುಂದಾದೆ. ಸ್ಕೌಟ್‌ದಳ, ರಾಷ್ಟ್ರಸೇವಾದಳ (RSD) ವಿದ್ಯಾರ್ಥಿ ಕಾಂಗ್ರೇಸ್, ಅಂತರರಾಷ್ಟ್ರೀಯ ತರುಣಸಮಾಜವಾದಿ ಕೂಟ, ಮೊದಲಾದ ಸಂಘಟನೆಗಳ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳತೊಡಗಿದೆ. ಲೇಖನ ವ್ಯವಸಾಯವನ್ನೂ ಪ್ರಾರಂಭಿಸಿದೆ. ಯರ್ಮುಂಜ ರಾಮಚಂದ್ರ, ಕಲ್ಮಡ್ಕ ರಾಮಚಂದ್ರ, ಮುಳಿಯ ಕೃಷ್ಣ ಭಟ್ಟ, ರಾಮಣ್ಣ, ಬೋಳಂತಕೋಡಿ ಈಶ್ವರಭಟ್ಟ ಮೊದಲಾದವರ ಗೆಳೆತನ ದೊರಕಿತು.

ಪದಕಣ್ಣಾಯರೆಂಬ ಶಿಕ್ಷಕರೊಬ್ಬರು ಪ್ರಗತಿಪಥದ ವಿಚಾರಧಾರೆಯನ್ನು ಪರಿಚಯಿಸಿದರು. ಅನೇಕ ಹೊಸ ತತ್ವ ಸಿದ್ಧಾಂತಗಳು, ವಿಚಾರಧಾರೆಗಳು ನನ್ನನ್ನು ಸೆಳೆದುಕೊಂಡುಹೋದವು. ಅನ್ಯಾಯದ ವಿರುದ್ಧವೂ ಸತ್ಯಕ್ಕೆ ಅಪಚಾರವಾಗುವುದರ ವಿರುದ್ಧವೂ ಸೆಟೆದುನಿಲ್ಲುವುದು, ದುಃಖಾರ್ತರ ಹಾಗೂ ಶೋಷಿತರ ಪರವಾಗಿ ಕೆಲಸಮಾಡುವ ಮನೋಭಾವ ನನಗೇ ಅರಿಯದಂತೆ ನನ್ನಲ್ಲಿ ರೂಪುಗೊಳ್ಳುತ್ತಿತ್ತು.

ಎಸ್.ಎಸ್.ಎಲ್.ಸಿ ಪರೀಕ್ಷೆಗೆ ಪೂರ್ವಭಾವಿಯಾಗಿ ಸೆಲೆಕ್ಷನ್ ಎಗ್ಸಾಮಿನೇಶನ್ ಎಂಬ ಒಂದು ವ್ಯವಸ್ಥೆ ಆಗ ರೂಢಿಯಲ್ಲಿತ್ತು. ತಮಗೆ ಒಪ್ಪಿಗೆಯಾಗದ ವಿದ್ಯಾರ್ಥಿಗಳನ್ನು ಈ Selection ಹಂತದ ಪರೀಕ್ಷೆಯಲ್ಲಿ ತಡೆಯುವುದು ಸಾಮಾನ್ಯವಾಗಿ ನಡೆದು ಬರುತ್ತಿದ್ದ ಪದ್ದತಿಯಾಗಿತ್ತು. ಈ Selection ಪದ್ಧತಿಯನ್ನು ಮುಂದಿನ ಶಿಕ್ಷಣವರ್ಷದಿಂದ ಎಂದರೆ 1948–49 ರಿಂದ ಸಂಪೂರ್ಣವಾಗಿ ನಿಲ್ಲಿಸಲು ಆಗಿನ ಮದರಾಸ್ ಸರಕಾರವು ನಿರ್ಧರಿಸಿದ ವಿಷಯ ಪತ್ರಿಕೆಗಳಲ್ಲಿ ಈಗಾಗಲೇ ಪ್ರಕಟವಾಗಿತ್ತು.

ಕೆಲವು ವಿದ್ಯಾರ್ಥಿಗಳಿಗೆ ತಮ್ಮ ಬಳಿ ಖಾಸಗೀ 'ಟ್ಯೂಷನ್' ಹೇಳಿಸಿಕೊಳ್ಳುವಂತೆ ಪ್ರಭಾವೀ ಅಧ್ಯಾಪಕರೊಬ್ಬರು ಸೂಚಿಸಿದ್ದರು. ತಿಂಗಳಿಗೆ 30 ರೂಪಾಯಿಯಂತೆ ಆರು ತಿಂಗಳಿಗೆ ಒಟ್ಟು 180 ರೂಪಾಯಿಗಳನ್ನು ಮುಂಗಡವಾಗಿ ಕೊಡಬೇಕಾಗಿತ್ತು. ವಿದ್ಯಾರ್ಥಿಗಳಲ್ಲಿ ಕೆಲವರು ತೀರಾ ಬಡವರಾಗಿದ್ದುದರಿಂದ ಮೂವರು ವಿದ್ಯಾರ್ಥಿಗಳಿಂದ ಅದು ಸಾಧ್ಯವಾಗಿರಲಿಲ್ಲ. ಹಣಕೊಡದ್ದಕ್ಕಾಗಿ ಸೆಲೆಕ್ಷನ್ ಪರಿಕ್ಷೆಯಲ್ಲಿ ಉತ್ತೀರ್ಣರಾದವರ ಪಟ್ಟಿಯಲ್ಲಿ ಅವರ ಹೆಸರಿರಲಿಲ್ಲ. ಅವರಿಗೆ S.S.L.C ಪಬ್ಲಿಕ್ ಪರಿಕ್ಷೆಗೆ ಕುಳಿತುಕೊಳ್ಳುವ ಅವಕಾಶವನ್ನು ನಿರಾಕರಿಸಲಾಯಿತು ಎಂಬ ವಿಚಾರ ಶಾಲೆಯ ವಿದ್ಯಾರ್ಥಿಗಳಿಗೆ ತಿಳಿದಾಗ ಇದನ್ನು ಖಂಡಿಸಿ, ಎಲ್ಲಾ 800 ವಿದ್ಯಾರ್ಥಿಗಳು ಪ್ರತಿಭಟನೆ ನಡೆಸಲು ತರಗತಿಗಳನ್ನು ಬಹಿಷ್ಕರಿಸಿ ಹೊರನಡೆದರು. ಇದರಲ್ಲಿ ಮೊದಲನೇ ಪ್ರತಿಭಟನಾಕಾರನಾಗಿ ನಾನು ಕ್ಲಾಸ್ ರೂಮಿನಿಂದ ಹೊರಬಂದಿದ್ದೆ. ಮೂರುದಿವಸ ನಡೆದ ಪ್ರತಿಭಟನೆ, ಅಧಿಕಾರಿಗಳ ಕೈವಾಡದಿಂದ ವಿಫಲವಾಯಿತು. ವಿದ್ಯಾರ್ಥಿ ಮುಖಂಡರಾಗಿದ್ದ ಐದು ಜನರಿಂದ ಕ್ಷಮಾಪಣೆ ಹಾಗೂ ಮುಚ್ಚಳಿಕೆಪತ್ರ ಬರೆಸಿಕೊಂಡರು. ಸತ್ಯಕ್ಕಾಗಿರುವ ಅಪಚಾರ ಹಾಗೂ ಅನ್ಯಾಯದ ವಿರುದ್ಧ ಪ್ರತಿಭಟಿಸಿದ್ದಕ್ಕಾಗಿ ನಾನು ಕ್ಷಮೆಕೇಳಲು ನಿರಾಕರಿಸಿದೆ. ಮುಚ್ಚಳಿಕೆಯ ಮಾತಂತು ದೂರವೇ ಉಳಿಯಿತು.

ಇದರ ಪರಿಣಾಮವೆಂಬಂತೆ ಕೆಲವು ದಿನಗಳ ನಂತರ ಕುಂಟುನೆಪದಿಂದ ನನ್ನನ್ನು ಹಾಸ್ಟೆಲಿನಿಂದ ಹೊರಗೆ ಹಾಕಿದರು.

ಎರಡು ದಿನ ಹೋಟಲ್‌ನಲ್ಲಿ ಉಳಿದುಕೊಂಡು ಮಂಜಳಪಡುಪ್ಪು ಎಂಬಲ್ಲಿದ್ದ ಒಂದು 'ಅಜ್ಜಿಬಿಡಾರ'ದಲ್ಲಿ ಊಟ; ಹಳೇ ಕಟ್ಟಡದ ಕೋಣೆಯೊಂದರಲ್ಲಿ ಈಶ್ವರಕಜೆ

ಮತ್ತು ಪಾರ್ಪಕಜೆಯವರ ಜತೆಸೇರಿ ಪರೀಕ್ಷೆಗೆ ಓದುವುದನ್ನು ಮುಂದುವರೆಸಿದೆ. ಈ ನಡುವೆ ಪಬ್ಲಿಕ್ ಪರೀಕ್ಷೆಗೆ ಕಟ್ಟಬೇಕಾಗಿದ್ದ ಶುಲ್ಕದ ಹಣ ಮನೆಯಿಂದ ತಂದಿದ್ದರೂ ಖರ್ಚಾಗಿಬಿಟ್ಟಿತ್ತು. ನನಗೆ ಗುರುತಿರುವವರಾಗಲಿ, ಗೆಳೆಯರಾಗಲಿ ಯಾರ ಬಳಿಯಲ್ಲೂ ಹಣ ಕೇಳಲಿಲ್ಲ, ಕೇಳಿದರೂ ದೊರಕುತ್ತಿರಲಿಲ್ಲ. ಆಗ ಶಾಲೆಯಲ್ಲಿ ಗುಮಾಸ್ತರಾಗಿ ಕೆಲಸಮಾಡುತ್ತಿದ್ದವರೊಬ್ಬರು ನನ್ನ ಈ ಶೋಚನೀಯ ಪರಿಸ್ಥಿತಿಯನ್ನು ಕಂಡು ಶುಲ್ಕದ ಹಣ 15 ರೂಪಾಯಿಯನ್ನು ತಾವೇ ಕಟ್ಟಿ, ಪರೀಕ್ಷೆಗೆ ಕುಳಿತುಕೊಳ್ಳಲು ನನಗೆ ಅನುವುಮಾಡಿಕೊಟ್ಟಿದ್ದರೆಂಬುದು ಅನಿರೀಕ್ಷಿತವಾದ ಘಟನೆ.

ಕೊನೆಗೂ ಎಸ್.ಎಸ್.ಎಲ್.ಸಿ. ಪರೀಕ್ಷೆಗೆ ಕುಳಿತೆ. ಆದರೆ ಯಾವುದೋ ಒಂದು ತಾಂತ್ರಿಕ ಲೋಪದಿಂದ (ಇಂಗ್ಲಿಷ್‌ನ ಎರಡನೇ ಉತ್ತರಪತ್ರಿಕೆಯಲ್ಲಿ ನನ್ನ 'ಹಾಲ್‌ಟಿಕೆಟ್' ಸಂಖ್ಯೆಯನ್ನು ಬರೆಯಲು ಬಿಟ್ಟುಹೋಗಿತ್ತು ಎಂಬ ಕಾರಣದಿಂದ) ನಾನು ಪರೀಕ್ಷೆಯಲ್ಲಿ ಪಾಸಾಗಲಿಲ್ಲ. ಅಂತೂ ಪುತ್ತೂರಿಗೊಂದು ನಮಸ್ಕಾರಹಾಕಿ ಪರೀಕ್ಷೆ ಮುಗಿದ ಮರುದಿನ ಟ್ರಂಕ್ ಮತ್ತು ಬಟ್ಟೆಗಳ ಮಾರಾಮು (ಗಂಟು) ಹಿಡಿದುಕೊಂಡು ಮರಕಿಣಿ ಮನೆಗೆ ತಲುಪಿದೆ.

ನಾನು ಹೈಸ್ಕೂಲ್‌ನ ಕೊನೆಯವರ್ಷದ ವಿದ್ಯಾರ್ಥಿಯಾಗಿದ್ದಾಗ (1947–48) ಭಾರತ ಸ್ವತಂತ್ರವಾಯಿತು. ಸರ್ಕಾರೀ ಕಛೇರಿಗಳಲ್ಲಿ– ನಮ್ಮ ಹೈಸ್ಕೂಲ್ ಕಟ್ಟಡದ ಮೇಲೆ ಕೂಡ ತ್ರಿವರ್ಣಧ್ವಜ ಹಾರಾಡಿತು. 'ತಿರಂಗಿ ಝಂಡಾ ಉಠಾವೋ'– ಎಂಬುದಾಗಿ ಸೇವಾದಳದ ಸಂಜೆಯ ಶಿಬಿರಗಳಲ್ಲಿ ನಾವು ಹಾಡುತ್ತಿದ್ದ ಗೀತೆ ಈಗ ಸಾರ್ವತ್ರಿಕವಾಗಿ ಹಾಡುವುದನ್ನು ಕೇಳಿ ಹರ್ಷಭರಿತನಾದೆ. ಸ್ವಾತಂತ್ರ್ಯ ದಿನೋತ್ಸವವನ್ನು ವಿಜೃಂಭಣೆಯಿಂದಲೇ ಹೈಸ್ಕೂಲಲ್ಲೂ ಹಾಸ್ಟೆಲಲ್ಲೂ ಆಚರಿಸಿದೆವು. ಸಿಹಿತಿಂಡಿ ಹಂಚಿತಿಂದದ್ದೂ ಆಯಿತು. 'ವಂದೇಮಾತರಂ'– 'ಜೈಹಿಂದ್'– ಈ ಶಬ್ದಗಳು ಪರಸ್ಪರ ಭೇಟಿಯ/ ವಿದಾಯದ ವಾಕ್ಯಗಳಾದುವು.

ಪರೀಕ್ಷೆ ಮುಗಿಸಿಕೊಂಡು ಮನೆಗೆ ಬಂದು ತಲುಪಿದೆ. ಹಲವು ಗೆಳೆಯರೂ ಊರಿಗೆ ಬಂದು ಸೇರಿಕೊಂಡದ್ದರಿಂದ ಮತ್ತೊಮ್ಮೆ ಪ್ರಾರಂಭವಾಯಿತು ಚಟುವಟಿಕೆಗಳ 'ಸೀಸನ್'. ಅಡ್ಕದ 'ಪಳ್ಳಿ' (ಮಸೀದಿ)ಯ ಅಂಗಳದಲ್ಲಿ ಒಂದು 'ರಾತ್ರಿಶಾಲೆ' ಪ್ರಾರಂಭಿಸಿದೆ. ಕೆಲವು ವಾರ ನಡೆಯಿತು. 'ಮಿತ್ರಮಂಡಳಿ' ಎಂಬ ಗೆಳೆಯರ ಗುಂಪು ರೂಪುಗೊಂಡಿತು. ಮುಂದೆ ರಿಜಿಸ್ಟರ್ ಕೂಡ ಆಯಿತು. 'ಸಂದೇಶ' ಎಂಬ ಹಸ್ತಪತ್ರಿಕೆ, ಉಚಿತ ವಾಚನಾಲಯ, ಗ್ರಂಥಭಂಡಾರ – ಹೀಗೆ ಹಲವಾರು ಕಾರ್ಯಕ್ರಮಗಳನ್ನು ಪ್ರಾರಂಭಿಸಿದೆವು.

ಸುಮಾರು ಅದೇ ಸಮಯಕ್ಕೆ ದೀರ್ಘಕಾಲ ಮುಂಬೈಯಲ್ಲಿದ್ದ ಗೋಪಾಲಕೃಷ್ಣ ('ಪಗೋ') ಹುಟ್ಟೂರಿಗೆ ಮರಳಿದರು. ಹತ್ತು ವರ್ಷಗಳಕಾಲ ಮುಂಬೈಯಲ್ಲಿದ್ದು

ಹಲವುಬಗೆಯ ಉದ್ಯೋಗಗಳನ್ನು ಮಾಡಿದರಲ್ಲದೆ ಕಮ್ಯೂನಿಸ್ಟ್ ಪಕ್ಷದ ಕಾರ್ಯಕರ್ತರೂ ಆಗಿದ್ದರು. ಸಿನೆಮಾ ಕ್ಷೇತ್ರದಲ್ಲಿ ಕಿರಿಯ ನಿರ್ದೇಶಕರಾಗಿ ಕೂಡ ದುಡಿದಿದ್ದರು. ಅವರ ನೇತೃತ್ವದಲ್ಲಿ ರಾಜಕೀಯ ಹಿನ್ನೆಲೆಯ ಘಟನೆಯನ್ನೊಳಗೊಂಡ ಒಂದು ಸಾಮಾಜಿಕ ನಾಟಕವನ್ನು ಅಡ್ಯನಡ್ಕ ಶಾಲೆಯಲ್ಲಿ ಪ್ರದರ್ಶಿಸಿದೆವು. ಶಾಲೆಯ ಹಳೆವಿದ್ಯಾರ್ಥಿಸಂಘದ ಕಾರ್ಯಕ್ರಮಗಳನ್ನು ಚುರುಕುಗೊಳಿಸಿದೆವು... ಹೀಗೆ ಬಹುವಿಧದ ಕಾರ್ಯಗಳಲ್ಲಿ ಮುಳುಗಿ ಹೋಗಿದ್ದರೂ ನನಗೆ ಮುಂದಿನ ವಿಚಾರದ ಬಗ್ಗೆ ಚಿಂತೆಯೇ ಇರಲಿಲ್ಲವೆಂದಲ್ಲ. ಕಾಲೇಜ್‌ಸೇರಿ ಓದನ್ನು ಮುಂದುವರಿಸಲು ಸಾಧ್ಯವಿರಲಿಲ್ಲ. ಶಿಕ್ಷಕರ ತರಬೇತಿ, ವೃತ್ತಿಶಿಕ್ಷಣ (ಐ.ಟಿ.ಐ.)– ಹೀಗೆ ನಮ್ಮ ಗುಂಪಿನ ಗೆಳೆಯರು (ಸದಸ್ಯರು) ತಮ್ಮ ತಮ್ಮ ಪ್ರವೃತ್ತಿಗೂ ಅನುಕೂಲ– ಆಸಕ್ತಿಗೂ ಅನುಗುಣವಾಗಿ ಶಿಕ್ಷಣ ಮುಂದುವರಿಸಲು ವ್ಯವಸ್ಥೆ ಮಾಡಿಕೊಂಡು ಬೇರೆ ಬೇರೆ ಪಟ್ಟಣಗಳಿಗೆ ಹೊರಟು ಹೋದರು.

ನಮ್ಮ ಮನೆಯ ಆರ್ಥಿಕ ಪರಿಸ್ಥಿತಿ ಈಗಲೂ ಅಷ್ಟೇನೂ ಅನುಕೂಲಕರವಾಗಿರಲಿಲ್ಲ. ಶಿಕ್ಷಕರ ತರಬೇತಿಯಲ್ಲಿ ಒಂದಿಷ್ಟು 'ಸ್ಟೈಫಂಡ್' ದೊರಕುತ್ತಿದ್ದುದರಿಂದ ಹೇಗೋ ನಿರ್ವಹಣೆಮಾಡಿಕೊಳ್ಳಬಹುದಿತ್ತು. ಆದರೆ ಅದರಲ್ಲಿ ನನಗೆ ಆಸಕ್ತಿ ಇರಲಿಲ್ಲ. ಮುಂದೇನು ಎಂಬುದು ಈಗ ಧುತ್ತನೆ ನನ್ನ ಮುಂದೆ ನಿಂತಿತು. ಆಗ ಒಂದು ಆಶಾಕಿರಣ ಕಂಡದ್ದು ಹೀಗೆ; ಮೈಸೂರಲ್ಲಿ ಉಚಿತ ಹಾಸ್ಟೆಲ್ (ವಾಸ), 'ಪಾರ್ಟ್‌ಟೈಮ್ ಜಾಬ್', 'ವಾರಾನ್ನ' ಮೊದಲಾದ ಅನುಕೂಲತೆಗಳಿವೆ. ಇಷ್ಟು ಸಮಾಚಾರ ತಿಳಿದ ಕೂಡಲೇ ಮನೆಯಿಂದ ಒಂದಿಷ್ಟು ಹಣ ಕೈಗೆತ್ತಿಕೊಂಡು ಬಸ್‌ಹತ್ತಿ, ಮೈಸೂರು ತಲುಪಿದೆ. ಈ ಸುದ್ದಿಯನ್ನಷ್ಟೇ ಮನೆಗೆ ಮುಟ್ಟಿಸುವ ವ್ಯವಸ್ಥೆಮಾಡಿದ್ದೆ.

ಮೈಸೂರಿನ ಸಯ್ಯಾಜಿರಾವ್ ರಸ್ತೆಯಲ್ಲಿ ಅಂಗಡಿಯೊಂದರ ಮುಂಭಾಗದಲ್ಲಿ 'ಗಿಬ್ಸನ್ ವಾಚ್ ರಿಪೇರರ್ಸ್' ಎಂಬ ನಾಮಫಲಕದ ಗೂಡಂಗಡಿಯಲ್ಲಿ ನಮ್ಮೂರವರೊಬ್ಬರು ಇದ್ದುದು ತಿಳಿದಿತ್ತು. ಅವರನ್ನು ಭೇಟಿಯಾಗಿ ಓದಿನ ಹಂಬಲ ಇತ್ಯಾದಿಗಳನ್ನು ಚುಟುಕಾಗಿ ಹೇಳಿದೆ. ಅವರು ಹೆಚ್ಚೇನೂ ಮಾತಾಡಲಿಲ್ಲ. ದಿವಸಕ್ಕೆ ಎಂಟುಆಣೆ ಬಾಡಿಗೆಯ ಒಂದು ವಸತಿಗೃಹದ ಕೊಠಡಿ– ಎರಡು ಆಣೆಯ ಪ್ಲೇಟ್ ಊಟ ದೊರಕುವ ಸ್ಥಳಗಳನ್ನು ತೋರಿಸಿದರು. 8–10 ದಿವಸ ಅಲ್ಲಿ ಇಲ್ಲಿ ವಿಚಾರಿಸಿದೆ. ಉಚಿತ ಹಾಸ್ಟಲ್‌ನಲ್ಲಿ ಪ್ರವೇಶವಾಗಲಿ, ಅಲ್ಪಕಾಲಿಕ ಉದ್ಯೋಗವಾಗಲಿ, ವಾರಾನ್ನದ ಅನುಕೂಲತೆಯಾಗಲಿ – ಯಾವುದೂ ನನಗೆ ಲಭ್ಯವಾಗಲಿಲ್ಲ. ಕೈಯಲ್ಲಿದ್ದ ಪುಡಿಗಾಸು ಕರಗುತ್ತಾ ಬರುತ್ತಿತ್ತು. ಮತ್ತೊಮ್ಮೆ ಗಿಬ್ಸನ್ ಭಟ್ಟರ ಬಳಿಗೆ ಹೋಗಿ ಪರಿಸ್ಥಿತಿಯನ್ನು ಹೇಳಿಕೊಂಡೆ. 'ರೈಲ್ವೆ ಸ್ಟೇಷನ್ ರೆಸ್ಟೋರೆಂಟ್'ನಲ್ಲಿ VIP ಅತಿಥಿಗಳ ಉಪಚಾರದ ಒಂದು ಕೆಲಸ ದೊರಕಿತು. ಇಂಗ್ಲೀಷ್‌ನಲ್ಲಿ ಅಷ್ಟಿಷ್ಟು ಮಾತಾಡಲು

ಬಲ್ಲವನಾಗಿದ್ದದರಿಂದ ಅಂತ ಕಾಣುತ್ತದೆ, ಹೇಗೂ ಇರಲಿ; ಸದ್ಯಕ್ಕಂತು ಊಟ, ವಸತಿಯ ಸಮಸ್ಯೆ ಬಗೆಹರಿಯಿತೆಂದು ಭಾವಿಸಿಕೊಂಡು ಸಮಾಧಾನದ ಉಸಿರು ಬಿಟ್ಟೆ.

ರೈಲ್ವೆ ರೆಸ್ಟೋರೆಂಟನ್ನು ಗುತ್ತಿಗೆ ಹಿಡಿದು ನಡೆಸುತ್ತಿದ್ದ ಉಡುಪಿ ಹೋಟಲ್‌ನವರೊಂದಿಗೆ ಯಾವುದೋ ಕಾರಣಕ್ಕೆ ಕೆಲಸಗಾರರು ಅಸಮಾಧಾನ ಹೊಂದಿದ್ದರು. 'ಹೋಟೆಲ್ ವರ್ಕರ್ಸ್ ಯೂನಿಯನ್' ಮಧ್ಯಪ್ರವೇಶವೂ ಪ್ರಯೋಜನಕಾರಿಯಾಗಲಿಲ್ಲ. ಮುಷ್ಕರ ಹೂಡಿದರು. ಎಲ್ಲರಜತೆಗೆ ನಾನೂ ಹೊರಬರಬೇಕಾಯಿತು– ಕೊನೆಯವನಾಗಿ! ಆ ಗಳಿಗೆಯಿಂದಲೇ ಊಟ– ವಸತಿಯ ವ್ಯವಸ್ಥೆ ಇಲ್ಲದೆ ಅಕ್ಷರಶಃ ಬೀದಿಗೆ ಬಿದ್ದದ್ದಾಯಿತು. ಒಲಂಪಿಯ ಟಾಕೀಸ್ ಬಳಿ ಇದ್ದ 'ಸಮಾಜವಾದಿ ಪಕ್ಷ'ದ ಕಛೇರಿಯ ಜಗಲಿಯಲ್ಲಿ ಹಳೇನ್ಯೂಸ್‌ಪೇಪರ್, ಮೂಲೆಗೆಸೆದಿದ್ದ ಬಟ್ಟೆಯ 'ಬ್ಯಾನರ್' ಮೊದಲಾದುವುಗಳನ್ನೇ ಹಾಸಿ– ಹೊದೆದುಕೊಂಡು ಹಲವು ರಾತ್ರೆಗಳನ್ನು ಕಳೆಯಬೇಕಾಯಿತು. ಹಗಲುಹೊತ್ತಿನಲ್ಲಿ ಆಗಾಗ ಹಾರ್ಡಿಂಜ್ ಸರ್ಕಲ್ ಬಳಿಯಲ್ಲೋ ಥಂಡೀಸಡಕ್‌ನಲ್ಲೊ ನಲ್ಲಿಯ ನೀರನ್ನಷ್ಟೇ ಕುಡಿದು ಹೊಟ್ಟೆ ತುಂಬಿಸಿಕೊಳ್ಳಬೇಕಾಯಿತು. ಪ್ರತಿದಿನ ಮುಂಜಾನೆ 10 ಗಂಟೆ ಸುಮಾರಿಗೆ ರೈಲ್ವೆ ರೆಸ್ಟೋರೆಂಟ್ ಮುಂದೆ ಗುಂಪುಸೇರಿ 'ಬ್ಯಾನರ್'– 'ಪ್ಲೆಕಾರ್ಡ್' ಹಿಡಿದುಕೊಂಡು ಒಂದರ್ಧಗಂಟೆ ಕಂಠಶೋಷಣೆ ಮಾಡಿಕೊಳ್ಳುವುದು, ಘೋಷಣೆ, ಭಾಷಣ– ಇತ್ಯಾದಿ ಇತ್ಯಾದಿ ನಡೆಯುತ್ತಿತ್ತು. ಎರಡು ಇಡ್ಲಿ ಮೂರು ಸಾರಿ ಸಾಂಬಾರ್ ಮತ್ತು ಒಂದು ಕಪ್‌ಕಾಫಿ, 'ಮಾಡರ್ನ್‌ಕೆಫೆ' 'ದಾಸ ಪ್ರಕಾಶ'ದಲ್ಲಿ ಒಂದೆರಡು ದಿನ ಉಚಿತವಾಗಿ ಕೆಲಸಗಾರರ ಸಂಘದಿಂದ ದೊರಕಿತು. ಮುಂದೆ ಅದೂ ನಿಂತುಹೋಯಿತು. ಕೈಯಲ್ಲಿ ಬಿಡುಗಾಸಿಲ್ಲ. ಮೈಮೇಲಿನ ತೊಟ್ಟ ಬಟ್ಟೆ ಹೊರತಾಗಿ ಬೇರೆನೂ ಇಲ್ಲ.

ಈ ಸ್ಥಿತಿಯಲ್ಲಿದ್ದಾಗ ಪುತ್ತೂರಿನಲ್ಲಿ ನನ್ನ ಜತೆಯಲ್ಲಿ ಹೈಸ್ಕೂಲ್ ವಿದ್ಯಾರ್ಥಿಯಾಗಿದ್ದ ನಾರಾಯಣ ಎನ್ನುವ ಪರಿಚಿತನ ಮುಖ ಕಣ್ಣಿಗೆಬಿತ್ತು. ಅವನು ಕೂಡ ಕೆಲಸ ಹುಡುಕಿಕೊಂಡು ಮೈಸೂರಿಗೆ ಬಂದವನೇ. ಬಂದು ಎಂಟು ದಿನಗಳಾಗಿತ್ತಂತೆ. ಕೈಚೀಲ, ಜೇಬಿನಲ್ಲಿ ಎರಡು ರೂಪಾಯಿ– ಇಷ್ಟೇ ಅವನ ಬಳಿ ಈಗ ಇದ್ದದ್ದು. ಕಷ್ಟದ ಸಂದರ್ಭಗಳಲ್ಲಿ ಅಪರಿಚಿತರು ಕೂಡ ಸ್ನೇಹಿತರಾಗುತ್ತಾರೆ ಎನ್ನುತ್ತಾರಲ್ಲ– ಹಾಗೆ ನಾವು ಸ್ನೇಹಿತರಾದೆವು. ವಾಸಕ್ಕೆ 'ಜಗಲಿ'ಗೆ ನಾನವನನ್ನು ಕರೆದುಕೊಂಡು ಹೋದೆ. ಎರಡು ಆಣೆಯ ಪ್ಲೇಟ್ ಊಟವನ್ನು ದಿನಕ್ಕೆ ಎರಡುಬಾರಿ ನಾರಾಯಣ ವ್ಯವಸ್ಥೆ ಮಾಡುತ್ತಿದ್ದ. ಮೂರು ದಿನಗಳಲ್ಲಿ ಅವನ ಜೇಬೂ ಖಾಲಿಯಾಯಿತು. ಬನಿಯನ್ನಿನಂತೆ ಒಳಗೆ ಧರಿಸುತ್ತಿದ್ದ ಉಣ್ಣೆಯ 'ಸ್ವೆಟರ'ನ್ನು ಅಡವಿಟ್ಟು ಮತ್ತೆ ಎರಡು ರೂಪಾಯಿತಂದು ಮೂರುದಿನ ಕಳೆದದ್ದಾಯಿತು. ಹೀಗೆ

ಇನ್ನೆಷ್ಟು ದಿವಸ ಕಳೆಯಬಹುದು ಎಂದು ಚಿಂತಿಸುತ್ತಿದ್ದಾಗಲೇ ಅಂದುಸಂಜೆ 'ಒಡಂಬಡಿಕೆಯಾಗಿದ್ದು' ನಮ್ಮ ದುಡಿಮೆಯ ದಿನಗಳ ಸಂಬಳವನ್ನು ಕೊಟ್ಟು ಹೊರಡಲು ಸೂಚಿಸಿದರು. ನನ್ನ ಟ್ರಂಕನ್ನೂ ಕೆಲವು ಬಟ್ಟೆಗಳನ್ನೂ ಎತ್ತಿಕೊಂಡು I.R.R.ಗೆ 'ಗುಡ್‌ಬೈ' ಹೇಳಿ ಹೊರಟುಬಂದೆ.

ಕಛೇರಿಯ ಜಗಲಿಯಲ್ಲಿ ರಾತ್ರಿ ಕಳೆಯಲು ಮನಸ್ಸಾಗದೆ ನಾವಿಬ್ಬರೂ ಎಂಟು ಆಣೆ ಬಾಡಿಗೆಯಲ್ಲಿ ಒಂದು ದಿವಸ ವಾಸ್ತವ್ಯಮಾಡಬಹುದಾಗಿದ್ದ 'ಅಯ್ಯರ್ ಹೋಟಲಿ'ಗೆ ಹೋದೆವು. ಅಲ್ಲಿ ಸ್ನಾನಮಾಡಿ, ಬಟ್ಟೆ ಬದಲಾಯಿಸಿದೆ. ನಾರಾಯಣ ಅಡವಿಟ್ಟಿದ್ದ ಸ್ವೆಟರನ್ನು ತಂದು ಅಂಗಿಯ ಮೇಲೆ ಧರಿಸಿಕೊಂಡ. ರಾತ್ರಿಯ ಊಟ ಐದು ಆಣೆಯ 'ಫುಲ್‌ಮೀಲ್' ಉಂಡು ತೇಗಿ, ಒಂದು ಸಿನೆಮಾ ನೋಡಿಕೊಂಡು ಬಂದು ಸುಖನಿದ್ದೆಗೆ ಕರೆದೊಯ್ದೆ. ನಾರಾಯಣ ತಾನು ಊರಿಗೆ ಹಿಂತಿರುಗಿ ಹೋಗುತ್ತೇನೆ ಎಂದು ನಿರ್ಧರಿಸಿದ್ದರಿಂದ ಟಿಕೇಟ್‌ಗಾಗಿ ಐದು ರೂಪಾಯಿ ಕೊಟ್ಟೆ. ಜತೆಗೆ ದಾರಿ ಖರ್ಚಿಗೆಂದು ಮೇಲೊಂದು ರೂಪಾಯಿ ಅವನ ಕೈಗೆ ನೀಡಿ 'ಸುಖವಿದಾಯ' ಹೇಳಿದೆ. ಮಾಡರ್ನ್ ಬಸ್ ಪ್ರಯಾಣಿಕರನ್ನು ತುಂಬಿಕೊಂಡು ಹೊರಡುವವರೆಗೆ ಜತೆಗೆ ಇರು ಅಂತ ಹೇಳಿದ್ದರಿಂದ 'ಸರಿ' ಎಂದುಕೊಂಡು ನಾರಾಯಣನ ಜತೆಗೆ ನಿಂತುಕೊಂಡೆ. ಬಸ್ ಹೊರಡಲು ಸಿದ್ಧವಾಗುತ್ತಿತ್ತು. 'ಒಂದು ವಿಚಾರ ನಿನಗೆ ಹೇಳಬೇಕು' ಎಂದು ನಾರಾಯಣ ಪಿಸುಮಾತಿನಲ್ಲಿ ನುಡಿದ. 'ಏನದು' ಎಂದು ಕೇಳಿದೆ.

'ಹೈಸ್ಕೂಲಿನ ಕ್ಲಾರ್ಕ್ ಕೃಷ್ಣನಾಯಕ್‌ಗೆ ನೀನು 15 ರೂಪಾಯಿ ಕೊಡಬೇಕಾಗಿದೆಯಲ್ಲ– ನಿನ್ನ SSLC ಪರಿಕ್ಷೆ ಫೀಸ್ ಅವರು ತುಂಬಿದ್ದು ನೆನಪಿಲ್ಲವಾ? ಈಗ ಮೊದಲ ಸಂಬಳ ಬಂದಿದೆ ಆ ಹಣ ಕೊಟ್ಟು ಬಿಡು ಅವರು ಶ್ರೀಮಂತರಲ್ಲ ಬರೇ 60 ರೂಪಾಯಿ ಅವರ ತಿಂಗಳ ಸಂಬಳ'. ಎಂದೆಲ್ಲಾ ಹೇಳುತ್ತಿದ್ದಂತೆಯೇ ನನಗೆ ವ್ಯಥೆ– ನಾಚಿಕೆ ಎರಡೂ ಸೇರಿ ಕುಗ್ಗಿಹೋದೆ. ಕೂಡಲೆ ಹದಿನೈದು ರೂಪಾಯಿಗಳನ್ನು ನಾರಾಯಣನ ಕೈಗೆ ಕೊಟ್ಟು– 'ದಯವಿಟ್ಟು ಅವರಿಗೆ ತಲುಪಿಸಿ, thanks ಹೇಳು' ಎಂದು ಹೇಳುತ್ತಿದ್ದಂತೆಯೇ ಬಸ್ 'ಸ್ಟಾರ್ಟ್' ಆಯಿತು. ನಾರಾಯಣ ಊರಿಗೆ ಹೋದ. ನಾನು ಮೈಸೂರಿನಲ್ಲೇ ಉಳಿದೆ. ಜೇಬಿನಲ್ಲಿ ಮೂರು ರೂಪಾಯಿ 'ಶಿಲ್ಕು' ಉಳಿದಿತ್ತು.

ಕೆಲಸ ಹುಡುಕುವುದಕ್ಕೆ ಮತ್ತೆ ತೊಡಗಿದೆ. ಮೈಸೂರಿನ ಸಂತೆಪೇಟೆಯಲ್ಲಿರುವ 'ವಿದ್ಯಾರ್ಥಿಭವನ' 'ವಿದ್ಯಾರ್ಥಿನಿಲಯ' ಎಂಬ ಎರಡು ಹೋಟಲ್‌ಗಳು ಮಂಗಳೂರು ಉಡುಪಿಯವರದ್ದು. ಕೂಡಲೇ ಅವುಗಳ ಮಾಲಿಕರನ್ನು ಭೇಟಿಮಾಡಿ ಕೆಲಸ ಕೇಳಿದೆ. ಒಂದು ವಾರದಲ್ಲಿ ಸರಸ್ವತೀ ಪುರದ 'ಮೈಸೂರು ನ್ಯಾಯಾಲಯ

ಸಮುಚ್ಚಯ'ದಲ್ಲಿದ್ದ ಕ್ಯಾಂಟೀನ್‌ನಲ್ಲಿ ಲೆಕ್ಕ–ಪತ್ರ ಬರೆಯುವುದೇ 'ಮೊದಲಾದ' ಕೆಲಸ ತಾತ್ಕಾಲಿಕವಾಗಿ ದೊರಕಿತು. ಒಡನೆಯೇ ಕೆಲಸಕ್ಕೆ ಸೇರಿಕೊಂಡೆ. ಮಾಲಿಕರಾದ ಬೋಜರಾಯರು ದೈವಭಕ್ತರು, ಸಜ್ಜನರು. 'ಸ್ಟಾಫ್'ನವರ ವಾಸಕ್ಕೆ ಪ್ರತ್ಯೇಕ ಬಿಡಾರದ ವ್ಯವಸ್ಥೆ ಮಾಡಿದ್ದರು. ಹೊಟ್ಟೆತುಂಬಾ ಊಟ–ತಿಂಡಿ, ವಾರಕ್ಕೊಂದು ದಿವಸ ರಜೆ ಸಿಗುತ್ತಿತ್ತು. ಹಬ್ಬಗಳಲ್ಲಿ ಸಿಹಿಯೂಟ. ಪ್ರತಿ ಶನಿವಾರ ಭಜನಾಕೂಟ– ಒಟ್ಟಿನಲ್ಲಿ ನೆಮ್ಮದಿಯ ವ್ಯವಸ್ಥೆ ಇತ್ತು. ಹಾಯಾಗಿದ್ದೆ.

ಆರೇಳು ತಿಂಗಳು L.C.R.ನಲ್ಲಿ ದುಡಿದೆ. ಸಂಬಳ ಹೆಚ್ಚಿಲ್ಲದಿದ್ದರೂ ಸುಮಾರು 100 ರೂಪಾಯಿ ಉಳಿಸಿಕೊಂಡಿದ್ದೆ. ಒಮ್ಮೆ ಜ್ವರಬಂದು ಚಿಕಿತ್ಸೆಗಾಗಿ ಸರಕಾರೀ ಆಸ್ಪತ್ರೆಗೆ ಹೋಗಿದ್ದಾಗ, ಚಿಕಿತ್ಸೆಯವೇಳೆ ಅಚಾತುರ್ಯದಿಂದ ಬಲಗೈ ಬೆರಳಿಗೆ ತೀಕ್ಷ್ಣ ದ್ರಾವಕದ 2–3 ಹನಿ ಬಿದ್ದು, ಹುಣ್ಣಾಗಿ ಒಂದುತಿಂಗಳು ನರಳಿದೆ. ಹುಣ್ಣು ವಾಸಿಯಾಯಿತು. ಅಷ್ಟರಲ್ಲಿ L.C.R.ನ ಹಿಂದಿನ ಕ್ಲಾರ್ಕ್ (ಮಾಲಿಕ ಬೋಜಾರಾಯರ ಅಪ್ತರ ಪೈಕಿಯ ವ್ಯಕ್ತಿ) ರಜೆಗೆಂದು ಊರಿಗೆ ಹೋಗಿದ್ದವರು ಹಿಂದಿರುಗಿ ಬಂದರು. 'ನಿನಗಿನ್ನು ಇಲ್ಲಿ ಅವಕಾಶವಿಲ್ಲ' ಎಂದು ಅವರು ಹೇಳುವುದಕ್ಕೆ ಮೊದಲೇ ಮಾಡರ್ನ್‌ಬಸ್‌ಹತ್ತಿ ಊರಿಗೆ ಮರಳಿದೆ.

ಮತ್ತೆ ಹಳೇ ಚಟುವಟಿಕೆಗಳ ಭರಾಟೆ. ಇಷ್ಟು ಹೊತ್ತಿಗಾಗಲೇ 'ಖದ್ದರ್' (ಖಾದಿ)ಧಾರಿಯಾಗಿದ್ದೆ. ಕಿಸೆಯಲ್ಲಿದ್ದ ಹಣದ ಹೆಚ್ಚಿನ ಪಾಲು ಖರ್ಚಾದಾಗ– ಅನಿರೀಕ್ಷಿತವಾಗಿಯೇ ಏತಡ್ಕದಲ್ಲಿದ್ದ ಕುಂಬ್ಡಾಜೆ ಗ್ರಾಮೀಣ ಸಹಕಾರೀ ಸಂಘದ (ಅನಧಿಕೃತ) ಲೆಕ್ಕಿಗನ ಕೆಲಸಕ್ಕೆ ಕರೆಬಂತು. ಕಟ್ಟದ ಕೋರಿಕ್ಕಾರು ವೆಂಕಟ್ರಮಣಭಟ್ಟರ ಮನೆಯಲ್ಲಿ ಊಟ–ವಸತಿ. (+ಒಂದಿಷ್ಟು ಸಂಬಳ!). ಏತಡ್ಕದಲ್ಲಿ ಸಾಹಿತ್ಯದ ವಾತಾವರಣ ಇತ್ತು. ಸುಶಿಕ್ಷಿತ ತರುಣರ ಗುಂಪು ಅಲ್ಲಿನದ್ದು. ಏತಡ್ಕದಲ್ಲಿ 'ವಿಚಿತ್ರ' ನಾಮಾಂಕಿತ ವೈ.ಎಸ್. ಹರಿಹರ ಭಟ್ಟರ 'ಸ್ಫೂರ್ತಿ' ಹಸ್ತಪತ್ರಿಕೆ, ವಾಚನಾಲಯ, ಪುಸ್ತಕಭಂಡಾರ, ಗ್ರಾಮಸೇವಕರ ಕಛೇರಿ– ಎಲ್ಲವೂ ಚಟುವಟಿಕೆಗಳ ತಾಣವಾಗಿದ್ದುವು. 8–10 ತಿಂಗಳು ಅಲ್ಲಿ 'ಖುಷಿಯಾಗಿ' ಕಳೆದೆ. ಆಗ ಬಳ್ಳಾರಿಯ 'ತಾರಾನಾಥ ವೈದ್ಯಕೀಯ ಕಾಲೇಜ್'ನಲ್ಲಿ ಓದುತ್ತಿದ್ದ ವೈ.ಕೆ. ಕೇಶವ ಭಟ್ಟರ ಪರಿಚಯವಾಯಿತು. ಪರಿಚಯ ಸ್ನೇಹವಾಗಿ, ಸ್ನೇಹ ಆತ್ಮೀಯತೆಯಾಗಿ ಪರಿಣಮಿಸಿತು. ಅವರೂ ಪತ್ತಡ್ಕ ಕೇಶವಭಟ್ಟರೂ ಒತ್ತಾಯಿಸಿದ್ದರಿಂದ ತಾರಾನಾಥ ಕಾಲೇಜಿಗೆ ವೈದ್ಯಕೀಯ ಶಿಕ್ಷಣಕ್ಕೆ ಸೇರಲು ಅರ್ಜಿ ಹಾಕಿದೆ. ಮಾಯಿಪ್ಪಾಡಿಯ 'ಬೇಸಿಕ್' ಶಿಕ್ಷಕರ ತರಬೇತಿಗೂ ಅರ್ಜಿ ಸಲ್ಲಿಸಿದ್ದೆ– ಎರಡರಲ್ಲೂ ಸೀಟು ಸಿಕ್ಕಿತು. ಕೂಡಲೇ ಮರಕಿಣಿಗೆ ಹೋದೆ.

ಮನೆಯ ಆರ್ಥಿಕ ಪರಿಸ್ಥಿತಿ ಇನ್ನೂ ಕೂಡ ಅನುಕೂಲಕರವಾಗಿರಲಿಲ್ಲ. 'ಬೇಸಿಕ್ ಟ್ರೈನಿಂಗ್' ಎಂದಾದರೆ 'ಸ್ಟೈಫಂಡ್'– ಊಟದ ಖರ್ಚಿಗಾಗುವಷ್ಟು ದೊರಕುತ್ತಿತ್ತು. ನಾನು ಯಾವ ನಿರ್ಧಾರಕ್ಕೂ ಬರುವುದಕ್ಕಾಗದೆ ಇದ್ದಾಗ, ಬಳ್ಳಾರಿಯಿಂದ ವೈ.ಕೆ. ಕೇಶವ ಭಟ್ಟರ ಪ್ರತ್ಯೇಕ ಪತ್ರ ಬಂತು– 'ತಕ್ಷಣ ಹೊರಡಬೇಕು; ಕಾಲೇಜು ಪ್ರಾರಂಭವಾಗಿದೆ'.

ಅಪ್ಪ–ಅಣ್ಣ ಏನೇನು ಮಾತಾಡಿಕೊಂಡರೋ ತಿಳಿಯದು. ಮರುದಿನವೇ ಬೆಂಗಳೂರು ಮೂಲಕ ಬಳ್ಳಾರಿ ತಲುಪುವ ಬಗ್ಗೆ ಅಣ್ಣ ಪ್ರಯಾಣದ ವಿವರ ಹೇಳಿದರು. ಅಪ್ಪ 'ಸರಿಯಾಗಿ ಓದು' ಎಂದಷ್ಟೇ ಹೇಳಿ, 200 ರೂಪಾಯಿಗಳನ್ನು ಕೊಟ್ಟರು.

ನಾನು ಬಳ್ಳಾರಿಗೆ ಹೊರಟೆ. ಒಂದು ಚಿಕ್ಕ ಟ್ರಂಕ್, ಒಂದು ಕೈಚೀಲ– ಇವೇ ನನ್ನ ಸಂಗಾತಿ (ಜೇಬಿನಲ್ಲಿ 200 ರೂಪಾಯಿ). ಪುತ್ತೂರಿನಿಂದ ಬಸ್‌ಹಿಡಿದು ಪ್ರಯಾಣಿಸಲು ಮುಂದಾದೆ.

* * *

೨

ಆಯುರ್ವೇದ ಮತ್ತು ಆಧುನಿಕ ವೈದ್ಯಶಾಸ್ತ್ರದ ಸಂಯುಕ್ತ ಶಿಕ್ಷಣ

ಎಲ್. ಎ. ಎಂ. ಎಸ್. ಕೋರ್ಸ್

ಮೈಸೂರಿನಲ್ಲಿ ಮೆಡಿಕೋ

ಮನೆಯಿಂದ ಹೊರಟು ಪುತ್ತೂರಿಗೆ ಬಂದೆ. ಅಲ್ಲಿ ರಾತ್ರೆ ಎಲ್ಲಾ ಸೊಳ್ಳೆಗಳಿಗೆ ರಕ್ತದಾನ ಮಾಡಿ, ಮುಂಜಾನೆ ಮೈಸೂರಿಗೆ ಹೋಗುವ ಮಾಡರ್ನ್ ಬಸ್ ಬಂದ ಕೂಡಲೆ ಮಂಗಳೂರಿನಿಂದ ಅದನ್ನೇರಲು ಕಾಯುತ್ತ ನಿಂತಿದ್ದೆ. ಆಗ ಅಲ್ಲಿಗೆ ಅವಸರದಿಂದ ಬಂದ ಬೆಳ್ಳಾರೆಯ ಮನೋಹರರಾವ್ ಕಾಣಸಿಕ್ಕಿದರು. ಅವರು ಬಳ್ಳಾರಿಯ ತಾರಾನಾಥ ಕಾಲೇಜಿನಲ್ಲಿ ವೈದ್ಯವಿದ್ಯಾರ್ಥಿ. ಹಿಂದೆ ಪುತ್ತೂರಿನ ಹೈಸ್ಕೂಲಲ್ಲಿ ನಾವು ಒಟ್ಟಾಗಿ ಓದುತ್ತಿದ್ದವರು. ಪರಸ್ಪರ ಮಾತುಕತೆ ನಡೆಯುತ್ತಿದ್ದಂತೆಯೇ ಬಸ್ ಬಂದುದರಿಂದ ಸೀಟು ಹಿಡಿಯುವತ್ತ ಗಮನ ಹರಿಸಿದೆವು. ಅವರು ಮುಂದಿನ ಸಾಲಿನಲ್ಲೂ ನಾನು ಹಿಂದಿನ ಸಾಲಿನ ಕೊನೆಯ ಸೀಟಿನಲ್ಲೂ ಕುಳಿತೆವು. ಬಸ್ ಪ್ರಯಾಣ ಮುಂದುವರಿಸಿತು.

ಮಧ್ಯಾಹ್ನ ಮಡಿಕೇರಿಯಲ್ಲಿ ಊಟದವೇಳೆ ಅಂತ ಪ್ರಯಾಣಿಕರಿಗೆ ಇಪ್ಪತ್ತು ನಿಮಿಷ ಅವಧಿಯಲ್ಲಿ ಎಲ್ಲರೂ ಕೆಳಗಿಳಿದರು. ಕಾಮತರ ಊಟದ ಹೋಟೆಲಿನಲ್ಲಿ ನಾವು ಮತ್ತೆ ಮಾತುಕತೆ ಮುಂದುವರಿಸಿದೆವು. ಮೈಸೂರಿನ ಸರಕಾರೀ ಆಯುರ್ವೇದ ಕಾಲೇಜಿನಲ್ಲಿ ಶಿಕ್ಷಣಕ್ಕೆ ಹೆಚ್ಚು ಅನುಕೂಲಗಳಿವೆ. ಅಲ್ಲದೆ ಆಯುರ್ವೇದದ ಜತೆಗೇ 'ಅಲೋಪಥಿ' ವೈದ್ಯಶಿಕ್ಷಣವನ್ನೂ ಕೊಡುವ ಸರಕಾರಿ ಕಾಲೇಜು ಅದು. ಅಲ್ಲದೆ ವೈದ್ಯರ ನೋಂದಣಿ (ರಿಜಿಸ್ಟ್ರೇಶನ್) ಮಾಡಿಸುವಾಗ 'A'ವರ್ಗದಲ್ಲಿ ಸೇರ್ಪಡೆಯಾಗುತ್ತದೆ, ಇದರಿಂದ ಮುಂದೆ ಹೆಚ್ಚಿನ ಉಪಯೋಗವಿದೆ. ಈ ಕಾರಣದಿಂದಲೇ ಮನೋಹರರಾವ್ ಬಳ್ಳಾರಿಯ ತಾರಾನಾಥ ಕಾಲೇಜು ತೊರೆದು ಈ ವರ್ಷ ಮೈಸೂರಲ್ಲಿ ಎಲ್.ಎ.ಎಂ.ಎಸ್ ಸೇರುತ್ತಿದ್ದಾರೆ. ಇಷ್ಟೆಲ್ಲಾ ವಿಚಾರ

ತಿಳಿದನಂತರ ನಾನು ಮೈಸೂರಲ್ಲೇ ಬಸ್ಸಿನಿಂದ ಇಳಿದು ಬಿಟ್ಟೆ. ಮರುದಿನ ಎಲ್.ಎ.ಎಂ.ಎಸ್ ಕೋರ್ಸಿಗೆ ಅರ್ಜಿಸಲ್ಲಿಸುವ ನಿರ್ಧಾರ ಮಾಡಿದೆ. ಇಲ್ಲಿನ ಪ್ರಿನ್ಸಿಪಾಲ್ ಡಾ॥ ಸಿ. ದ್ವಾರಕಾನಾಥರು ಬೆಳ್ಳಾರೆಯ ಡಾ॥ ಪಿ.ಎಂ.ಭಟ್ಟರಿಗೆ ಪರಿಚಿತರು, ಅವರ ಅಭಿಪ್ರಾಯದ ಮೇರೆಗೇ ತಾನು ಇಲ್ಲಿ ಸೇರುತ್ತಿದ್ದೇನೆ ಎಂದು ಮನೋಹರರಾವ್ ಹೇಳಿದ ಮೇಲಂತೂ ನನ್ನ ನಿರ್ಧಾರ ಧೃಡವಾಯಿತು.

'ಡಾ॥ ಪಿ.ಎಂ.ಭಟ್ಟರು ಕಳಿಸಿದ್ದು" ಎಂದು ಒಂದು ಕುಂಟುಪಂಕ್ತಿ ಸೇರಿಸಿದ ಚೀಟಿಯನ್ನು ಪ್ರಿನ್ಸಿಪಾಲರ ಕಛೇರಿಗೆ ಮರುದಿನ ತಲುಪಿಸಿ ಕಾಯುತ್ತಾ ಹೊರಗೆ ನಿಂತೆ. ಸುಮಾರು ಒಂದು ಗಂಟೆಯ ತರುವಾಯ 'ಬುಲಾವ್' ಬಂತು. ಒಳಗೆ ಹೋದೆ. ಡಾ॥ ದ್ವಾರಕಾನಾಥರು ವಿಶ್ವಾಸದಿಂದ ಮಾತಾಡಿಸಿದರು. 'ಈಗಾಗಲೇ ಕಾಲೇಜಿನ ಪ್ರವೇಶದ ಕಾಲಾವಧಿ ಮುಗಿದಿದೆ. ಯಾಕೆ ಮೊದಲೇ ಬರಲಿಲ್ಲ', ಎಂದು ಪ್ರಶ್ನಿಸಿದರು. 'ನಾನು ಹಳ್ಳಿಯಲ್ಲಿದ್ದೆ ಹಾಗಾಗಿ ಸಮಾಚಾರ ತಿಳಿಯುವುದಕ್ಕೆ ಸ್ವಲ್ಪ ವಿಳಂಬವಾಯಿತು' ಎಂದು ಅರ್ಧಸತ್ಯದ ಮಾತನ್ನು ಹೇಳಿದೆ. ಜತೆಗೆ 'ಡಾ॥ ಪಿ.ಎಂ.ಭಟ್ಟರು ತಾವು ಕಳಿಸಿದ್ದು' ಎಂಬುದನ್ನು ತಮಗೆ ತಿಳಿಸುವಂತೆ ಕೂಡ ಹೇಳಿದ್ದಾರೆ ಎಂಬ ಟಿಪ್ಪಣಿಯನ್ನೂ ಸೇರಿಸಿದೆ.

'ಪಾಸಾದಮೇಲೇನು ಮಾಡ್ತಿಯಾ?'

'ಹಳ್ಳಿಸಾರ್ ನಮ್ಮೂರು, ಅಲ್ಲಿ ವೈದ್ಯರಿಲ್ಲ. ಅದಕ್ಕೇ...'

'ಅಂದರೆ ಹಳ್ಳಿಯಲ್ಲಿ ಮೆಡಿಕಲ್ ಪ್ರಾಕ್ಟೀಸ್ ಮಾಡುತ್ತೀಯಾ– ನಿಮ್ಮ ಡಾಕ್ಟರ್ ಪಿ.ಎಂ.ಭಟ್ಟರಹಾಗೆ' ಎಂಬ ಮಾತು ಪ್ರಿನ್ಸಿಪಾಲರ ಬಾಯಿಯಿಂದ ಬಂದದ್ದನ್ನು ಕೇಳಿ ನನಗೆ ತುಂಬಾ ಸಂತೋಷವೂ ಆಶ್ಚರ್ಯವೂ ಆಯಿತು. 'ಹೌದು ಸಾರ್, ದಯವಿಟ್ಟು ಸೀಟು ಕೊಡಿಸಿ' ಎಂದು ವಿನಂತಿಸಿದೆ.

'ಎಷ್ಟು ಹಣ ತಂದಿದ್ದೀಯಾ' ಎಂದು ಅವರು ಕೇಳಿದಾಗ ತಬ್ಬಿಬ್ಬಾದೆ. 'ಇನ್ನೂರು ರೂಪಾಯಿ ಕೊಟ್ಟಿದ್ದಾರೆ– ಮನೆಯಿಂದ; ನಾವು ಶ್ರೀಮಂತರಲ್ಲ ಸಾರ್' ಎಂದು ತಡವರಿಸಿದೆ. ಡಾ॥ ದ್ವಾರಕಾನಾಥರು ಏನೂ ಮಾತಾಡದೆ ಬೆಲ್ ಒತ್ತಿ ಯಾರನ್ನೋ ಬರುವಂತೆ ಹೇಳಿಕಳಿಸಿದರು. ಎರಡು ನಿಮಿಷದಲ್ಲಿ 'ಸಾಹೇಬರ ಉಡುಪಿ'ನಲ್ಲಿದ್ದವರೊಬ್ಬರು ಹಾಜರಾದರು (ಅವರು ಆಫೀಸ್ ಮ್ಯಾನೇಜರ್). 'ನೋಡಿ, ಈ ಹುಡುಗನ ಅಪ್ಲಿಕೇಶನ್ ಫಾರಂನಲ್ಲಿ ಸಹಿ ಹಾಕಿಸಿಕೊಂಡು ಅಡ್ಮಿಶನ್ ಮಾಡಿ; ಫೀಸ್ ತೆಕ್ಕೊಂಡು ರಸೀದಿ ಕೊಡಿ; ಮತ್ತೆ ವಿವರ ತಿಳಿಸ್ತೀನಿ' ಅಂತ ಹೇಳಿ, ಕೈಸನ್ನೆಯಿಂದಲೇ ಹೊರಗೆ ಹೋಗಲು ಸೂಚಿಸಿದರು.

ಆಫೀಸಿನಲ್ಲಿ ಹತ್ತು ಹದಿನೈದು ನಿಮಿಷಗಳಲ್ಲಿ ನನ್ನ ಅರ್ಜಿ ವಿವರ ಸಹಿತ ಭರ್ತಿ ಮಾಡಿದ್ದಾಯಿತು. ಫೀಸ್ ಅಂತ 65 ರೂಪಯಿ ನೀಡಿ ರಸೀದಿ ತೆಗೆದುಕೊಂಡೆ.

ಆ ಕ್ಷಣ ನನಗೆ ತುಂಬಾ ಸಂತೋಷವೆನ್ನಿಸಿತು. 'ನಾನು ಮೆಡಿಕೋ'– ಮೆಡಿಕಲ್ ಕಾಲೇಜ್ ಸ್ಟೂಡೆಂಟ್ ಆಗಿಬಿಟ್ಟೆ ಅಂತ. 'ಸೋಮವಾರ ಮುಂಜಾನೆ ಕಾಲೇಜಿಗೆ ಬನ್ನಿ' ಎಂಬುದಾಗಿ ಮ್ಯಾನೇಜರ್ ರುದ್ರಯ್ಯ ಹೇಳಿದರು. ಅವರಿಗೊಂದು ನಮಸ್ಕಾರಹಾಕಿ ಹೊರಗೆ ಬಂದೆ.

ಪ್ರಿನ್ಸಿಪಾಲರ ಛೇಂಬರ್ ಮುಂದೆ ಯಥಾಪ್ರಕಾರ 'ದವಾಲಿಜವಾನ' ನಿಂತೇ ಇದ್ದ– ಅದರ ಅರ್ಥ ಸಾಹೇಬರು ಒಳಗಿದ್ದಾರೆ ಅಂತ. ಅವರನ್ನು ನೋಡಿ ಕೃತಜ್ಞತೆ ಸಲ್ಲಿಸೋಣ ಎಂದುಕೊಂಡು ಒಳಗೆ ನುಗ್ಗಿದೆ. ಏನೋ ಬರೆಯುತ್ತಿದ್ದವರು ಒಂದು ನಿಮಿಷದ ತರುವಾಯ ತಲೆಎತ್ತಿ ನೋಡಿ 'ಆಯಿತಲ್ಲ ಅಡ್ಮೀಷನ್; ಅದನ್ನು ಡಾ॥ ಪಿ.ಎಂ.ಭಟ್ಟರಿಗೆ ತಿಳಿಸು' ಎಂದು ಮುಗುಳ್ನಗೆ ಸೂಸಿದರು. 'ಸರಿ ಸಾರ್' ಎಂದು ಹೇಳಿ ಕೈ ಮುಗಿದೆ. 'ತುಂಬಾ ಉಪಕಾರವಾಯಿತು ಸಾರ್' ಎಂದು ಕೃತಜ್ಞತೆ ಸಲ್ಲಿಸಿ ಮತ್ತೊಮ್ಮೆ ನಮಸ್ಕರಿಸಿ ಛೇಂಬರಿನ ಬಾಗಿಲಕಡೆಗೆ ತಿರುಗಿದೆ. ಒಂದು ಕ್ಷಣ ಪ್ರಿನ್ಸಿಪಾಲರು ತಲೆ ಎತ್ತಿ ನನ್ನನ್ನು ಆಪಾದಮಸ್ತಕ ನೋಡಿದರು. ಮತ್ತೆ ಮೃದುವಾದ– ಆತ್ಮೀಯ ಧ್ವನಿಯಲ್ಲಿ 'ಕಾಲೇಜು ಹುಡುಗರು ಪ್ಯಾಂಟು–ಶರ್ಟು ಹಾಕುತ್ತಾರೆ' ಎಂದಷ್ಟೇ ಹೇಳಿ ತಮ್ಮ ಕೆಲಸವನ್ನು ಮುಂದುವರಿಸಿದರು. ನಾನು ಹೊರಗೆ ಬಂದು ನನ್ನ ಉಡುಪನ್ನ ನಾನೇ ಪರೀಕ್ಷಿಸಿಕೊಂಡೆ. ನಾನು ಅಡ್ಡಪಂಚೆ ಉಟ್ಟು ಜುಬ್ಬಾ ತೊಟ್ಟುಕೊಂಡಿದ್ದೆ. ಮೇಲೊಂದು ಉತ್ತರೀಯದಂತೆ 'ಶಾಲು' ಹೊದ್ದುಕೊಂಡಿದ್ದೆ. (ಕಾಲಿಗೆ ಚಪ್ಪಲಿ ಸ್ಪರ್ಶ ಅದುವರೆಗೆ ನನಗೆ ಆಗಿರಲಿಲ್ಲ!). ಅಲ್ಲಿಂದ ಹೊರಟು ನಾನು ಮಾಡರ್ನ್‌ಕೆಫೆ (ದಾಸಪ್ರಕಾಶ್ ಹೋಟಲ್) ತಲುಪಿದೆ. ಅಲ್ಲಿ ಮನೋಹರರಾಯರಷ್ಟೇ ಅಲ್ಲದೆ ಬಾಲಕೃಷ್ಣನ್, ರಾಮಚಂದ್ರರಾವ್ ಮೊದಲಾದ 3–4 ಜನ (ಎಲ್ಲರೂ ಎಲ್.ಎ.ಎಂ.ಎಸ್ ವಿದ್ಯಾರ್ಥಿಗಳೇ– ದಕ್ಷಿಣ ಕನ್ನಡ ಜಿಲ್ಲೆಯವರೇ) ಸೇರಿಕೊಂಡು ಹರಟೆಹೊಡೆಯುತ್ತಿದ್ದರು. ಅವರಪೈಕಿ ಹಿರಿಯರೊಬ್ಬರಿದ್ದರು. 'ಮಿಲಿಟರಿ'ಯವರು. ಬಲನ್ ಅಂತ ಹೆಸರು. 'ಏನು ಅಡ್ಮೀಷನ್ ಆಯಿತು ತಾನೆ'? ಎಂದು ಕೇಳಿದರು. ನಾನು ಎಲ್ಲಾ ವಿಚಾರಗಳನ್ನೂ ಸಾದ್ಯಂತವಾಗಿ ಹೇಳಿದೆ. ಸರಿ, ಊಟಕ್ಕೆ ಹೋಗೋಣ ಅಂತ ಕೆಳಗೆ ಹೋಗಿ ಉಂಡು ಬಂದೆವು. ವಿಶ್ರಾಂತಿಗೆಂದು ನಾನು ಅಡ್ಡಾದೆ.

ಮನೋಹರರಾವ್, ಬಾಲಕೃಷ್ಣನ್, ರಾಮಚಂದ್ರರಾವ್ ಮೊದಲಾದವರು 'ಮ್ಯಾಟ್ನಿಷೋ' ಅಂತ ಎದುರಿಗೇ ಇದ್ದ ಸಿನೆಮಾ ಥಿಯೇಟರಿಗೆ ಭೇಟಿ ನೀಡಿದರು. ಬಾಲನ್, ನಾನು ಇಬ್ಬರೇ ರೂಮಿನಲ್ಲಿ ಉಳಿದೆವು. ಎಚ್ಚರವಾದ ನಂತರ 'ಚಹಾ' ಕುಡಿದು ಸ್ವಲ್ಪ ಅದು ಇದು ಮಾತಾಡುತ್ತ ಇದ್ದು ನಂತರ 'ಹೊರಗೆ ಹೋಗೋಣ ಬನ್ನಿ' ಅಂತ ನನ್ನನ್ನು ಕರೆದರು. ಬೀದಿಗಿಳಿದೆವು. ಒಂದು 'ರೆಡಿಮೇಡ್ ಡ್ರೆಸ್'ಗಳ ಅಂಗಡಿಗಳಲ್ಲಿ ಎರಡು ಜತೆ ಪ್ಯಾಂಟ್–ಶರ್ಟ್ ಬನಿಯನ್ ಇತ್ಯಾದಿಗಳನ್ನು

ಖರೀದಿಸಿದ ತರುವಾಯ flex ಕಂಪನಿಯವರ ಒಂದು ಜೊತೆ 'ಹಾಫ್ ಶೂಸ್' ಮತ್ತು 'ಸಾಕ್ಸ್' ಖರೀದಿಸಿಕೊಂಡದ್ದೂ ಆಯಿತು. ಅನಂತರ ಸಾಬೂನು, ಟೂತ್‌ಪೇಸ್ಟ್, ಬ್ರಷ್, ಬಾಚಣಿಗೆ, ಶೇವಿಂಗ್‌ಸೆಟ್, ಮುಂತಾದುವುಗಳನ್ನು ಕೂಡ ಕೊಂಡುಕೊಂಡು ಹೋಟಲಿಗೆ ಮರಳಿದೆವು. ಈ ಎಲ್ಲಾ ವೆಚ್ಚಗಳ ತರುವಾಯ ನನ್ನ ಬಳಿ ಬರೇ 56 ರೂಪಾಯಿ ಮಾತ್ರ ಉಳಿದಿತ್ತು.

ಮುಂದಿನ ಖರ್ಚುಗಳಿಗೆ ಏನು ಮಾಡಬೇಕು ಎಂದು ಚಿಂತಿಸುತ್ತಲೇ ನಿದ್ರಿಸಿದೆ. ಮುಂಜಾನೆ, ಬಾಲನ್ ನನ್ನನ್ನು ನಂಜರಾಜ ಛತ್ರಕ್ಕೆ ಕರೆದುಕೊಂಡು ಹೋದರು. ಅಲ್ಲಿ ದಿನಬಾಡಿಗೆ ಎಂಟು ಆಣೆಕೊಡುತ್ತ ನಾಲ್ಕಾರು ದಿನ ಮಾತ್ರ ಉಳಿದುಕೊಳ್ಳಲು ಅವಕಾಶವಿತ್ತು (ಪ್ರವಾಸಿಗಳಿಗಾಗಿ ಹಿರಿಯ ಶ್ರೀಮಂತರೊಬ್ಬರು ಕಟ್ಟಿಸಿದ ಛತ್ರ ಅದು). ಮರುದಿನ ಬೆಳಿಗ್ಗೆಯೇ ಹೋಟಲ್‌ರೂಂ ಬಿಟ್ಟು ನಾವೆಲ್ಲಾ ಛತ್ರವಾಸಿಗಳಾದೆವು. ಮಧ್ಯಾಹ್ನ ಸಂಜೆ ಇತರರು ಲಲಿತಮಹಲ್, ಚಾಮುಂಡಿಬೆಟ್ಟ ಮೊದಲಾದವುಗಳನ್ನು ನೋಡಲು ಹೋದರು. ನಾನು ಛತ್ರದಲ್ಲೇ ಉಳಿದೆ. ಬಾಲನ್ ಕೂಡ ತಮ್ಮ ಸ್ವಂತದ ಕೆಲಸವೇನೋ ಇದೆಯೆಂದು ಹೊರಗೆ ಹೋದವರು ರಾತ್ರಿ ಎಂಟು ಗಂಟೆಗೆ ಹಿಂದಿರುಗಿದರು. ಇನ್ನೂ ನನ್ನ ಊಟವಾಗಿಲ್ಲ ಎಂದು ತಿಳಿದು ಇಬ್ಬರೂ ಇಂದ್ರಭವನಕ್ಕೆ ಹೋಗಿ ಊಟಕ್ಕೆ ಕುಳಿತೆವು. ಊಟವಾಡಿ ಕೈತೊಳೆದುಕೊಂಡು ಹೊರಗೆ ಬಂದು ನೋಡಿದರೆ ಅಡ್ಯನಡ್ಕದ ರಾಮಕೃಷ್ಣ ಭಟ್ಟರು ಎದುರಿಗಿದ್ದರು. ಅವರೀಗ ಊರಲ್ಲಿ ಹೊಸದಾಗಿ ಜವಳೀಮಳಿಗೆ ತೆರೆಯುವವರಿದ್ದರು. ಅದಕ್ಕಾಗಿ 'ಮೈಸೂರು ರೇಷ್ಮೆ' ಬಟ್ಟೆ ಇತ್ಯಾದಿಗಳನ್ನು ಫ್ಯಾಕ್ಟರಿಯಿಂದಲೇ ಖರೀದಿಸುವುದಕ್ಕಾಗಿ ಮೈಸೂರಿಗೆ ಬಂದಿದ್ದವರು ನನಗೆ ಕಾಣಿಸಿದರು. ನಾನು ಇಲ್ಲೇ ಕಾಲೇಜು ಸೇರಿದ ಎಲ್ಲಾ ವಿಚಾರಗಳನ್ನು ತಿಳಿಸಿದೆ. ಬಳ್ಳಾರಿಗೆಂದು ಹೊರಟವನು ಮೈಸೂರಲ್ಲೇ ಇಳಿದು, ಇಲ್ಲೇ ಕಾಲೇಜು ಸೇರಿದ್ದಾಗಿದೆ– ಕೈಯಲ್ಲಿದ್ದ ಹೆಚ್ಚಿನ ಹಣವೆಲ್ಲಾ ಖರ್ಚಾಗಿರುವುದು ಇತ್ಯಾದಿಗಳನ್ನೆಲ್ಲಾ ತೀಳಿಸಿ, ಕೂಡಲೇ ಒಂದಿಷ್ಟು ಹಣ M.O ಮಾಡುವಂತೆ 'ನಮ್ಮ ಮನೆಗೆ' ತಿಳಿಸುವಂತೆ ವಿನಂತಿಸಿದೆ. ಒಂದು ಪತ್ರವನ್ನೂ ಬರೆದುಕೊಟ್ಟೆ. ಮರುದಿನ ಮುಂಜಾನೆ ಅವರು ಊರಿಗೆ ತೆರಳಿದರು.

ನಾವೆಲ್ಲಾ ಕಾಲೇಜಿಗೆ ಹೋಗಲು ಪ್ರಾರಂಭಿಸಿದೆವು. ಈಗಾಗಲೇ ದಕ್ಷಿಣ ಕನ್ನಡ ಹಾಗೂ ಶಿವಮೊಗ್ಗ ಜಿಲ್ಲೆಗಳಿಂದ ಬಂದು ಕಾಲೇಜು ಸೇರಿದ್ದ ಏಳೆಂಟು ಮಂದಿ ವಿದ್ಯಾರ್ಥಿಗಳೂ ಮತ್ತು ನಾವು ಸೇರಿಕೊಂಡು 'ನಿಯೋ ಸ್ಟೂಡೆಂಟ್ ಹೋಮ್' ಎಂಬ ಹೆಸರಿನಿಂದ ಹಾಸ್ಟೆಲ್‌ನ್ನು ಪ್ರಾರಂಭಿಸಿದೆವು. ಪಿ.ಕೆ.ಎಸ್.ಶಂಕರ ಪೆಜತ್ತಾಯ ಎಂಬವರು ಅಚ್ಚುಕಟ್ಟಾಗಿ ಅಡುಗೆಮನೆಯ ಮೇಲ್ತನಿಕೆ ನೋಡಿಕೊಂಡರು. ರಾಮಚಂದ್ರರಾವ್, ಕರುಣಾಕರ, ಪ್ರಭಾಕರ ಹೆಗ್ಡೆ ಲೆಕ್ಕಪತ್ರ– ಹಣಕಾಸಿನ ವ್ಯವಸ್ಥೆಗೂ,

ಕೃಷ್ಣಮೂರ್ತಿ ಮತ್ತು ವ್ಯಾಸರಾವ್ ಜತೆಗೆ ನಾನು ತರಕಾರಿ- ಹಾಲು ದಿನಸಿಗಳ ಸರಬರಾಜಿನ ಜವಾಬ್ದಾರಿಯನ್ನು ಹೊತ್ತುಕೊಂಡೆವು. ರವೀಂದ್ರನಾಥ ಕೊಡ್ಗಿ, ಮನೋಹರರಾವ್, ಸೀತಾರಾಮ ಉಪಾದ್ಯಾಯ, ಸಜ್ಜನ್ ದಾಮೋದರ ಪಂಡಿತ್ ಮೊದಲಾದವರು ಬೇರೆ ಬೇರೆ ಕೆಲಸಗಳ ಮೇಲ್ವಿಚಾರಣೆಗೆ ಸಮ್ಮತಿಸಿದರು. ಒಟ್ಟಿನಲ್ಲಿ ಉತ್ಸಾಹದಿಂದ ಹಾಸ್ಟಲ್‌ನಲ್ಲಿ ನಮ್ಮ ಜೀವನ ಪ್ರಾರಂಭವಾಯಿತು. ಮೂರು ತಿಂಗಳಲ್ಲಿ ನಾಲ್ಕು ಜನ 'ಅಡಿಗೆ ಭಟ್ಟರು' ಬಿಟ್ಟುಹೋದರೂ ಪೆಜತ್ತಾಯರು ತಮ್ಮೂರಿನಿಂದಲೇ ಒಬ್ಬರನ್ನು ಕರೆತಂದು, ನಮ್ಮ ಹೊಟ್ಟೆ ತಂಪಾಗಿರುವಂತೆ ನೋಡಿಕೊಂಡರು. ನಾವೆಲ್ಲರೂ ಅವರಿಗೆ 'ಊಟದ ಆಣೆ'ಯಾಗಿ ಚಿರಋಣಿಗಳೆಂದು ಆಗಾಗ ಹೇಳುತ್ತಿದ್ದೆವು. ವರ್ಷದ ಕೊನೆಗೆ ಹಾಸ್ಟಲ್ಲನ್ನು ಮುಚ್ಚುವುದು ಅನಿವಾರ್ಯವಾಯಿತು- ಕಟ್ಟಡದಮಾಲಿಕರು ತಾವೇ ಇಲ್ಲಿ ವಾಸಿಸಲು ಬರುವವರಿದ್ದೇವೆ ಎಂಬುದಾಗಿ ತಿಳಿಸಿದ್ದರಿಂದ. ಪರೀಕ್ಷೆ ಮುಗಿದು ರಜೆಯಲ್ಲಿ ಊರಿಗೆ ಹೊರಡುವ ಮೊದಲು ಹಾಸ್ಟೆಲನ್ನು ಮುಚ್ಚಿದೆವು.

* * *

೩

ವೈದ್ಯಶಿಕ್ಷಣದ ಹಸಿರು ನೆನಪುಗಳು

ಹಳೇಕಾಲೇಜು : ಹೊಸಚೈತನ್ಯ

ಮೈಸೂರು ಅರಸುಮನೆತನದ ರಾಜಾಶ್ರಯದಲ್ಲಿ ಅರಮನೆಯ ವಿಶೇಷ ಪ್ರೋತ್ಸಾಹ ಸಂಸ್ಕೃತ ಭಾಷೆಗೆ ದೊರಕುತ್ತಿತ್ತು. ವೇದಾಧ್ಯಯನದ ಜತೆಗೆ ಸಂಸ್ಕೃತ ಸಾಹಿತ್ಯಾಭ್ಯಾಸವೂ ಇದ್ದು ಅದರ ಒಂದು ಅಂಗವಾಗಿ ಆಯುರ್ವೇದ ಶಿಕ್ಷಣವೂ ನಡೆಯುತ್ತಿತ್ತೆಂದು ಹೇಳುತ್ತಾರೆ. ಸಂಸ್ಕೃತ ಮಹಾಪಾಠಶಾಲೆ (ಸಂಸ್ಕೃತ ಕಾಲೇಜು) ತನ್ನ ಸ್ವಂತ ಕಟ್ಟಡದಲ್ಲಿ ವಿಜೃಂಭಿಸುತ್ತಿದ್ದ ಆ ದಿನಗಳಲ್ಲಿ ಆಯುರ್ವೇದವು 'ಉಪಬಂಧು'ವಿನಂತೆ ಇರುತ್ತಿತ್ತು. 1920ರ ಸುಮಾರಿಗೆ ಸುಪ್ರಸಿದ್ಧ ಆಯುರ್ವೇದ ವೈದ್ಯರುಗಳಾದ ಅಂಬಳೆ ಅಣ್ಣಯ್ಯ ಪಂಡಿತರು, ಗುಂಡ್ಲು ಪಂಡಿತ ರಾಜಗೋಪಾಲಾಚಾರ್ಯರು ಮೊದಲಾದ ಮಹನೀಯರ ಸತತ ಪ್ರಯತ್ನದಿಂದ ಆಯುರ್ವೇದ ಶಿಕ್ಷಣ ಹಾಗೂ ಚಿಕಿತ್ಸಾ ವ್ಯವಸ್ಥೆಗೆ ಪ್ರತ್ಯೇಕ ವ್ಯವಸ್ಥೆ ಇರಬೇಕೆಂಬುದಾಗಿ ನಿರ್ಧರಿಸಿ 'ಆಯುರ್ವೇದ ಕಾಲೇಜಿ'ನ ಕಟ್ಟಡವನ್ನೂ ಅದರ ಜತೆಗೆ ಚಿಕಿತ್ಸಾ ವ್ಯವಸ್ಥೆ ಹಾಗೂ ಔಷಧಿ ತಯಾರಿಗೆ ಮೂಲಿಕಾವನ ಮೊದಲಾದ ವಿವಿಧ ವಿಭಾಗಗಳನ್ನು ವ್ಯವಸ್ಥೆಗೊಳಿಸುವುದರಲ್ಲಿ ಯಶಸ್ವಿಯಾಯಿತು.

ಹೀಗೆ ಮೈಸೂರು ಆಯುರ್ವೇದ ಕಾಲೇಜು (ಜತೆಗೆ 'ಯುನಾನಿ' ವಿಭಾಗವೂ ಸೇರಿಕೊಂಡು) ನೂತನ ಅಸ್ತಿತ್ವವನ್ನು ಪಡೆದುಕೊಂಡರೂ ವೈದ್ಯಶಿಕ್ಷಣದ ಪರಂಪರಾನುಗತವಾದ ಸಾಂಪ್ರದಾಯಕ ವಿಧಾನದಲ್ಲೇ ನಡೆಯುತ್ತಿತ್ತು. ಆಯುರ್ವೇದದ ಪ್ರಮುಖ ಗ್ರಂಥಗಳು ಸಂಸ್ಕೃತದಲ್ಲಿ ಇದ್ದುದರಿಂದ, ಆಯಾ ಗ್ರಂಥಗಳಿಂದ ಶ್ಲೋಕಗಳನ್ನು ಓದಿ ವಾಕ್ಯಾರ್ಥವನ್ನು ಸಂಸ್ಕೃತ ಭಾಷೆಯಿಂದ ಕನ್ನಡದಲ್ಲಿ ವಿವರಿಸುವುದು ಅನೂಚಾನವಾಗಿ ನಡೆದುಬಂದ ಪದ್ಧತಿ. ಇದರಲ್ಲಿ ಸುಧಾರಣೆ ಆಗಬೇಕೆಂಬ ಪ್ರಯತ್ನ ನಡೆದಿದ್ದರೂ ಅಷ್ಟೇನೂ ಸಫಲವಾಗಲಿಲ್ಲ. 1925ರ ಸುಮಾರಿಗೆ ಮದ್ರಾಸ್, ಮುಂಬೈ, ಸತಾರ, ಅಹಮ್ಮದನಗರ ಮೊದಲಾದ

ವಿವಿಧ ಪ್ರಾದೇಶಿಕ ಆಯುರ್ವೇದ ಶಿಕ್ಷಣ ಸಂಸ್ಥೆಗಳಲ್ಲಿ, ಸರಕಾರದ ಅನುಮತಿಯೊಂದಿಗೆ 'ಅಲೋಪತಿ'ಯನ್ನು ಸ್ವಲ್ಪಮಟ್ಟಿಗೆ ಕಲಿಸುವುದು ರೂಢಿಯಾಯಿತು. ಮೈಸೂರಿನಲ್ಲಿಯೂ ಇದು ಕ್ರಮೇಣ ಪ್ರಭಾವ ಬೀರಿದರೂ ಸಂಸ್ಥೆಯ ಚಟುವಟಿಕೆಗಳು ತೀರ ಪರಿಮಿತವಾಗಿಯೇ ಇತ್ತು. ದೇಶ ಸ್ವಾತಂತ್ರ್ಯವಾಗುವ ಕೆಲಗಾಲ ಪೂರ್ವದಲ್ಲೇ ಈ ಆಯುರ್ವೇದ ಶಿಕ್ಷಣ ಸಂಸ್ಥಾನಗಳಲ್ಲಿ ಅಲೋಪತಿಯನ್ನು ಜೊತೆಯಾಗಿಯೇ ಕಲಿಸುವುದು ಪ್ರಾರಂಭವಾಯಿತು. ಇಷ್ಟೆಲ್ಲಾ ಆದರೂ ಮೈಸೂರಿನ ಆಯುರ್ವೇದ ಕಾಲೇಜು 'ಶಿಕ್ಷಣ ಇಲಾಖೆ'ಯ ಅಥವಾ 'ವೈದ್ಯಕೀಯ ಇಲಾಖೆ'ಯ ಅಧೀನವಾಗಿರದೆ 'ಸ್ಥಳೀಯ ಸಂಸ್ಥೆಗಳ ಸ್ವಯಂಮಾಡಳಿತ ಇಲಾಖೆ'ಯ ಬಾಲಂಗೋಚಿಯಾಗಿಯೇ ಇತ್ತು. (ಕೆಲಕಾಲ ಮುಜರಾಯಿ ಇಲಾಖೆಗೂ ಅಂಟಿಕೊಂಡಿತ್ತು.)

ಬೀಸಿತು ಹೊಸ ಗಾಳಿ

1947–48ರಲ್ಲಿ ಡಾ॥ ದ್ವಾರಕಾನಾಥರನ್ನು ಬೆಂಗಳೂರಿನ ಭಾರತೀಯ ವೈದ್ಯಶಾಸ್ತ್ರ ಸಂಸ್ಥೆಯ ಸಂಶೋಧನಾ ವಿಭಾಗದ ಮುಖ್ಯಸ್ಥರನ್ನಾಗಿ ಮೈಸೂರು ಸರಕಾರವು ನೇಮಕ ಮಾಡಿತು. ಬೆಂಗಳೂರಿನ ಸುಭಾಶ್‌ನಗರದ ಅಂಚಿನಲ್ಲಿ (ಈಗಿನ ಆನಂದರಾವ್ ವೃತ್ತದ ಸಮೀಪ) ಹೊಸದಾಗಿ ಪ್ರಾರಂಭವಾದ ಸಂಸ್ಥೆ ಅದು. ಅಲ್ಲಿ ಸಂಶೋಧನಾ ವಿಭಾಗವನ್ನು ವ್ಯವಸ್ಥೆಗೊಳಿಸುವಷ್ಟರಲ್ಲೇ ಅವರನ್ನು ಮೈಸೂರಿನ ಸರಕಾರಿ ಆಯುರ್ವೇದ ಯುನಾನಿ ಕಾಲೇಜಿನ ಪ್ರಿನ್ಸಿಪಾಲರನ್ನಾಗಿ ವರ್ಗಾಯಿಸಿತು. ಸುಮಾರು 7 ವರ್ಷಗಳ ಕಾಲ ಡಾ॥ ದ್ವಾರಕಾನಾಥರು ಇಲ್ಲಿ ಪ್ರಾಂಶುಪಾಲರಾಗಿದ್ದರು.

ದೇಶ ಸ್ವತಂತ್ರವಾಗುವುದಕ್ಕೆ ಸ್ವಲ್ಪ ಸಮಯದ ಹಿಂದೆ ದೆಹಲಿಯ ಕೇಂದ್ರ ಸರಕಾರವು ದೇಶದಾದ್ಯಂತ ಆಯುರ್ವೇದ ವಿದ್ಯಾಲಯಗಳಲ್ಲಿ ಏಕರೂಪ ಶಿಕ್ಷಣ ಪದ್ಧತಿಯನ್ನು ಅಳವಡಿಸುವುದರ ಸಾಧ್ಯಾಸಾಧ್ಯತೆಯನ್ನು ಕೂಲಂಕಶವಾಗಿ ಅಧ್ಯಯನ ಮಾಡಿ ಆ ಸಂಬಂಧವಾದ ಸಲಹೆ ನೀಡಲು ಕರ್ನಲ್ ಆರ್.ಎನ್. ಛೋಪ್ರಾ ಎಂಬ ವಿಖ್ಯಾತ ವೈದ್ಯ ಶಿಕ್ಷಣ ತಜ್ಞರ ನೇತೃತ್ವದಲ್ಲಿ ಒಂದು ಆಯೋಗವನ್ನು ರಚಿಸಿತು. ಆ ಸಮಿತಿಯ ಕಾರ್ಯದರ್ಶಿಯಾಗಿ ಡಾ॥ ದ್ವಾರಕಾನಾಥರು ಇದ್ದು, ದೇಶವ್ಯಾಪಿ ಪ್ರಮುಖ ವೈದ್ಯರುಗಳಿಂದ, ಶಿಕ್ಷಣ ಸಂಸ್ಥೆಗಳಿಂದ, ಶಿಕ್ಷಣ ತಜ್ಞರಿಂದ ಹಾಗೂ ಪ್ರಸಿದ್ಧ ಆಯುರ್ವೇದ ವೈದ್ಯ ಶುಶ್ರೂಷಾ ಸಂಸ್ಥೆಗಳಿಂದ ಸಲಹೆಗಳನ್ನು ಸ್ವೀಕರಿಸಿ ಒಂದು ಮಹತ್ತರ ವರದಿಯನ್ನು ತಯಾರಿಸಿ ಭಾರತ ಸರಕಾರಕ್ಕೆ ಸಲ್ಲಿಸಿತು. ಅದನ್ನು ಅನುಮೋದಿಸಿದ ಭಾರತ (ಕೇಂದ್ರ) ಸರಕಾರವು ಎಲ್ಲ ರಾಜ್ಯಗಳಿಗೂ ಅದನ್ನು ಶತಾಂಶ ಅನುಷ್ಠಾನಕ್ಕೆ ತರುವಂತೆ ಸೂಚಿಸಿತು.

ಪ್ರಿನ್ಸಿಪಾಲ್ ಡಾ॥ ದ್ವಾರಕಾನಾಥರು ಮಾಡಿದ ಮೊದಲನೇ ಕೆಲಸವೆಂದರೆ ಕಾಲೇಜಿನ ಪಾಠಪಟ್ಟಿ (ಟೈಮ್ ಟೇಬಲ್) ಯನ್ನು ಪುನಶ್ಚೇತನಗೊಳಿಸಿ, ಆಯುರ್ವೇದ ಹಾಗೂ ಅಲೋಪತಿಗಳಿಗೆ ಸೂಕ್ತ ಮತ್ತು ಸಮರ್ಪಕ ಕಾಲ ಪರಿಮಿತಿಯನ್ನು ನಿಗದಿಗೊಳಿಸಿದರು. ಬೋಧನಾ ವಿಷಯಗಳನ್ನು ಸೂಕ್ತವಾಗಿ ವಿಂಗಡಿಸಿ, 'ಸಿಲೆಬಸ್'ನ್ನು ಬಿಡುಗಡೆಗೊಳಿಸಿದರು. ಅಗತ್ಯಗಳಿಗೆ ತಕ್ಕಂತೆ ಪ್ರಾತ್ಯಕ್ಷಿಕೆ ಹಾಗೂ ಪ್ರಾಕ್ಟಿಕಲ್ ಅವಧಿಯನ್ನು ನಿಗದಿಗೊಳಿಸಿದರು.

ಅಲೋಪತಿಯ 'ಫಾರ್ಮಕಾಲಜಿ', 'ಪೆಥಾಲಜಿ', 'ಮೆಟರ್ನಿಟಿ ಗೈನಕಾಲಜಿ', 'ಕ್ಲಿನಿಕಲ್ ಮೆಡಿಸಿನ್' ಮೊದಲಾದ ಪ್ರಮುಖ ವಿಷಯಗಳಲ್ಲಿ ಅತ್ಯಗತ್ಯವಾಗಿ ತಿಳಿದುಕೊಳ್ಳಬೇಕಾದ ಅಂಶಗಳನ್ನೊಳಗೊಂಡ ಸಿಲೆಬಸ್ (ಪಠ್ಯಕ್ರಮ)ವನ್ನು ಕೂಡ ತಯಾರಿಸಿ ಸರಕಾರದ ಅನುಮತಿ ಪಡೆಯಿತು. ಆಯುರ್ವೇದದ ಪಾಠಗಳನ್ನು ಸಹ ಸಂಸ್ಕೃತ ಗ್ರಂಥ ಶ್ಲೋಕಗಳನ್ನು ಓದಿ ತಾತ್ಪರ್ಯವನ್ನು ತಿಳಿಸುವ ವಿಧಾನದಲ್ಲಿ ಸಾಕಷ್ಟು ಮಾರ್ಪಾಡು ಮಾಡಿ, ವಿದ್ಯಾರ್ಥಿಗಳಿಗೆ ಕಲಿಯಲು ಅನುಕೂಲವಾಗುವಂತೆ ಪಠ್ಯಕ್ರಮವನ್ನು ಅನುಸರಿಸಲು ಉಪನ್ಯಾಸಕರನ್ನು ಪ್ರಚೋದಿಸಿದರು. ಈ ಪ್ರಯತ್ನದ ಮೊದಲ ಹೆಜ್ಜೆಯಾಗಿ ತಾವೇ 'ಫಂಡಮೆಂಟಲ್ ಪ್ರಾಕ್ಟಿಕಲ್ ಆಫ್ ಆಯುರ್ವೇದ' ಎಂಬ ಕೃತಿಯನ್ನು ಬರೆದು ಪ್ರಕಟಿಸಿದರು. ರೋಗ ಚಿಕಿತ್ಸಾ ಶಾಸ್ತ್ರವನ್ನು ಬೋಧಿಸುತ್ತಿದ್ದ ಡಾ॥ ಮಹದೇವ ಶಾಸ್ತ್ರಿಗಳು 'ಚಿಕಿತ್ಸಾ ತತ್ವದೀಪಿಕಾ' ಎಂಬ ಉಪಯುಕ್ತ ಪಠ್ಯಪುಸ್ತಕವನ್ನು ರಚಿಸಿದರು. (ಈ ಕೃತಿಯ ಪ್ರೂಫನ್ನು ತಿದ್ದುವ ಕೆಲಸವನ್ನು ನಾನು ಮಾಡಿದ್ದೆ) ಇತರ ಹಲವಾರು ಪ್ರಾಧ್ಯಾಪಕರು 'ಟೆಕ್ಸ್ಟ್‌ಬುಕ್'ನಂತಿರುವ ವಿದ್ಯಾರ್ಥಿಗಳಿಗೆ ಉಪಯುಕ್ತ ಕೃತಿಗಳನ್ನು ರಚಿಸಿದರು.

ಆದರೂ ವಿಭಾಗಗಳಲ್ಲಿ ಶಿಕ್ಷಣ ನೀಡುತ್ತಿದ್ದ ಪರಿಣತ ಉಪನ್ಯಾಸಕ ವೈದ್ಯರೇ ಆಯುರ್ವೇದ ಕಾಲೇಜ್ ವಿದ್ಯಾರ್ಥಿಗಳಿಗೂ ತರಗತಿಗಳನ್ನು ನಡೆಸುವುದನ್ನು ರೂಢಿಗೆ ತಂದರು. ಸಂಬಂಧಪಟ್ಟ ಆಸ್ಪತ್ರೆಗಳ ವಾರ್ಡುಗಳಲ್ಲಿ 'ಕ್ಲಿನಿಕಲ್ ಲೆಕ್ಚರ್', ರೋಗ ತಪಾಸಣೆಗಳಿಗೂ ಅನುಕೂಲತೆ ಲಭ್ಯವಾದವು.

ಆಯುರ್ವೇದ ವಿಭಾಗದಲ್ಲಿ ಕೂಡ 'ಸಿಲೆಬಸ್' ಪ್ರಕಾರವೇ ಶಿಕ್ಷಣ ಪ್ರಾರಂಭವಾಯಿತು. ಬೇರೆ ಬೇರೆ ವೈದ್ಯಗ್ರಂಥಗಳಿಂದ ಪ್ರತಿಯೊಂದು ವಿಭಾಗದಲ್ಲಿಯೂ 'ಖಚಿತ' ಅಂಶಗಳನ್ನು ಮಥಿಸಿ ಶಿಕ್ಷಣನೀಡುವ ಕ್ರಮವನ್ನು ಪ್ರಾರಂಭಿಸಿದರು. ಔಷಧೀಯ ಸಸ್ಯಗಳ ಬಗೆಗೆ ಧನ್ವಂತರೀ ನಿಘಂಟಿನ ಜತೆಗೆ ಭಾವಪ್ರಕಾಶ ನಿಘಂಟು ಮಾತ್ರವಲ್ಲದೆ ಸಂಬಂಧಪಟ್ಟ ಇತರ ಮಹಾನ್ ವೈದ್ಯಗ್ರಂಥಗಳನ್ನು ಕೂಡ ಮೆಲುಕು ಹಾಕಿ, ಪಾಠವನ್ನು ಸಿದ್ಧಪಡಿಸಿ ವಿದ್ಯಾರ್ಥಿಗಳಿಗೆ ಬೋಧಿಸುವಂತೆ ಶಿಕ್ಷಣ ವೃಂದವನ್ನು ಪ್ರೇರೇಪಿಸಿದರು. ಮೈಸೂರಿನ ಪ್ರಸಿದ್ಧ ಆಯುರ್ವೇದ ವೈದ್ಯರುಗಳಾದ ಪಿ.ಟಿ.ಕೆ. ಸಂದೀಶನ್, ಎನ್.ಎಲ್. ಭಟ್ಟಾಚಾರ್ಯ

– ಮೊದಲಾದವರನ್ನು ಗೌರವ ಪ್ರಾಧ್ಯಾಪಕರಾಗಿ ಜ್ಞಾನದಾನ ಮಾಡುವಂತೆ ವಿನಂತಿಸಿ ಯಶಸ್ವಿಯಾದರು. ಆಯುರ್ವೇದ ಪ್ರಪಂಚದಲ್ಲಿ ಪ್ರಸಿದ್ಧರಾಗಿದ್ದ ವೈದ್ಯ ಜಿನರಾಳಕರ, ವೈದ್ಯಗುರು ಹಲಸೀಕರ, ಮೊದಲಾದವರನ್ನು ವಿಶೇಷ ಭಾಷಣಗಳಿಗೆ ಆಹ್ವಾನಿಸಿದರು. ಇದೇ ಸಂದರ್ಭದಲ್ಲಿ ಡಾ॥ ಎಂ. ಮಹದೇವಶಾಸ್ತ್ರಿ ಮೊದಲಾದ ಸಮರ್ಥ ಶಿಕ್ಷಕರು ಶಿಕ್ಷಣ ಮಂಡಳಿಯಲ್ಲಿ ಸೇರಿಕೊಂಡರು. ಡಾ॥ ಮಹದೇವಶಾಸ್ತ್ರಿಗಳು 'ಚಿಕಿತ್ಸಾ ತತ್ವದೀಪಿಕಾ' ಎಂಬ ಪುಸ್ತಕವನ್ನು ಬರೆದು ವಿದ್ಯಾರ್ಥಿಗಳಿಗೆ ಉಪಯುಕ್ತ ಪಠ್ಯಪುಸ್ತಕದ ಪರಂಪರೆಯನ್ನು ಪ್ರಾರಂಭಿಸಿದರು. ಡಾ॥ ಗೋಪಾಲರಾವ್ ಹೆಗ್ಗಡೆಯವರು ವಿದ್ಯಾರ್ಥಿಗಳಿಗೆ ಬೋಧಿಸುತ್ತಿದ್ದ 'ರಸಶಾಸ್ತ್ರ' ಪಾಠಗಳನ್ನು ಸಂಗ್ರಹಿಸಿ ವಿದ್ಯಾರ್ಥಿ ಮುರಗೇಶ್ ಬೇವಿನಪುರ (ನಿಂಭಾಚಾರ್ಯ ನಾಮಧೇಯದಿಂದ) ಪುಸ್ತಕವನ್ನೇ ಅಚ್ಚಿಸಿದರು. 'ಫಂಡಮೆಂಟಲ್ ಪ್ರಿನ್ಸಿಪಲ್ ಆಫ್ ಆಯುರ್ವೇದ' ಎಂಬ ಆಂಗ್ಲ ಭಾಷೆಯ ಉದ್ಗ್ರಂಥವನ್ನು ಸ್ವತಃ ಡಾ॥ ದ್ವಾರಕಾನಾಥರೇ ಬರೆದು ಪ್ರಕಟಿಸಿದರು. ಈ ವಿಧಾನ ಮುಂದುವರೆಯಿತು.

4 ವರ್ಷಗಳ ಶಿಕ್ಷಣಾನಂತರ 'ಹೌಸ್‌ಸರ್ಜನ್' ಕೋರ್ಸ್‌ನ್ನು ಮೈಸೂರು–ಬೆಂಗಳೂರು ಹಾಗೂ ಮುಂದೆ ಮಡಿಕೇರಿ–ಮಂಗಳೂರುಗಳಲ್ಲಿ ಕೂಡ ಪೂರೈಸಲು ಅವಕಾಶ ದೊರಕಿಸಿಕೊಟ್ಟರು. ಇಷ್ಟೆಲ್ಲಾ ವ್ಯವಸ್ಥೆಗಳನ್ನು ಮಾಡಲು ಪ್ರಿನ್ಸಿಪಾಲ್ ಡಾ॥ ದ್ವಾರಕಾನಾಥರು ಮಾಡಿದ ಅಗಾಧವಾದ ಪ್ರಯತ್ನ ಯಶಸ್ವಿಯಾಗಿದ್ದರಿಂದ ಕಾಲೇಜಿಗೆ ಸೇರುವ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಿತು. ಮೈಸೂರು ಸಂಸ್ಥಾನದ ಮಟ್ಟಿಗೇ ಎಂಬಂತೆ ಇದ್ದ ಶಿಕ್ಷಣ ಸಂಸ್ಥೆ ಈಗ ಮೈಸೂರು ನಗರದಲ್ಲಿ ಪ್ರಸಿದ್ಧ ಚಿಕಿತ್ಸಾಲಯಗಳಾದ ಕೃಷ್ಣರಾಜೇಂದ್ರ ಸಾರ್ವಜನಿಕ ಆಸ್ಪತ್ರೆ, ಚೆಲುವಾಂಬ ಮಹಿಳಾ ಆಸ್ಪತ್ರೆ (ಹೆರಿಗೆ ವಾರ್ಡ್ ಸೇರಿ) ಸೆನೆಟೋರಿಯಂ (ಕ್ಷಯರೋಗ ಚಿಕಿತ್ಸಾಲಯ) ಕಣ್ಣಿನ ಆಸ್ಪತ್ರೆ – ಹೀಗೆ ಎಲ್ಲಾ ಆಸ್ಪತ್ರೆಗಳಲ್ಲೂ ಸಂದರ್ಭಾನುಸಾರವಾಗಿ ಪ್ರತ್ಯಕ್ಷ ಶಿಕ್ಷಣ ಪಡೆಯುವುದಕ್ಕೂ 'ಕ್ಲಿನಿಕಲ್ ಲೆಕ್ಚರ್'ಗಳನ್ನು ಕೇಳಿ ತಿಳಿದುಕೊಳ್ಳಲಿಕ್ಕೂ ಅನುಕೂಲ ಮಾಡಿಕೊಂಡು (ಮುಂದೆ ಹೆಚ್ಚಿಗೆ ವಿದ್ಯಾರ್ಥಿ ಸಂಖ್ಯೆ, ಈ ಸಂಖ್ಯೆಗೆ ಅನುಗುಣವಾಗಿ) ಇನ್ನು ಈ ಅನುಕೂಲತೆ ಬೇಕಾದಾಗ, ಬೆಂಗಳೂರು, ಮಡಿಕೇರಿ, ಮಂಗಳೂರುಗಳ ಸರಕಾರಿ ಆಸ್ಪತ್ರೆಗಳನ್ನು ಬಳಸಿಕೊಳ್ಳಲಾಯಿತು. ಮೈಸೂರಿನ 'ಸುಪ್ರ' ಮಿಷನ್ ಆಸ್ಪತ್ರೆ ಉತ್ಸಾಹದಿಂದ ನೆರವಾದರು.

ಈಗ 'ಇಂಟರ್ನಿಷಿಪ್' ಎನ್ನುವ ಅದಕ್ಕೆ ಆಗಿನ ಕಾಲದಲ್ಲಿ 'ಹೌಸ್ ಸರ್ಜನ್' ಕೋರ್ಸ್ ಎಂದು ಹೇಳುತ್ತಿದ್ದರು. ಇದು ಮೊದಲು 6 ತಿಂಗಳಿಗೆ ಸೀಮಿತವಾಗಿದ್ದದ್ದು ಮುಂದೆ ವಿಸ್ತರಿಸಿತು. ಬೆಂಗಳೂರಿನಲ್ಲಿ ನಾನು ನನ್ನ ಹೌಸ್ ಸರ್ಜನ್ ಶಿಪ್ ಮುಗಿಸಿದೆ. ಸಾಂದರ್ಭಿಕವಾಗಿ ಹೇಳುವುದೆಂದರೆ ಆಗ ನಮಗೆ ಗೌರವ ಶಿಷ್ಯ ವೇತನವೆಂದು ತಿಂಗಳಿಗೆ 30 ರೂಪೈ ಕೊಡಲಾಗುತ್ತಿತ್ತು.

3–4 ವರ್ಷಗಳಲ್ಲಿ ಆಯುರ್ವೇದ ಕಾಲೇಜಿನ ಹೆಸರು ಕರ್ನಾಟಕದಾದ್ಯಂತ ಅಷ್ಟೇ ಅಲ್ಲದೆ ಆಂಧ್ರ– ತಮಿಳುನಾಡು – ಕೇರಳಗಳಲ್ಲೂ ಹಬ್ಬಿ ವಿದ್ಯಾರ್ಥಿಗಳು ಅಲ್ಲಿಂದಲೂ ಬರಲಾರಂಭಿಸಿದರು. ಕನ್ನಡ ಮಾತಾಡುವ ಎಲ್ಲಾ ಭಾಗಗಳಿಂದಲೂ ತಂಡೋಪತಂಡವಾಗಿ ಶಿಕ್ಷಣಾರ್ಥಿಗಳು ಆಗಮಿಸಿದರು. ಕರ್ನಾಟಕದ ಏಕೈಕ ಸರಕಾರೀ ಆಯುರ್ವೇದ– ಯುನಾನಿ (ಆಯು) ಕಾಲೇಜೆಂದೇ ಪ್ರಸಿದ್ಧವಾಯಿತು. 1950ರ ಸುಮಾರಿಗೆ ತನ್ನ ಸ್ವಂತ ಕಟ್ಟಡವನ್ನು ಹೊಂದಿದ ಬೆಳ್ಳಿ ಹಬ್ಬವನ್ನು ಆಚರಿಸಿದ ಆಯು ಕಾಲೇಜಿಗೆ ಹೆಚ್ಚಿನ ಮಟ್ಟಿಗೆ ಮೈಸೂರು ಸಂಸ್ಥಾನ ಎಂದರೆ ಹಳೇ ಮೈಸೂರಿನ ಜಿಲ್ಲೆಗಳಿಂದ ವೈದ್ಯ ಶಿಕ್ಷಣಕ್ಕೆ ವಿದ್ಯಾರ್ಥಿಗಳು ಬರುತ್ತಿದ್ದರು ಎಂಬುದು ನಿಜ; ಹೀಗಾಗಿ ಕಾಲೇಜಿನ ವಿದ್ಯಾರ್ಥಿಗಳ ಸಂಖ್ಯೆಯು ಹೆಚ್ಚಿನ ಪ್ರಮಾಣದ್ದಾಗಿತ್ತು. ಆದರೆ ವೈದ್ಯ ವಿದ್ವನ್ಮಣಿಗಳಾದ ಬಿ.ವಿ. ಪಂಡಿತರು, ಪಾಳ್ಯಂ ವೆಂಕಟಾಚಲ ಪಂಡಿತರು, ಎನ್.ಎಸ್. ಭಟ್ಟಾಚಾರ್ಯರಂತಹ ಹಿರಿಯರು ಕಾಲೇಜಿನ ಈಗಿನ ಧ್ವಜವನ್ನು ಎತ್ತರಕ್ಕೆ ಹಾರಿಸಿದರು. ಧಾರವಾಡದ ವು. ಗೋಪಾಲಕೃಷ್ಣರಾಯರು, ಅಚ್ಯುತ ಶೆಣೈ, ಮೊದಲಾದ ಹೊರಗಿನವರು ಸಮರ್ಥ ವೈದ್ಯ ಶಿಕ್ಷಣ ಮನೋಭಾವದಿಂದ ದುಡಿದು, ಕಾಲೇಜಿನ ಪ್ರಸಿದ್ಧಿಯನ್ನು ಇನ್ನಷ್ಟು ಹೆಚ್ಚಿಸಿದರು. ತೀರ ಸಂಪ್ರದಾಯದ ಕುಟುಂಬದಿಂದ ಬಂದಿದ್ದರೂ ಶ್ರೀಮತಿ ವಿಶಾಲಾಕ್ಷಮ್ಮ ಮೊದಲಾದ ಮಹಿಳೆಯರು ಕೂಡ ಆಯು ಕಾಲೇಜಿನಲ್ಲಿ ಓದಿದರೆಂಬುದು ಗಮನಾರ್ಹವಾದ ವಿಷಯ.

ಜುಲಾಯಿ ತಿಂಗಳ ಮೊದಲ ವಾರದಲ್ಲಿ ಕಾಲೇಜು ವಿದ್ಯಾರ್ಥಿ ಸಂಘಕ್ಕೆ ಚುನಾವಣೆ ಎಲ್ಲೆಡೆ ನಡೆಯುವುದು ಸಂಪ್ರದಾಯವಾಗಿತ್ತು. ನಮ್ಮ ಆ–ಯು ಕಾಲೇಜು ಕೂಡ ಮೊದಲ ಬಾರಿಗೆ ಈ ಪದ್ಧತಿಯನ್ನು ಅನುಸರಿಸಲು ಪ್ರಾರಂಭಿಸಿತು. ಒಂದು ಶುಕ್ರವಾರ ಕಾಲೇಜಿನ ನೋಟೀಸ್ ಬೋರ್ಡಿನಲ್ಲಿ ಈ ಬಗ್ಗೆ ಪ್ರಕಟಣೆ ಕಾಣಿಸಿಕೊಂಡಿತು. ವಿದ್ಯಾರ್ಥಿ ಸಂಘದ ಅಧ್ಯಕ್ಷ, ಕಾರ್ಯದರ್ಶಿ ಹಾಗೂ ವಿವಿಧ ಚಟುವಟಿಕೆಗಳ ಸಂಘಟಕರ ಸ್ಥಾನಕ್ಕೂ ಕಾರ್ಯಕಾರಿ ಸಮಿತಿಯ ನಾಲ್ಕು ಸ್ಥಾನಗಳಿಗೂ ಸ್ಪರ್ಧಿಸಲು ಆಹ್ವಾನ ದೊರಕಿತು. ಅಂದು ಸಂಜೆ ನಮ್ಮ ಹಾಸ್ಟೆಲ್‌ನಲ್ಲಿ ಚರ್ಚೆ ನಡೆದು 'ಆಟೋಟ' (ಸ್ಪೋರ್ಟ್ಸ್) ವಿಭಾಗಕ್ಕೆ ಪ್ರಭಾಕರ ಹೆಗ್ಡೆಯವರು ಸ್ಪರ್ಧಿಸಬಹುದು ಎಂಬ ಅಭಿಪ್ರಾಯಮೂಡಿತು.

ಶನಿವಾರ ಸಂಜೆವರೆಗೆ ಯಾವುದೇ ನಿರ್ಧಾರವಾಗದಿದ್ದರೂ ವಿವಿಧ ವಿಭಾಗಗಳಿಗೆ ಹಲವಾರು ಉಮೇದ್ವಾರಿಗಳ ಹೆಸರು ಕೇಳಿಬರುತ್ತಿತ್ತು. ಶನಿವಾರ ಸಂಜೆ ನಾವೆಲ್ಲಾ ನಮ್ಮ ಹಾಸ್ಟೆಲಿನಲ್ಲಿ ಹರಟೆ ಕೊಚ್ಚುತ್ತಾ ಕುಳಿತಿದ್ದಾಗ ಇಬ್ಬರು ಹಿರಿಯ ವಿದ್ಯಾರ್ಥಿಗಳು "ಒಳಗೆ ಬರಬಹುದೇ?" ಎಂದು ಕೇಳುತ್ತ ಅರೆತೆರೆದಿದ್ದ ಬಾಗಿಲನ್ನು ದಬ್ಬಿ ಒಳಗೆ ಕಾಲಿಟ್ಟರು. ಒಬ್ಬರು ಜೆ.ಎಸ್. ರಾಮನ್ – ಈಗಾಗಲೇ

ಅಷ್ಟಿಷ್ಟು ಪರಿಚಿತರು. ಚೆನ್ನಾಗಿ ಡ್ರೆಸ್ ಮಾಡಿಕೊಂಡೇ ಇರುವ ನಗುಮುಖದ ಆಕರ್ಷಕ ವ್ಯಕ್ತಿ. ಕಾಲೇಜಿನ 3ನೇ ವರ್ಷದ ವಿದ್ಯಾರ್ಥಿ – ಅಷ್ಟೇ ಅಲ್ಲದೆ ಹಿರಿಯ ಉಪನ್ಯಾಸಕರಾದ ಡಾ॥ ಜೆ.ವಿ. ಅಯ್ಯರ ಪುತ್ರ ಎಂಬುದು ಕೂಡ ನಮಗೆ ತಿಳಿದಿತ್ತು. ಸ್ವಾಗತಿಸಿದೆವು.

ನಮ್ಮಲ್ಲಿ ಹೆಚ್ಚಿನವರನ್ನು ಹೆಸರು ಹಿಡಿದು 'ನಮಸ್ತೆ' ಎಂದು ಹೇಳುವಷ್ಟು ಮಟ್ಟಿಗೆ ನಮ್ಮನ್ನು ರಾಮನ್‌ತಿಳಿದುಕೊಂಡಿದ್ದರು. ತಮ್ಮ ಜತೆಗೆ ಬಂದವರನ್ನು 'ಕಾಸೀಂಸಾಬ್' (ಜಟಕಾಸಾಬ್ ಅಲ್ಲ) ಯುನಾನಿ ವಿದ್ಯಾರ್ಥಿ ಎಂದು ಪರಿಚಯಿಸಿದರು. ಸ್ವಂತಕ್ಕೆರಡು ಕುದುರೆ ಟಾಂಗ ಇದ್ದು ಅದರಲ್ಲಿ ಒಮ್ಮೊಮ್ಮೆ ಶೋಕಿಗಾಗಿ ತಾವೇ ಟಾಂಗ ಓಡಿಸುತ್ತಿದ್ದರಂತೆ. ಅದಕ್ಕೇ ಆ ಹೆಸರು. ಹೆಚ್ಚು ಸಮಯ ವ್ಯರ್ಥ ಮಾಡದೆ ಕಾಲೇಜ್ ಸ್ಟೂಡೆಂಟ್ಸ್ ಯೂನಿಯನ್‌ನ ಚುನಾವಣೆಯ ವಿಷಯವಾಗಿ ಮಾತಾಡಲು ಬಂದಿದ್ದೇವೆ ಎಂದು ನೇರವಾಗಿ ಹೇಳಿದರು.

ಕಾಲೇಜಿನಲ್ಲಿ 'ವೇದಿಕ್–ಯುನಾನಿ' ಎರಡು ಗುಂಪು ಬಹುದಿನಗಳಿಂದಲೂ ಇದೆ. ಈಗ ಮೈಸೂರಿನವರು, ಹೊರಗಿನ ಪ್ರದೇಶದಿಂದ ಬಂದವರು ಎಂಬ ಹೊಸ ಗುಂಪು ಹುಟ್ಟಿಕೊಂಡ ಹಾಗೆ ಕಾಣುತ್ತದೆ. ಇದು ಸರಿಯಲ್ಲ. ನಾವೆಲ್ಲ ಒಟ್ಟಾರೆ ಸೂಕ್ತ ಪ್ರತಿನಿಧಿಗಳನ್ನು ಚುನಾಯಿಸಿ ಒಳ್ಳೆಯ ಮೇಲ್ಪಂಕ್ತಿ ಹಾಕಬಹುದು. ಪ್ರಭಾಕರ ಹೆಗ್ಡೆ ಉತ್ತಮ ಆಟಗಾರರು ಅಂತ ತಿಳಿದುಕೊಂಡು ಅವರನ್ನು ಸ್ಪೋರ್ಟ್ಸ್ ಪ್ರತಿನಿಧಿಯಾಗಿ ನಿಲ್ಲಿಸಲು ನಮ್ಮ ಕಡೆ – ನೀವು ಒಪ್ಪಿದರೆ ಎಂದು ಅರ್ಧದಲ್ಲೇ ಮಾತು ನಿಲ್ಲಿಸಿದರು. ಮತ್ತೆ ಮಾತು ಮುಂದುವರಿದಾಗ ಬೇರೆ ಬೇರೆ ವಿಭಾಗಗಳಿಗೆ ಅಭ್ಯರ್ಥಿಗಳನ್ನು ಆರಿಸುವಾಗ ಪ್ರಾದೇಶಿಕತೆಯನ್ನು ಗಮನದಲ್ಲಿಟ್ಟುಕೊಂಡು ಸರಿಯಾದವರನ್ನು ಆರಿಸಲು ನಿಮ್ಮ ಸಹಕಾರ ಬೇಕು – ಒಪ್ಪಿಗೆ ಕೊಡುತ್ತೀರಾ ಎಂದರು.

ಸ್ವಲ್ಪ ಹೊತ್ತಿನ ತರುವಾಯ ಚರ್ಚೆಗೆ ಸೇರಿಕೊಂಡ ರಾಮಚಂದ್ರರಾವ್ "ಯಾವುದಕ್ಕೂ ಪ್ರಭಾಕರ ಹೆಗ್ಡೆಯವರ ಹತ್ತಿರ ಮಾತಾಡಿ ತಿಳಿಸ್ತೇವೆ" ಎಂದು ಹೇಳಿ ಮರುದಿನ ಸಂಜೆ ಭೇಟಿ ಮಾಡುವ ಆಶ್ವಾಸನೆಯೊಂದಿಗೆ 'ರಾಮನ್–ಸಾಬ'ದ್ವಯರು ಹೊರಗೆ ಹೋದರು.

ರಾತ್ರಿ ಬಹಳ ಹೊತ್ತಿನತನಕ ಚರ್ಚೆ ನಡೆಯಿತು. ಕೊನೆಗೆ 'ಹೊರಗಿ'ನವರಿಗೆ 4 ಸ್ಥಾನ, ಹಿರಿಯ ವಿದ್ಯಾರ್ಥಿ ಗುಂಪಿಗೆ 1 ಸ್ಥಾನ, ಯುನಾನಿಯವರಿಗೆ 2 ಸ್ಥಾನದ ಶರ್ತದೊಂದಿಗೆ ಮಾತುಕತೆ ಮುಂದುವರಿಸಲು ರಾಮಚಂದ್ರ ರಾಯರಿಗೆ ಅಧಿಕಾರ ಕೊಟ್ಟೆವು.

ಮಂಗಳವಾರ ಮುಂಜಾನೆ ನಾಮಪತ್ರ ಸಲ್ಲಿಕೆಯಾಯಿತು. ಮಧ್ಯಾಹ್ನ ಊಟದ ಬಿಡುವಿನಲ್ಲಿ 'ಸ್ಕ್ರೂಟಿನಿ' ಆಗಿ ಸಂಜೆಯತನಕ ಹಿಂದಕ್ಕೆ ಪಡೆಯುವವರಿದ್ದರೆ ಅವಕಾಶ ನೀಡಿ, ಉಮೇದುವಾರಿಗಳ ಪಟ್ಟಿಯನ್ನು ನೋಟಿಸ್ ಬೋರ್ಡಿನಲ್ಲಿ ಪ್ರದರ್ಶಿಸಿದರು. ರಾಮನ್ ಗುಂಪಿನ ಬೆಂಬಲಿತರ ವಿನಾ ಉಳಿದವರು ಸರಸರನೆ ನಾಮಪತ್ರ ಹಿಂದಕ್ಕೆ ಪಡೆದರು. ರಂಗರಾವ್ ಎಂಬ ಹಿರಿಯ ಫೈನಲ್ ಇಯರ್ ವಿದ್ಯಾರ್ಥಿ ಸಾಂಸ್ಕೃತಿಕ ಕಾರ್ಯಕ್ರಮಗಳ ವಿಭಾಗಕ್ಕೆ ಅವಿರೋಧವಾಗಿ ಈಗಾಗಲೇ ಆಯ್ಕೆಯಾಗಿದ್ದರೆ, ಸಂಜೆಯ 5 ಗಂಟೆ ಗಡವು ಮುಗಿಯುತ್ತಿದ್ದಂತೆ ಪ್ರಭಾಕರ ಹೆಗ್ಡೆಯವರ ಉಮೇದ್ವಾರಿಕೆಗೆ ಹಿರಿಯ ವಿದ್ಯಾರ್ಥಿಗಳ ನಾಮಪತ್ರ ಉಳಿದಿತ್ತು ಹಾಗೂ ಚುನಾವಣೆ ಅನಿವಾರ್ಯವಾಯಿತು.

ಮರುದಿನ-ಬುಧವಾರ ಒಂದು ದಿವಸ ಮಾತ್ರ ಪ್ರಚಾರದ ಅವಧಿ ಇತ್ತು. ಗುರುವಾರ ಮುಂಜಾನೆ 8 ರಿಂದ 10 ಗಂಟೆ ತನಕ ಮತದಾನ. ನಾವೆಲ್ಲರೂ ಕುಳಿತು ಚರ್ಚಿಸಿ, ಸುಮಾರು 125 ಕೈ ಕಾಗದದ ಕರಪತ್ರಗಳನ್ನು ಬರೆದು ಸಿದ್ಧಗೊಳಿಸಿದೆವು. ಅದರ ಹಿಂಬದಿಯಲ್ಲಿ ನಮ್ಮ 'ನಾವಿ' ರಾಮನ್ ಜೋಡಿ ಯುನಾನಿ ವಿದ್ಯಾರ್ಥಿ (ನಿ) ಯರ ಮೂಲಕ ಮುಂಜಾನೆ ಎಲ್ಲಾ ಕರಪತ್ರಗಳಲ್ಲೂ ಉರ್ದು ಭಾಷೆಯಲ್ಲಿ ಪ್ರಭಾಕರ ಹೆಗ್ಡೆಯವರಿಗೆ ಓಟು ಕೊಡಲು ವಿನಂತಿಸಲಾಗಿತ್ತು. ಬುಧವಾರ ಮುಂಜಾನೆ ಕಾಲೇಜ್ ಪ್ರಾರಂಭವಾದ ಬೆಲ್ ಬಾರಿಸಿದ ತಕ್ಷಣ ನಾವು ನಾಲ್ಕು ಜನ ತರಗತಿಯನ್ನು ಹೊಕ್ಕು "ಪ್ರಭಾಕರ ಹೆಗ್ಡೆಯವರು ಹಲವಾರು ಸ್ಪರ್ಧೆಗಳಲ್ಲಿ ಭಾಗವಹಿಸಿ ಗೆಲುವನ್ನು ತಂದುಕೊಟ್ಟವರು. ತಮ್ಮ ಶಿಕ್ಷಣ ಸಂಸ್ಥೆಯ ಹೆಸರನ್ನೂ ಖ್ಯಾತಿಯನ್ನೂ ಹೆಚ್ಚಿಸಿದ ಪ್ರಭಾಕರ ಹೆಗ್ಡೆ ನಿಮ್ಮ ಪ್ರತಿನಿಧಿಯಾಗಲು ಸೂಕ್ತ ವ್ಯಕ್ತಿ ಎಂದು ಭಾವಿಸಿ, ನಿಮ್ಮ ಮತವನ್ನು ಅವರಿಗೆ ನೀಡಿ, ಗೆಲವು ಸಾಧಿಸಿ" – ಎಂದು ಹೇಳುತ್ತಿದ್ದಂತೆಯೇ ನಾಲ್ಕು ಮಂದಿ ಗೆಳೆಯರು ಕರಪತ್ರ ಹಂಚಿದರು. ಪ್ರಭಾಕರ ಹೆಗ್ಡೆಯವರು ಎಲ್ಲರಿಗೂ ಕೈ ಮುಗಿದಾಗ ವಿದ್ಯಾರ್ಥಿಗಳು ನಸುನಗೆ ಬೀರಿದರು. 'ಸರಿ' ಎಂಬ ಅರ್ಥದಲ್ಲಿ ಎಲ್ಲರೂ ಸಮ್ಮತಿ ಸೂಚಿಸಿದರು. ಉಳಿದ ತರಗತಿಗಳಲ್ಲಿ ಹೀಗೇ 'ಅನಿರೀಕ್ಷಿತ' ಸಭೆ ನಡೆಯಿತು. ಮಧ್ಯಾಹ್ನ ಊಟದ ನಂತರ ಕಾಲೇಜು ಪ್ರಾರಂಭವಾಗುವ ಗಂಟೆ ಬಾರಿಸಿದ ಕೂಡಲೇ ಎಲ್ಲ 'ಯುನಾನಿ' ವಿದ್ಯಾರ್ಥಿಗಳನ್ನು 'ಜೆಟ್ಕ ಸಾಬಿ' ಒಂದೆಡೆ ಸೇರಿಸಿದ್ದ. ರಾಮನ್ ಸಹಿತ ನಾವೆಲ್ಲಾ ಹೋಗಿ ಅದೇ ಮಾತುಗಳನ್ನು ಹೇಳಿದೆವು. ಇದನ್ನು ಅನುಮೋದಿಸಿದೆವು ಎಂಬಂತೆ ಅನಿರೀಕ್ಷಿತವಾಗಿ 'ಯುನಾನಿ' ವಿದ್ಯಾರ್ಥಿಗಳು ಕೈಚಪ್ಪಾಳೆ ತಟ್ಟಿದರು.

ಮರುದಿನ ಮುಂಜಾನೆ ಮತದಾನ ಸಮಯಕ್ಕೆ ಸರಿಯಾಗಿ ಬಂದು ಕಾಲೇಜು ಪ್ರವೇಶಿಸಿದ ಹಿಂದಿನ ಎರಡು ವರ್ಷಗಳ ಮಟ್ಟಿಗೆ ಆಟೋಟ ವಿಭಾಗದ ಮುಖ್ಯಸ್ಥರೂ ನಗರದ ಆಟಗಾರರಾಗಿದ್ದ 'ಸೀನಿಯರ್ ವಿದ್ಯಾರ್ಥಿ' ಹಾಜರಾದರು. ಮತದಾನ

ನಡೆಯುತ್ತಿದ್ದ ಹಾಗೇ ತಮಗೆ ಗೆಲವು ದೊರಕುವುದಿಲ್ಲ ಎನ್ನುವುದು ಖಚಿತವಾದರೂ ಗಂಭೀರವಾಗಿಕುಳಿತಿದ್ದರು. ಫಲಿತಾಂಶ ಪ್ರಕಟವಾದ ಕೂಡಲೇ ಗೆದ್ದ ಪ್ರಭಾಕರ ಹೆಗ್ಡೆ ಅವರ ಬಳಿ ಹೋಗಿ ಚುನಾವಣೆ ಮುಗಿಯಿತು, ನೀವು ಹಿರಿಯರು, ಸ್ಪೋರ್ಟ್ಸ್ ಕಾರ್ಯಕ್ರಮ ಯಶಸ್ವಿಯಾಗಲಿಕ್ಕೆ ನಿಮ್ಮ ಸಹಕಾರ, ಪ್ರೋತ್ಸಾಹ ನಮಗೆ ಬೇಕು ಎಂದು ವಿನಂತಿಸಿದರು. ಅದಕ್ಕೇನೂ ಮಾರುತ್ತರ ನೀಡದೆ ಸಭಾಭವನದಿಂದ ಹೊರಗೆ ಹೋಗಲು ಬಾಗಿಲ ಕಡೆಗೆ ಎರಡು ಹೆಜ್ಜೆ ಇಟ್ಟರು. ಹಿಂದಿರುಗಿ "ಪ್ರಭಾಕರ ನಿಮ್ಮಲ್ಲಿ ಯಾರಾದರೂ ಕ್ರಿಕೆಟ್ ಆಸಕ್ತರು ಇದ್ದರೆ ನಮ್ಮ 'ಸೂರ್ಯೋದಯ ಕ್ರಿಕೆಟ್ ಕ್ಲಬ್'ಗೆ ಅವರು ಸೇರಿಕೊಳ್ಳಬಹುದು" ಎಂದು ಹೇಳಿ ಹೊರನಡೆದರು.

ಅಭಿನಂದನೆಗಳ ಸುರಿಮಳೆಯ ಕ್ಷಣಗಳಲ್ಲಿ ಪ್ರಿನ್ಸಿಪಾಲರು ಹಿತೋಪದೇಶದ ನಾಲ್ಕು ಮಾತು ಹೇಳಿ ಕಾಲೇಜಿನ ಕೀರ್ತಿ ಇನ್ನಷ್ಟು ವೃದ್ಧಿಯಾಗುವಂತೆ ವಿದ್ಯಾರ್ಥಿಗಳು ಆಟೋಟಗಳಲ್ಲಿ ಮುಂದಾಗಬೇಕು ಎಂದು ಸಲಹೆ ನೀಡಿದರು. ಅನಂತರ ಸಾಂಸ್ಕೃತಿಕ ವಿಭಾಗದ ಪ್ರಮುಖರಾಗಿ ಅವಿರೋಧ ಆಯ್ಕೆಯಾಗಿದ್ದ ನಾಲ್ಕನೇ ವರ್ಷದ ವಿದ್ಯಾರ್ಥಿ ರಂಗರಾವ್ ವಂದನಾರ್ಪಣೆ ಮಾಡಲು ಮುಂದೆ ಬರುತ್ತಿದ್ದಂತೆಯೇ ಆಫೀಸ್ ಮ್ಯಾನೇಜರ್ ಚುನಾವಣಾಧಿಕಾರಿ ಪ್ರಿನ್ಸಿಪಾಲರ ಕಿವಿಯಲ್ಲಿ ಏನೋ ಹೇಳಿದರು. ಕೂಡಲೇ ಎದ್ದು ನಿಂತ ಪ್ರಿನ್ಸಿಪಾಲರು "ಇಲ್ಲಿ ಎಲ್ಲ ವಿಭಾಗದ ಮುಖ್ಯಸ್ಥರೂ ಇದ್ದಾರೆ. ಆದರೆ 'ಸಾಹಿತ್ಯ' ಕಾರ್ಯಕ್ರಮಗಳ ವಿಭಾಗಕ್ಕೆ ಯಾರೂ ಸ್ಪರ್ಧಿಸಿಯೇ ಇಲ್ಲ. ಹಾಗಾಗಿ ಆ ಸ್ಥಾನಕ್ಕೆ ಮೊದಲನೇ ವರ್ಷದ ವಿದ್ಯಾರ್ಥಿ ಎಂ.ಎಂ. ಭಟ್ ನೇಮಕಗೊಂಡಿದ್ದಾರೆ" ಎಂದು ತಮ್ಮ ಪದನಿಮಿತ್ತ ಗೌರವಾಧ್ಯಕ್ಷ ಸ್ಥಾನದ ಅಧಿಕಾರಮುದ್ರೆಯೊತ್ತಿದಾಗ ಮತ್ತೊಮ್ಮೆ ಚಪ್ಪಾಳೆಯ ಸುರಿಮಳೆಯಾಯಿತು. ಚುನಾವಣೆಯಲ್ಲಿ ಉಮೆದ್ವಾರಿಕೆಯ ಅರ್ಜಿ ಕೂಡ ಸಲ್ಲಿಸದೆ, ಸ್ಪರ್ಧೆ ಇಲ್ಲದೆ, ಸ್ಥಾನ ಪಡೆದದ್ದಕ್ಕಾಗಿ ಎಲ್ಲರೂ ಕೈಕುಲುಕಿದ್ದೇ ಕುಲುಕಿದ್ದು. ಆ ಕ್ಷಣ ಅಧ್ಯಕ್ಷತೆಗೆ ಆಯ್ಕೆಗೊಂಡದ್ದಕ್ಕಾಗಿ ರಾಮನ್, ಕಾರ್ಯದರ್ಶಿ ಕಾಸೀಂ ಸಾಬ್ ಅಷ್ಟೇ ಅಲ್ಲದೆ ಯುನಾನಿಗಳ ಸದಸ್ಯರು ಕೂಡ ಅಭಿನಂದನೆ ಸಲ್ಲಿಸಿದರು. ಇದುವರೆಗೆ ಒಂದೇ ಸೂರಿನಡಿ ಇದ್ದರೂ ದೂರದೂರವೇ ಉಳಿದಿದ್ದ 'ಆ–ಯು' ಕಾಲೇಜಿನ ವಿದ್ಯಾರ್ಥಿ ವೃಂದ ಆತ್ಮೀಯ ಸಂಘಟನೆಯಾಗಿ ರೂಪುಗೊಳ್ಳಲು ಪ್ರಾರಂಭವಾಯಿತು.

ಈ ಸಂದರ್ಭದಲ್ಲಿ ಮೈಸೂರಿನ 'ವಿಜಯ' ದಿನಪತ್ರಿಕೆಯ ಸಂಪಾದಕರು ರಾಮಣ್ಣ ಶೆಟ್ಟರು ವೀಕ್ಷಕರಾಗಿ ಬಂದಿದ್ದು ಎಲ್ಲರೂ ಶುಭ ಕೋರಿದರು. (ಇವರು ಸ್ವಾತಂತ್ರ್ಯ ಹೋರಾಟಗಾರರಾಗಿದ್ದು, ದಕ್ಷಿಣ ಕನ್ನಡ ಜಿಲ್ಲೆಯವರು. ಈಗ ನಾಲ್ಕು ವರ್ಷಗಳಿಂದ ಮೈಸೂರಲ್ಲೇ ನೆಲೆಸಿದರು) ಮರುದಿನದ 'ವಿಜಯ'ದಲ್ಲಿ 'ಆಯು ವಿದ್ಯಾರ್ಥಿ ಸಂಘ' ಎಂಬ ಶೀರ್ಷಿಕೆಯೊಂದಿಗೆ ವಿಸ್ತೃತವಾದ ವರದಿ ಕೂಡ ಪ್ರಕಟವಾಯಿತು. ಪ್ರಚಾರ ರಂಗಕ್ಕೂ ಆಯುರ್ವೇದ ಕಾಲೇಜು ಕಾಲಿಟ್ಟಿತು.

ಸಾಮಾನ್ಯವಾಗಿ ಕಾಲೇಜುಗಳಲ್ಲೆಲ್ಲ ಚುನಾವಣೆ ಮುಗಿದು ಗೆದ್ದವರ ಮೆರವಣಿಗೆ (ಪಾರ್ಟಿ ವಗೈರೆ) ಮುಗಿದು ಅದ್ದೂರಿಯಿಂದ ಪ್ರಾರಂಭೋತ್ಸವ ನೆರವೇರಿಸುವುದು ಸಂಪ್ರದಾಯವಾಗಿತ್ತು. ಆದರೆ ಆ-ಯು ಕಾಲೇಜಿನಲ್ಲಿ ರಾಮನ್ ಹೊಸವಿಧಾನದಲ್ಲಿ ಕಾರ್ಯಕ್ರಮ ಪ್ರಾರಂಭಿಸಿದರು. ಪ್ರಿನ್ಸಿಪಾಲ್ ಡಾ॥ ದ್ವಾರಕಾನಾಥರು ಎರಡು ದಿನಗಳ ಮಟ್ಟಿಗೆ ಕಾರ್ಯನಿಮಿತ್ತ ಮದರಾಸಿಗೆ ಹೋಗಿದ್ದ ಹೊತ್ತಿನಲ್ಲಿ ಯುನಾನಿ ವಿಭಾಗದ ಅತ್ಯಂತ ಹಿರಿಯ ಉಪನ್ಯಾಸಕರಿಂದ 'ವಾಚನಾಲಯ'ವನ್ನು ಪ್ರಾರಂಭಿಸಿದರು. 'ವಾಚನಾಲಯ' ವಿಭಾಗದ ನಿರ್ವಾಹಕಿಯಾಗಿ ಓರ್ವ ಯುನಾನಿ ವಿದ್ಯಾರ್ಥಿನಿ ಆಯ್ಕೆಯಾಗಿದ್ದು ಇದು ತೀರ ವೈಶಿಷ್ಟ್ಯಪೂರ್ಣ ಕಾರ್ಯಕ್ರಮ ಎಂಬುದಾಗಿ 'ವಿಜಯ' ಮತ್ತೊಂದು ವರದಿ ಪ್ರಕಟಿಸಿತು. ಎರಡು ವಾರ ಕಳೆಯುವಷ್ಟರಲ್ಲಿ ಇಡೀ ವರ್ಷದ ಕಾರ್ಯಕ್ರಮಗಳ ಪಟ್ಟಿ, ಆಯಾವ್ಯಯದ ಮುಂಗಡ ಪತ್ರ ಎಲ್ಲವೂ ಸಿದ್ಧವಾದವು. ಅಷ್ಟೇ ಅಲ್ಲದೆ ಗೌರವಾಧ್ಯಕ್ಷರಾಗಿದ್ದ ಪ್ರಿನ್ಸಿಪಾಲರ ಒಪ್ಪಿಗೆಯ ಮುದ್ರೆಯೂ ಬಿತ್ತು. ಸರಿ – ಕಾರ್ಯಕ್ರಮಗಳ ಸರಣಿ ಪ್ರಾರಂಭವಾಯಿತು.

ಪ್ರತಿ ಶುಕ್ರವಾರ ಸಂಜೆ 4-೦೦ರಿಂದ 6-೦೦ಗಂಟೆವರೆಗೆ ಸಾಹಿತ್ಯ ಸಂಜೆ. ಮೊದಲು ಹಾಸ್ಯ ಚಟಾಕಿಗಳ ಸರದಿ; ಅನಂತರ ಸಿನೆಮಾ ಹಾಡುಗಳು; ಮುಂದಿನ ಸರದಿ ಭಾವಗೀತೆಗಳು; ಅನಂತರ ದೇವರನಾಮ –ಶಾಸ್ತ್ರೀಯ ಸಂಗೀತ, ವೀಣಾವಾದನ – ಹೀಗೆ ರಸದೌತಣ. ಎಲ್ಲ ವಿದ್ಯಾರ್ಥಿ ವೃಂದದಿಂದಲೇ ನೆರವೇರಿತು. ಬುಧವಾರ ಚರ್ಚಾ ವಿಚಾರಗೋಷ್ಠಿಯಾದರೆ ಇನ್ನೊಂದು ಬುಧವಾರ ಹಿರಿಯ ಸಾಹಿತಿಗಳ ಭಾಷಣ ಇತ್ಯಾದಿ ಇತ್ಯಾದಿ. ಪ್ರಭಾಕರ ಹೆಗ್ಡೆ ನೇತೃತ್ವದಲ್ಲಿ ಬ್ಯಾಡ್‌ಮಿಂಟನ್ ಟೀಮ್ ಜಯಭೇರಿ ಬಾರಿಸಿ ಟ್ರೋಫಿ ತಂದುಕೊಟ್ಟಿತು. ವಾಲೀಬಾಲ್ ಟೀಮನ್ನು ಮಾಳಗಿ ಎಂಬ ಹಿರಿಯ ವಿದ್ಯಾರ್ಥಿ ಸಂಘಟಿಸಿದರು. ಈ ನಡುವೆ ಆ-ಯು ಕಾಲೇಜಿನ ಸ್ಥಾಪನಾ ದಿನಾಚರಣೆ (ಬೆಳ್ಳಿಹಬ್ಬ) ವಿಜೃಂಭಣೆಯಿಂದ ನಡೆಯಿತು. (ಸರಕಾರದಿಂದ ಸಾಕಷ್ಟು ವಿಶೇಷ ಅನುದಾನ ದೊರಕಿತ್ತು)

ಈ ಎಲ್ಲಾ ಸಂದರ್ಭಗಳು ಮೈಸೂರು ನಗರದ ವಿವಿಧ ಕಾಲೇಜುಗಳ ಗಮನಕ್ಕೆ ಬಾರದೆ ಇರಲಿಲ್ಲ. ಒಂದೊಂದಾಗಿ, ತಮ್ಮಲ್ಲಿಯ 'ಅಂತರ ಕಾಲೇಜ್' ಸ್ಪರ್ಧೆಗಳಿಗೆ ಆ-ಯು ಕಾಲೇಜಿಗೂ ಆಹ್ವಾನ ನೀಡತೊಡಗಿದರು. ಮೊದಲ ಕಾರ್ಯಕ್ರಮ ಸೈಂಟ್ ಫಿಲಾಮಿನ ಕಾಲೇಜ್ (ಹಾಸ್ಟೆಲ್) ನಲ್ಲಿ ನಡೆದ ಅಂತರ ಕಾಲೇಜ್ ಭಾಷಣ ಸ್ಪರ್ಧೆ. ಆಗಿನ ವಿದ್ಯಾರ್ಥಿ ಸಂಕುಲದಲ್ಲಿ ಹಾ.ಮಾ.ನಾಯಕ, ಎಸ್. ಗಂಗಾಧರ ಮೊದಲಾದ ಘಟಾನುಘಟಿಗಳು ಭಾಗವಹಿಸಿದ್ದರು. ನನಗೆ ತೃತೀಯ ಬಹುಮಾನ ದೊರಕಿತು. ಕಾಲೇಜಿನಲ್ಲಿ ಸಂಭ್ರಮದ ವಾತಾವರಣದ ನಡುವೆ, ಪ್ರಿನ್ಸಿಪಾಲ್ ದ್ವಾರಕಾನಾಥರು ಮೊದಲ ಬಹುಮಾನ ಪಡೆಯಬೇಕೆಂದು ನಮಗೆ ಹೇಳಿ ಪ್ರೋತ್ಸಾಹ ನೀಡಿದರು. ವಿವಿಧ ಸ್ಪರ್ಧೆಗಳನ್ನು ನಮ್ಮ ಕಾಲೇಜಿನಲ್ಲಿಯೂ

ಏರ್ಪಡಿಸುವ ಅವಕಾಶ ಒದಗಿಸಿಕೊಟ್ಟರು. ಇದರ ಪರಿಣಾಮವೋ ಎಂಬಂತೆ ದಸರಾ ವಸ್ತುಪ್ರದರ್ಶನ, ಸಾಹಿತ್ಯ-ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸಲು ನಮಗೆ ಅವಕಾಶವಾಯಿತು.

ಸಾಹಿತ್ಯ ಕಾರ್ಯಕ್ರಮದ ಸಮಾರೋಪ ಸಮಾರಂಭದ ಮುಖ್ಯ ಅತಿಥಿಯಾಗಿ ಧಾರವಾಡ ವಿಶ್ವವಿದ್ಯಾನಿಲಯದ ಹಿರಿಯ ಪ್ರಾಧ್ಯಾಪಕರೂ ಪ್ರಸಿದ್ಧ ಸಾಹಿತಿಗಳೂ ಆದ ಪ್ರೊ॥ ವಿ.ಕೃ.ಗೋಕಾಕ ಅವರನ್ನು ಮೈಸೂರಿನ ಮೆಡಿಕಲ್ ಕಾಲೇಜ್ ವಿದ್ಯಾರ್ಥಿ ಸಂಘದವರು ಕರೆಸಿದ್ದರು. ಈ ಸಂದರ್ಭದಲ್ಲಿ ಅವರನ್ನು ಭೇಟಿ ಮಾಡಿ ನಮ್ಮ ಕಾಲೇಜು ವಿದ್ಯಾರ್ಥಿಗಳನ್ನು ಉದ್ದೇಶಿಸಿ ಭಾಷಣ ಮಾಡಲು ವಿನಂತಿಸಿದೆವು. ಅವರ ಹಿಂದಿನ ವಿದ್ಯಾರ್ಥಿ ತಾವರೆಗೇರಿ ಎಂಬ ಕಾಲೇಜ್ ವಿದ್ಯಾರ್ಥಿ ಸಂಘದ ಪ್ರಮುಖ ವ್ಯಕ್ತಿ ಕೂಡ ಜತೆಗಿದ್ದರು. ಪ್ರೊಫೆಸರ್ ಗೋಕಾಕರು ನಮ್ಮ ಕಾಲೇಜಿನಲ್ಲಿ ಮಾಡಿದ ಭಾಷಣದ ಸಾರಾಂಶವನ್ನು ವಿಜಯ ದಿನಪತ್ರಿಕೆ ಪ್ರಕಟಿಸಿತು. ಇದರಿಂದ ಎಂ.ಬಿ.ಬಿಎಸ್, ಎಲ್.ಎ.ಎಂ.ಎಸ್. – ಎರಡೂ ವಿದ್ಯಾರ್ಥಿ ಸಂಘಗಳ ನಡುವೆ ಇದ್ದ 'ಬಿಗಿ'ಮಾನ ತುಸು ಸಡಿಲವಾಯಿತು. ಮುಂದೆ ಹೆಚ್ಚು ಹೆಚ್ಚು ಸ್ನೇಹ ಬಾಂಧವ್ಯಕ್ಕೆ ಪ್ರಾರಂಭವಾಯಿತು.

ಇದಾದ ಕೆಲವೇ ವಾರಗಳಲ್ಲಿ ಮೈಸೂರಲ್ಲಿ ಒಂದು ಉಚಿತ ನೇತ್ರ ಚಿಕಿತ್ಸಾ ಶಿಬಿರ (ಕಣ್ಣು ಪರೀಕ್ಷೆ) ಅಗತ್ಯವಾದಲ್ಲಿ ಶಸ್ತ್ರ ಚಿಕಿತ್ಸೆ ಕೂಡ ನಡೆಯಿತು. ಆ ಎರಡೂ ಕಾರ್ಯಕ್ರಮಗಳಲ್ಲಿ 'ಕರಾವಳಿ'ಯ ಜಾನಪದ ಗೀತೆಗಳನ್ನು ಹಾಡಿ ನಮ್ಮ ತಂಡ ಪ್ರಶಸ್ತಿ ಪಡೆಯಿತು. ಮೊದಲ ಬಾರಿಗೆ ತುಳು ಜಾನಪದ ಗೀತೆಗಳನ್ನು 'ಹವಿಗನ್ನಡ' ಎಂದರೆ ಹವ್ಯಕರ ಮನೆ ಮಾತಿನ ಭಾಷೆಯ ಹಲವಾರು ಹಾಡುಗಳನ್ನು ಹಾಡಲಾಗಿತ್ತು ಎಂಬುದೊಂದು ದಾಖಲೆ. ಮುಂದೆ, ಆಕಾಶವಾಣಿಯವರಿಂದಲೂ ಆಹ್ವಾನ ಬಂತು. 'ಮಳೆಗಾಲದ ತುಳು ನಾಡು' ಎಂಬ 30 ನಿಮಿಷಗಳ ಶಬ್ದ ಚಿತ್ರ ತುಂಬ ಪ್ರಶಂಸೆಗೊಳಗಾಯಿತು. ಇದೇ ಹಾದಿಯಲ್ಲಿ ಮುಂದಿನ ಹೆಜ್ಜೆಯಾಗಿ ದಕ್ಷಿಣ ಕನ್ನಡದ 'ಯಕ್ಷಗಾನ ಬಯಲಾಟ' ಕಾರ್ಯಕ್ರಮವನ್ನು ಮುಂದಿನ ವರ್ಷ ಪ್ರದರ್ಶಿಸಲಾಯಿತು. ಹೀಗೆ ಸಮಾನ ವಯಸ್ಕರ ಸಮಾನ ಮನಸ್ಕರ ಒಂದು ಉತ್ಸಾಹೀ ಗುಂಪು ವಿವಿಧ ಸಾಹಿತ್ಯ ಸಾಂಸ್ಕೃತಿಕ ಚಟುವಟಿಕೆಗಳನ್ನು ಯಶಸ್ವಿಯಾಗಿ ನೀಡುವ ಮೂಲಕ ಕಾಲೇಜಿನ ಹೆಸರನ್ನು ಎತ್ತರಕ್ಕೇರಿಸಿತು. ಇಷ್ಟೆಲ್ಲಾ ನಡೆಯುತ್ತಿದ್ದಾಗೂ ನಮ್ಮ ನೆರೆಹೊರೆಯಲ್ಲಿದ್ದ 'ದೊಡ್ಡಣ್ಣ' (ಎಮ್.ಬಿ.ಬಿ.ಎಸ್.ಕಾಲೇಜು)ನಮ್ಮತ್ತ ದೃಷ್ಟಿಕೂಡ ಹಾಯಿಸಲಿಲ್ಲ. ಇದನ್ನು ನಡೆಸಿಕೊಟ್ಟವರು ಆ ವರ್ಷದ ಪದ್ಮಶ್ರೀ ಪ್ರಶಸ್ತಿ ಸನ್ಮಾನಿತರಾದ ಡಾ॥ ಎಂ.ಸಿ. ಮೋದಿಯವರು. ಅವರ ಮೂಲ ವೈದ್ಯ ಶಿಕ್ಷಣ ಆಯುರ್ವೇದಿಕ್ ಕಾಲೇಜಿನಲ್ಲಾಗಿತ್ತು ಎಂಬುದನ್ನು ಎಮ್‌ಬಿಬಿಎಸ್ ಕಾಲೇಜ್ ಮಹಾಶಯರು ನೆನಪಿಸಿಕೊಳ್ಳದೆ ಕಾರ್ಯ ನಿರ್ವಹಣೆಗೆ ಎಲ್ಲ ನೆರವನ್ನು ನೀಡಿದರು. ನಾವು ಕೆಲವರು ಸ್ವಯಂ ಸೇವಕರಾಗಿ ದುಡಿದೆವು. ಡಾ॥ ಮೋದಿಯವರನ್ನು

ನಮ್ಮ ಕಾಲೇಜಿನ ವಿದ್ಯಾರ್ಥಿ ಸಂಘದ ವತಿಯಿಂದ ಸನ್ಮಾನಿಸುವ ಸಮಾರಂಭಕ್ಕೆ ಮೆಡಿಕಲ್ ಕಾಲೇಜ್ ಪ್ರಿನ್ಸಿಪಾಲರು ಮುಖ್ಯ ಅತಿಥಿಗಳಾಗಿ ಬಂದಿದ್ದರು.

ನಮ್ಮ ಆ–ಯು ಕಾಲೇಜಿನಲ್ಲಿ ಹಿಂದೆ ಎಂದಾದರೂ 'ಕಾಲೇಜು ಮ್ಯಾಗಸಿನ್' ಪ್ರಕಟಿಸಿದ್ದರೆ–ತಿಳಿಯದು. ನಾನು ಮೊದಲನೇ ವರ್ಷದಲ್ಲಿ ಇದ್ದಾಗ 'ಮಿಂಚು' ಎಂಬ ಒಂದು ಕೈಬರಹದ ಸಂಚಿಕೆ ಪ್ರಕಟಿಸಿದೆ. ಎರಡು ವರ್ಷಗಳ ತರುವಾಯ ನಾಗಭೂಷಣ ಎಂಬ ಉತ್ಸಾಹಿ ಮಿಂಚಿನ ಮತ್ತೊಂದು ವಾರ್ಷಿಕ ಸಂಚಿಕೆ ಪ್ರಕಟಿಸಲು ಮುಂದೆ ಬಂದ. ಅದಕ್ಕೆ ಕೃಷ್ಣಮೂರ್ತಿ ಕೆದ್ಲಾಯ ಮೊದಲಾದವರು ಬೆಂಬಲ ನೀಡಿದರು. ಈ ವಿಚಾರವನ್ನು ಪ್ರಿನ್ಸಿಪಾಲರ ಮುಂದೆ ಇಟ್ಟಾಗ ಅವರು ಪ್ರಿಂಟೇ ಮಾಡಿಸುವ ಎಂದರು.

ನಾಲ್ಕು ತಿಂಗಳ ಸತತ ಪರಿಶ್ರಮದಿಂದ ವಾರ್ಷಿಕ ಸಂಚಿಕೆ ಸಿದ್ಧವಾಯಿತು. ಈ ಅವಧಿಯಲ್ಲಿ ನಾನು ಸಪ್ಲಿಮೆಂಟರೀ ಪರೀಕ್ಷೆ ಮುಗಿಸಿ ಕೆಲವು ತಿಂಗಳು ಮೈಸೂರಲ್ಲೇ ಉಳಿಯಬೇಕಾಯಿತು. (ಹೌಸ್ ಸರ್ಜನ್ ಪೋಸ್ಟಿಂಗ್ ದೊರಕಲು) ಆಗ, ಪ್ರಿನ್ಸಿಪಾಲರು ಪತ್ರಿಕೆಯನ್ನು ಪ್ರಕಟಿಸುವ ಜವಾಬ್ದಾರಿ ನನಗೆ ಒಪ್ಪಿಸಿದರು. ಅದಕ್ಕಾಗಿ ಆಸ್ಪತ್ರೆಯ ಅಧೀನದಲ್ಲಿದ್ದ ಮಹಡಿಯ ಒಂದು ಚಿಕ್ಕ ಕೊಠಡಿಯನ್ನು ಕಾರ್ಯಾಲಯ ಹಾಗೂ ನನ್ನ ವಾಸ್ತವ್ಯಕ್ಕೆ ಬಳಸಿಕೊಳ್ಳಲು ಅನುಮತಿ ನೀಡಿದರು. ಹಾಸ್ಟೆಲ್ ವಾಸದಿಂದ ಪ್ರಾರಂಭಿಸಿದ ನಾನು ಕೊನೇ ಹೊತ್ತಿಗೆ ಹಾಸ್ಪಿಟಲ್ ವಾಸದಲ್ಲಿ ಮುಕ್ತಾಯಹಾಡಿದೆ. ಪತ್ರಿಕೆಗಾಗಿ ಲೇಖನ ಸಂಗ್ರಹ, ಎಡಿಟಿಂಗ್, ಮುದ್ರಣ, ಪ್ರೂಫ್ ತಿದ್ದುವುದು ಇವುಗಳಲ್ಲಿ ಮುಳುಗಿ ಹೋದೆ. ಪತ್ರಿಕೆಯ ಬಿಡುಗಡೆ ಇನ್ನೊಂದು ಸಂಭ್ರಮದ ಕಾರ್ಯಕ್ರಮವಾಯಿತು. ಸಂಚಿಕೆಯಲ್ಲಿ ರಾಜಗೋಪಾಲಾಚಾರಿ ಯಂತಹವರಿಂದ ಕೂಡ ಲೇಖನ ಪ್ರಕಟವಾಯಿತು. 'ಬಿಸಿಜಿ' ಕಡ್ಡಾಯ ಮಾಡಬೇಕೇ–ಬೇಡವೇ ಎಂಬ ವಿಷಯದಲ್ಲಿ ಒಂದು ಪ್ರಬುದ್ಧ ವಿಚಾರ ಸಂಕಿರಣವಿತ್ತು. ದೇಶದ ಪ್ರಮುಖ ವೈದ್ಯರ ಲೇಖನಗಳಿದ್ದವು. ಆಯರ್ವೇದೀಯರ ಅಭಿಮತವನ್ನು ಡಾ॥ ಎಂ. ಗೋಪಾಲಕೃಷ್ಣರಾಯರು ನಿರೂಪಿಸಿದ್ದರು. ಈ ಎಲ್ಲಾ ವಿಚಾರಗಳನ್ನು ಸಂಕ್ಷಿಪ್ತವಾಗಿ ತಿಳಿಸುವ ಒಂದು ಚಿಕ್ಕ ಕರಪತ್ರ ಸಿದ್ಧಪಡಿಸಿದ್ದರಿಂದ ಹಲವಾರು ದೊಡ್ಡ ದೊಡ್ಡ ಔಷಧಿ ತಯಾರಿಕಾ ಸಂಸ್ಥೆಗಳ ಜಾಹೀರಾತು ದೊರಕಿತ್ತು. 'ಉದರ ರೋಗದ ಚಿಕಿತ್ಸೆಯಲ್ಲಿ ಹೊಸ ಪ್ರಯೋಗ' ಎಂಬ ಸಂಶೋಧನಾತ್ಮಕ ಲೇಖನ ಮೂಡಿತ್ತು. (ಇದನ್ನು ಸ್ವತಃ ಡಾ॥ ದ್ವಾರಕನಾಥರೇ ಬರೆದಿದ್ದರು) ಈ ಬಗ್ಗೆ ಒಂದು ಘಟನೆ ನಡೆದಿತ್ತು. ಆಗಿನ ಕೇಂದ್ರದ ಗೃಹಮಂತ್ರಿ ನಂದಾ ಅವರು ಮೈಸೂರಿನ ಆಹಾರ ಸಂಶೋಧನಾಲಯಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ಆಯುರ್ವೇದಾಭಿಮಾನಿಗಳಾಗಿದ್ದ ಅವರು ನಮ್ಮ ಕಾಲೇಜಿಗೂ ಅನಿರೀಕ್ಷಿತವಾಗಿ ಬಂದು ನೇರವಾಗಿ ಒಳರೋಗಿಗಳ ವಾರ್ಡನ್ನು ಪ್ರವೇಶಿಸಿದರು. ನಾನು ಒಬ್ಬ ರೋಗಿಯ ರೆಕಾರ್ಡ್ ಶೀಟನ್ನು ತುಂಬುವುದರಲ್ಲಿ ನಿರತನಾಗಿದ್ದೆ. ನಂದಾರು

ಬಂದವರೇ ರೋಗದ ಮತ್ತು ರೋಗಿಯ ಬಗ್ಗೆ ವಿವರಿಸಲು ಹೇಳಿದರು. ನನಗೆ ತಿಳಿದ ಉದರ ರೋಗ (ಖರೋದರ – 'ಡ್ರಾಪ್ಸಿ')ದಿಂದ ನರಳುತ್ತಿರುವ ರೋಗಿಯ ಬಗ್ಗೆ ತಿಳಿಸುತ್ತಿದ್ದಂತೆಯೇ ಪ್ರಿನ್ಸಿಪಾಲರು ಬಂದು ನಂದಾಜಿಯವರಿಗೆ ನಾವು ನಡೆಸುತ್ತಿರುವ ಸಂಶೋಧನೆಯ ಬಗ್ಗೆ ವಿವರಿಸಿದರು. ಗೃಹಮಂತ್ರಿ ತೃಪ್ತರಾದರು. ಅಷ್ಟೇ ಅಲ್ಲದೆ ಕೇಂದ್ರ ಸರಕಾರಕ್ಕೆ ವಿಶೇಷ ಅನುದಾನಕ್ಕೆ ಅರ್ಜಿ ಸಲ್ಲಿಸುವಂತೆ ಕೂಡ ಸೂಚಿಸಿದರು. ಪತ್ರಿಕೆ ಪ್ರಕಟವಾದ ರಾತ್ರಿ ವೈಯಕ್ತಿಕವಾಗಿ ನನ್ನ ಕೆಲವು ಮಿತ್ರರಿಗೆ ಗುಡ್‌ನೈಟ್ ಅಲ್ಲ ಗುಡ್‌ಬೈ ಹೇಳಿದೆ. ಮರುದಿನ ಮುಂಜಾನೆ ಬೆಂಗಳೂರು ಮೊದಲ ರೈಲಿಗೆ ಬೆಂಗಳೂರಿಗೆ ಟಿಕೆಟ್ ತೆಗೆದುಕೊಂಡು ಫೋನ್ ಮೂಲಕ ರೈಲ್ವೆ ಸ್ಟೇಷನ್‌ನಿಂದಲೇ ಪ್ರಿನ್ಸಿಪಾಲರಿಗೆ ವಿದಾಯ ಹೇಳಿದೆ.

1956ನೇ ಇಸವಿಯ ಮಧ್ಯಭಾಗದಲ್ಲಿ ಭಾರತ ಸರಕಾರವು ಜಾಂನಗರದಲ್ಲಿ ಹೊಸತಾಗಿ ಪ್ರಾರಂಭಿಸಿದ ಆಯುರ್ವೇದ ಸ್ನಾತಕೋತ್ತರ ಶಿಕ್ಷಣದ ಪ್ರಪ್ರಥಮ ಮಹಾವಿದ್ಯಾಲಯದ ಮುಖ್ಯಸ್ಥರಾಗಿ ಡಾ॥ ಸಿ. ದ್ವಾರಕಾನಾಥರನ್ನು ನೇಮಿಸಿದ್ದರಿಂದ ಅವರು ಮೈಸೂರಿನಿಂದ ತೆರಳಿದರು.

ಮುಂದೆ ದ್ವಾರಕಾನಾಥರು ಭಾರತ ಸರಕಾರದ ಆಯುರ್ವೇದ ವಿಭಾಗದ ಮಾಜಿ ಹಿರಿಯ ಸಲಹೆಗಾರರಾಗಿ ಕೂಡ ಸ್ಥಾನಾಪನ್ನರಾದರೂ, ನಮ್ಮಂತಹ ವಿದ್ಯಾರ್ಥಿ ವೃಂದಕ್ಕೆ ಅವರು ನಮ್ಮ ಪ್ರಿನ್ಸಿಪಾಲರು ಎಂದೇ ನೆನಪಿನಲ್ಲಿ ಉಳಿದರು.

ಉತ್ತರಕಾಂಡ

ಮುಂದಿನ ಶೈಕ್ಷಣಿಕ ವರ್ಷ ಪ್ರಾರಂಭವಾಗುತ್ತಲೇ ಅನೇಕ ಅಡ್ಡಿ ಆತಂಕಗಳು ಎದುರಾದವು. 'ಅಲೋಪತಿ' ಉಪನ್ಯಾಸಕರ ಸೇವೆ (ಅಲ್ಪಕಾಲೀನ) ಹೊರತುಪಡಿಸಿ ಉಳಿದ ಅನೇಕ ಪ್ರಾತ್ಯಕ್ಷಿಕೆ, ತರಬೇತಿ, ಅನುಭವಗಳನ್ನು ಪಡೆದುಕೊಳ್ಳುವ ಅವಕಾಶ ಮಾಯವಾಯಿತು. ಹೆಚ್ಚಿನ ವಿದ್ಯಾರ್ಥಿ ಸಂಖ್ಯೆ, ಶಿಕ್ಷಣ ಸೌಲಭ್ಯಗಳ ವಿಚಾರ ಸರಕಾರಕ್ಕೆ ವಿದ್ಯಾರ್ಥಿ ಸಂಘ ಅರ್ಜಿ ಬರೆಯಿತು, ಮನವಿ ಸಲ್ಲಿಸಿತು, ನಿಯೋಗ ಹೋಗಿ ವಿನಂತಿಸಿತು. ಪತ್ರಿಕಾಗೋಷ್ಠಿ ಕರೆದು ಸಾರ್ವಜನಿಕವಾಗಿ ಕೇಳಿಕೊಂಡಿತು. ಒಂದು ದಿವಸದ ಸಾಂಕೇತಿಕ 'ನಿರ್ಜಲ ಸತ್ಯಾಗ್ರಹ' ಕೂಡ ನಡೆಯಿತು. ಯಾವುದನ್ನೂ ಸರಕಾರ ಗಮನಿಸಲಿಲ್ಲ.

ವಿದ್ಯಾರ್ಥಿಗಳು ನೇರ ಸತ್ಯಾಗ್ರಹವನ್ನೇ ಪ್ರಾರಂಭಿಸಿದರು. 3 ತಿಂಗಳ ಕಾಲ ನಡೆಯಿತು. ಮೈಸೂರು ನಗರದ ಎಲ್ಲಾ ಕಾಲೇಜು ವಿದ್ಯಾರ್ಥಿ ಸಂಘಗಳೂ ಒಂದು ಜಾಥಾ ತೆಗೆದು ಬೆಂಬಲ ಸೂಚಿಸಿದರು. ಬೆಂಗಳೂರಲ್ಲಿದ್ದ ನಾವು ಕೂಡ ಸಾಂಕೇತಿಕ ಪ್ರತಿಭಟನೆ ಸಲ್ಲಿಸಿ ಬೆಂಬಲಿಸಿದೆವು. ಇದರಿಂದ ಕುಪಿತಗೊಂಡ ಸರಕಾರವು ಕಾಲೇಜನ್ನು ಅನಿರ್ದಿಷ್ಟ ಕಾಲದವರೆಗೆ ಮುಚ್ಚಿತು. ಪ್ರತಿಭಟನೆ ಇನ್ನಷ್ಟು

ಪ್ರಬಲವಾಯಿತು. ಬೆಂಗಳೂರಲ್ಲಿದ್ದವರೆಲ್ಲಾ ಸೇರಿ ಪತ್ರಿಕಾ ಪ್ರಚಾರ ನಡೆಸಿದ್ದಲ್ಲದೆ ನಿವೃತ್ತ ಹೈಕೋರ್ಟ್ ನ್ಯಾಯಾಧೀಶ ಹೆಚ್. ಬಾಲಕೃಷ್ಣ ಅವರು ಸರಕಾರವನ್ನು ಬಲವಾಗಿ ಖಂಡಿಸಿದರು. ವಿಧಾನಮಂಡಲದಲ್ಲೂ ಚರ್ಚೆ ನಡೆಯಿತು. ವಿರೋಧ ಪಕ್ಷದ ಮುಖಂಡರಾದ ಗೋಪಾಲ ಗೌಡರು ಸ್ವತಃ ಮೈಸೂರಿಗೆ ಹೋಗಿ ಕಾಲೇಜನ್ನು ವೀಕ್ಷಿಸಿದರು. ವಿದ್ಯಾರ್ಥಿಗಳ ನ್ಯಾಯವಾದ ಸತ್ಯಾಗ್ರಹಕ್ಕೆ ಸಂಪೂರ್ಣ ಬೆಂಬಲ ಸೂಚಿಸಿದರು.

ಸರಕಾರವು ವಿದ್ಯಾರ್ಥಿಗಳ ಬೇಡಿಕೆಗಳನ್ನು ತಾತ್ವಿಕವಾಗಿ ಒಪ್ಪಿಕೊಂಡರೂ ಒಂದು ಏಕ ಸದಸ್ಯ ಆಯೋಗವನ್ನು ಮದ್ರಾಸಿನ ಪ್ರಸಿದ್ಧ ಆಯುರ್ವೇದ ವೈದ್ಯರಾದ ಕ್ಯಾಪ್ಟನ್ ಶ್ರೀನಿವಾಸಮೂರ್ತಿಗಳ ನೇತೃತ್ವದಲ್ಲಿ ನೇಮಿಸಿತು. 3 ವಾರಗಳಲ್ಲಿ ಅವರು ವರದಿ ಸಲ್ಲಿಸಿದರು. ಈ ನಡುವೆ ರಾಜಕೀಯ ಪರಿಸ್ಥಿತಿ ಸುಧಾರಿಸಿದ ಕಾರಣ ಮುಖ್ಯಮಂತ್ರಿಗಳಾಗಿ ಸ್ಥಾನ ಸ್ವೀಕರಿಸಿದ ಕೆ. ಹನುಮಂತಯ್ಯನವರು ಮೈಸೂರಿಗಿಂತ ಹೆಚ್ಚು ಶಿಕ್ಷಣಾನುಕೂಲತೆ ಇರುವ ಬೆಂಗಳೂರಿಗೆ ಆಯುರ್ವೇದ ಕಾಲೇಜನ್ನು ವರ್ಗಾವಣೆ ಮಾಡುವುದಾಗಿ ಹೇಳಿಕೆ ಕೊಟ್ಟು ಜಯಚಾಮರಾಜೇಂದ್ರ ಆಯುರ್ವೇದ ಆಸ್ಪತ್ರೆಯ ಪಕ್ಕದಲ್ಲೇ ತಾತ್ಕಾಲಿಕ ಶೆಡ್ ನಿರ್ಮಿಸಲು ಹುಕುಂ ಹೊರಡಿಸಿ ಕಾರ್ಯ ಪ್ರಾರಂಭಿಸಿದರು. ಆದರೆ ಮೈಸೂರಿನಲ್ಲಿ ವೃದ್ಧ ವೈದ್ಯವೃಂದದಿಂದಲೂ, ಸ್ವಾರ್ಥ ಸಾಧಕ ಕೆಲವು ರಾಜಕಾರಣಿಗಳಿಂದಲೂ ವಿರೋಧ ವ್ಯಕ್ತವಾಗಲು ಯಥಾ ಸ್ಥಿತಿಯನ್ನು ಕಾಪಾಡಿಕೊಂಡು ಬರುವ ನಿರ್ಧಾರವಾಯಿತು. ಹಿಂದಿನ ವರ್ಷಗಳಲ್ಲಿ ಇದ್ದ ಅಲೋಪತಿ ಶಿಕ್ಷಣ –ತರಬೇತಿಗಳ ಸೌಲಭ್ಯಗಳನ್ನು ಮತ್ತೆ ಒದಗಿಸಲು ಹುಕುಂ ಆಯಿತು; ಆಯುರ್ವೇದ ಕಾಲೇಜಿಗೆ ಡಾ॥ ಚೆನ್ನಬಸಪ್ಪ ಎಂಬ ಸಮರ್ಥರನ್ನು ಪ್ರಿನ್ಸಿಪಾಲರನ್ನಾಗಿ ನೇಮಿಸಿದ್ದರಲ್ಲದೆ ಇತರ ಅವಶ್ಯಕತೆಗಳನ್ನು ಒಂದೊಂದಾಗಿ ಒದಗಿಸಲು ಸರಕಾರವು ಕ್ರಮಕೈಗೊಂಡಿತು. ಕ್ರಮೇಣ ಆಯುರ್ವೇದ ಯುನಾನಿ ವೈದ್ಯರ ರಿಜಿಸ್ಟ್ರೇಷನ್ ಬೋರ್ಡ್ ರಚನೆಯಾಯಿತು. ಎಲ್.ಎ.ಎಮ್.ಎಸ್. ಪದವೀಧರರನ್ನು 'ಇಂಟಿಗ್ರೇಟೆಡ್' ವಿಧಾನದಲ್ಲೂ ನೋಂದಣಿ ಮಾಡಿ, ಆಯುರ್ವೇದ ಅಲೋಪತಿ ಎರಡೂ ಪದ್ಧತಿಗಳನ್ನು ರೋಗಿಗಳ ಚಿಕಿತ್ಸೆಗೆ ಸೂಕ್ತವೆನ್ನಿಸಿದ – ಅನಿವಾರ್ಯವೆನಿಸಿದ ಪದ್ಧತಿಯನ್ನು ಬಳಸಲು ಎಲ್‌ಎಎಮ್‌ಎಸ್ ವೈದ್ಯವೃಂದಕ್ಕೆ ಅನುಕೂಲ ದೊರಕುವಂತೆ ಮಾಡಿತು.

ನಾನು ಈ ನಡುವೆ ಜರ್ಮನಿಯ ಹ್ಯಾಂಬರ್ಗ್‌ನಲ್ಲಿರುವ ಟ್ರೋಪಿಷನ್ ಇನ್‌ಸ್ಟಿಟ್ಯೂಟ್‌ನಲ್ಲಿ ತರಬೇತಿ ಹೊಂದಿ 'ಡಿಟಿಎಮ್ ಪಿ.ಜಿ. ಡಿಪ್ಲೊಮಾ' ಪಡೆದು ಲಂಡನ್‌ಗೆ ಹೋಗಿ ಸಮುದಾಯ ಆರೋಗ್ಯ ಹಾಗೂ ಕುಟುಂಬ ಸಂಕ್ಷೇಮದ ಕಿರು ಅವಧಿಯ ತರಬೇತಿಗಳನ್ನು ಮುಗಿಸಿಕೊಂಡು ಭಾರತಕ್ಕೆ ಮರಳಿ ಬಂದೆ.

* * *

೪

ಸಾಂಸ್ಕೃತಿಕ ಚಟುವಟಿಕೆಗಳು ಮತ್ತು ಸಾಹಿತ್ಯ ಸೇವೆ

ವಿದ್ಯಾರ್ಥಿಜೀವನದ ಇನ್ನೊಂದುಪಾರ್ಶ್ವ

ಮೊದಲ ವರ್ಷ ಪೆಜತ್ತಾಯರ ಕೃಪೆಯಿಂದ ಹಾಸ್ಟೆಲಿನ ಊಟದ ಸಾಕ್ಷಿಯಾಗಿ ನಾವು ಸುಖವಾಗಿದ್ದೆವು. ಸ್ವನಿರ್ಧಾರಿತ ನಿಬಂಧನೆ-ನಿಯಮಗಳನ್ನು ಎಲ್ಲರೂ ಅನುಸರಿಸುತ್ತಿದ್ದುದರಿಂದ ಹೆಚ್ಚಿನ ಅಡ್ಡಿ ಆತಂಕಗಳಿಗೆ ಅವಕಾಶವಿರಲಿಲ್ಲ. ನಾನು ಸಾಧ್ಯವಾದಷ್ಟು ಮಟ್ಟಿಗೆ ಎಲ್ಲರ ಜತೆಗೆ ಒಬ್ಬನಾಗಿರಲು ಎಷ್ಟೇ ಪ್ರಯತ್ನಿಸಿದರೂ ಒಂದು ವಿಚಾರದಲ್ಲಿ ಮಾತ್ರ ವಿಫಲನಾದೆ. ಉದಾರವಾಗಿ ಸಂಸ್ಕೃತ ಪಾಠ ಹೇಳಿಕೊಡಲು ಒಬ್ಬ ವೃದ್ಧ ವಿದ್ವಾಂಸರು ಸಂತೋಷದಿಂದ ಒಪ್ಪಿದರು. ಅಪ್ಪಟ ಸಂಸ್ಕಾರವಂತ ಸಂಪ್ರದಾಯಿಕ ಪರಂಪರೆಯ ಸಂಸ್ಕೃತ ಪಂಡಿತರು-ಗುರುಶಿಷ್ಯ ಪರಂಪರೆಯ ಉತ್ತರಾಧಿಕಾರಿ ಕಾಲದಲ್ಲೇ ಇದ್ದವರು. ನನಗೆ ಮಾತ್ರ ಈ ಸಂಸ್ಕೃತ ಶಿಕ್ಷಣ ವಿಧಾನ ಉಸಿರು ಕಟ್ಟುವಂತಾಗುತ್ತಿದ್ದುದರಿಂದ ಕೆಲವು ದಿನ ಅದು-ಇದು ಸಬೂಬು ಹೇಳಿ 'ಗೈರು' ಆಗುತ್ತಿದ್ದೆ. ಕೊನೆಗೊಮ್ಮೆ ಖಚಿತವಾಗಿ ಹೇಳಿ ಹಾಜರ್‌ಪಟ್ಟಿಯಿಂದ ಹೆಸರು ತೆಗೆಸಿಬಿಟ್ಟೆ!

ಎರಡನೇ ವರ್ಷ ಯಾವುಯಾವುದೋ ಕಾರಣಗಳಿಂದ ಹಿಂದಿನ ನಮ್ಮ ಗುಂಪು ಮತ್ತೆ ಒತ್ತಟ್ಟುಸೇರಲೇ ಇಲ್ಲ. ಕೇರಳೀಯ ಪ್ರೊಫೆಸರೊಬ್ಬರು ಅದೇತಾನೇ ಪ್ರಾರಂಭವಾಗಿದ್ದ ಮೈಸೂರಿನ ಖಾಸಗೀ ಇಂಜಿನಿಯರಿಂಗ್ ಕಾಲೇಜಿನ ವಿದ್ಯಾರ್ಥಿಗಳಿಗೂ 'ಅನಾಡಿ'ಗಳಾಗಿದ್ದ ನಮಗೂ ಸೇರಿ ಒಂದು ಹಾಸ್ಟೆಲ್ ತೆರೆದರು. 'ಎನ್‌ಐಇ'ಗೆ ಸಮೀಪ ನಮ್ಮ ಕಾಲೇಜಿಗೆ ಸಾಕಷ್ಟು ದೂರದಲ್ಲಿತ್ತು. ಮುಂಜಾನೆಯ ಬ್ರೇಕ್‌ಫಾಸ್ಟ್‌ಗೆ ಸಮಯ 8 ಗಂಟೆ ಇದ್ದು ನಾವು ಉಪಾಹಾರವಿಲ್ಲದೇ ಯುವರಾಜ ಕಾಲೇಜಿನತ್ತ ಪ್ರಿ-ಮೆಡಿಕಲ್ ಪಾಠಗಳಿಗಾಗಿ ಓಡಬೇಕಾಗುತ್ತಿತ್ತು. ಮಧ್ಯಾಹ್ನದ ಊಟಕ್ಕೆ ಉರಿಬಿಸಿಲಲ್ಲೇ ಬಂದು ಹೋಗಬೇಕಾಗುತ್ತಿತ್ತು. ಹೇಗೋ ಮಾಡಿ ತಿಂಗಳ ಕೊನೆವರೆಗೂ ದೂಡಿ ಹಾಸ್ಟೆಲ್‌ಗೆ ಗುಡ್‌ಬೈ ಹೇಳಿದೆವು. ಅನಂತರ ಬನ್ನಿ ಮಂಟಪದ

ದಾರಿಯಲ್ಲಿ ಒಂದು ದೊಡ್ಡ ಕಟ್ಟಡವನ್ನು ಬಾಡಿಗೆಗೆ ಹಿಡಿದು, ಮಾಜೀ ಸಿನೆಮಾ ನಟರೊಬ್ಬರು ನಡೆಸುತ್ತಿದ್ದ ಕ್ಯಾಂಟೀನ್‌ನಿಂದ ರೆಡಿಮೇಡ್ ಊಟತಿಂಡಿ ಸಪ್ಲೈ ಮಾಡುವ ವ್ಯವಸ್ಥೆಯಾಗಿ 3 ತಿಂಗಳು ದೂಡಿ ಅನಂತರ ಅವರವರು ಅವರವರಷ್ಟಕ್ಕೆ ಖಾಸಗೀ ಮನೆಗಳಲ್ಲಿ ರೂಂ ಹಿಡಿದು ಹೋಟೆಲ್ ಊಟಕ್ಕೆ ಶರಣಾದೆವು. ಎಲ್ಲೋ ಸ್ನಾನ–ಎಲ್ಲೋ ಊಟ, ಎಲ್ಲೋ ಓದು ಅಂತ ಪಾಡುಪಡುತ್ತಿದ್ದೆವು.

ಶಿವರಾಮ ಪೇಟೆಯಲ್ಲಿ 'ಈವನಿಂಗ್ ಬಜಾರ್' ಎಂಬ ಒಂದು ದೊಡ್ಡ 3 ಮಹಡಿಯ ಕಟ್ಟಡ ಕಾಂಪ್ಲೆಕ್ಸ್ ಇತ್ತು. ಎರಡನೇ ಮಹಡಿಯಲ್ಲಿ 6–8 ಕೋಣೆಗಳಿದ್ದವು. ಯಾವುದೋ ಕಾರಣದಿಂದ ಆ ಕೋಣೆಗಳೆಲ್ಲವೂ ಖಾಲಿಯಾಗಿವೆ ಎಂಬ ಶುಭವಾರ್ತೆ ತಿಳಿದು ಅಲ್ಲಿಗೆ ಹದ್ದಿನಂತೆ ಎರಗಿದೆವು. ನಮ್ಮ ನಮ್ಮ ರೂಂಮೇಟ್‌ಗಳನ್ನು ಆಯ್ಕೆ ಮಾಡಿಕೊಂಡು ಕೆಲವು ಕೋಣೆಗಳನ್ನು ಆಕ್ರಮಿಸಿಕೊಂಡೆವು. ವಿದ್ಯಾರ್ಥಿಗಳಾದುದರಿಂದ ತಿಂಗಳಿಗೆ ತಲಾ 15 ರೂ. ಬಾಡಿಗೆ, ಮಂಚ ಬೇಕಾದರೆ ಇನ್ನೊಂದ್ಯೆದು ರೂಪಾಯಿ ಹೆಚ್ಚು ಅಷ್ಟೆ. ಇದರ ವ್ಯವಸ್ಥಾಪಕರು ಆ–ಯು ಕಾಲೇಜಿನ 'ಸೈಕಲ್ ಪ್ರೊಫೆಸರ್' ಎಂಬ ಅಡ್ಡಹೆಸರಿನ ಮೂಲಕವೇ ಪರಿಚಿತರಾದವರು. ನಾವು ವರ್ಷದ ಕೊನೆವರೆಗೂ ಅಲ್ಲೇ ಕಳೆದೆವು. ಸ್ನಾನಕ್ಕೆ ತಣ್ಣೀರು. ನೀರಿನ ಕೊಳಾಯಿ ಇತ್ತು. ಸದಾ ಗದ್ದಲದಿಂದ ಕೂಡಿರುತ್ತಿದ್ದ ಶಿವರಾಂಪೇಟೆಯ ಗಜಿಬಿಜಿಯ ನಡುವೆಯೂ ಸುಖವಾಗಿ ಕಾಲಹಾಕಿದೆವು. ಪಕ್ಕದಲ್ಲೇ 'ಕೈಲಾಸ ಭವನ' ಎಂಬ ಹೋಟೆಲ್ ಇತ್ತು. ಅಲ್ಲಿ ಬೆಳಗಿನ ಉಪಾಹಾರ. ಮಧ್ಯಾಹ್ನ ಕಾಲೇಜಿಗೆ ತುಸು ದೂರದಲ್ಲಿದ್ದ 'ಓಂ ಶ್ರೀ ಲಂಚ್‌ಹೋಮ್' ಎಂಬ ಕಾರವಾರದ ಶೆಟ್ಟರ ಒಂದು 'ಮೆಸ್'ನಲ್ಲಿ ಊಟ (ನಾನ್‌ವೆಜ್ ಮಾದರಿಯ ವೆಜ್ ಫುಡ್). ರಾತ್ರೆ ಮಾತ್ರ 'ಇಂದ್ರಭವನ'ದ ಊಟ (ವಿದ್ಯಾರ್ಥಿಗಳಿಗೆ ಒಂದಿಷ್ಟು 'ಕಡಿತ'ದ ವ್ಯವಸ್ಥೆ ಇತ್ತು). ಇಷ್ಟಾದರೂ ವರ್ಷದ ಕೊನೆಯಲ್ಲಿ ಈ ವಾಸ್ತವ್ಯವನ್ನು ತೊರೆಯಬೇಕಾಯಿತು. ಕಟ್ಟಡದಲ್ಲಿ ಒಬ್ಬರು ಬಾರ್ ಅಂಡ್ ರೆಸ್ಟೋರೆಂಟ್ ತೆರೆಯಲು ಎರಡನೇ ಮಹಡಿಯನ್ನೇ ಸಾರಾಸಗಟ ಕಂಟ್ರಾಕ್ಟ್ ತೆಗೆದುಕೊಂಡುಬಿಟ್ಟರು. ಮೂರನೇ ಮಹಡಿಯಲ್ಲಿ 3–4 ಕೋಣೆಗಳು ಖಾಲಿ ಇದ್ದು ಅವುಗಳಲ್ಲಿ ಬೇಕಾದರೆ ನೀವು ಇರಬಹುದು ಎಂದು ನಮಗೆ ಸೂಚಿಸಿದರೂ ನಾವಾಗಿ ಅದನ್ನು ನಿರಾಕರಿಸಬೇಕಾಯಿತು. ಗುಟ್ಟಿನಲ್ಲಿ ಎಂಬಂತೆ ಗಂಟೆಗಳ ಲೆಕ್ಕದಲ್ಲಿ ರೂಮನ್ನು ಬಾಡಿಗೆಗೆ ಒದಗಿಸುವ ಸರ್ವಸೇವಾ ವ್ಯವಸ್ಥೆ ಆ ಬಾರ್–ರೆಸ್ಟೋರೆಂಟ್‌ನ ಅವಿಭಾಜ್ಯ ಅಂಗವಾಗಿದ್ದುದರಿಂದ ನಾವು ಗಂಟುಮೂಟೆ ಕಟ್ಟಿಕೊಂಡು ಹೊರಬಿದ್ದೆವು. ಮತ್ತೆ ರೂಂ ಹುಡುಕಾಟ ಪ್ರಾರಂಭ!

ನನಗೆ ಒಂದು ಅನುಕೂಲಕವಾದ ಠಿಕಾಣಿ ದೊರಕಿತು. ನಾರಾಯಣಶಾಸ್ತ್ರಿ ರಸ್ತೆ ಹಾಗೂ ಕೊತ್ವಾಲ ರಾಮಯ್ಯ ಬೀದಿ ಸೇರುವಲ್ಲಿ (ಅರ್ಥಾತ್ ಮೈಸೂರಿನ

ಸರಕಾರೀ ಆಸ್ಪತ್ರೆಗಳ ನರ್ಸ್ ಕ್ವಾರ್ಟರ್ಸ್ ಕ್ಯಾಂಪಸ್ಸಿನ ಪಕ್ಕದಲ್ಲಿ) ಮಹಡಿ ಮೇಲಿನ ರೂಮೊಂದು ಖಾಲಿ ಇತ್ತು. ಕೆಳಗಿನ ಭಾಗದಲ್ಲಿ ಬಸಪ್ಪ ಎಂಬ ವ್ಯಾಪಾರಿ ಸಣ್ಣ ಕಿರಾಣಿ ಅಂಗಡಿ ಇಟ್ಟುಕೊಂಡಿದ್ದ. ತನ್ನ ಅಳಿಯ ಈರಣ್ಣನಿಗೆ 'ಇಂಜೆಕ್ಷನ್' ಚುಚ್ಚಲು ಕಲಿಸಬೇಕು, ಯಾವ ಯಾವ ಖಾಯಿಲೆಗೆ ಯಾವ ಯಾವ ಇಂಜೆಕ್ಷನ್ ಕೊಡಬೇಕು ಎಂಬುದನ್ನೂ 6 ತಿಂಗಳಲ್ಲಿ ಕಲಿಸಬೇಕು ಎಂಬ ಒಂದು ಶರ್ತ ಬಸಪ್ಪ ಹಾಕಿದ್ದ. ನಾನು ಒಪ್ಪಿಕೊಂಡೆ.

'ಭೇಷ್! ಚೆನ್ನಾಗಿದೆ. ದೊಡ್ಡ ಕೋಣೆ. ಸ್ನಾನಕ್ಕೆ ಬಚ್ಚಲಿಗೆ ಎಲ್ಲಾ ಅನುಕೂಲ ಇದೆ. ನಾಲ್ಕು ಜನ ಬಂದರೂ ಹಾಯಾಗಿ ರಾತ್ರಿ ಕಳೆಯಬಹುದು. ಅಷ್ಟೇ ಅಲ್ಲದೆ ಪೇಟೆ ನಡುವೆಯೇ ಇದೆ' ಎಂಬಿತ್ಯಾದಿ ಹೊಗಳಿಕೆಗೆ ಪಾತ್ರವಾಯಿತು ನನ್ನ ಹೊಸ 'ಮಹಡಿ ನಿವಾಸ'. ಊರಿನಿಂದ ಬಂದ ಹಳೇ ಪರಿಚಿತರೊಬ್ಬರಿಂದ ಸುದ್ದಿ ವಾಯುವೇಗದಿಂದ ಹಬ್ಬಿತು! ಮೈಸೂರು ನೋಡಲಿಕ್ಕೆ ಬರುವವರ ಸಂಖ್ಯಾಬಲ ಹಿಗ್ಗಿತು. ಮೊದಲು ಒಬ್ಬೊಬ್ಬರೇ ಬರುತ್ತಿದ್ದರೆ ಕ್ರಮೇಣ ಮೂರು-ನಾಲ್ಕು ಜನ ಗುಂಪಾಗಿ ಬರುವುದು ಪ್ರಾರಂಭವಾಯಿತು. ಅವರು ನೋಡಬೇಕಾದ ಸ್ಥಳಗಳಿಗೆ ಹೋಗಲು ಅನುಕೂಲದ ಬಸ್-ಟಾಂಗ ಇತ್ಯಾದಿ ಏರ್ಪಾಟು ಮಾಡುವುದು ನನ್ನ ಪಾಲಿನ ಕರ್ತವ್ಯವೇ ಆಗಿಬಿಟ್ಟಿತು. ಹೇಗೋ ಹಾಗೂ ಹೀಗೂ 'ವಾರ್ಡ್ ಡ್ಯೂಟಿ ಇದೆ', 'ಸ್ಪೆಷಲ್ ಕ್ಲಾಸ್ ಇದೆ' ಅಂತ ಏನಾದರೂ ನೆಪ ಹೇಳಿ ಅವರ ಜತೆಗೆ ಹೋಗುವುದನ್ನು ತಪ್ಪಿಸಿಕೊಳ್ಳಬೇಕಾಗುತ್ತಿತ್ತು. ಶ್ರೀರಂಗಪಟ್ಟಣ-ಕನ್ನಂಬಾಡಿ-ಚಾಮುಂಡಿಬೆಟ್ಟ ಇಂಥವುಗಳ ಪೈಕಿ ಒಂದಕ್ಕಾದರೂ 'ಕಂಪನಿ' ಕೊಡಲೇಬೇಕಾಗುತ್ತಿತ್ತು. ವಾಪಾಸು ಬರುತ್ತಾ ಮಧ್ಯಾಹ್ನ ಅಥವಾ ರಾತ್ರಿ ಊಟದ ಹೊತ್ತಾಗುತ್ತಿದ್ದುದರಿಂದ ಹೋಟೆಲ್ ಇಂದ್ರವೈಭವಕ್ಕೆ ಕಾಲಿಡುವ ಗಳಿಗೆ ಬಂದಾಗ 'ಓಹೋ' ನನಗೆ ಇವತ್ತು ನೈಟ್ ಡ್ಯೂಟಿ – ಈಗಲೇ ಲೇಟ್ ಆಯಿತು, ನೀವು ಇಲ್ಲಿ ಊಟ ಮುಗಿಸಿಕೊಂಡು ಹೋಗಿ, ಬೀಗದ ಕೈ ಕೆಳಗಿನ ಅಂಗಡಿ ಮಾಲಿಕನ ಹತ್ತಿರ ಇದೆ, ತೆಗೆದುಕೊಳ್ಳಿ ಇತ್ಯಾದಿ ಸಬೂಬು ಹೇಳಿ ತಪ್ಪಿಸಿಕೊಳ್ಳುತ್ತಿದ್ದೆ. ಇಲ್ಲವಾದಲ್ಲಿ ಅವರೆಲ್ಲರ ಊಟದ ಟಿಕೇಟನ್ನು ನಾನೇ ಕೊಂಡುಕೊಳ್ಳಬೇಕಾಗುತ್ತಿತ್ತು. (ಮೆಡಿಕೊ ಮರ್ಯಾದೆ (ಗೌರವ) ಉಳಿಸಿಕೊಳ್ಳಬೇಕಾಗಿತ್ತಲ್ಲ!) ಇಂತಹವರನ್ನು ಮರುದಿನ ಮುಂಜಾನೆ 5-30ಕ್ಕೆ ಮಾಡರ್ನ್ ಬಸ್ ಆಫೀಸ್‌ನವರೆಗೂ ಕರೆದುಕೊಂಡು ಹೋಗಿ ಬಸ್ ಹತ್ತಿಸಿ, ಬಸ್ ಸ್ಟಾರ್ಟ್ ಆಗಿ ಹೋಗುವವರೆಗೂ ಕಾದು ನಿಂತು ಟಾಟಾ ಹೇಳುತ್ತಿದ್ದೆ. ಒಂದು ಬಾರಿ ಯಾವುದೋ ನೆಪ ಹೇಳಿ ಒಬ್ಬರು ಬಸ್ ತಪ್ಪಿಸಿಕೊಂಡು ಮತ್ತೊಂದು ದಿವಸ ರೂಮ್‌ನಲ್ಲಿ ಠಿಕಾಣಿ ಹೂಡಿದರು. ಇಂತಹವರೊಬ್ಬರು 'ಕಿಸೆ ಕತ್ತರಿಸಿಹೋಗಿಬಿಟ್ಟಿದೆ, ಟಿಕೆಟ್ ಹಣ ಕೂಡ ಇಲ್ಲ' ಎಂದು ಗೋಗರೆದ ಕಾರಣ ಅವರ ಹಣ ವ್ಯವಸ್ಥೆ ಮಾಡುವುದರ ಜತೆಗೆ ಇಡೀ ದಿನದ ಅವರ ವೆಚ್ಚವನ್ನೂ ನೋಡಿಕೊಳ್ಳಬೇಕಾದ ಪ್ರಸಂಗವೂ ಬಂದಿತ್ತು.

ಇನ್ನೊಂದು ವರ್ಗದ ಪ್ರವಾಸಿಗರು ಇದ್ದಾರೆ. 'ಕಾರು'ಮಾಡಿಕೊಂಡು ಊರಿನಿಂದ ಬಂದು ಮೈಸೂರಲ್ಲಿ ಒಂದು ದಿನದಲ್ಲಿ ನೋಡಬೇಕಾದ ಸ್ಥಳಗಳನ್ನೆಲ್ಲ ನೋಡಿಕೊಂಡು ಮರುದಿನ ಬೆಂಗ್ಳೂರಿಗೆ ಹೋಗುವವರು. ಅಲ್ಲಿಂದ ಮುಂದೆ ಕೆಲವರು ತಿರುಪತಿ ಯಾತ್ರೆ ಮಾಡುವುದೂ ಉಂಟು. ಬೆಂಗ್ಳೂರು ತೋರಿಸುವುದಕ್ಕೆ ತನಗೆ ಚೆನ್ನಾಗಿ ತಿಳಿಯದು ಎಂದು ಕಾರು ಡ್ರೈವರ್ ಹೇಳಿದ್ದಕ್ಕೋ ಏನೋ 'ನೀನೂ ಬಾ ಮಾರಾಯ' ಎಂದು ನನ್ನನ್ನು ಒತ್ತಾಯಿಸುತ್ತಾರೆ. ಆ ಆಹ್ವಾನವನ್ನು ನಿರಾಕರಿಸುವುದಕ್ಕೆ ಕಷ್ಟವಾಗುತ್ತಿದ್ದು ಹೆಚ್ಚಿನ ಮಟ್ಟಿಗೆ ಇದು ಭಾನುವಾರಕ್ಕೆ ಸರಿಯಾಗಿ ಬೆಂಗ್ಳೂರ್ ಪ್ಲಾನ್ ಮಾಡಿರುತ್ತಿದ್ದುದರಿಂದ ಸಬೂಬು ಹೇಳಿ ತಪ್ಪಿಸಿಕೊಳ್ಳಲೂ ಸಾಧ್ಯವಿರಲಿಲ್ಲ. ಮಕ್ಕಳಿಗೆ ಅಂಗಡಿಗಳಿಂದ ಬಣ್ಣಬಣ್ಣದ ಕೆಲವು ಆಟದ ವಸ್ತುಗಳು–ಬೊಂಬೆಗಳನ್ನಾದರೂ ಕೊಡಿಸುವ ಕನಿಷ್ಠ ವೆಚ್ಚವನ್ನಾದರೂ ನಾನು ಮಾಡಲೇಬೇಕಾಗುತ್ತಿತ್ತು. ತಿರುಪತಿಗೆ ಹೋಗುವವರು ಮುಂದಕ್ಕೆ ಹೊರಟರೆ ಮೈಸೂರಿಗೆ ವಾಪಾಸಾಗುವುದಕ್ಕೆ ನನ್ನ ಟಿಕೇಟನ್ನು ನಾನೇ ಖರೀದಿಸಬೇಕಾಗುತ್ತಿತ್ತು.

ಕೆಲವೊಮ್ಮೆ ಹಳೆಯ ಸ್ನೇಹಿತರು, ಮರಿ ಸಾಹಿತಿಗಳು, ಒಡನಾಡಿಗಳು ಹೀಗೆ ಬಂದ ಆತ್ಮೀಯರನ್ನು ಅವರವರ ಆಸೆ, ಆಸಕ್ತಿ, ಉದ್ದೇಶಗಳಿಗೆ ಅನುಸಾರವಾಗಿ ಮಹಾರಾಜಾ ಕಾಲೇಜ್‌ನಿಂದ ತೊಡಗಿ ಫಿಲಾಮಿನಾ ಚರ್ಚ್‌ವರೆಗೂ, ಗೋಪಾಲಕೃಷ್ಣ ಅಡಿಗರಿಂದ ಪ್ರಾರಂಭವಾಗಿ ತರಾಸು, ಚದುರಂಗ ಅಲ್ಲದೆ ಎಸ್.ವಿ. ರಂಗಣ್ಣ ಮೊದಲಾದ ಹಿರಿಯರವರೆಗೂ ಕರೆದೊಯ್ದು 5–10 ನಿಮಿಷ ಭೇಟಿಮಾಡಿ, ಬರಬೇಕಾಗುತ್ತಿತ್ತು. ಶ್ರೀ ಚಾಮುಂಡೇಶ್ವರಿ ಸ್ಟುಡಿಯೋ (ಸಿನೆಮಾ ತಯಾರಿಕೆ) ಆಕಾಶವಾಣಿ ಕೇಂದ್ರಗಳನ್ನು ಬಿಡುವಂತಿರಲಿಲ್ಲ. ಇತರ ಪ್ರೇಕ್ಷಣೀಯ ಸ್ಥಳಗಳಂತೂ ಇದ್ದೇ ಇರುತ್ತಿದ್ದವು. ಒಂದು ಬಾರಿ ನಮ್ಮ ಅಣ್ಣ ಮೈಸೂರು ನೋಡಿಕೊಂಡು ಬೇಲೂರು, ಹಳೇಬೀಡು ಇತ್ಯಾದಿ ಸ್ಥಳಗಳಿಗೆ ಪ್ರವಾಸ ಹೊರಡುವ ಉದ್ದೇಶದಿಂದ ಬಂದಿದ್ದಾಗ – ನನ್ನ ಮಹಡಿ ಮೇಲಿನ ಕೊಠಡಿಯಲ್ಲಿ ಆಗಲೇ ಬಂದು ಸೇರಿದ್ದ ನಾಲ್ಕು ಜನ ಅತಿಥಿಗಳು ಇದ್ದುದರಿಂದ ಒಂದು ರಾತ್ರಿಯ ಮಟ್ಟಿಗೆ 'ಮಾಡರ್ನ್ ಕೆಫೆ' (ದಾಸಪ್ರಕಾಶ್ ಹೋಟೆಲ್) ರೂಂ ಮಾಡುವಂತೆ ಹೇಳಬೇಕಾಯಿತು. (ಅತ್ತಿಗೆ ಜತೆಯಲ್ಲಿದ್ದುದರಿಂದ ಸುಲಭವಾಯಿತು.)

ಕೊನೆಯ ಪರೀಕ್ಷೆ

ನಾಲ್ಕನೇವರ್ಷದ ಮಾರ್ಚ್ ತಿಂಗಳದ್ದು ನಮ್ಮ ವೈದ್ಯ ವಿದ್ಯಾರ್ಥಿ ಜೀವನದ ಅಂತಿಮ ಘಟ್ಟದ ಪರೀಕ್ಷೆ. ಪರೀಕ್ಷೆಗಾಗಿ ಕನಿಷ್ಠ ಎರಡುಮೂರು ತಿಂಗಳು ಕಠಿಣ ಅಭ್ಯಾಸ – ಮುಖ್ಯವಾಗಿ 'ಜ್ಯಾಂಟ್ ಸ್ಟಡಿ' ಮಾಡಿಕೊಂಡು ತಯಾರಾಗುತ್ತಿದ್ದೆವು.

'ಅಲೋಪತಿ'ಯ ಮೂರು ಮುಖ್ಯ ವಿಭಾಗಗಳಿಗೆ ಇನ್ನಿಲ್ಲದ ಪ್ರಾಧಾನ್ಯತೆ ಕೊಟ್ಟು ಹಗಲು ರಾತ್ರಿ ಊಟ ನಿದ್ರೆ ಬಿಟ್ಟು ಅಭ್ಯಾಸ (ತಯಾರಿ) ನಡೆಸಿದ್ದೆವು.

ಪರೀಕ್ಷೆ ಯುವರಾಜಾ ಕಾಲೇಜಿನ ಕೊಠಡಿಗಳಲ್ಲಿ ನಡೆಯುತ್ತಿತ್ತು. ಲಿಖಿತ-ಮೌಖಿಕ ಅಂತ 2 ವಾರಗಳ ಕಾಲಾವಧಿ. ಲಿಖಿತ ವಿಭಾಗದ ಒಂಭತ್ತು ದಿನಗಳ 'ಪರೀಕ್ಷೆ' ತಕ್ಕಮಟ್ಟಿಗೆ ಚೆನ್ನಾಗಿಯೇ ಆಯಿತು. ಎಲ್ಲರೂ ಪಾಸಾಗುವ ಧೈರ್ಯ ಹೊಂದಿದ್ದರು. ಕೊನೇ ದಿವಸ ಮುಂಜಾನೆ ಆಯುರ್ವೇದದ 'ಪೇಪರ್' ಇದ್ದು ಅದು ತೀರ ಸುಲಭವಾಗಿದ್ದುದರಿಂದ, 45 ನಿಮಿಷಗಳಷ್ಟು ಸಮಯವಿರುವಾಗಲೇ ಉತ್ತರ ಪತ್ರಿಕೆಯನ್ನು ಅಧಿಕಾರಿಗಳಿಗೆ ಒಪ್ಪಿಸಿ ಹೊರಬಂದೆ. ಸಾಮಾನ್ಯವಾಗಿ ಪರೀಕ್ಷಾ ದಿನಗಳಲ್ಲಿ 'ಅಲ್ಪಾಹಾರದ ಲಂಚ್' ಮುಗಿಸಿ ಉಳಿದ ಸಮಯದಲ್ಲಿ ಮತ್ತೊಮ್ಮೆ ಮುಖ್ಯ ವಿಷಯಗಳ ನೋಟ್ಸನ್ನು ಓದಿಕೊಳ್ಳುವ ಅಭ್ಯಾಸವಿತ್ತು. ಇಂದು ಮಾತ್ರ ಮನಸ್ಸು ಹಗುರವಾಗಿದ್ದುದರಿಂದಲೋ ಏನೋ ಮಧ್ಯಾಹ್ನ ಊಟ ಮಾಡುವ ಆಸೆಯಾಯಿತು. ಹೇಮದಳ ರಾಮದಾಸ್ (ಮಹಾರಾಜಾ ಕಾಲೇಜಿನಲ್ಲಿ ಓದುತ್ತಿದ್ದವರು) ಅವರ ರೂಮು ಸಮೀಪದಲ್ಲೇ ಇತ್ತು, 'ಹೆಲ್ತ್ ಕಿಚನ್' ಎಂಬ ಒಂದು ವಿದ್ಯಾರ್ಥಿಮಿತ್ರ ಖಾಸಗಿ ಭೋಜನಾಲಯದಲ್ಲಿ ಊಟ ಮಾಡುತ್ತಿದ್ದುದ್ದು ಗೊತ್ತಿತ್ತು. ಅಲ್ಲಿಗೆ ಧಾವಿಸಿ, 10 ಆಣೆಗೆ ಹೊಟ್ಟೆ ತುಂಬ ರುಚಿರುಚಿಯಾದ ಊಟ ಮುಗಿಸಿ ಪರೀಕ್ಷಾ ಭವನದತ್ತ ನಿಧಾನವಾಗಿ ಹೆಜ್ಜೆ ಹಾಗಿದೆ.

ಯುವರಾಜಾ ಕಾಲೇಜಿನ ಒಳಾಂಗಣದಲ್ಲಿ 'ನಮ್ಮವರು' ಗುಂಪುಗುಂಪಾಗಿ ಕುಳಿತೋ... ನಿಂತೋ, ಓದಿಕೊಳ್ಳುವುದೋ, ಪಿಸುನುಡಿಗಳಲ್ಲಿ ಸಂಭಾಷಿಸುವುದೋ ನಡೆಯುವುದು ಮಾಮೂಲಾಗಿತ್ತು. ಆದರೆ ಇಂದು ತೀರಾ 'ವಿಚಿತ್ರ' ಸ್ಥಿತಿ ಕಾಣಿಸಿತು. ಎಲ್ಲರೂ ಚಿಂತಾಕ್ರಾಂತರಾಗಿ ಮುಖ ಬಾಡಿಸಿಕೊಂಡು, ಕೈಕೈ ಹಿಸುಕಿಕೊಳ್ಳುತ್ತಿದ್ದರು. ಕೆಲವರು ಶಥಪಥ ತಿರುಗುತ್ತಿದ್ದರು. ಇನ್ನುಳಿದದ್ದು ಒಂದೇ ಪೇಪರು. ಅದು ಕೂಡ 'ಸರ್ಜರಿ'. ಅಷ್ಟೇನೂ ಕಠಿಣ ಪ್ರಶ್ನೆ ಇರುವುದಿಲ್ಲ ಮೈನರ್ ಸರ್ಜರಿಯಷ್ಟೇ ಎಂದು ಭಾವಿಸುತ್ತಿದ್ದ ನನಗೆ ಈ ಗಲಿಬಿಲಿ ಅರ್ಥವಾಗಲಿಲ್ಲ. ಯಾರನ್ನೋ ಕೇಳಿದಾಗ-ಸರಿಯಾದ ಉತ್ತರ ದೊರಕಲಿಲ್ಲ. ಕೊನೆಗೆ 'ಆಪದ್ಬಾಂಧವ' ರಾಮಚಂದ್ರ ರಾವ್‌ರವರನ್ನೇ ಕೇಳಿದಾಗ ದೊರಕಿದ ಉತ್ತರದಿಂದ ದಿಗ್ಭ್ರಮೆಯಾಯಿತು. "ಈ ಪೇಪರ್‌ನಲ್ಲಿ ಎಲ್ಲಾ ಪ್ರಶ್ನೆ, ಉಪಪ್ರಶ್ನೆಗಳೂ 'ಕಠಿಣ'ವಾಗಿದ್ದು ಎರಡು ಮುಖ್ಯ ಪ್ರಶ್ನೆಗಳು 'ಪೋರ್ಷನ್'ನ ಹೊರಗಿನಿಂದ ಇರುವುದರಿಂದ 15 ಮಾರ್ಕ್ ಕೂಡಾ ಯಾರಿಗೂ ಸಿಕ್ಕುವ ಸಂಭವವಿಲ್ಲ" ಎಂದು. ಓಶವೃದ್ಧಿ, ಮೆಟರ್ನಿಟಿ, ಗೈನಕಾಲಜಿ, ಕ್ಲಿನಿಕಲ್ ಮೆಡಿಸಿನ್‌ನಂತಹ ಪ್ರಮುಖ ಪೇಪರುಗಳಲ್ಲಿ ಪ್ರಯತ್ನಿಸಿದ್ದರೆ ಸಮನಾದ ಪ್ರತಿಫಲ ದೊರೆಯುವಂತೆ ಪ್ರಶ್ನೆಪತ್ರಿಕೆಗಳು ಇದ್ದು-ನಾವೆಲ್ಲರೂ ಸಮಾಧಾನದಿಂದಿದ್ದೆವು. ಇದೀಗ ಕೊನೇ ಮೈನರ್ ಸರ್ಜರಿ ಪೇಪರ್ ಮಾತ್ರ

ಇಷ್ಟೊಂದು 'ಕಠಿಣ'ವಾಗಿರಬೇಕೆಂದರೆ, ಇದೊಂದು ಕುತಂತ್ರ ಎಂಬುದು ಮನಸ್ಸಿಗೆ ಹೊಳೆಯಿತು. ಇದು ವಿದ್ಯಾರ್ಥಿಗಳಿಗೆ ಮೋಸ, ಶಿಕ್ಷಣಕ್ಕೆ ಅಪಚಾರ, ಅನ್ಯಾಯ ಎಂಬುದು ಹೊಳೆದಾಗ, ಇದನ್ನು ತಪ್ಪಿಸಲೇಬೇಕೆಂದು ನಿರ್ಧರಿಸಿದೆ. ರಾಮಚಂದ್ರರಾಯರಾದಿಯಾಗಿ ಎಲ್ಲ ಪ್ರಮುಖರೊಂದಿಗೆ 5 ನಿಮಿಷ ವಿಚಾರ ವಿನಿಮಯ ಮಾಡಿ - ನಾನು ಪರೀಕ್ಷಾ ಕೊಠಡಿಯತ್ತ ಹೋದೆ. (ಜೇಬಿನಲ್ಲಿ ಒಂದು ಪೆನ್ಸಿಲ್, 4–6 ಕಾಗದ ಚೂರುಗಳು, ಮತ್ತೊಂದೆರಡು ಚಿಕ್ಕ ಗುಂಡು ಕಲ್ಲುಗಳನ್ನು ನಾನು ತೆಗೆದುಕೊಂಡು ಹೊರಟಿದ್ದೆ.)

ಬೆಲ್ ಬಡಿದ ಸದ್ದು ಕೇಳಿದ ಕೂಡಲೇ ನಾನು–ನಾನೊಬ್ಬನೇ ಪರೀಕ್ಷಾ ಕೊಠಡಿಯ ಒಳಹೊಕ್ಕು ನನ್ನ ಸ್ಥಾನದಲ್ಲಿ ಕುಳಿತೆ. (ಮಹಡಿಯ 2ನೇ ಕಿಟಕಿಯ ಬಳಿ ಇತ್ತು ನನ್ನ ಟೇಮ್)

ಪ್ರಶ್ನೆಪತ್ರಿಕೆ ಹಾಗೂ ಉತ್ತರ ಬರೆಯುವ ಹಾಳೆಗಳು ನನ್ನ ಡೆಸ್ಕ್‌ನ ಮೇಲೆ ಇದ್ದವು. ನಾನು ಜೇಬಿನಿಂದ ಬಿಳಿ ಕಾಗದದ ಚೀಟಿಗಳನ್ನು, ಪೆನ್ಸಿಲನ್ನು ತೆಗೆದು, ತಲೆ ತಗ್ಗಿಸಿ, ಡೆಸ್ಕಿಗೆ ಅಂಟುವಂತೆ ಕುಳಿತು, ಪ್ರಶ್ನೆ ಪತ್ರಿಕೆಯ 'ಪಾಯಿಂಟ್'ಗಳನ್ನು ಗೀಚಿ, ಕಲ್ಲು ಚೂರು ಸೇರಿ ಉಂಡೆ ಮಾಡಿ ಹೊರತೆಗೆದೆ. 4–5 ಉಂಡೆಗಳು ಕೆಳಗೆ ಹೋದವು. ಅಲ್ಲಿ ಉತ್ತರ ಹುಡುಕಿ ಪರಸ್ಪರ ವಿನಿಮಯ ಮಾಡಿಕೊಳ್ಳುವ ಕೆಲಸ ಭರಾಟೆಯಿಂದ ನಡೆಯುತ್ತಿತ್ತು. ನಾನು ಉತ್ತರ ಪತ್ರಿಕೆಯ ಪುಟಗಳನ್ನು ತಿರುವಿ ಹಾಕುತ್ತಾ ಪ್ರಶ್ನೆಪತ್ರಿಕೆಯನ್ನು ಅಧ್ಯಯನ ಮಾಡುತ್ತಾ ಕುಳಿತೆ... ಅರ್ದಘಂಟೆ... ಕಳೆದ ಗಂಟೆ ಬಾರಿಸಿತು. ಹೊರಗಿದ್ದ ಪರೀಕ್ಷಾರ್ಥಿಗಳೆಲ್ಲಾ ಓಡಿಬಂದು, ಹಾಲ್‌ನ ಒಳಗೆ ಸೇರಿ ನಿಮಿಷಾರ್ಧದಲ್ಲಿ ತಮ್ಮ ಸ್ವಸ್ಥಾನದಲ್ಲಿ ಕುಳಿತು ಸರಸರ, ಭರಭರ ಉತ್ತರ ಪತ್ರದ ಹಾಳೆಗಳನ್ನು ತಯಾರಿಸತೊಡಗಿದರು. ನಾನು ಮೂಕ ಪ್ರೇಕ್ಷಕನಾಗಿ ಕುಳಿತೆ–ತಲೆ ತಗ್ಗಿಸಿ ಮೌನಿಯಾಗಿ.

10 ನಿಮಿಷ ಕಳೆಯಿತು, 15 ನಿಮಿಷ ಕಳೆಯಿತು. ಪರೀಕ್ಷಾ ಮೇಲ್ವಿಚಾರಕರಲ್ಲಿ ಒಬ್ಬರು ನೇರವಾಗಿ ನನ್ನ ಬಳಿ ಬಂದು, ಅಧಿಕಾರವಾಣಿಯಿಂದ 'ಎದ್ದುನಿಲ್ಲು' ಎಂದು ಆರ್ಡರ್ ಮಾಡಿದರು. ಎದ್ದುನಿಂತೆ. ಸಹಾಯಕನೊಬ್ಬ ನನ್ನ ಡೆಸ್ಕ್‌ನಲ್ಲಿದ್ದ ಪ್ರಶ್ನೆ ಪತ್ರಿಕೆ, ಉತ್ತರ ಹಾಳೆಗಳು, ಪೆನ್ - ಎಲ್ಲವನ್ನೂ ಮುಟ್ಟುಗೋಲು ಹಾಕಿದಂತೆ ಎತ್ತಿಕೊಂಡ. "ನಡಿ ಪರೀಕ್ಷಾಧಿಕಾರಿಗಳ ಹತ್ತಿರಕ್ಕೆ" ಮತ್ತೆ ಆಜ್ಞಾವಾಣಿ. ಮುಂದೆ ಅವರು–ಅವರ ಹಿಂದೆ ನಾನು–ನನ್ನ ಹಿಂದೆ 'ಮುಟ್ಟುಗೋಲು' ಹಾಕಿದ ವಸ್ತುಗಳ ಸಹಿತ ಚಪರಾಸಿ.

ಪರೀಕ್ಷಾಧಿಕಾರಿಗಳ ಮುಂದೆ ನಿಂತ ನನ್ನನ್ನು 15 ನಿಮಿಷ ಪ್ರಶ್ನೆ ಉತ್ತರದ ಮೂಲಕ ತಪಾಸಣೆ ಮಾಡಿದರು. ದೇಹ ಪರೀಕ್ಷೆ ಒಂದು ಬಿಟ್ಟು ಉಳಿದೆಲ್ಲ

ವಿಧಾನಗಳಿಂದಲೂ 'ತಪಾಸಣೆ'ಯಾಯಿತು. ನಾನು 'ಹೌದು', 'ಇಲ್ಲ' ಎಂಬ ಎರಡು ಶಬ್ದಗಳ ಹಾಗೂ 'ಮೌನ' ಇಷ್ಟಕ್ಕೆ ನನ್ನ ಪ್ರತಿಕ್ರಿಯೆ ಮಿತಿಗೊಳಿಸಿದ್ದೆ. 10 ನಿಮಿಷ ಚಪರಾಸಿ ಸಹಿತ ನನ್ನನ್ನು ಕೊಠಡಿಯ ಹೊರಗೆ ನಿಲ್ಲಿಸಿ, ಒಳಗೆ ಅಧಿಕಾರಿಗಳು ಏನೇನೋ ಮಾತುಕತೆ ನಡೆಸಿಕೊಳ್ಳುವುದು ಕಾಣಿಸುತ್ತಿತ್ತು ವಿನಾ ಏನೂ ಕೇಳಿಸುತ್ತಿರಲಿಲ್ಲ. ನಿಂತನಿಂತಲ್ಲೇ ಎರಡೂ ಕಾಲು ನೋಯುತ್ತಿತ್ತು. ತಲೆಯಲ್ಲಿ ಭಾವನೆಯೂ ಇಲ್ಲದ ನಿರ್ವಿಕಾರ ಸ್ಥಿತಿಯಲ್ಲಿದ್ದೆ.

ಮತ್ತೆ ಒಳಗೆ ಬರಲು ಹುಕುಂ ಬಂತು. "ನಾಳೆ ಬೆಳಿಗ್ಗೆ 10 ಗಂಟೆಗೆ ಪ್ರಿನ್ಸಿಪಾಲರ ಕಛೇರಿಗೆ ಹಾಜರಾಗಬೇಕು. ವಿವರವಾದ ವಿಚಾರಣೆ ಅಲ್ಲಿ ನಡೆಸುತ್ತಾರೆ. ಈಗ ಹೋಗಬಹುದು" ಎಂದು ಅಪ್ಪಣೆಯಾಯಿತು. ನಾನು ಕೈ ಬೀಸಿಕೊಂಡು ಹೊರಗೆ ಬಂದೆ. ಕಾಲುಗಳು ನನ್ನನ್ನು ನನ್ನ ಮಹಡಿ ಮನೆಯ ಕೊಠಡಿಗೆ ತಂದುಬಿಟ್ಟವು. ತೀರಾ ಆಯಾಸದಿಂದ ಬಳಲಿದ್ದೆ. ಮಂಚದ ಮೇಲೆ ಉರುಳಿದ್ದಷ್ಟೇ ಗೊತ್ತು. ನಿದ್ರೆ ಆವರಿಸಿತು.

ಯಾರೋ ಮೆಟ್ಟಿಲು ಏರಿ ಬಂದು ರೂಮಿನ ಬಾಗಿಲ ಬೀಗವನ್ನು ತಟ್ಟಿದ ಶಬ್ದ ಕೇಳಿ ಎಚ್ಚರವಾಯಿತು. ನಿದ್ರೆಯ ಮಂಪರಿನಲ್ಲೇ ಇದ್ದೆ. ಕಣ್ಣಿಗೆ ಏನೂ ಸ್ಪಷ್ಟವಾಗಿ ಕಾಣಿಸುತ್ತಿರಲಿಲ್ಲ–ಮಬ್ಬು. ಕಿಟಕಿಯಿಂದ ಹೊರಗೆ ನೋಡಿದರೆ ಸಂಜೆಗತ್ತಲು ಎನಿಸಿತು. ತೆರೆದೇ ಇದ್ದ ಬಾಗಿಲಿನಿಂದ ರಾಮಚಂದ್ರರಾವ್ ಒಳಗೆ ಬಂದು ನನ್ನ ಮೈ ಕುಲಕಿಸಿ, "ಎದ್ದೇಳು" ಎಂದರು. ಮರುಕ್ಷಣ ಇನ್ನೂ ಒಬ್ಬರು ಒಳಗೆ ಬಂದರು. ಅವರು ಯಾರೆಂದು ಗುರುತಿಸುವದು ಕಷ್ಟವಾಗಲಿಲ್ಲ–ಡಾ॥ ಮಹದೇವ ಶಾಸ್ತ್ರಿಗಳು. ಕಾಲೇಜಿನ ಗೌರವಾನ್ವಿತ ಹಿರಿಯ ಪ್ರೊಫೆಸರ್. ಎದ್ದೇಳಲು ಪ್ರಯತ್ನಿಸಿದೆ. ಮೈ ಒಂದೆಡೆಗೆ ವಾಲಿತು. ರಾಮಚಂದ್ರರಾವ್ ನನ್ನನ್ನು ಗೋಡೆಗೆ ಆನಿಸಿ ಕುಳ್ಳಿರಿಸಿದ ಮೇಲೆ ಮೂಲೆಯಲ್ಲಿ ಕುರ್ಚಿಯನ್ನು ತಂದು ಎದುರಿಗಿಟ್ಟು ಪ್ರೊಫೆಸರನ್ನು ಅದರಲ್ಲಿ ಕುಳಿತುಕೊಳ್ಳುವಂತೆ ಕೇಳಿಕೊಂಡರು. ನನಗೀಗ ಪೂರ್ಣ ಎಚ್ಚರವಾಯಿತು. ಮೈ ತುಸು ಕಂಪಿಸಿತು. ಮೋರೆ ಬೆವರಿತು.

"ಅಲ್ಲಿ ಏನೇನು ನಡೆಯಿತು? ಸತ್ಯ ಹೇಳು; ಅದನ್ನು ತಿಳಿದುಕೊಳ್ಳಲಿಕ್ಕೆ ಸಾರ್ ಬಂದಿದ್ದಾರೆ" ಎಂದು ರಾಮಚಂದ್ರರಾವ್ ವ್ಯಾಖ್ಯಾನಿಸಿದ. ಒಂದು ಕ್ಷಣ ಸುಧಾರಿಸಿಕೊಂಡ ನಾನು ಹೇಳಿರುವ ವಿಚಾರಗಳ ಸಾರಾಂಶ ಇಷ್ಟು.

"...ಕೆಲವು ಆಲೋಪತಿ ಅರೆಕಾಲಿಕ ಉಪನ್ಯಾಸಕರಿಗೆ .... ಮೆಡಿಕಲ್ ಕಾಲೇಜಿನಿಂದ ಬಂದು 'ಪಾಠ' ಮಾಡಿ ಹೋಗುತ್ತಿದ್ದವರಿಗೆ ಸರಕಾರದ ಹುಕುಂ ಇದ್ದುದರಿಂದ ಹಾಗೂ ತಿಂಗಳ ಕೊನೆಯಲ್ಲಿ ನಿರ್ದಿಷ್ಟ ಮೊತ್ತದ ಗೌರವಧನ ಪಾವತಿ ಮಾಡುತ್ತಿದ್ದುದರಿಂದ ಎಲ್ಲರೂ ಅರೆ ಮನಸ್ಸಿನಿಂದಲೇ ಪಾಠ ಮಾಡುತ್ತಿದ್ದರು.

ಅವರಿಗೆ (ಕೆಲವರಿಗೆ) ಆಯು ವಿದ್ಯಾರ್ಥಿಗಳೆಂದರೆ ತಾತ್ಸಾರ. ಅದರಲ್ಲೂ 'ಸರ್ಜರಿ' ಓದಿಸುವುದೆಂದರೆ 'ಜಿಗುಪ್ಸೆ'. 'ಮೈನರ್ ಸರ್ಜರಿ'ಯಂತಹ ಪೇಪರ್‌ನಲ್ಲಿ ಕೂಡಾ ಕಳಪೆ ಉತ್ತರಿಸುವ ಇವರುಗಳಿಗೆ ಆಲೋಪತಿ ಶಿಕ್ಷಣ ಪಡೆಯುವ ಯೋಗ್ಯತೆ ಇಲ್ಲ ಎಂಬುದನ್ನು ಸಾಬೀತುಮಾಡಿ ತೋರಿಸಲು ಈ ತಂತ್ರ ನಡೆಸಿದ್ದುದು ಸ್ಪಷ್ಟ. ವಿದ್ಯಾರ್ಥಿಗಳಿಗೆ ಅನ್ಯಾಯ, ಶಿಕ್ಷಣ ಹಾಗೂ ಕಾಲೇಜಿಗೆ ಅಪಮಾನ, ಸತ್ಯಕ್ಕೆ ಅಪಚಾರ–ಇದನ್ನು ನೋಡಿಕೊಂಡು ಸುಮ್ಮನಿರುವುದು ಸಾಧ್ಯವಿಲ್ಲ. ಆ ಕ್ಷಣದಲ್ಲೇ ಪ್ರತಿಕ್ರಿಯೆ ತೋರಿಸದಿದ್ದರೆ ಈ ನೈಚ್ಯ ಭಾಗ ಖಾಯಂ ಆಗಿಬಿಡುತ್ತಾರೆ. ನನಗಿದ್ದುದು ಒಂದೇ ದಾರಿ. ಪ್ರತಿಭಟಿಸುವುದು. ಅದು ನೇರವಾದ ಹಾದಿ ಅಲ್ಲ. ಆದರೂ ಬೇರೆ ಯಾವುದೇ ಮಾರ್ಗವಿರಲಿಲ್ಲವಾದ್ದರಿಂದ ನಾನು ಪ್ರತಿಭಟನೆ ಮಾಡಿದೆ. 39 ವಿದ್ಯಾರ್ಥಿಗಳ 6 ತಿಂಗಳು ಹಾಗೂ ನೂರಾರು ರೂಪಾಯಿಗಳು ಮತ್ತು ಶ್ರಮ ವೃಥಾ ಹಾಳಾಗುತ್ತಿತ್ತು ಎಂಬುದರಿಂದ ಪ್ರತಿಭಟಿಸಿದೆ."

"ಇದರ ಪರಿಣಾಮ ಏನಾಗುತ್ತದೆ ಎಂಬುದನ್ನು ಯೋಚಿಸಿದ್ದೀಯಾ ನೀನು?" ರಾಮಚಂದ್ರರಾವ್ ಗುಡುಗಿದರು.

"ಶಿಕ್ಷಾರ್ಹ ಅಪರಾಧವೆಂದು ಹೇಳಿ ನನ್ನನ್ನು ಸಸ್ಪೆಂಡ್ ಮಾಡಬಹುದು, ಡಿಬಾರ್ ಮಾಡಿ ಕಪ್ಪು ಪಟ್ಟಿಯಲ್ಲಿ ಎಂದೆಂದಿಗೂ ಮೆಡಿಕಲ್ ಪ್ರೊಫೆಷನ್ ಮಾಡದಂತೆ ಶಿಕ್ಷೆ ವಿಧಿಸಬಹುದು. ನಾನು ವೈದ್ಯವೃತ್ತಿ ನಡೆಸುವ ಡಾಕ್ಟರು ಎಂದು ಬೋರ್ಡ್ ಹಚ್ಚಲು ಸಾಧ್ಯವಾಗಲಿಕ್ಕಿಲ್ಲ. ಆದರೆ ದೂರದ ಹಳ್ಳಿಯಲ್ಲಿ ಯಾರಾದರೂ ಒಬ್ಬರು ಹಳೇ ವೈದ್ಯರ ಬಳಿ ಕಾಂಪೌಂಡರ್ ಆಗಿ ದುಡಿದು ಹೊಟ್ಟೆಹೊರೆದುಕೊಳ್ಳಬಹುದು." ಇಷ್ಟು ಹೇಳುತ್ತಿದ್ದಂತೆಯೇ ನನ್ನ ನಾಲಿಗೆ ಒಣಗಿತು, ಸ್ವರ ಅದುರಿತು, ಕಣ್ಣಂಚಿನಲ್ಲಿ ತೇವ ತುಂಬಿಕೊಂಡಿತು.

ಮಾತಿಲ್ಲದೆ ರಾಮಚಂದ್ರರಾವ್ ರೂಮಿನಿಂದ ಹೊರಗೆ ಹೋಗಲು ಬಾಗಿಲ ಬಳಿ ಬಂದರು. ಕುಳಿತಲ್ಲಿಂದ ಎದ್ದುನಿಂತು ಕುರ್ಚಿಯನ್ನು ಹಿಂದಕ್ಕೆ ಸರಿಸಿ ಗುರುಗಳು ಹೇಳಿದರು, "ನಮ್ಮ ಕಾಲೇಜಿನಲ್ಲಿ ಓದಿದವರು ಕಾಂಪೌಂಡರ್ ಆಗುವುದಿಲ್ಲ–ಡಾಕ್ಟರ್ ಆಗುತ್ತಾರೆ" ಅದೇ ದೃಢವಾದ ವಾಕ್ಯ, ಆರ್ದ್ರವಾದ ಧ್ವನಿ.

ಅವರ ಮಾತುಗಳು ನನ್ನ ಕಿವಿಗೆ ಅಪ್ಪಳಿಸಿದರೂ ಅದನ್ನು ಅರ್ಥೈಸಿಕೊಳ್ಳಲು ಎರಡು ನಿಮಿಷಗಳು ಬೇಕಾದವು. ಬಾಗಿಲಿನಿಂದ ಹೊರಗೆ ಕಾಲಿರಿಸಿ ಗುರುಗಳು ನಿರ್ಗಮಿಸಿದರು. ಹೋಗುವ ಮುನ್ನ ಗೋಡೆಯಲ್ಲಿನ ಸ್ವಿಚ್ಚನ್ನು ಒತ್ತಿದ್ದರು. ರೂಮು ತುಂಬ ಝಗ್ಗನೆ ಬೆಳಕು ತುಂಬಿತು. ನನ್ನ ಮನಸ್ಸು ಪುಲಕಿತವಾಯಿತು. ಮುಂದಿನ ಸೆಪ್ಟೆಂಬರ್‌ನಲ್ಲಿ ನಡೆದ ಸಪ್ಲಿಮೆಂಟರಿ ಪರೀಕ್ಷೆಯಲ್ಲಿ ದ್ವಿತೀಯ ಶ್ರೇಣಿಯಲ್ಲಿ ಪಾಸಾದೆ.

* * *

ಶ್ರೀ

ವೈದ್ಯಜೀವನದ ಒಳನೋಟ

ಹುಟ್ಟೂರಲ್ಲಿ ಗ್ರಾಮೀಣ ಕ್ಲಿನಿಕ್ ತೆರೆದೆ

1957ರ ಫೆಬ್ರವರಿ. ಮೈಸೂರಿನ ಸರಕಾರಿ ಆಯುರ್ವೇದ-ಯುನಾನಿ ಕಾಲೇಜಿನಲ್ಲಿ ವೈದ್ಯ ಶಿಕ್ಷಣವನ್ನು ಪೂರೈಸಿ, L.A.M.S. ಎಂಬ 4 ಅಕ್ಷರಗಳನ್ನು ಹೆಸರಿನ ಮುಂದಕ್ಕೂ Dr. (Doctor) ಎಂಬ ಸಂಕೇತಾಕ್ಷರಗಳನ್ನು ಹೆಸರಿನ ಹಿಂಭಾಗಕ್ಕೂ ಅಂಟಿಸಿಕೊಳ್ಳಲು ಅರ್ಹತೆ ಪಡೆದ ಅಧಿಕೃತ ಅಂಕಿತಪತ್ರದೊಂದಿಗೆ ಊರಿಗೆ ಹಿಂದಿರುಗಿದೆ. ಐದೂವರೆ ವರ್ಷಗಳಷ್ಟು ದೀರ್ಘಾವಧಿಯ ಮೆಡಿಕಲ್ ಕೋರ್ಸ್‌ನ್ನು ಸಾಂಗವಾಗಿ ಮುಗಿಸಿಕೊಂಡು ಬಂದಿದ್ದೆ.

ಮಾರ್ಚ್ ತಿಂಗಳ ಮೊದಲ ವಾರದಲ್ಲಿ ನಮ್ಮೂರಿನ ಹತ್ತಾರು ಅಂಗಡಿಗಳ ಸಣ್ಣ ಪೇಟೆಯಲ್ಲಿ 'ಗ್ರಾಮೀಣ ಕ್ಲಿನಿಕ್' ಪ್ರಾರಂಭಿಸಿದೆ. ನಮ್ಮೂರು ಈಗಿನ ಕೇರಳ-ಕರ್ನಾಟಕ ರಾಜ್ಯಗಳ ಒಂದು ಗಡಿ ಹಳ್ಳಿ; ಸುತ್ತಮುತ್ತ 8–10 ಹಳ್ಳಿಗಳಿಗೆ ವ್ಯಾಪಾರ, ವೈವಾಟಿಗಾಗಲಿ, ಸಂಚಾರ-ಸಂಪರ್ಕಕ್ಕಾಗಲಿ ಇರುವ ಒಂದು ಸಣ್ಣ ಕೇಂದ್ರ-ಈ ಅಡ್ಯನಡ್ಕ ಪೇಟೆ. ಇದು ಮಂಗಳೂರು-ಪಾಣೆ ಮಂಗಳೂರು-ವಿಟ್ಲ ಮಾರ್ಗವಾಗಿ ಕಾಸರಗೋಡಿಗೆ ಹೋಗುವ ಏಕೈಕ ರಾಜರಸ್ತೆಯಲ್ಲಿದೆ.

ಪೇಟೆಯ ಬಡಗು ಅಂಚಿನಲ್ಲಿ, ರಸ್ತೆಯ ಪಶ್ಚಿಮಕ್ಕೆ ತುಸು ಎತ್ತರಕ್ಕೆ ಒಂದು 'ಕಡ್ಪಕಲ್ಲು' ದಿನ್ನೆಯಿದೆ. ನಾಲ್ಕಾರು ವರ್ಷಗಳ ಹಿಂದೆ ಹಾಜರ್ ಸಾಹೇಬರು ಒಂದು ದೊಡ್ಡ ಕಟ್ಟಡವನ್ನು ಅಲ್ಲಿ ಕಟ್ಟಿಸಿದ್ದರು-'ಬಂಡಸಾಲೆ' ತೆರೆಯುವ ಉದ್ದೇಶದಿಂದ. ಆದರೆ ಕಾರಣಾಂತರದಿಂದ ಅವರು ವ್ಯಾಪಾರ ಪ್ರಾರಂಭಿಸುವುದನ್ನು ಕೈಬಿಟ್ಟರು; ಬೇರೆ ಯಾರೂ ಅದನ್ನು ಬಳಸಿಕೊಳ್ಳಲು ಮುಂದೆ ಬರಲಿಲ್ಲ. ಹೀಗೆ ಕಟ್ಟಿದಾರಭ್ಯ ಖಾಲಿಯಾಗಿಯೇ ಉಳಿದಿದ್ದ 'ಪಾದೆ ಅಂಗಡಿ'ಯಲ್ಲಿಯೇ ನಾನು 'ಗ್ರಾಮೀಣ ಕ್ಲಿನಿಕ್'ನ್ನು ತೆರೆದೆ. "ಡಾ॥ ಮರಕಿಣಿಯವರ ಸತ್ಯನಾರಾಯಣ ಫಾರ್ಮೆಸಿ"

ಎಂಬುದಾಗಿ ಆ ಗ್ರಾಮೀಣ ಕ್ಲಿನಿಕ್‌ನ ಗೋಡೆಗೆ ಬೋರ್ಡ್‌ನ್ನು ತಗಲಿಸಿದೆ. ತೀರ ಸರಳವಾಗಿ ಆರಂಭೋತ್ಸವವು ನಡೆಯಿತು. ಊರಿನ ಹಲವು ಪ್ರಮುಖರು–ಕೆಲವು ಜನ ಬಂಧುಗಳು ಬಂದಿದ್ದರು. ಪುರೋಹಿತರು 'ಧನ್ವಂತರಿ ಪೂಜೆ' ಮಾಡಿದರು. ಅಲ್ಪೋಪಹಾರದ ಸಿಹಿಯನ್ನು ಸ್ವೀಕರಿಸಿ 'ಶುಭವಾಗಲಿ' ಎಂದು ಹಾರೈಸುತ್ತ ಅತಿಥಿಗಳು ಹೊರಟು ಹೋದರು. 'ಆಸುಪತ್ರೆ'ಗಾಗಿ ಟೇಬಲ್ ಕುರ್ಚಿಗಳನ್ನೂ, ಸೋಫಾಸೆಟ್ಟು, ಕಪಾಟುಗಳನ್ನೂ ಕಾಸರಗೋಡಿನಿಂದಲೇ ಮಾಡಿಸಿ ತರಿಸಲಾಗಿತ್ತು. ಮಂಗಳೂರಿನಿಂದ ಎರಡೂ ಕಪಾಟುಗಳ ತುಂಬ ಔಷಧಿಗಳೂ ಕಾಂಪೌಂಡಿಂಗ್ ರೂಮಿನ ಹಾಗೂ ರೋಗಿಗಳನ್ನು ತಪಾಸಣೆ ಮಾಡುವ ಪ್ರತ್ಯೇಕ ಕೊಠಡಿಗೂ ತಕ್ಕಮಟ್ಟಿನ ಪೀಠೋಪಕರಣಗಳೂ ಬಂದಿದ್ದವು.

ನಮ್ಮೂರವರ ಮಟ್ಟಿಗೆ ಇದೊಂದು 'ಆಸುಪತ್ರೆ'ಯೇ ಸೈ! ಒಬ್ಬ ಮಲೆಯಾಳಿ ('ಬೈಚ್ಯ'ರೆಂಬ ಹೆಸರಿನ) ಖಾಸಗಿ ಪಂಡಿತರನ್ನು ಬಿಟ್ಟರೆ, ಬೇರೆ ಯಾವ ವೈದ್ಯಕೀಯ ಸೌಲಭ್ಯವೂ ಇರಲಿಲ್ಲ. ನಮ್ಮೂರಿಗೆ ಮಾತ್ರವಲ್ಲದೆ ಸುತ್ತಮುತ್ತಲಿನ ಹತ್ತೆಂಟು ಹಳ್ಳಿಗಳಿಗೂ ಪ್ರಪ್ರಥಮವಾಗಿ (ಬೋರ್ಡ್ ಹೊತ್ತ) ಕ್ಲಿನಿಕ್ ಎಂದರೆ ಇದೇ ಆಗಿತ್ತು.

ಮೊದಲರೋಗಿ ನುಂಗಿದ ಮದ್ದು

ಕ್ಲಿನಿಕ್‌ನ್ನು ತೆರೆಯುವವರೆಗಿನ ಎಲ್ಲ ವ್ಯವಸ್ಥೆಗಳನ್ನು ನನ್ನ ಅಣ್ಣ ಮಾಡಿದ್ದರು. ಅವರಿಗೆ ಬುಳೇರಿ (ಈಗಿನ ಬೆಳ್ಳಾರೆ)ಯ ಹಿರಿಯ ವೈದ್ಯ ಡಾ॥ ಪಿ.ಎಂ. ಭಟ್ಟರ ಕಾಂಪೌಂಡರಾಗಿ ಹಲವು ವರ್ಷಗಳ ಅನುಭವ ಇತ್ತು. ಹೀಗಾಗಿ ಮೂರು ತಿಂಗಳವರೆಗೆ ಯಾವುದೇ ಕೊರತೆ ಬಾರದ ರೀತಿಯಲ್ಲಿ ಬೇಕುಬೇಕಾದ ಎಲ್ಲಾ 'ಸರಂಜಾಮು'ಗಳನ್ನು ಖರೀದಿಸಿ ತಂದಿದ್ದರು. ವಿಶೇಷದ ಸಂಗತಿ – ಆಶ್ಚರ್ಯವೂ ಹೌದು ಎಂಬುದಾಗಿ ಇಂದು ಕಾಣಿಸಬಹುದಾದರೂ ವಾಸ್ತವವಾಗಿ ಅಂದಿನ ಆ ದಿನಗಳ ಮಟ್ಟಿಗೆ ಸುಸಜ್ಜಿತ ಎಂದರೆ ಸಾಕಷ್ಟು ಔಷಧಿ ತುಂಬಿದ ಗ್ರಾಮೀಣ ಕ್ಲಿನಿಕ್‌ನ ಪೀಠೋಪಕರಣಗಳಿಂದ ಹಿಡಿದು ಅತ್ಯಾವಶ್ಯಕವಾದ ಸಲಕರಣೆಗಳ ಮತ್ತು ಔಷಧಿಗಳ ಖರೀದಿಯ ವೆಚ್ಚ ಕೇವಲ 2200/– ರೂಪಾಯಿ ಎಂದರೆ ಅನುಮಾನ ಪಡುತ್ತೀರಲ್ಲವೆ? ನೆನಪಿರಲಿ–ಆಗ ಎಂದರೆ 1950–60ರ ಅವಧಿಯಲ್ಲಿ ಅಡಿಕೆಗೆ ಖಂಡಿಗೆ (20 ಮಣ) 1 ನೂರು ರೂಪಾಯಿ ಬೆಲೆ! 1 ಸೇರು ಅಕ್ಕಿಗೆ ಬರೇ 4 ಆಣೆ! 1 ಬಾಟಲು ಚಿಮಿಣಿ (ಸೀಮೆ) ಎಣ್ಣೆಗೆ 2½ ಆಣೆ ಬೆಲೆಯಿದ್ದ ದಿನಗಳವು.

ಬೇಸಿಗೆ ಕಾಲ ಅದೇ ಪ್ರಾರಂಭವಾಗಿತ್ತಾದರೂ ಬಿಸಿಲಿನ ಝಳ ಜೋರಾಗಿತ್ತು. ಕಿಟಕಿಗಳ ಹೆಸರೇ ಇಲ್ಲದ 'ಅಂಗಡಿ'ಯ ಕೋಣೆಯಲ್ಲಿ ಸೆಕೆಯಿಂದ ಮೈ ಬೆವರುತ್ತಿತ್ತು. ಜತೆಗೆ ತಲೆನೋವು ಬೇರೆ! ಮುಂಜಾನೆಯೇ ಮಂದವಾಗಿ ಕಾಣಿಸಿದ್ದ 'ತಲೆಬೇನೆ' ಈಗ – ಅತಿಥಿಗಳೆಲ್ಲರೂ ಹೊರಟುಹೋದ ಮೇಲಂತೂ ಹೊರಗಿನ ಬಿಸಿಲಿಗೂ

ಒಳಗಿನ ಸೆಕೆಗೂ ಇನ್ನಷ್ಟು ಹೆಚ್ಚಾಯಿತು. ಕಳೆದ ನಾಲ್ಕಾರು ದಿನಗಳಿಂದಲೇ ಕಾಡುತ್ತಿದ್ದ ಆತಂಕ, ಕಸಿವಿಸಿ, ಹಿಂಜರಿಕೆ, ಅವ್ಯಕ್ತ ಭಯ–ನನ್ನ ಧೈರ್ಯದ ಮುಖವಾಡವನ್ನು ಕಳಚಿ ಹೊರಗೆ ಕಾಣಿಸತೊಡಗಿತು! ಸ್ವಲ್ಪ ಹೊತ್ತಿನಲ್ಲೇ ತಲೆನೋವು ಹೆಸರಿನಿಂದ ಪ್ರಕಟವಾದ ಸಂಕಟ–ಸಹಿಸಲಸಾಧ್ಯವೆನ್ನಿಸುವ ಮಟ್ಟಕ್ಕೆ ಮುಟ್ಟಿತು! ಈಗಾಗಲೇ ಕುತ್ತಿಗೆ, ಕೆನ್ನೆ, ಹಣೆ–ಮೂಗಿಗೆಲ್ಲ 'ಅಮೃತಾಂಜನ' ಬಡಿದಾಗಿತ್ತು–ಕಣ್ಣಿನಿಂದ ಧಾರಾಕಾರವಾಗಿ ನೀರಿಳಿಯಿತು; ಕುತ್ತಿಗೆ ಕೆನ್ನೆ ನಸು ಬೆಚ್ಚಗಾಯಿತು; ಹಣೆಯ ಮೇಲೆ ಬೆವರೊಡೆಯಿತು–ಇಷ್ಟೇ ವಿನಃ ನನ್ನ ಸಂಕಟವೇನೂ ಇಳಿಮುಖವಾಗಲಿಲ್ಲ. ಈಗ ತುಸು ಗಲಿಬಿಲಿಯೂ ಸೇರಿಕೊಂಡಿತು. ಕಾಂಪೌಂಡಿಂಗ್ ಟೇಬಲ್ ಮೇಲೆ ಸಾಲಾಗಿ ಇರಿಸಿದ್ದ ಮಾತ್ರೆಗಳ ಬಾಟಲಿಗಳು, ಮಿಕ್ಸ್‌ಚರ್‌ಗಳು, ಚೂರ್ಣ–ಲೇಹ ಕಷಾಯಗಳು ಮಂಜು ಮಂಜಾಗಿ ಕಾಣಿಸುತ್ತಿದ್ದವು.

ಒಂದು 'ಆಸ್ಪ್ರೋ' ಮಾತ್ರೆ ನುಂಗಿ ನೀರು ಕುಡಿದು, ಅಲ್ಲೇ ಇದ್ದ ಸ್ಟೂಲಿನ ಮೇಲೆ ಕುಸಿದೆ.

ಮತ್ತೆ ತುಂಬಿತು ಉತ್ಸಾಹ

ಅಡ್ಯನಡ್ಕ ಪೇಟೆಯ ಇನ್ನೊಂದು ತುದಿಯಲ್ಲಿ ಹಳ್ಳಿ ಶಾಲೆ ಇದೆ – ('ಹೈಯರ್ ಎಲಿಮೆಂಟರಿ ಸ್ಕೂಲ್' ನನ್ನ ಪ್ರಾಥಮಿಕ ಶಿಕ್ಷಣ ಈ ಶಾಲೆಯಿಂದಲೇ ಪ್ರಾರಂಭವಾಗಿತ್ತು). 'ಢಣ್ ಢಣ್ ಢಣಣಣ' 'ಲಾಂಗ್ ಬೆಲ್' ಬಾರಿಸುತ್ತಿದ್ದ ಹಾಗೆಯೇ 'ಹೋ–ಹೋ–ಹೋ' – ಎಂದು ಬೊಬ್ಬೆ ಹಾಕುತ್ತಾ ಮನೆ ಕಡೆಗೆ ಓಡುತ್ತಿದ್ದ ಮಕ್ಕಳ ದಂಡು ನಾಲ್ಕೂ ದಿಕ್ಕಿಗೆ ಚದರಿತು. ಇದು ಮಧ್ಯಾಹ್ನದ ಊಟದ ಬಿಡುವು (ಈಗಿನಂತೆ ಮಧ್ಯಾಹ್ನದ 'ಬಿಸಿಯೂಟ'ದ ಶಿಕ್ಷಣ ದಾಸೋಹದ ದಿನಗಳಾಗಿರಲಿಲ್ಲ!). ನಾನು ಎಚ್ಚರಗೊಂಡು, ಹೊರಗಿನ ಕೊಠಡಿಗೆ ಬಂದೆ. ಟವೆಲಿನಿಂದ ಮುಖ ಒರೆಸಿಕೊಂಡೆಡೆ... ಡೆ... ಏನಾಶ್ಚರ್ಯ. ನಾನು ಸಂಪೂರ್ಣ ವೇದನಾಮುಕ್ತನಾಗಿದ್ದೆ! ಆ ತಲೆನೋವು, ಆತಂಕ, ಅವ್ಯಕ್ತ ಭಯ ಎಲ್ಲಿ ಮಾಯವಾಗಿದ್ದವೋ ಏನೋ!

10 ನಿಮಿಷಗಳ ನಂತರ 'ಶಾಪ್'ನ್ನು ಮಧ್ಯಾಹ್ನದ ಬಿಡುವಿನ ವೇಳಾಪಟ್ಟಿಯಂತೆ ಮುಚ್ಚಲು ಮುಂದಾದೆ. ಅಷ್ಟರಲ್ಲಿ ಕಣ್ಣಿಗೆ ಬಿತ್ತು ಟೇಬಲ್ ಮೇಲಿದ್ದ 'ಓ.ಪಿ. ರಿಜಿಸ್ಟರ್' ಮೊದಲ ಪುಟದಲ್ಲೇ ಧನ್ವಂತರೀ ಪೂಜೆಯ ಸಂದರ್ಭದಲ್ಲಿ ಪುರೋಹಿತರು ಬರೆದಿದ್ದ 'ಓಂ' – ಜತೆಗೆ ಸ್ವಸ್ತಿಕ ಚಿಹ್ನೆ ಇತ್ಯಾದಿಗಳು.... ಮೊದಲ ಪುಟದಲ್ಲಿ ಅವರೇ ದಿನಾಂಕ (ವಾರ, ನಕ್ಷತ್ರ, ಸಂವತ್ಸರ ಸಹಿತ) ತಿಂಗಳು ಇತ್ಯಾದಿ ಬರೆದುಬಿಟ್ಟಿದ್ದರು. ಈಗ ಅದರಲ್ಲಿ ಮೊದಲನೇ 'ರೋಗಿ'ಯಾಗಿ ನನ್ನ ಹೆಸರನ್ನೇ ನಮೂದಿಸುವುದು ಅನಿವಾರ್ಯವಾಯಿತು. ತುಸು ನಗು ಕೂಡ ಬಂತು!

ಬಾಗಿಲು ಮುಚ್ಚಿ ಬೀಗ ಹಾಕಿ ಕೊಡೆ ಬಿಡಿಸಿಕೊಂಡು ಮನೆಯ ಹಾದಿ ಹಿಡಿದೆ. ನಮ್ಮ ಮರಕಿಣಿ ಮನೆ ಈ ಕ್ಲಿನಿಕ್‌ನಿಂದ 1 ಮೈಲು ದೂರವಿದೆ (ಈಗಿನ 1.6 ಕಿ.ಮೀ.). ಹೊಟ್ಟೆ ಹಸಿದಿತ್ತು. 'ಬೀಸಬೀಸ' ಹೆಜ್ಜೆ ಹಾಕಿದೆ.

ಮೊದಲ ಗಿರಾಕಿ

ಸಂಜೆ 4 ಗಂಟೆಯ ಸಮಯವಾಗಿದ್ದರೂ ಬಿಸಿಲಿನ ಬೇಗೆ, ಸೆಖೆ ಸಾಕಷ್ಟು ಜೋರಾಗೇ ಇತ್ತು. ಮನೆಯಿಂದ ಸಾವಕಾಶವಾಗಿ ಬಂದು ಕ್ಲಿನಿಕ್‌ನ ಬಾಗಿಲು ತೆರೆಯುವಷ್ಟರಲ್ಲಿ.

'ಡಾಕುಟ್ರೇ – ದಿಂಜಪೊರ್ತಾಂಡು – ಕಾತು ಕುಳ್ಳುತೆ' (ತುಂಬಾ ಹೊತ್ತಾಯಿತು – ನಿಮ್ಮ ಹಾದಿ ನೋಡುತ್ತಾ ಕುಳಿತಿದ್ದೇನೆ) ಎಂದು ಹೇಳುತ್ತ ಹೆಗಲ ಮೇಲಿದ್ದ ಮಗುವನ್ನು ಕೆಳಗಿಳಿಸಿ ಹರುಕು ಕೊಳಕು ಕೈಬಟ್ಟೆಯಿಂದ ಮುಖವನ್ನು ಒರಸಿಕೊಂಡು ಬಂದು ನಿಂತ – ಒಬ್ಬ ಗಿರಾಕಿ ಕ್ಲಿನಿಕ್ ಬಾಗಿಲು ತೆರೆದ ಕೂಡಲೇ ಒಳಗೆ ಬಂದು, ಟೇಬಲಿನ ಮೇಲೆ ಒಂದು ಚಿಕ್ಕ ಕರಡಿಗೆಯನ್ನಿರಿಸಿ, 'ದೂರ ಸಾದಿ ಬೇಕಪೋವೋಡು ಡಾಕುಟ್ರೆ' (ದೂರದ ಹಾದಿ ಬೇಗ ಹೋಗಬೇಕು) ಎಂದು ವಿನಂತಿಸಿದ. ಕರಡಿಗೆಯ ಮುಚ್ಚಳ ತೆರೆದೆ. ಒಂದು ಚಿಕ್ಕ ಚೀಟಿಯೂ ಒಂದು ರೂಪಾಯಿ ನಾಣ್ಯವೂ ಇತ್ತು. ಚೀಟಿಯಲ್ಲಿ 'ಈ ಹುಡುಗನ ಕಜ್ಜಿಗೆ 'ಪೇನೇಸ್' ಮುಲಾಮು ಕೊಡಿರಿ 1 ರೂಪಾಯಿಗೆ' ಎಂಬ ಒಕ್ಕಣೆ ಇತ್ತು.

ದಣಿ ಕಳಿಸಿದ್ದು, ಮುಲಾಮು ತರುವುದಕ್ಕೇ ಆದರೂ ರೋಗಿಯನ್ನು ಪರೀಕ್ಷಿಸಿ ನೋಡುವ ಪ್ರಯತ್ನ ಮಾಡುತ್ತಿದ್ದ ಹಾಗೆಯೇ 'ಮುಲಾಮು ಕೊಟ್ಟುಬಿಡಿ ಡಾಕಟ್ರೇ ಅಷ್ಟು ಸಾಕು' ಎಂದು ಬಿನ್ನವಿಸಿಕೊಂಡ. ಮೇಲು ನೋಟಕ್ಕೇ ಆ 'ಕೈಕಾಲು ಸಣ್ಣ – ಹೊಟ್ಟೆ ಡುಮ್ಮಣ್ಣ, ಕಜ್ಜಿ ಬುರುಕ, ಸಿಂಬಳ ಸುರುಕ' ಎಂದು ರಾಗವಾಗಿ ಹಾಡಿ ಗೇಲೆ ಮಾಡುವುದಕ್ಕೆ ತಕ್ಕ ಮಾದರಿಯಂತಿದ್ದ ಈ ಮಗುವಿನ ಮೈಮೇಲಿನ 'ಕಜ್ಜಿ' ಕೇವಲ ಕಜ್ಜಿಯಲ್ಲ (ಚರ್ಮ ರೋಗವಷ್ಟೇ ಅಲ್ಲ) ಅದು ಅಪೌಷ್ಟಿಕತೆಯ ಒಂದು ಬಾಹ್ಯ ಲಕ್ಷಣವಾಗಿರಬಹುದು ಎಂಬುದಾಗಿ ಮೇಲು ನೋಟಕ್ಕೆ ಕಾಣಿಸುತ್ತಿದ್ದರೂ 'ದಣಿಗಳು' ಹೇಳಿದಂತೆ ಮುಲಾಮು ಮಾತ್ರ ಕೊಟ್ಟೆ. 'ಮೊದಲ ಗಿರಾಕಿ' ಕೊಟ್ಟ ಒಂದು ರೂಪಾಯಿಯ ಬೆಳ್ಳಿಯ ನಾಣ್ಯವನ್ನು ಎತ್ತಿಕೊಂಡು, ಎರಡೆರಡು ಬಾರಿ ನೋಡಿಕೊಂಡು ಟೇಬಲ್ ಡ್ರಾವರಿನ ಒಂದು ಮೂಲೆಯಲ್ಲಿ ಚಿಕ್ಕ ಲಕೋಟೆಯಲ್ಲಿ ಹಾಕಿ ಬಚ್ಚಿಟ್ಟೆ. ಬಹುಕಾಲ ಅದು ಅಲ್ಲೇ ಇತ್ತು. ಆನಂತರ ಯಾರೋ ಒಬ್ಬರು ಹಳೆ ನಾಣ್ಯ ಸಂಗ್ರಹಿಸುವವರು ಬಂದಾಗ – ಅವರಿಗೆ ಕೊಟ್ಟುಬಿಟ್ಟೆ. ಅದು ಆಂಗ್ಲರ ಆಡಳಿತ ಕಾಲದ ವಿಕ್ಟೋರಿಯಾ ರಾಣಿ ಛಾಪಿನ ನಾಣ್ಯವಾಗಿತ್ತು!

ಮುಸ್ಸಂಜೆಯ ಸಂಭ್ರಮ

ಮೊದಲನೇ ಗಿರಾಕಿಯ ಹೆಸರನ್ನು ರಿಜಿಸ್ಟರ್‌ನಲ್ಲಿ ನಮೂದಿಸಿದವನೇ ಆಸೆಯ ಕಣ್ಣುಗಳಿಂದ ರಸ್ತೆಯತ್ತ ಬಾರಿ ಬಾರಿ ದಿಟ್ಟಿಸತೊಡಗಿದೆ... ಕಣ್ಣಿನ ರೆಪ್ಪೆಗಳು ಮುಚ್ಚಿ ತೆರೆದು – ಮುಚ್ಚಿ ತೆರೆದು ನೋವಾಯಿತೇ ವಿನಾ 'ಗಿರಾಕಿ'ಗಳು ಯಾರೂ ಬಂದದ್ದು ಗೋಚರಿಸಲಿಲ್ಲ.

ಮತ್ತೊಮ್ಮೆ ಶಾಲೆಯ ಗಂಟೆ ಜೋರಾಗಿ ಬಾರಿಸಿದ್ದು ಕೇಳಿಸಿತು. ಶಾಲೆ ಬಿಟ್ಟಿತು ಎಂಬ ಸಂತೋಷದಿಂದ ಜೋರಾಗಿ ಕಿರುಚುತ್ತ, ನಗುತ್ತ, ನೆಗೆಯುತ್ತ, ಕುಪ್ಪಳಿಸುತ್ತ ಪುಸ್ತಕದ ಚೀಲವನ್ನು ಬೆನ್ನ ಮೇಲೆ ತೂಗಹಾಕಿಕೊಂಡು ಮಕ್ಕಳು ಮನೆ ಕಡೆಗೆ ಮುಖ ಮಾಡಿದರು. ಕೆಲವು ಮಕ್ಕಳು ಕ್ಲಿನಿಕ್ ಕಡೆಗೆ ದೃಷ್ಟಿ ಹಾಯಿಸಿ, ಏನೋ ಕಿಸಿಪಿಸಿ ಮಾತಾಡಿಕೊಳ್ಳುವುದೂ ನಡೆಯಿತು. ಒಬ್ಬ ತುಂಟ ಹುಡುಗ ಮಾತ್ರ 'ಡಾಮರ ಕಿಣಿ' ಎಂದು ನಾಮಫಲಕವನ್ನು ಓದಿಯೇಬಿಟ್ಟ! (ಡಾಮರ ಎಂದರೆ, ರಸ್ತೆಗೆ ಹಾಕುವ ಡಾಂಬರು ಅರ್ಥಾತ್ ಕಪ್ಪು ಟಾರು). ಇನ್ನೊಂದಿಷ್ಟು ಹೊತ್ತು ಕಳೆದಾಗ ಶಾಲೆಯ ಕೆಲವು ಅಧ್ಯಾಪಕರು ಬಂದು, ಕೈಕುಲುಕಿ, ಶುಭಾಷಯ ಹೇಳಿ ಹೋದರು. ಊರಿನ ಒಬ್ಬಿಬ್ಬ ಹಿರಿಯರು ಸಹ ಬಂದು, 'ಹ್ಯಾಗಿದೆ (ಆಸುಪತ್ರೆ) ಅಂತ ನೋಡೋದಕ್ಕಷ್ಟೇ ಬಂದದ್ದು ಹೆ ಹೆ ಹೆ' ಎಂದು ಹೇಳಿ ಬಂದ ದಾರಿಗೆ ಸುಂಕವಿಲ್ಲ ಎಂದುದನ್ನು ನೆನಪು ಮಾಡಿಕೊಂಡರು. ಅದಕ್ಕೂ ಮೊದಲು ಕಪಾಟುಗಳಲ್ಲಿ ಆಕರ್ಷಕವಾಗಿ ಜೋಡಿಸಿಟ್ಟಿದ್ದ ಔಷಧಿ ಬಾಟಲಿಗಳನ್ನೂ, ಕೆಲವೊಂದು ಚಿಕಿತ್ಸಾ ಸಲಕರಣೆಗಳನ್ನೂ ನೋಡಿ ನೋಡಿ ಆಶ್ಚರ್ಯಪಟ್ಟರು ಎನ್ನಬೇಕು. 'ಬೇಯರ್ ಕಂಪೆನಿ'ಯ 3 ಅಡಿ ಎತ್ತರದ ಹವಾಮಾನ ಸೂಚಕ 'ಬೆರೋಮೀಟರ್'ನ್ನು (ಗೋಡೆಗೆ ತೂಗಹಾಕಿದ್ದನ್ನು) ಕೈಯಿಂದ ಮುಟ್ಟಿ ಮುಟ್ಟಿ ನೋಡಿದರು. ಭಾರ ನೋಡುವ ಚಿಕ್ಕ 'ಮೆಶಿನ್'ನ ಮೇಲೆ ಕಾಲು ಜೋಡಿಸಿ ನಿಂತು ತಮ್ಮ ತಮ್ಮ ತೂಕವನ್ನು ತಿಳಿದುಕೊಂಡು ಸಂತೋಷಪಟ್ಟರು.

ಮೊದಲ ಕುಳವಾರು

ಹಾಗೂ ಹೀಗೂ ಸೂರ್ಯ ಪಡುವಣ ಅಂಚಿಗೆ ತಲಪುವ ಸಮಯಕ್ಕೆ ಸರಿಯಾಗಿ – ತನ್ನ ತಂದೆಯನ್ನು ಕೈ ಹಿಡಿದುಕೊಂಡು ನಿಧಾನವಾಗಿ ನಡೆಸಿಕೊಂಡು ಬಂದು ಕ್ಲಿನಿಕ್‌ನ್ನು ಪ್ರವೇಶಿಸಿದ ಚನಿಯಪ್ಪು. ಚನಿಯಪ್ಪು ನಮ್ಮ ನೆರೆಮನೆಯ ರಾಮಕೃಷ್ಣ ಭಟ್ಟರ ಒಕ್ಕಲು (ಖಾಯಂ ಕೂಲಿ) ಮನುಷ್ಯ. ಒಮ್ಮೊಮ್ಮೆ ನಮ್ಮ ತೋಟದ ಕೆಲಸಕ್ಕೂ ಬರುತ್ತಿದ್ದ. ಸುಮಾರು ನನ್ನದೇ ವಯಸ್ಸು. ಇಷ್ಟರಲ್ಲೇ 4 ಮಕ್ಕಳ ತಂದೆ; ಹೆಂಡತಿ, ಅಪ್ಪ ಅಮ್ಮ ಅಂತ ಏಳೆಂಟು ಜನರ ಸಂಸಾರ!

'ಅಪ್ಪನಿಗೆ 8-10 ದಿವಸಗಳಿಂದ ಜ್ವರ - ಹಗಲೆಲ್ಲ ಚೆನ್ನಾಗಿಯೇ ಇರ್ತಾನೆ. ರಾತ್ರೆ ಆಯಿತು ಅಂದ್ರೆ ಶುರು - 'ನೆರಕ್ಕು'ವುದು, ಚಳಿ ನಡುಕ - ಏನೆಲ್ಲಾ ತೊಂದರೆ. ನಮಗೆ ಯಾರಿಗೂ ನಿದ್ರೆಯೇ ಇಲ್ಲ. ವಾರಲಾಗಾಯ್ತು ಹೀಗೇ ಆಗಿದೆ ಸಾರ್ - ಏನು ಮಾಡಲಿ ಹೇಳಿ. ನೀವು 'ಠಮ್ಮನೆ' ಗುಣ ಆಗುವಂಥಾ ಮಾತ್ರೆಯೋ - ಮದ್ದೋ ಕೊಟ್ಟರೆ ತುಂಬಾ ಉಪಕಾರವಾಗುತ್ತದೆ' ಎಂಬರ್ಥದಲ್ಲಿ ತನ್ನ ಅಳಲನ್ನು ತೋಡಿಕೊಂಡ. ರೋಗಿಯನ್ನು ಪರೀಕ್ಷೆ ಮಾಡಿದೆ. ವಿವರವನ್ನೆಲ್ಲ ಕೇಳಿದ ಮೇಲೆ 'ಮಲೇರಿಯ' ಅಂತ ಖಚಿತವಾಯಿತು. 'ಜ್ವರಾರಿ' ಕಂಪೆನಿಯ 3 ಮಾತ್ರೆ, ಮೂರು ಹೊತ್ತಿನ 'ಪಂಚತಿಕ್ತ ಕಷಾಯ' ಕೊಟ್ಟು ಮರುದಿನ ಸಂಜೆ ಬಂದು ಹೇಗಿದೆ ಅಂತ ಹೇಳು. ನೋಡೋಣ, ಕಮ್ಮಿ ಆಗುತ್ತದೆ ಮೂರೂ ಮಾತ್ರೆಗಳನ್ನು ಒಂದೇ ಬಾರಿ ನುಂಗಬೇಕು ಎಂದು ಹೇಳಿ ಧೈರ್ಯ ತುಂಬಿದೆ.

ತನ್ನ ಹರಿದ ಅಂಗಿಯ ಜೇಬಿನಲ್ಲಿ ತಡಕಾಡಿ ಒಂದಿಷ್ಟು ಚಿಲ್ಲರೆ ಹಣವನ್ನು ತೆಗೆದು ಟೇಬಲ್ ಮೇಲೆ ಇರಿಸಿ ಕೈಮುಗಿದ. 'ಬಿಲ್' ಎಷ್ಟೋ ಗೊತ್ತಿಲ್ಲ. ನನ್ನ ಹತ್ರ ಉಳಿದದ್ದು ಇಷ್ಟೇ' ಎಂದು ಕೈಮುಗಿದ. ನಾನು 'ಸರಿ' ಎಂದು ತಲೆ ಅಲ್ಲಾಡಿಸಿದೆ. ಮತ್ತೊಮ್ಮೆ ಕೈಮುಗಿದು ಅಪ್ಪ-ಮಗ ಇಬ್ಬರೂ ಕ್ಲಿನಿಕ್‌ನಿಂದ ಹೊರಗೆ ಕಾಲಿಟ್ಟರು. ಕತ್ತಲಾವರಿಸುತ್ತಿದ್ದುದನ್ನು ಗಮನಿಸಿ ಟೇಬಲ್ ಮೇಲೆ ಇರಿಸಿದ್ದ ದೊಡ್ಡ 'ಲ್ಯಾಂಪ್'ನ್ನು ಉರಿಸಿ, ಬತ್ತಿಯನ್ನು ಎತ್ತರಿಸಿದೆ. ಆಗ ಗೋಚರಿಸಿತು ಚನಿಯಪ್ಪು ಟೇಬಲ್ ಮೇಲೆ ಇಟ್ಟು ಹೋದ ಔಷಧಿಯ ಕ್ರಯ. ಆ ಚಿಲ್ಲರೆಯನ್ನು ಎಣಿಸಿ ನೋಡಿದೆ - 10 ಆಣೆಗಳು... ಅಂದಿನ ದಿನಗಳಲ್ಲಿ ದಿನಗೂಲಿ 1 ರೂಪಾಯಿ... ಚನಿಯಪ್ಪು ಅಂದಿನ ಕೂಲಿಯಲ್ಲಿ 'ಅಪ್ಪನ' ಔಷಧಿಗೆ 10 ಆಣೆ ಕೊಟ್ಟು ಉಳಿದ 6 ಆಣೆಯಲ್ಲಿ ಅಕ್ಕಿ-ಉಪ್ಪು ಮೆಣಸು ಖರೀದಿಸಿ ತೆಗೆದುಕೊಂಡು ಹೋದರೇನೇ ರಾತ್ರೆ ಅವನ ಮನೆಯಲ್ಲಿ ಒಲೆ ಉರಿಯುತ್ತದೆ ಎಂಬ ಸತ್ಯ ನನಗೆ ಹೊಳೆದಾಗ ಮನಸ್ಸು ಚುರುಕ್ ಎಂದಿತು. ಹಣವನ್ನು ಡ್ರಾವರಿನ ಒಳಗೆ ಇರಿಸಿದ್ದ ಒಂದು ಚಿಕ್ಕ ಕೈಪೆಟ್ಟಿಗೆಗೆ ಸೇರಿಸಿದೆ.

ಪಾದೆ ಆಸುಪತ್ರೆ - ಹತ್ತಾಣೆ ಡಾಕ್ಟರು

ಹೊರಗೆ ಕತ್ತಲು ಆವರಿಸಿತು. ಇನ್ನೊಂದಿಬ್ಬರು ಒಳಗೆ ಬಂದರು. ಪಿಸು ಮಾತಿನಲ್ಲೇ 'ಡಾಕ್ಟರ ಪೀಸು ಎಷ್ಟು, ಎಷ್ಟಾಯಿತು?' ನಾನೇನೂ ಕೇಳಲಿಲ್ಲ. ಒಂದು ದಿನದ ಮದ್ದು 3 ಹೊತ್ತಿನ ಮಾತ್ರೆ ಕೊಟ್ಟಿದ್ದಾರೆ. ನಾನು ಹತ್ತಾಣೆ ಟೇಬಲ್ ಮೇಲೆ ಇಟ್ಟು ಕೈಮುಗಿದೆ' 'ಓ... ಹೋ... ಪಾದ್ರೆ ಆಸುಪತ್ರೆ - ಹತ್ತಾಣೆ ಡಾಕುಟ್ರು' ಎಂಬ ಪಿಸುಮಾತು ನನ್ನ ಕಿವಿವರೆಗೂ ತಲುಪಿತು. ಮುಂದೆ ಅದೇ ಖಾಯಂ ಆಯಿತು - ನನ್ನ ಹೆಸರಾಗಲಿ, ಎಲ್.ಎ.ಎಮ್.ಎಸ್. ವೈದ್ಯ ಪದವಿಯಾಗಲಿ,

ಗ್ರಾಮೀಣ ಕ್ಲಿನಿಕ್ ಆಗಲಿ – ಯಾವುದೂ ಗಣ್ಯಕ್ಕೆ ಬರಲಿಲ್ಲ; ಪಾದೆ ಆಸುಪತ್ರೆ ಹತ್ತಾಣೆ ಡಾಕುಟ್ರು' ಎಂಬುದೇ ಖಾಯಂ ಆಯಿತು.

ಹೀಗೆ ಜನತಾ ಜನಾರ್ದನರಿಂದ ಪುನರ್ನಾಮಕರಣವಾಯಿತು ಮೊದಲದಿನವೇ.

ಮುಂದಿನ ಒಂದೆರಡು ಗಳಿಗೆ – 'ಬ್ಯಿಸೀಟೈಮ್. ಆಸುಪತ್ರೆಯಲ್ಲಿ ಜನ ದಿಮಿಕ್ಕಿದ್ದೇ ದಿಮಿಕಿದ್ದು (ಸಣ್ಣ ಜನಸಂದಣಿ ಜಮಾಯಿಸಿತ್ತು).

'ಗಡಿಎಣ್ಣೆ ಒಂದೆಂಟಾಣೆಗೆ ಕೊಡಿ ಡಾಕುಟ್ರೇ' (ಪ್ರಸಿದ್ಧ ತ್ಯಾಂಪಣ್ಣ ಭಂಡಾರಿಯವರ ನೋವು ಶಾಮಕ ತೈಲ) 'ಜಂತು ನಾಶಕ ಪುಡಿ ಉಂಟೋ – ಇದ್ದರೆ ನಾಲ್ಕು ಕಟ್ಟು ಬೇಕಿತ್ತು' (ಬೆಳಗಾಂವಿಯ 'ಸ್ಟಾರ್' ಕಂಪೆನಿಯ ಮನೆಮದ್ದು – ಮಕ್ಕಳ ಹೊಟ್ಟೆಹುಳು (Roundworms) ಔಷಧಿ ಪೊಟ್ಟಣ). ಒಂದು ಬಾಟ್ಲಿ 'ಕೇಸ್ರಿ ಎಣ್ಣೆ' ಬೇಕು (ಕ್ಯಾಸ್ಟರ್ ಆಯಿಲ್ ಭೇದಿ ಎಣ್ಣೆ)... 'ನವಜೀವಾತು' ಇದ್ದರೆ ಒಂದು ಬಾಟ್ಲಿ ಕೊಡಿ. ಇವತ್ತೇ ಸರಿ – ಇಲ್ಲವಾದರೆ ಇನ್ನೊಂದು ವಾರದಲ್ಲಿ ತರಿಸಿಕೊಟ್ಟರೂ ಸಾಕು; ಬಾಣಂತನಕ್ಕೆ 8–10 ದಿನ ಬೇಕು ಅಂತ ಮನೆಯಲ್ಲಿ ಹೇಳಿದ್ದಾರೆ. ನೀವು ಮಾತ್ರ ಖಾತ್ರಿ ತರಿಸಿಕೊಡಬೇಕು ನೋಡಿ... (ಮಂಗಳೂರಿನ ವೈದ್ಯ ಭೂಷಣ ಎಂ.ವಿ. ಶಾಸ್ತ್ರಿಗಳ ಬಾಳಂತಿ ಕಷಾಯ)... ನಮಗೆ ಒಂದು ಸ್ಟ್ರಾಂಗ್ ಟಾನಿಕ್ 'ಊಚುಮಾಲು' ಇದ್ರೆ ಕೊಡಿ ನೋಡುವ...'

ಹೀಗೆ ನಾನಾ ಬಗೆಯ ಜನಗಳು; ನಾನಾ ವಿಧದ ಬೇಡಿಕೆಗಳು – ಎಲ್ಲವನ್ನೂ ಸಾವಧಾನದಿಂದಲೇ ಕೇಳಿಕೊಂಡು ಅವರವರ 'ಇಷ್ಟಾರ್ಥ' ಪೂರೈಸಿ, ಹಣ ಪಡೆದುಕೊಂಡು – ಇನ್ನೇನು ಕ್ಲಿನಿಕ್ 'ಕ್ಲೋಸ್' ಮಾಡಬೇಕು ಅಂತ ಅಂದುಕೊಳ್ಳುವಷ್ಟರಲ್ಲಿ ರಸ್ತೆಯಿಂದಲೇ ದೊಡ್ಡ ಧ್ವನಿಯಲ್ಲಿ 'ಡಾಕ್ಟ್ರೇ – ಆಸ್ಪತ್ರೆ ಬಾಗ್ಲು ಹಾಕುವ ಟೈಮ್ ಆಯ್ತೂಂತ ಕಾಣುತ್ತದೆ – ಒಂದು ಗಳಿಗೆ ತಡೆಯಬೇಕು – ಅರ್ಜೆಂಟ್ ನಮ್ಮಲ್ಲಿಗೆ ಬರಬೇಕು' ಎಂಬ ಅಶರೀರವಾಣಿ ಕೇಳಿಸಿತು. ಎರಡು ನಿಮಿಷಗಳಲ್ಲಿ ಹೊಳೆಕರೆ ಶಂಭಟ್ಟರು ಪ್ರತ್ಯಕ್ಷ!

ಮನೆಭೇಟಿ – ವಿಜಿಟ್‌ಪೀಸು ಉಂಟು...

ಕತ್ತಲು (ರಾತ್ರಿ) ಗಂಟೆ ಎಂಟು. ದಿನವಿಡೀ ಕಾದು ಕಾದು 'ನೊಣ ಹೊಡೆಯುತ್ತ' ಕುಳಿತಿದ್ದು ಸಾರ್ಥಕವಾಯಿತು ಎನ್ನುವ ಹಾಗೆ ಹೊತ್ತು ಕಂತಿದ ಮೇಲೆ 'ಮಸ್ತ್' ಗಿರಾಕಿಗಳು ಬಂದದ್ದರಿಂದ ಸಂತೋಷವೂ ಆಯಿತು. ಆಯಾಸವೂ ಆಗಿತ್ತು. ಇನ್ನೇನು 'ದಿನಚರಿ' ಮುಗಿಸಿ ಮನೆ ಸೇರಿಕೊಂಡೇನು ಎನ್ನುವಷ್ಟರಲ್ಲಿ ಬಂತು ಈ ಮನೆಭೇಟಿ! ಎರಡು ಮೈಲು ಹೋಗಲು – ಎರಡು ಮೈಲು ಬರಲು

'ನಟರಾಜ ಸರ್ವೀಸೇ ಗತಿ! (ಬರೀ ಕಾಲ್ನಡಿಗೆ) ಹಾಗಂತ, ಬಾಗಿಲಿಗೆ ಬಂದ ಭಾಗ್ಯಲಕ್ಷ್ಮಿಗೆ 'ಬೇಡ' ಅಂತ ಹೇಳಲಿಕ್ಕಾಗುತ್ತದೆಯೇ? ಲೇಟಾಗಿ ಬಂದವರಿಗೆ 'Late Fee' ಹಾಕುವ ಕ್ರಮ ಇದ್ದಿದ್ದರೆ ಎಷ್ಟು ಚೆನ್ನಾಗಿರುತ್ತಿತ್ತು ಅಲ್ವಾ? ಅಂತೆಲ್ಲ ಮನಸ್ಸಿನಲ್ಲೇ ಮಂಡಿಗೆ ಮೆಲ್ಲುತ್ತ 'ಕಿಟ್ ಬ್ಯಾಗನ್ನು' ರೆಡಿ ಮಾಡಿ, ಭಟ್ಟರ 'ತುಂಡುಗುದಿಗೆ ಜವ್ವನಿಗ' (ಅಂಗರಕ್ಷಕ)ನ ಕೈಗೆ ಕೊಟ್ಟು ಹೊರಟೇ ಬಿಟ್ಟೆ.

ಮುಂದಿನ ಕತೆಯನ್ನು ನಾಲ್ಕೇ ವಾಕ್ಯಗಳಲ್ಲಿ ಹೀಗೆ ಸಂಕ್ಷೇಪಿಸಬಹುದು: ಭಟ್ಟರ ಶ್ರೀಮತಿಯವರಿಗೆ ತಿಂಗಳಿಗೆ ಎರಡು ಬಾರಿ 'ಇಂಜೆಕ್ಷನ್' ಕೊಡಿಸುವುದು ಬಹಳ ದಿವಸಗಳಿಂದ ನಡೆದುಕೊಂಡು ಬಂದಿದೆ... ಔಷಧಿ (ಚುಚ್ಚುಮದ್ದು), 'ಇಂಜೆಕ್ಷನ್ ಸಿರೆಂಜ್', ಸೂಜಿ, ಹತ್ತಿ, 'ಸ್ಪಿರಿಟ್' – ಎಲ್ಲವನ್ನೂ 'ರೆಡಿ' ಇಟ್ಟಿದ್ದು ಚುಚ್ಚೋದಷ್ಟೇ ನನ್ನ ಕೆಲಸ ಡಾಕ್ಟರನಾದ್ದಕ್ಕೆ!... 5 ರೂಪಾಯಿ ನೋಟನ್ನು ಕಿಸೆಗೆ ತುರುಕಿಕೊಂಡು ಕ್ಲಿನಿಕ್‌ನತ್ತ ಮುಖ ಮಾಡಿದೆ. ಭಟ್ಟರ 'ಆಳು' ಬ್ಯಾಗ್ ತಂದು ಕೊಟ್ಟು 'ಹಲ್ಲುಬೇನೆಗೆ ಒಂದು ಮಾತ್ರೆ' ಕೇಳಿ ತೆಗೆದುಕೊಂಡು ಹೋದ. ನಾನು ದಿನದ ಕೊನೇ ರೋಗಿಯ ಹೆಸರು ಇತ್ಯಾದಿ ರಿಜಿಸ್ಟರ್‌ನಲ್ಲಿ ಬರೆದು, ಜಮೆಯಾದ ಹಣವನ್ನು 'ಟೋಟಲ್' ಮಾಡಿ, ನಗದಿಯನ್ನು ಎಣಿಸಿ ನೋಡಿದೆ: 38 ರೂಪಾಯಿ 8 ಆಣೆ.

'ಪರವಾಗಿಲ್ಲವೇ' ಅಂತ ಅಂದುಕೊಂಡು, ನನಗೆ ನಾನೇ 'ಭೇಷ್' ಎನ್ನುತ್ತಾ ಕೈಕುಲುಕಿಕೊಂಡು, ಮನೆಯತ್ತ ಬೀಸುಗಾಲು ಹಾಕಿದೆ.

ಮರುದಿನ ಉತ್ಸಾಹದಿಂದ ಕ್ಲಿನಿಕ್ ಬಾಗಿಲು ತೆರೆದೆ–ಅಲ್ಲ; ಅಷ್ಟರಲ್ಲೇ ಹಿಂದಿನ ದಿನವೇ ನೇಮಕ ಮಾಡಿಕೊಂಡಿದ್ದ ಹುಡುಗನೊಬ್ಬ ಬಾಗಿಲು ತೆರೆದ, ಮೇಜು–ಕಪಾಟು–ಕುರ್ಚಿಗಳನ್ನೆಲ್ಲ ಒರಸಿ ಕಳಕಳ ಹೊಳೆಯುವಂತೆ! ಮಾಡಿ ಕುಳಿತಿದ್ದ. ಮುದುಕಿ ಎಂಕಮ್ಮ ನೆಲ ಗುಡಿಸಿ, ಒರಸಿ, ಕುಡಿಯುವ ನೀರು ತಂದು..... ಇರಿಸಿದ್ದಳು! ಹೀಗಾಗಿ ಕ್ಲಿನಿಕ್ ಈಗ ಸುಸಜ್ಜಿತ 'ಆಸುಪತ್ರೆ'ಯೇ ಆಯಿತು. ಪೇಶೆಂಟುಗಳನ್ನು ಎದುರು ನೋಡುತ್ತ ಕುಳಿತೆ. ಒಬ್ಬಿಬ್ಬರು 'ಚಿಲ್ಲರೆ ಗಿರಾಕಿ'ಗಳು ಬಂದು ಹೋದರೇ ವಿನಾ 'ರೋಗಿಗಳ ಸಂತಾನ'ದ ಸುಳಿವೇ ಇಲ್ಲ. ಆದರೂ ಎದೆಗುಂದದೆ ಹಿಂದಿನ ದಿನದ ಅನುಭವದಿಂದ ಸಂಜೆಯನ್ನು ಎದುರು ನೋಡುವುದಕ್ಕೆ ಮಾನಸಿಕವಾಗಿ ಸಿದ್ಧನಾದೆ.

ಗಳಿಕೆಯ ಹೆಗ್ಗಳಿಕೆ

ಬೆಂಗಳೂರಿನ 'ಹೌಸ್‌ಸರ್ಜನ್' ಕೋರ್ಸ್‌ನ ಕೊನೆಯಲ್ಲಿ ಒಂದು ಪಂಚಮಾಸಿಕ ಯೋಜನೆಯನ್ನು ಮನಸ್ಸಿನಲ್ಲಿ ರೂಪಿಸಿಕೊಂಡಿದ್ದೆ. ಅದರಲ್ಲಿ

ಗ್ರಾಮೀಣ ಕ್ಲಿನಿಕ್‌ಗೆ ಪ್ರಥಮ ಆದ್ಯತೆ. ಎರಡನೆಯದು 'ತಿಂಗಳ ಆಮದಾನಿ (ಆದಾಯ) ಕನಿಷ್ಠ 50 ರೂಪಾಯಿ – ಗರಿಷ್ಠ ಎಂದರೆ ದಿನಕ್ಕೆ 50 ರೂಪಾಯಿ' ಎಂದು ನಾನೇ ಇತಿಮಿತಿ ಕಲ್ಪಿಸಿಕೊಂಡು ಕಾರ್ಯಪ್ರವೃತ್ತನಾಗುವವನಿದ್ದೆ (ಯಾರಿಗೂ ಈ ವಿಷಯ ಬಾಯಿಬಿಟ್ಟಿರಲಿಲ್ಲ). ಈ ಇತಿ–ಮಿತಿಯ ತೀರ್ಮಾನಕ್ಕೆ ಬರಲು ಒಂದು ಕಾರಣವಿತ್ತು; ಬೆಂಗಳೂರಿನ ಹೌಸ್‌ಸರ್ಜನ್ ದಿನಗಳಲ್ಲಿ, ವಿಕ್ಟೋರಿಯಾ ವಾಣೀವಿಲಾಸ ಮೊದಲಾದ ಸರಕಾರಿ ಆಸ್ಪತ್ರೆಗಳಲ್ಲಿ ಪ್ರತ್ಯಕ್ಷ ಅನುಭವ ಗಳಿಸಬೇಕೆಂಬ ನಿಯಮದಂತೆ, ಮುಂಜಾನೆ ಹೋಗಿ ರಿಜಿಸ್ಟರ್‌ನಲ್ಲಿ ರುಜು ಗುದ್ದಿದರೆ ಆಯಿತು ಅಷ್ಟೇ. ಅಂಥಾ ದೊಡ್ಡ ಸರಕಾರಿ ಆಸ್ಪತ್ರೆಗಳಲ್ಲಿ ನಮ್ಮನ್ನು ಹೇಳುವವರು ಕೇಳುವವರು ಯಾರೂ ಇರಲಿಲ್ಲ! ದೊಡ್ಡ ದೊಡ್ಡ ಡಾಕ್ಟರುಗಳಿಗಂತೂ 'ನಾವು' ಇದ್ದೇವೆ ಎಂಬುದನ್ನು ಗಮನಿಸುವ ವ್ಯವಧಾನವೂ ಇರಲಿಲ್ಲ – ಹೀಗಾಗಿ ನಾವು ನಮ್ಮಷ್ಟಕ್ಕೇ ನೋಡಿ – ಕೇಳಿ – ಪರೀಕ್ಷಿಸಿ ಅಷ್ಟಿಷ್ಟು 'ಅನುಭವ' ಗಳಿಸಿಕೊಳ್ಳುತ್ತಿದ್ದೆವು (ಆಗ ತಿಂಗಳಿಗೆ ನಮಗೆ ದೊರಕುತ್ತಿದ್ದ 'ಸ್ಟೈಪೆಂಡ್' ಎಷ್ಟು ಗೊತ್ತಾ! 30 ರೂಪಾಯಿ) ಆ ಹಣಕ್ಕಾಗಿಯಾದರೂ ಉದ್ದದ ಬಿಳಿ ಅರೆ ತೋಳಿನ ಕೋಟು ಧರಿಸಿ ಆಸ್ಪತ್ರೆಯ ವಾರ್ಡ್‌ಗಳ ಅಕ್ಕಪಕ್ಕದಲ್ಲಿ ಸ್ಟೆತಸ್ಕೋಪ್ ಕೈಯಲ್ಲಿ ಹಿಡಿದುಕೊಂಡು, ಹಣಿಕಿ ಇಣಿಕಿ... ನೋಡುತ್ತ ಮಧ್ಯಾಹ್ನವರೆಗೆ ಕಾಲ ಹಾಕಬೇಕಾಗಿತ್ತು. ಸಂಜೆ ಮುಂದೆ ಅತ್ತಕಡೆ ತಲೆಕೂಡ ಹಾಕುತ್ತಿರಲಿಲ್ಲ!

ಗೌರವಗುರೂಪದೇಶ

ನನ್ನ ಸಹಪಾಠಿ ಸೀತಾರಾಮ ಉಪಾಧ್ಯಾಯ ಒಂದು ದಿನ ಹೊಸ ಸುದ್ದಿ ತಂದ. ಸಂಜೆ ಹೊತ್ತು 'ಬ್ಯುಸೀ ಪ್ರಾಕ್ಟೀಸ್' ಇರುವ ಡಾಕ್ಟರ್‌ಗಳ ಕ್ಲಿನಿಕ್ ಸೇರಿಕೊಂಡರೆ ಒಂದಿಷ್ಟಾದರೂ ಅನುಭವ ಪಡೆದುಕೊಳ್ಳಬಹುದು. ಅಂಥಾ ಅವಕಾಶ ನೀಡುವ ಡಾಕ್ಟರುಗಳ ಒಂದು ಸಣ್ಣ ಪಟ್ಟಿಯನ್ನೇ ನನ್ನ ಮುಂದಿಟ್ಟ. ಚಿಕ್ಕಪೇಟೆ ಸಿಟಿಮಾರ್ಕೆಟ್ ಸಂದಿಯಲ್ಲಿ ಅಂಥದ್ದೊಂದು ಕ್ಲಿನಿಕ್ ಇತ್ತು. ಡಾ॥ ಕೃಷ್ಣಸ್ವಾಮಿಯವರ 'ಇಲೈಟ್ ಕ್ಲಿನಿಕ್'. ಹಳೇ ಕಟ್ಟಡ. ಧೂಳು ತುಂಬಿದ ವಾತಾವರಣ. ಆದರೆ ಸಾಕಷ್ಟು ರೋಗಿಗಳು ಬರುತ್ತಿದ್ದರು ಎಂಬುದರಿಂದ ಅವರ ಕ್ಲಿನಿಕ್‌ನಲ್ಲಿ ಅರೆಕಾಲಿಕ ಶಿಷ್ಯತ್ವ ಪಡೆದುಕೊಳ್ಳಲು ಸಿದ್ಧರಾದೆವು.

ಏನು ಕಾರಣವೋ ತಿಳಿಯದು – ಡಾ॥ ಕೃಷ್ಣಸ್ವಾಮಿಯವರಿಗೆ ನಮ್ಮಂಥಾ 'ಆಯುರ್ವೇದಿ'ಗಳ ಮೇಲೆ ಒಂದಿಷ್ಟು ಆಸಕ್ತಿ. ಜತೆಗೆ ಹಳ್ಳಿಗಳಿಂದ ಬಂದವರು ಎಂಬ ಕನಿಕರ! ಅವರು ಹಗಲೆಲ್ಲ ದೊಡ್ಡ ಖಾಸಗಿ ಆಸ್ಪತ್ರೆಗಳಲ್ಲಿ ಕೆಲಸ ಮಾಡುತ್ತಿದ್ದು ಸಂಜೆ 5 ರಿಂದ 8ರ ತನಕ ತನ್ನ 'ಪ್ರೈವೇಟ್' ಕ್ಲಿನಿಕ್‌ನಲ್ಲಿ ಇರುತ್ತಿದ್ದರು. ನಾವು ಪ್ರತಿನಿತ್ಯ ತಪ್ಪದೇ 5 ಗಂಟೆಗೆ ಎಲೈಟ್ ಕ್ಲಿನಿಕ್‌ನಲ್ಲಿ ಹಾಜರು ಇರುತ್ತಿದ್ದೆವು.

ಕೃಷ್ಣಸ್ವಾಮಿಯವರು ರೋಗಿಗಳನ್ನು ಸಂಪರ್ಕಿಸುವ, ಮಾತನಾಡಿಸುವ ಸೌಜನ್ಯಪೂರ್ಣ ರೀತಿ, ರೋಗದ ಪೂರ್ವಾಪರ ವಿಚಾರಿಸಿ ತಿಳಿದುಕೊಳ್ಳುವ ವಿಧಾನ, ರೋಗ ಪರೀಕ್ಷಾ ಕ್ರಮ, ಔಷಧಿ ಸಂಯೋಜನೆ, ಮಿತವಾದ ಚಾರ್ಜು – ಹೀಗೆ ವೈದ್ಯ ಜೀವನದ ವಿವಿಧ ಮುಖಗಳ ಸ್ಪಷ್ಟ ಪರಿಚಯ ನಮಗಾಯಿತು. ಇಷ್ಟೇ ಅಲ್ಲದೆ, ಪ್ರತಿದಿನ ರಾತ್ರಿ 8 ರಿಂದ 10 ಗಂಟೆಯವರೆಗೆ 2 ಗಂಟೆಗಳ ಕಾಲ ಮುಖ್ಯವಾದ ರೋಗಗಳ ಸಮಗ್ರ ಮಾಹಿತಿಯನ್ನು ಅತ್ಯಂತ ಸರಳವಾದ, ಸ್ಪಷ್ಟ ನುಡಿಗಳಲ್ಲಿ ಹೇಳುತ್ತಿದ್ದರು. ಅವರ ಈ ಔದಾರ್ಯಪೂರ್ಣ ವಿದ್ಯಾದಾನ ನಮಗೊಂದು ವರವೇ ಸರಿ! ಮುಂದೆ ಅವರು ಲಂಡನ್‌ಗೆ ಹೋಗಿ ಎಂ.ಆರ್.ಸಿ.ಪಿ. ಪಾಸ್ ಮಾಡಿಕೊಂಡು ಬಂದರೂ ತಮ್ಮ ಸರಳ ಚಿಕಿತ್ಸಾ ವಿಧಾನವನ್ನು ಮುಂದುವರಿಸಿಕೊಂಡೇ ಹೋದರಂತೆ.

ಇಲ್ಲಿ ಹೇಳಬೇಕಾದ ಅಂಶ ಇಷ್ಟು: ಡಾ॥ ಕೃಷ್ಣಸ್ವಾಮಿಯವರಿಗೆ ಕ್ಲಿನಿಕ್‌ನಲ್ಲಿ ದಿನದ ಕನಿಷ್ಠ ಸಂಪಾದನೆ 50 ರೂಪಾಯಿ (ಕನ್ಸಲ್ಟಿಂಗ್ ಫೀ ಇಲ್ಲವೇ ಇಲ್ಲ) ಹೆಚ್ಚೆನದೆಂದರೆ 100 ರೂಪಾಯಿ (ಅಷ್ಟಾದರೆ ಸಾಕು ತಾನು ತೃಪ್ತ – ಎನ್ನುತ್ತಿದ್ದರಂತೆ ಅವರು).

ನನ್ನ ನಿರ್ಧಾರಕ್ಕೆ – ಆದಾಯದ ಇತಿಮಿತಿಗೆ ಇದೇ ಮೂಲ ಮೌಲ್ಯಮಾಪನ. ನನ್ನ ಗ್ರಾಮೀಣ ಕ್ಲಿನಿಕ್‌ನ ಬಾಡಿಗೆ ತಿಂಗಳಿಗೆ 25/– ರೂ. ಇಬ್ಬರು ಅರೆಕಾಲೀಕ ಕೆಲಸಗಾರರ ಒಟ್ಟು ಸಂಬಳ 25/– ರೂ. ನನ್ನಲ್ಲಿ ಹೇಗೂ 3 ತಿಂಗಳ ಔಷಧಿ ಸ್ಟಾಕ್ ಇದೆ. ಅದು ಮುಗಿಯುವಷ್ಟರಲ್ಲಿ ಕನಿಷ್ಠ–ಗರಿಷ್ಠ ಮಿತಿಯ ಸಂಪಾದನೆಯಾಗಬೇಕು – ಎಂದರೆ ತಿಂಗಳ ಕನಿಷ್ಠ ಆದಾಯ 50/– ರೂ. ದಿನದ ಗರಿಷ್ಠ ಆದಾಯ 25/– ರೂ.ಗಳಾದರೆ ನಾನು ಗೆದ್ದಂತೆಯೇ ಸೈ! ಎಂದುಕೊಂಡವನಿಗೆ ಮೊದಲ ದಿನದ ಆದಾಯವು ದಿನದ ಗರಿಷ್ಠ ಆದಾಯದ ಮಿತಿಯನ್ನು ದಾಟಿ–ತಿಂಗಳ ಕನಿಷ್ಠ ಆಮದಾನಿಯ ಮಿತಿಯತ್ತ ದಾಪುಗಾಲು ಹಾಕುತ್ತಿದೆ – ಮನಸ್ಸು ಹುಚ್ಚೆದ್ದು ಹಾರಾಡುವುದು ಸಹಜ ತಾನೇ!

ಇಲೈಟ್ ಕ್ಲಿನಿಕ್‌ನಲ್ಲಿ ಡಾ॥ ಕೃಷ್ಣಸ್ವಾಮಿಯವರಿಂದ 5 ತಿಂಗಳ ಅವಧಿಯಲ್ಲಿ ನಾನು ಕಲಿತದ್ದು ಎಂಥಾ ಅಮೂಲ್ಯ 'ವೈದ್ಯಕೀಯ' ಎಂದರೆ – ಕಾಲೇಜಿನ 5 ವರ್ಷಗಳ ಕಾಲದಲ್ಲಿ ತಿಳಿದುಕೊಂಡಿದ್ದರ ಇಮ್ಮಡಿ–ನಾಲ್ಮಡಿ–ಅಲ್ಲ ಐದುಪಟ್ಟು ಹೆಚ್ಚು.

ಕ್ಲಿನಿಕ್‌ಗೆ ಬಂದ ರೋಗಿಗಳ ಜತೆಗೆ ಅಗತ್ಯವಾದ ಸಂವಾದ, ಸಮಗ್ರ ತಪಾಸಣೆ, ಖಚಿತವಾದ ರೋಗನಿಶ್ಚಯ, ಸೂಕ್ತ ಔಷಧೋಪಚಾರ ಮತ್ತು ರೋಗಿಗಳ ಪರಿವಾರದ ಮನಸ್ಸಿನಲ್ಲಿ ಗುಣವಾಗುವ ಭರವಸೆ ಮೂಡಿಸುವ ಕೌಶಲ್ಯವನ್ನು ಡಾ॥ ಕೃಷ್ಣಸ್ವಾಮಿಯವರಿಂದ ಕಲಿತೆ.

ಬ್ಯುಸೀ ಪ್ರಾಕ್ಟೀಸ್

ಕ್ರಮೇಣ ಹತ್ತಾಣೆ ಡಾಕ್ಟರ ಪಾದೆ ಆಸ್ಪತ್ರೆಗೆ ಬರುವ ರೋಗಿಗಳ ಸಂಖ್ಯೆ ಹೆಚ್ಚುತ್ತಾ ಹೋಯಿತು. ಗಳಿಕೆಯಲ್ಲೂ 'ಏರ್ತೆ' (ಏರಿಕೆ) ಸಹಜವಾಗಿ ಕಾಣಿಸಿಕೊಂಡಿತು. 'ಮಣಿ (ಯಾಣಿ')' ಎಂಬ ಉತ್ಸಾಹಿ ಯುವಕ ತಾನಾಗಿ ಬಂದು ಸಹಾಯಕನಾಗಿ ನಿಂತ. ಔಷಧಿಗಳ ಖರೀದಿ, ಲೆಕ್ಕಪತ್ರಗಳ ನಿರ್ವಹಣೆ, ಅಷ್ಟೇ ಅಲ್ಲದೆ ರೋಗಿಗಳ ಸುಖ ದುಃಖಗಳ ಬಗ್ಗೆ ಅತ್ಯಂತ ಸಹಾನುಭೂತಿಯಿಂದ ಮಾತನಾಡುವುದು ಇತ್ಯಾದಿಗಳನ್ನು ಅತ್ಯಲ್ಪ ಕಾಲದಲ್ಲೇ ಕರಗತ ಮಾಡಿಕೊಂಡು ನನ್ನ ಹೆಗಲಿನ ಭಾರವನ್ನು ಸಾಕಷ್ಟು ಪ್ರಮಾಣದಲ್ಲಿ ಇಳಿಸಲು ನೆರವಾದ. ಮಳೆಗಾಲ ಸ್ವಲ್ಪ ವಿಳಂಬವಾಗಿ ಪ್ರಾರಂಭವಾದರೂ ನಾಲ್ಕಾರು ದಿವಸಗಳ ತರುವಾಯ ಬಿಟ್ಟುಬಿಡದೆ ಸುರಿದ ಧಾರಾಕಾರದ ಮಳೆಯ ದೆಸೆಯಿಂದ 'ಫ್ಲೂ' ಜ್ವರ ತನ್ನೆಲ್ಲ ಕುಹಕ ಶಕ್ತಿಯಿಂದ ಕಾಳ್ಗಿಚ್ಚಿನಂತೆ ಪ್ರಸರಿಸಿದಾಗ ಪಾದೆ ಆಸ್ಪತ್ರೆ ಹತ್ತಾಣೆ ಡಾಕ್ಟರು (ಹಾಗ ಕಾಂಪೌಂಡರು ಮಣಿಗೂ ಕೂಡ) ಬಿಡುವಿಲ್ಲದಷ್ಟು ಕೆಲಸ. ರೋಗಿಗಳ ದಂಡೇ ದೌಡಾಯಿಸತೊಡಗಿತು. ಸುತ್ತಮುತ್ತಲಿನ ಎಲ್ಲಾ ಹಳ್ಳಿಗಳಲ್ಲಿ 'ಒಳ್ಳೇ ಕೈಗುಣ' ಎಂಬ ಮಾತು ಪ್ರಚಾರವಾಯಿತು.

ಪ್ರತಿಭಟನೆಯ ಕಂಕಣ

ಅಡ್ಯನಡ್ಕ ಮತ್ತು ಕನ್ಯಾನಗಳಲ್ಲಿ ಪ್ರಾಥಮಿಕ ವಿದ್ಯಾಭ್ಯಾಸದ ತರುವಾಯ ಪುತ್ತೂರಿನಲ್ಲಿ ಹೈಸ್ಕೂಲ್ ಸೇರಿದೆ. ಶಾಲೆಗೆ ಸುಲಭವಾಗಿ ಪ್ರವೇಶ ದೊರೆತರೂ ಹಾಸ್ಟೆಲ್ ಸೇರಿಕೊಳ್ಳಲು ಕಷ್ಟಪಡಬೇಕಾಯಿತು. ಮನೆಯ ಆರ್ಥಿಕ ಪರಿಸ್ಥಿತಿ ತೀರ ಕಂಗೆಟ್ಟಿದ್ದರೂ ಅಣ್ಣ ಪ್ರತಿ ತಿಂಗಳೂ ಹಾಸ್ಟೆಲ್ ಫೀಸ್ 10 ರೂಪಾಯಿ ಕಳಿಸುತ್ತಿದ್ದರು. ವಿದ್ಯಾರ್ಥಿ ಸಂಘ, ಸ್ಕೌಟ್ ದಳ, ತರುಣ ಸಮಾಜವಾದಿ ಸಂಘಟನೆ, ರಾಷ್ಟ್ರ ಸೇವಾ ದಳ, (ಡಾ॥ ಹರ್ಡೀಕರರ ಆರ್.ಎಸ್.ಡಿ.) ಇತ್ಯಾದಿ ವಿವಿಧ ಚಟುವಟಿಕೆಗಳಲ್ಲಿ ಉತ್ಸಾಹದಿಂದ ಪಾಲ್ಗೊಳ್ಳುತ್ತಿದ್ದೆ. ಸಣ್ಣಪುಟ್ಟ ಲೇಖನಗಳನ್ನು ಬರೆದು ಪ್ರಕಟಿಸಲು ಕಳುಹಿಸುತ್ತಿದ್ದೆ...ದ್ದೆ...ದ್ದೆ (ಓದಿನಲ್ಲೂ ತಕ್ಕಮಟ್ಟಿಗೆ ಚೆನ್ನಾಗಿಯೇ ಇರುತ್ತಿದ್ದೆ. ಹೈಸ್ಕೂಲಿನ ಕೊನೇ ವರ್ಷ ಎಸ್.ಎಸ್.ಎಲ್.ಸಿ. ಪರೀಕ್ಷೆಗೆ ಹೆಸರು ಕಳಿಸುವ ಮೊದಲು 'ಸೆಲೆಕ್ಷನ್' ಪರೀಕ್ಷೆ ನಡೆಸುತ್ತಿದ್ದರು. ಇದರಲ್ಲಿ (ಖಾಸಗಿ ಟ್ಯೂಷನ್ ಫೀ ಕೊಡಲಿಲ್ಲ ಎಂಬ ಕಾರಣಕ್ಕಾಗಿ) ಪ್ರಭಾವಶಾಲಿಯಾದ ಶಿಕ್ಷಕರೊಬ್ಬರ ಒತ್ತಡದಿಂದ ಮೂವರು ವಿದ್ಯಾರ್ಥಿಗಳ ಹೆಸರನ್ನು ಕೈಬಿಟ್ಟಿದ್ದರು. ಇದು ಅನ್ಯಾಯವೆಂದು ವಿದ್ಯಾರ್ಥಿಗಳು ಪ್ರತಿಭಟಿಸಿದರು. ಏರುಸ್ವರದಿಂದ ಪ್ರತಿಭಟನೆಯ ದನಿಯೆತ್ತಿದ ನಾನು ಮೊದಲನೆಯವನಾಗಿ ತರಗತಿಯಿಂದ ಹೊರನಡೆದೆ. ಶಾಲೆಯ ವಿದ್ಯಾರ್ಥಿ ವೃಂದವೇ

(ಸುಮಾರು 800 ಮಂದಿ) ತರಗತಿಗಳಿಂದ ಹೊರಬಂದರು. 3 ದಿನ ಪ್ರತಿಭಟನೆ ನಡೆಯಿತು. ಆಡಳಿತದ ದಾರವನ್ನು ದಾಳವಾಗಿ ಬಳಸಿ 'ವಿದ್ಯಾರ್ಥಿ ಮುಖಂಡ'ರೆಂಬವರನ್ನೆಲ್ಲ ಮಣಿಸಿ ಕ್ಷಮಾಪಣೆಪತ್ರ ಹಾಗೂ ಮುಚ್ಚಳಿಕೆ ಬರೆಸಿಕೊಂಡರು. ಅವರೆಲ್ಲಾ ಸ್ಥಳೀಯ ನಿವಾಸಿಗಳೇ ಆಗಿದ್ದು ಹೆತ್ತವರ ಮೂಲಕ ಹಾಕಿದ ಒತ್ತಡಕ್ಕೆ ಮಣಿಯಲೇಬೇಕಾಯಿತಂತೆ. ನಾನು ಮಾತ್ರ ಹೊರಗಿನವನಾಗಿದ್ದುದರಿಂದ ನಿರಾಕರಿಸಿದೆ. ಸತ್ಯಕ್ಕಾಗಿರುವ ಅಪಚಾರದ ಹಾಗೂ ಅನ್ಯಾಯದ ವಿರುದ್ಧ ಪ್ರತಿಭಟನೆ ಮಾಡಿದ್ದು ಸರಿ ಎಂದು ವಾದಿಸಿದೆ. ಕ್ಷಮಾಯಾಚನೆಗೆ ಒಪ್ಪಲಿಲ್ಲ. ಮುಚ್ಚಳಿಕೆ ಬರೆದುಕೊಡುವ ನೆಪ ಹೇಳಿ ಹೊರಗೆ ಹಾಕಿದ್ದೂ ಆಯಿತು. ಪುಸ್ತಕಗಳ ಗಂಟು, ಹಾಸುಹೊದಿಕೆಗಳ ಸುರುಳಿ ಹಿಡಿದುಕೊಂಡು ಅಕ್ಷರಶಃ ನಡುಬೀದಿಗೆ ಬಂದಾಗ, ಇಬ್ಬರು ಶಿಕ್ಷಕರು 'ಅಜ್ಜಿ ಬಿಡಾರ'ವೊಂದರಲ್ಲಿ ಊಟದ ಅನುಕೂಲತೆ ಕಲ್ಪಿಸಿದರು. ಗೆಳೆಯರಾದ ಕಜೆ ಈಶ್ವರ ಭಟ್ಟರೂ, ಹಾರ್ಪಕಜೆಯವರೂ ಹಗಲು ಓದುವುದಕ್ಕೆ ತಮ್ಮ ಕೊಠಡಿಯಲ್ಲಿ ಅವಕಾಶ ನೀಡಿದರು. ಹಳೆಯ ಕಟ್ಟಡವೊಂದರ ಜಗಲಿಯಲ್ಲಿ ಮಲಗಿ ರಾತ್ರಿಗಳನ್ನು ಕಳೆದೆ.

ಇಷ್ಟೆಲ್ಲಾ ಅಡೆತಡೆಗಳ ನಡುವೆಯೇ ಪರೀಕ್ಷೆಗೆ ಕುಳಿತೆ. ತಕ್ಕಷ್ಟು ಚೆನ್ನಾಗಿಯೇ ಬರೆದೆ. ಆದರೆ ಉತ್ತರ ಪತ್ರಿಕೆಯೊಂದರಲ್ಲಿ (ಇಂಗ್ಲಿಷ್ 2ನೇ ಭಾಗ) ರಿಜಿಸ್ಟರ್ ನಂಬರ್ ಬರೆಯುವದರಲ್ಲಾದ ಅಚಾತುರ್ಯದಿಂದ ಪರೀಕ್ಷೆಯ ಫಲಿತಾಂಶ ಪ್ರಕಟವಾದಾಗ ಪಾಸಾದವರ ಪಟ್ಟಿಯಲ್ಲಿ ನನ್ನ ಹೆಸರಿರಲಿಲ್ಲ.

ಮೈಸೂರಿಗೆ ಹೋದೆ-ಬಂದೆ

ಮನೆಯ ಆರ್ಥಿಕ ಪರಿಸ್ಥಿತಿ ಸುಧಾರಿಸಿರಲಿಲ್ಲ. ಖರ್ಚುವೆಚ್ಚಗಳು ಹೆಚ್ಚುತ್ತಲೇ ಇದ್ದವು. ಇಂಥಾ ಪರಿಸ್ಥಿತಿಯಲ್ಲಿ ವಿದ್ಯಾಭ್ಯಾಸವನ್ನು ಮುಂದುವರೆಸುವುದಕ್ಕೆ ಹೇಗೆ ಸಾಧ್ಯವೆಂದು ತಲೆಕೆರೆದುಕೊಳ್ಳುತ್ತಿದ್ದೆ. ಮೈಸೂರಿನಲ್ಲಿ ದರವರ್ಧವಾಗಿ ಊಟ, ವಸತಿಗಳನ್ನು ನೀಡುವ ಉಚಿತ ವಿದ್ಯಾರ್ಥಿನಿಲಯಗಳಿವೆ. ಖಾಸಗಿಯಾಗಿ ಬೇರೆ ಬೇರೆ ಪರೀಕ್ಷೆಗಳಿಗೆ ಕಟ್ಟಬಹುದು. ಟ್ಯೂಷನ್ ಹೇಳಿ ಕೈಖರ್ಚಿಗೆ ಹಣ ದೊರಕಿಸಿಕೊಳ್ಳಬಹುದು-ಇತ್ಯಾದಿಯಾದ ಗಾಳಿವರ್ತಮಾನ ಕೇಳಿ, ಕಿವಿ ನೆಟ್ಟಗೆ ಮಾಡಿಕೊಂಡು, ಮೈಸೂರಿಗೆ ಹೊರಟೇಬಿಟ್ಟೆ. ಕಿಸೆಯಲ್ಲಿ ಹತ್ತಿಪತ್ತು ರೂಪಾಯಿ, ಕೈಚೀಲದಲ್ಲಿ ಒಂದೆರಡು ಬಟ್ಟೆಗಳು-ಇಷ್ಟೆ ನನ್ನ ಜತೆಗಿದ್ದದ್ದು!

ನಮ್ಮೂರವರೊಬ್ಬರು ಮೈಸೂರಲ್ಲಿ ಚಿಕ್ಕ ವಾಚ್ ರಿಪೇರಿ ಅಂಗಡಿ ಇಟ್ಟುಕೊಂಡಿದ್ದರು. ಅವರ ನೆರವಿನಿಂದ ಒಂದು ಹೋಟೆಲಿನಲ್ಲಿ 'ಬಿಲ್

ಬರೆಯು'ವಂತಹ ಚಿಕ್ಕ ಪುಟ್ಟ ಕೆಲಸ ಮಾಡುವ ಅವಕಾಶ ಸಿಕ್ಕಿತು. ತಿಂಗಳೊಳಗೆ ಅಲ್ಲಿ ಮಾಲೀಕರ-ಕಾರ್ಮಿಕರ ನಡುವೆ ನಡೆದ ಜಗಳ ಓರ್ವ ಕೆಲಸಗಾರನನ್ನು ವಜಾಗೊಳಿಸುವ ಘಟ್ಟಕ್ಕೆ ತಲುಪಿತು. ಕಾರ್ಮಿಕರು ಹಠಾತ್ ಮುಷ್ಕರ ಹೂಡಿದರು. ನಾನೂ ಸೇರಿಕೊಂಡೆ. 8 ದಿನಗಳ ಅರೆ ಉಪವಾಸದ ನಂತರ 27 ದಿನಗಳ ಸಂಬಳದೊಂದಿಗೆ ಆ ಕೆಲಸದಿಂದ ಬಿಡುಗಡೆ ಆಯಿತು.

ನಾಲ್ಕಾರು ದಿನ ಸಂಜೆಯ ದಿನಪತ್ರಿಕೆ ಮಾರಿದೆ. ಕೈಗಾಡಿಯಲ್ಲಿ ಖಾರದ ತಿಂಡಿಗಳನ್ನಿಟ್ಟು ಮಾರುವವನೊಬ್ಬನ ಸಹಾಯಕನಾದೆ...ದೆ...ದೆ. ಇನ್ನೊಂಡೆರಡು ಕಡೆ ಬೇರೆ ಬೇರೆ ಉದ್ಯೋಗವೂ ಮಾಡಿದೆ. ಆರೋಗ್ಯ ಕೆಟ್ಟು 8–10 ದಿನ ಆಸ್ಪತ್ರೆಯಲ್ಲೂ ಕಳೆದೆ. ಕೊನೆಗೆ ಇನ್ನು ಸಾಕು ಈ ಸಾಹಸ ಎಂದುಕೊಂಡು ಊರಿಗೆ ಮರಳಿದೆ.

ಒಂದು ವರ್ಷ ಮತ್ತೆ ಇಮ್ಮಡಿ ಉತ್ಸಾಹದಿಂದ ಸೋಷಿಯಲ್‌ವರ್ಕ್ ಅಂತ ಕುಣಿದೆ. ನಾಲ್ಕಾರು ತಿಂಗಳು ಏತಡ್ಕದ ಸಹಕಾರಿ ಸಂಘದ (ಅನಧಿಕೃತ) ಲೆಕ್ಕಿಗನಾಗಿಯೂ ದುಡಿದೆ. ಆ ಸಂದರ್ಭದಲ್ಲಿ ಅಲ್ಲಿ ಪರಿಚಿತರಾದ ಇಬ್ಬರು ಗೆಳೆಯರ (ವೈ.ಕೆ. ಕೇಶವ ಭಟ್ ಹಾಗೂ ಪತ್ತಡ್ಕ ಕೇಶವ ಭಟ್) ಒತ್ತಾಯದ ಮೇರೆಗೆ ಬಳ್ಳಾರಿಯ ತಾರಾನಾಥ ಕಾಲೇಜಿನಲ್ಲಿ ವೈದ್ಯ ವಿದ್ಯಾಭ್ಯಾಸಕ್ಕೆ ಸೇರಿಕೊಳ್ಳಲು ಅಣಿಯಾದೆ. ಮನೆಯ ಆರ್ಥಿಕ ಅಡಚಣೆಗಳು ಎಷ್ಟೇ ತೊಡಕಾಗಿದ್ದರೂ, ತಿಂಗಳಿಗೆ 100 ರೂ. ಒದಗಿಸುವುದಾಗಿ ಅಣ್ಣ ಹೇಳಿದರು (ಅವರೀಗ ಮನೆಯ ಆರ್ಥಿಕ ವ್ಯವಸ್ಥೆಯನ್ನೆಲ್ಲ ನೋಡಿಕೊಳ್ಳುತ್ತಿದ್ದರು). ಅಪ್ಪ ಏನೂ ಹೇಳದಿದ್ದರೂ ಅವರ ಕಣ್ಣಂಚಿನಲ್ಲಿ ಕಾಣಿಸಿದ ಎರಡು ಹನಿ ಕಣ್ಣೀರಲ್ಲಿ ದುಃಖದ ಛಾಯೆ ಇತ್ತಾದರೂ ಒಂದರೆಕ್ಷಣ ಸಮಾಧಾನದ ಕ್ಷೀಣಭಾವ ಕಾಣಿಸಿತೆಂದು ನಾನು ಭಾವಿಸಿಕೊಂಡೆ.

ಬಳ್ಳಾರಿಯಲ್ಲಿ ವೈದ್ಯ ಶಿಕ್ಷಣ ಕಾಲೇಜನ್ನು ಸೇರಲು ನಿರ್ಧರಿಸಿ ಮನೆಯಿಂದ ಹೊರಟೆ. ಪುತ್ತೂರಿನಲ್ಲಿ ಮನೋಹರ ರಾಯರ ಜತೆ ಮಾತನಾಡಿದಾಗ, ಮೈಸೂರಿನ ಎಲ್.ಎ.ಎಂ.ಸ್. ಕೋರ್ಸಿಗೆ ಸೇರುವುದು ಹೆಚ್ಚು ಉಪಯುಕ್ತವೆಂದರಿತುಕೊಂಡು ಮೈಸೂರಿನಲ್ಲೇ ಕಾಲೇಜು ಸೇರಿದೆ.

ಡಾಕ್ಟರಾಗಿ ಮನೆಗೆ ಮರಳಿದೆ

ಕಾಲೇಜಿನಲ್ಲಿ ವಿದ್ಯಾರ್ಥಿ ಸಂಘದ ಅಧ್ಯಕ್ಷ ಜೆ.ಎಸ್. ರಾಮನ್‌ರ ಜತೆಗೆನಿಂತು ಬಹುಮುಖ ಚಟುವಟಿಕೆಗಳನ್ನು ನಿರ್ವಹಿಸಿದೆ. ಅದುವರೆಗೆ "ಗುಂಡ್ಕು ಪಂಡಿತರ ಆಯುರ್ವೇದ ಪಾಠಶಾಲೆ"ಯಾಗಿದ್ದ ಕಾಲೇಜು ಮೈಸೂರು ಶಿಕ್ಷಣ ಸಂಸ್ಥೆಗಳ ಸಮೂಹದಲ್ಲಿ ಗಣನೆಗೆ ಬರುವಂತಾಯಿತು. ಇದರಿಂದಾಗಿ ನನ್ನ ಸಾಹಿತ್ಯಾಸಕ್ತಿಗೆ

ಇನ್ನಷ್ಟು ಗರಿ ಮೂಡಿತು! 'ಜನಪ್ರಿಯ ಸಾಹಿತ್ಯ' ಎಂಬ ಪ್ರಕಾಶನ (ಪುತ್ತೂರು) ಪ್ರಾರಂಭಿಸಿ 5 ಪುಸ್ತಕಗಳನ್ನು ಪ್ರಕಟಿಸಿದೆ. ಇದರಲ್ಲಿ ಬಹುಮುಖ್ಯವಾದದ್ದು ಪ್ರೊ॥ ಗೋಪಾಲಕೃಷ್ಣ ಅಡಿಗರ 'ಚೆಂಡೆಮದ್ದಳೆ' ಕವನ ಸಂಕಲನ ಇದು ನವಸಾಹಿತ್ಯ ಪರಂಪರೆಯ ಪ್ರಪ್ರಥಮ ಕವನ ಸಂಕಲನ ಎಂಬ ದಾಖಲೆಯೂ ಇದೆ. ಎಚ್.ಎಂ. ಮರುಳಸಿದ್ಧಯ್ಯನವರ 'ಕನ್ನಡಕುಲ' ಪ್ರಕಾಶನ ಹಾಗೂ ಪಿ.ಆರ್. ತಿಪ್ಪೇಸ್ವಾಮಿಯವರ ಕಲಾಕ್ಷೇತ್ರ ಪ್ರಕಟಿಸಿದ ಅನೇಕ ಪುಸ್ತಕಗಳ ಕಾರ್ಯದಲ್ಲಿ ಸೂತ್ರಧಾರಿ–ಪಾತ್ರಧಾರಿಯಾಗಿದ್ದೆ (ಸ್ವಂತದ ಒಂದೆರಡು ಪುಸ್ತಕಗಳನ್ನೂ ಪ್ರಕಟಿಸಿದೆ). ಹೀಗೆ ಪ್ರಕಾಶನ ಕಾರ್ಯದಲ್ಲಿ ವಿವಿಧ ಚಟುವಟಿಕೆಗಳನ್ನು ನಡೆಸುತ್ತ, 4 ವರ್ಷಗಳ ಎಲ್.ಎ.ಎಂ.ಎಸ್. ಶಿಕ್ಷಣವನ್ನು 5 ವರ್ಷಗಳಲ್ಲಿ ಮುಗಿಸಿದೆ. ಕಾಲೇಜು ಜೀವನದ ಕೊನೆಯ ದಿನಗಳಲ್ಲಿ ಮೊದಲಬಾರಿಗೆ 'ಕಾಲೇಜ್ ಮೆಗಸಿನ್'ನ್ನೂ ಪ್ರಕಟಿಸಿದೆ. ಅಷ್ಟೇ ಅಲ್ಲದೆ ಕಾಲೇಜಿನಲ್ಲಿ ಶಿಕ್ಷಣ – ತರಬೇತಿಗಳ ಬಗ್ಗೆ ಹೆಚ್ಚಿನ ಅನುಕೂಲತೆಗಳು ಬೇಕೆಂದು ಆಗ್ರಹಿಸಿ ವಿದ್ಯಾರ್ಥಿಗಳು ಪ್ರಾರಂಭಿಸಿದ (ಸುಮಾರು 3 ತಿಂಗಳು ನಡೆದ) ಸತ್ಯಾಗ್ರಹದಲ್ಲೂ ಪಾಲ್ಗೊಂಡೆ. ಇದೇ ಸಮಯದಲ್ಲಿ ರಾಜ್ಯ ಪುನರ್ವಿಂಗಡಣೆ ನಡೆದು ಕಾಸರಗೋಡನ್ನು ಕರ್ನಾಟಕದಿಂದ ಕೇರಳಕ್ಕೆ 'ರಾಜಕೀಯ' ನಾಯಕರು ದಾನವಿತ್ತು ಕನ್ನಡಿಗರಿಗೆ ಅನ್ಯಾಯ ಮಾಡಿದ್ದನ್ನು ಪ್ರತಿಭಟಿಸುವ ಆಂದೋಲನ ಕಾಸರಗೋಡು ತಾಲೂಕಿನಾದ್ಯಂದ ನಡೆಯುತ್ತಿದ್ದಾಗ, ಬೆಂಗಳೂರಿನಲ್ಲಿ ಆ ಚಳುವಳಿಯ ಬಗ್ಗೆ ಪ್ರಚಾರ ಮಾಡಲು 'ಕಾಸರಗೋಡು ಕರ್ನಾಟಕ ಪ್ರಾಂತೀಕರಣ ಪ್ರಚಾರ ಸಮಿತಿ' ಪ್ರಾರಂಭವಾದಾಗ ಅದರ ಕಾರ್ಯದರ್ಶಿಯಾಗಿ ಅವಿಶ್ರಾಂತವಾಗಿ ಕೆಲಸ ಮಾಡಿದೆ...ದೆ...ದೆ.

ಬಡವರೇ ಬಂಧುಗಳು

ನಮ್ಮೂರಲ್ಲಾಗಲಿ ಸುತ್ತಮುತ್ತಲಿನ ಹಳ್ಳಿಗಳಲ್ಲಾಗಲಿ ಆಗರ್ಭ ಶ್ರೀಮಂತರೆಂಬುವರು ಯಾರೂ ಇರಲಿಲ್ಲ. ಮಂಗಳೂರು ಹೆಂಚಿನ ಉಪ್ಪರಿಗೆ ಮನೆ. 15–20 ಖಂಡಿ ಅಡಿಕೆ ತೋಟ, 4–5 ಕೋರ್ಜಿ ಅಕ್ಕಿ ಬರುವಷ್ಟು ಗದ್ದೆ, ಕಾಪಿ ಕಾಡು, ಗುಡ್ಡೆ, ಕುಮ್ಕಿಗಳ ಆಸ್ತಿಪಾಸ್ತಿ; ನಾಲ್ಕೈದು ಜನ ಅಣ್ಣತಮ್ಮಂದಿರು ಅವರ ಹೆಂಡರು ಮಕ್ಕಳು, ಹಲವಾರು (ಬಡ) ಬಂಧುಗಳಿರುವ ದೊಡ್ಡ ಕುಟುಂಬ, ದನಕರುಗಳು ಎರಡೆರಡು ಸಾಕಿದ ನಾಯಿಗಳು, 4–6ಕ್ಕಲು ಮನೆಗಳು ಒಂದು 'ಸಬಾರಿ' (ಎತ್ತಿನ) ಗಾಡಿ ಇತ್ಯಾದಿಗಳಿರುವ ಮನೆತನಗಳನ್ನು ಶ್ರೀಮಂತರ ಕುಟುಂಬಗಳೆಂದು ಹೇಳುತ್ತಿದ್ದರು. ಗ್ರಾಮದ ಗುರಿಕ್ಕಾರ ಪಂಚಾಯಿತಿಕೆಯಿಂದ ಹಿಡಿದು ಹೈಕೋರ್ಟ್‌ವರೆಗೂ 'ಒಂದು ಕೈ ನೋಡಿಯೇಬಿಡುವ'ಷ್ಟು ಕೋರ್ಟ್ ಕಚೇರಿಗಳ ಅಲೆದಾಟ, ಅಷ್ಟಿಷ್ಟು ಶೋಕಿಯೂ ಅಷ್ಟೇನೂ ಗುಟ್ಟಾಗಿ ಉಳಿದಿರದ

ಒಂದೋ ಎರಡೋ ಉಪ ಪತ್ನಿಗಳು – ಇರುವ ಈ ವರ್ಗದ ಕುಟುಂಬಗಳಿಗೆ ಒಳಗಿನಿಂದ ಒಳಗೆ ಎಷ್ಟೋ ಸಾವಿರ ರೂಪಾಯಿ ಸಾಲ ಇರುತ್ತಿದ್ದರೂ ಶ್ರೀಮಂತಿಕೆಯ ದರ್ಪಕ್ಕೇನೂ ಕಮ್ಮಿ ಇರಲಿಲ್ಲ.

ಇವರ ಅರ್ಧಾಂಶದಷ್ಟು ಆಸ್ತಿ–ಪಾಸ್ತಿ (ಅಥವಾ ಅದಕ್ಕಿಂತಲೂ ಕಮ್ಮಿ) ಇದ್ದು, ಇಮ್ಮಡಿ–ಯಷ್ಟು ಸಾಲದ ಹೊರೆಯಿರುವ ಮಧ್ಯಮ ವರ್ಗದ ಕುಟುಂಬಗಳು. ಖಾನೇಶುಮಾರಿಯ ಲೆಕ್ಕ ನೋಡಿದರೆ ಶ್ರೀಮಂತರೂ ಆ ವರ್ಗದ ಜನರು ಹಾಗೂ ಮೇಲ್ಮಧ್ದದು ವರ್ಗದವರು ಶೇಕಡಾ 35% ಇದ್ದರೆ 50% ಇನ್ನುಳಿದವರು ಬಡಬಗ್ಗರು! ಕಡುಬಡವರು ಕೂಡ ಸಾಕಷ್ಟು ಪ್ರಮಾಣದಲ್ಲಿ ಇದ್ದರು.

ಬೆನ್ನಟ್ಟಿಬಂದ ಬಡತನ

ಪಾರಂಪರಿಕವಾಗಿ 'ನಾವು' (ಅಂದರೆ ನಮ್ಮ ಮನೆತನ) ಮಧ್ಯಮವರ್ಗದ ಕೃಷಿಕರ ಸಾಲಿಗೆ ಸೇರಿದ್ದರೂ, ಬಡತನದ ಪರಿಸ್ಥಿತಿಯಲ್ಲೇ ನನ್ನ ಬಾಲ್ಯ – ವಿದ್ಯಾಭ್ಯಾಸದ ದಿನಗಳು ಕಳೆದವು. ಸಾಲದ ಹಣ ಬಿಡಿ – ಬಡ್ಡಿಯನ್ನು ಸಹ ತೆರಲಾರದ ದೆಸೆಯಿಂದ ಮನೆ–ತೋಟ–ಗದ್ದೆ ಎಲ್ಲವನ್ನೂ ಕೆಲವು ವರ್ಷಗಳ ಮಟ್ಟಿಗೆ 'ಸಾಲಿನ'ರ ವಶಕ್ಕೆ ಅನುಭೋಗಿಸಲು ಬಿಟ್ಟುಕೊಟ್ಟು ಮಲೆನಾಡಿನ ಹೊಸಮಠದಿಂದ ಹಿಡಿದು ಚಾಕಟೆ, ಬಾಳುಕಟ್ಟದ ತನಕ 5 ಕಡೆ ಬಿಡಾರ ಹೂಡುವುದು ತೆಗೆಯುವುದು ನಡೆಯಿತು ಕೊನೆಗೊಮ್ಮೆ ಹೆಚ್ಚಿನ ದರದ ಬಡ್ಡಿಗೆ ದೊಡ್ಡ ಮೊತ್ತದ ಸಾಲವನ್ನು ತೆಗೆದು, ಹಳೇಬಾಕಿ ಸಾಲ – ಬಡ್ಡಿ ಎಲ್ಲವನ್ನೂ ತೀರಿಸಿ, ಮನೆ–ತೋಟಗಳೆಲ್ಲವನ್ನೂ ಮರಳಿ ಪಡೆದುಕೊಂಡದ್ದಾಯಿತು. ನಮ್ಮ ತಂದೆಯವರು ಎಂಥಾ ಪರಿಸ್ಥಿತಿಯಲ್ಲೂ ಧೈರ್ಯಗುಂದದೆ ನಿಭಾಯಿಸಿಕೊಂಡು ಬಂದಿದ್ದರು. ಸರಿಸುಮಾರು ಈ ಸಮಯದಲ್ಲೇ ನಾನು ವೈದ್ಯಕೀಯ ವಿದ್ಯಾರ್ಥಿಯಾದೆ.

ಈ ನಡುವೆ ನಮ್ಮ ಕುಟುಂಬ ಕಳೆದುಕೊಂಡ ಬಹುದೊಡ್ಡ ಸಂಪತ್ತೆಂದರೆ ನಮ್ಮ ತಾಯಿ ಹಾಗೂ ಇಬ್ಬರು ಸೋದರಿಯರು. ಗರ್ಭಿಣಿ, ಹೆರಿಗೆ, ಬಾಣಂತನ, ಶಿಶುಸಂರಕ್ಷಣೆಗಳ ಬಗ್ಗೆ ಹೇಳಿ ಕೇಳರಿಯದ ಊರುಗಳಲ್ಲಿ ಬಿಡಾರ ಹೂಡಿದ್ದು, ವೈದ್ಯಕೀಯ ಸೌಲಭ್ಯವಿಲ್ಲದೆ ಅಷ್ಟೇ ಅಲ್ಲದೆ, ಅದನ್ನು ಹೇಗಾದರೂ ಮಾಡಿ ಒದಗಿಸಿಕೊಳ್ಳುವುದಕ್ಕೆ ಹಣಕಾಸಿನ ಅನುಕೂಲತೆ ಇಲ್ಲದೇ ಇದ್ದುದರಿಂದ, ಮೂರು ಜೀವಗಳನ್ನು ನಾವು ಕಣ್ಣೆದುರಲ್ಲೇ ಕಳೆದುಕೊಂಡೆವು! ಮೂರು ಮರಣಗಳೂ ಹೆರಿಗೆ ಸಂಬಂಧವಾಗಿಯೇ ಹಾಗೂ ಬಡತನದ ಕಗ್ಗತ್ತಲಲ್ಲೇ ಆದದ್ದು. ನನ್ನ ಮನಸ್ಸಿನ ಮೇಲೆ ಗಾಢವಾದ ಪರಿಣಾಮ ಬೀರಿತು.

ಹೀಗಾಗಿ ಹುಟ್ಟೂರಲ್ಲಿ ಗ್ರಾಮೀಣ ಕ್ಲಿನಿಕ್ ತೆರೆದು ನನ್ನ ವೈದ್ಯ ವೃತ್ತಿಯನ್ನು ಪ್ರಾರಂಭಿಸಿದೆ. ದಿನದಿಂದ ದಿನಕ್ಕೆ ಕ್ಲಿನಿಕ್‌ನ ಕಾರ್ಯಕ್ರಮ (ಚಿಕಿತ್ಸಾ ಕಾರ್ಯಕ್ರಮ) ಬೆಳೆಯುತ್ತಲೇ ಹೋಗುತ್ತಿತ್ತು. ಎರಡನೇ ತಿಂಗಳ ಕೊನೆಗೆ ಒಂದು ಅಂದಾಜಿನಂತೆ ನಮ್ಮೂರವರಷ್ಟೇ ಅಲ್ಲದೆ ಅಕ್ಕಪಕ್ಕದ ನಾಲ್ಕೈದು ಊರುಗಳಿಂದ 'ರೋಗಿಗಳು' ಬರುತ್ತಿದ್ದರು, ಚಿಕಿತ್ಸೆ ಪಡೆದುಕೊಳ್ಳುತ್ತಿದ್ದರು 'ಕೈಪಲ್ಪು' (ಹಸ್ತಗುಣ) ಚೆನ್ನಾಗಿದೆ ಎಂದು ತಮ್ಮ ಭಾಷೆಯಲ್ಲೇ ಹೇಳಿ ಪ್ರಚಾರ ಪ್ರಸಾರ ಮಾಡುತ್ತಿದ್ದರು. 'ಕಮ್ಮಿ ಖರ್ಚು ಸರಿಯಾದ ತಪಾಸಣೆಗೆ ಸಮರ್ಪಕ ಚಿಕಿತ್ಸೆ' ಎಂಬ ಮೂರು ಅಂಶಗಳು ಬಡವರಿಗೆ 'ಅನಿರೀಕ್ಷಿತ ವರದಾನ'ವಾಯಿತು. ನನ್ನ ಆದಾಯವೂ ಹೆಚ್ಚಿತು.

ಶ್ರೀಮಂತರ ಕಟಾಕ್ಷ

ಒಮ್ಮೊಮ್ಮೆ 'ಸಾಲುಗಟ್ಟಿ' (8–10 ಜನ) ಕುಳಿತುಕೊಳ್ಳುವ ಬಡರೋಗಿಗಳು, ಆಗೊಮ್ಮೆ ಈಗೊಮ್ಮೆ ಮನೆಭೇಟಿಗಳು.... ವಾರ ವಾರ ಮಂಗಳೂರಿನಿಂದ ಬಸ್ ಡ್ರೈವರ್ ಮೈದಿನ್ ಸಾಹೇಬರ ಮುಖಾಂತರ ತರಿಸುತ್ತಿದ್ದ ಔಷಧಿಗಳು – ಇವೆಲ್ಲ 'ದೊಡ್ಡವರ' ಗಮನಕ್ಕೆ ಬಾರದಿರಲಿಲ್ಲ. ಹಾಗಾಗಿ ನನ್ನ ರೋಗ ಶುಶ್ರೂಷಾ ವ್ಯವಸ್ಥೆಯನ್ನು ಅಷ್ಟಿಷ್ಟು ಬಳಸಿಕೊಳ್ಳಲು ಪ್ರಾರಂಭಿಸಿದರು. ಮಕ್ಕಳ ಅಲ್ಲಾಡುವ ಹಾಲುಹಲ್ಲು (Milk Tooth) ಕೀಳುವುದು, ಮಂಗಳೂರಿನ ಡಾಕ್ಟರರಿಂದ ಎಂದೋ ಬರೆಸಿಕೊಂಡು ಬಂದಿದ್ದ ಟಾನಿಕ್‌ಗಳನ್ನು ತರಿಸಿಕೊಡಲು ಹೇಳುವುದು, ಅವರುಗಳ 'ಪ್ರಿಸ್ಕ್ರಿಪ್ಷನ್' ಪ್ರಕಾರ ತಾವು ತಂದಿರಿಸಿಕೊಂಡಿದ್ದ ಸೂಜಿಮದ್ದನ್ನು ಮನೆತನಕ ಹೋಗಿ ಚುಚ್ಚುವುದು, ಗಾಯಗಳಿಗೆ ಪಟ್ಟಿ ಬದಲಿಸುವುದು, ಕಠಿಣ ಮಲಬದ್ಧತೆಯಲ್ಲಿ 'ಎನಿಮಾ' ಕೊಡುವುದು – ಇಂಥಾ ಸೇವಾ ಸೌಲಭ್ಯವನ್ನು ನನ್ನಿಂದ ಪಡೆದುಕೊಳ್ಳುವುದು ಪ್ರಾರಂಭವಾಯಿತು (... ಹಣ ಮಾತ್ರ ತಪ್ಪದೆ ಜಮೆಯಾಗುತ್ತಿತ್ತು).

ಬೇಸಿಗೆ ಕೊನೆಗೊಳ್ಳುವ ಬದಲು ಇನ್ನಷ್ಟು ಉಲ್ಬಣವಾಯಿತು. ಸೆಖೆ, ನೀರಿನ ಕೊರತೆ. 'ಕಾಚೇಲು' ಅಂತ ಮಳೆ ಮೋಡದತ್ತ ಮುಖ ಮಾಡತೊಡಗಿದರು. ಮತ್ತೂ 3–4 ವಾರ ಮಳೆ ವಿಳಂಬಿಸಿತು. ಅಲ್ಲಿ ಬಂತು ಮಳೆ. ಇನ್ನೆಲ್ಲೋ 'ನೆರೆ' ಎಂದು ಹೇಳುವ ಹಾಗಾಯಿತು ಇಲ್ಲಿ. ವರುಣನ ಕೃಪೆಗಾಗಿ ಎಲ್ಲರೂ ಹಾರೈಸುತ್ತಿದ್ದಂತೆಯೇ ಒಂದು ಸಂಜೆ ಪ್ರಾರಂಭವಾದ ಮಳೆ – ಎರಡು ಹಗಲು ಎರಡು ರಾತ್ರಿ ಎಡೆಬಿಡದೆ ಸುರಿಯಿತು. ಇದೀಗ ಪಕ್ಕಾ ಮಳೆಗಾಲ.

ಫ್ಲೂ–ಇನ್‌ಫ್ಲೂಯೆನ್ಸ್

ಮಳೆಯ ರಭಸ ನಿಂತಿತೋ – ಇಲ್ಲವೋ ಎನ್ನುವಷ್ಟರಲ್ಲಿ 'ಫ್ಲೂ' ಅಬ್ಬರದಿಂದ ಹರಡಲಾರಂಭಿಸಿತು (ಅದರ ವಿವರ ಬೇಕಿಲ್ಲವಷ್ಟೆ). ಮುಂಜಾನೆಯಿಂದ ತೊಡಗಿದರೆ

ಹಗಲಿಡೀ ಸಂಜೆಯ ನಂತರವೂ ರೋಗಿಗಳು ಬರುತ್ತಲೇ ಇದ್ದರು. ತುಂಬಾ 'ಸೀರಿಯಸ್' ಆಗಿದ್ದವರನ್ನು ರಾತ್ರೆ ಕೂಡಾ ಕಂಬಳಿಯಲ್ಲಿ ಕಟ್ಟಿ ಹೊತ್ತು ತರುವುದೂ ನಡೆಯಿತು. ಈ ಹೊತ್ತಿಗಾಗಲೇ 'ಮಣಿ' ಎಂಬ ಉತ್ಸಾಹಿ ಯುವಕ ಕಾಂಪೌಂಡರ್ ನಾಮಾಂಕಿತನಾಗಿ ದುಡಿಯಲು ಜತೆಗೂಡಿದ್ದ. ಹಗಲೂ ಇರುಳೂ ಎಂಬಂತೆ ಚಿಕಿತ್ಸೆ–ರೋಗೋಪಚಾರ ಅಗತ್ಯವೆಂಬುದನ್ನು ಮನಗಂಡು ನನ್ನ ವಾಸ್ತವ್ಯವನ್ನು ಕ್ಲಿನಿಕ್‌ನಲ್ಲೇ ಮಾಡಿಕೊಂಡೆ. ಸುಮಾರು ಐದು ವಾರ ಸಮರೋಪಾದಿಯಲ್ಲಿ ಈ ಚಿಕಿತ್ಸಾ 'ಕಾರ್ಯಕ್ರಮ' ನಡೆಯಿತು.

ಊರಿಗೆ ಊರೇ 'ಪಾದೆ ಆಸ್ಪತ್ರೆ'ಗೆ ಹೋಗಿ 'ಹತ್ತಾಣೆ ಡಾಕ್ಟರಿ'ಂದ ಔಷಧಿ–ಚಿಕಿತ್ಸೆ ಪಡೆಯುತ್ತಿರುವುದರಿಂದ ಪ್ರಭಾವಿತರಾದರೋ – ಅಥವಾ ಅನಿವಾರ್ಯವಾಗಿ ದೂರದ ಡಾಕ್ಟರು–ಹಾಸ್ಪಿಟಲ್ ಅಂತ ಹೋಗುವುದೇನು ಇಲ್ಲೇ ಒಂದು 'ಚಾನ್ಸ್ ನೋಡುವ' ಅಂತ ಒಬ್ಬೊಬ್ಬರಾಗಿ ಶ್ರೀಮಂತ ಕುಳವಾರುಗಳು ಚಿಕಿತ್ಸೆಗೆ ಬರತೊಡಗಿದರು.

ಒಮ್ಮೆ ಪ್ರಾರಂಭವಾದ 'ಸಂಪರ್ಕ' – ಮುಂದುವರಿಯಲು ಕಷ್ಟವೇನೂ ಆಗಲಿಲ್ಲ. ಇಷ್ಟೇ ಕೆಲವೊಂದು ಮನೆಗಳಿಗೆ 'ಮನೆಭೇಟಿ' ಹೋಗಿಬರುವುದೆಂದರೆ ಕನಿಷ್ಟ 2–3 ಗಂಟೆಗಳು ಬೇಕಾಗುತ್ತಿತ್ತು. ಹೀಗಾಗಿ ಇದಕ್ಕಾಗಿ ವಿಜಿಟ್‌ಗಳನ್ನು 'ರಾತ್ರಿಪಾಳಿ'ಗೆ ಇರಿಸಿಕೊಳ್ಳುವ ಪರಿಪಾಠ ಪ್ರಾರಂಭವಾಯಿತು. ಇದಕ್ಕೇನೂ ಅಸಮ್ಮತಿಯ ದನಿ ಕೇಳಿಸಲಿಲ್ಲ! ಈ ಮನೆಭೇಟಿಗಳಿಗೆ 25/– ರೂಪಾಯಿಗಳವರೆಗೂ 'ರೇಟು' ಸಿಗಲು ಪ್ರಾರಂಭವಾಗಿತ್ತು.

ವರ್ಷದ ಕೊನೆಗೆ ಒಂದು ಹೊಸ ಮೋಟಾರ್ ಸೈಕಲ್ Royal Enfield ಕಂಪನಿಯದ್ದನ್ನು ಖರೀದಿಸಿದ್ದರಿಂದ ಹಲವರ ಕಣ್ಣುಗಳಲ್ಲಿ ನನ್ನ ಅಂತಸ್ತು ಹೆಚ್ಚಿದ್ದು ಗೋಚರಿಸದಿರಲಿಲ್ಲ. ರೋಗ ಶುಶ್ರೂಷಾ ಕಾರ್ಯಕ್ರಮದಲ್ಲಿ ಯಾವುದೇ ಬದಲಾವಣೆ ಇರಲಿಲ್ಲ (ಬಡವರ ಪಾಲಿಗೆ ಹತ್ತಾಣೆ ದರ ಚಾಲೂ ಇದ್ದೇ ಇತ್ತು).

ಕೋಳಿಕಟ್ಟದ ಸರ್ಜನ್

ರಭಸದ ಮುಂಗಾರು ಮಳೆಯ ದಿನಗಳಲ್ಲೇ ಗದ್ದೆ – ತೋಟಗಳ ಬಿರುಸಿನ ವ್ಯವಸಾಯ ಸಾಗಿ, ಅಲ್ಲೊಮ್ಮೆ ಇಲ್ಲೊಮ್ಮೆ ಮೋಡ–ತುಂತುರು ಹನಿ ಕಾಣಿಸಿಕೊಳ್ಳತೊಡಗಿದಾಗ ದುಡಿಯುವ ಕೈಕಾಲುಗಳಿಗೆ ತುಸು ಬಿಡುವು, ದಣಿದ ದೇಹಕ್ಕೆ ಸ್ವಲ್ಪ ವಿಶ್ರಾಂತಿ ದೊರಕಲು ಪ್ರಾರಂಭವಾಗುತ್ತದೆ ಎನ್ನುವಾಗಲೇ ಸುರುವಾಗುತ್ತದೆ ಹಬ್ಬಹರಿದಿನಗಳ ಸಾಲು. 'ಅಟ್ಟಮೆ' (ಶ್ರೀಕೃಷ್ಣ ಜನ್ಮಾಷ್ಟಮಿ), ಚೌತಿ (ಗಣೇಶ ಚತುರ್ಥಿ), ಸರಸ್ವತೀ ಪೂಜೆ (ನವರಾತ್ರಿ) ಹಾಗೂ ದೀಪಾವಳಿ

ಸಾಲಾಗಿ ಒಂದರ ಹಿಂದೊಂದು ಬಂದು 'ಹಬ್ಬದ ಅಡಿಗೆ' ಉಂಡರೂ ಸರಿ – ಉಣ್ಣದಿದ್ದರೂ ಸರಿ – ಹಳ್ಳಿಗರ ಪಾಲಿನ ಒಂದು ಮನರಂಜನೆಯ ಕಾರ್ಯಕ್ರಮ ಇದ್ದೇ ತೀರಬೇಕು. 'ಕೋಳಿಕಟ್ಟ' (ಕೋಳಿ ಜೂಜು) ವಿಶೇಷವಾಗಿ ಸಾಕಿ ಬೆಳೆಸಿ ಪಳಗಿಸಿದ ಹುಂಜಗಳ ಕಾಲಿಗೆ ಹರಿತವಾದ ಚಿಕ್ಕ ಬಾಳನ್ನು (ಕ್ಷೌರದ ಕತ್ತಿಯ ಕಿರುರೂಪದ ಹತ್ಯಾರು) ಕಟ್ಟಿ, ಪರಸ್ಪರ ಎದುರು ಬದುರು 'ಬಿಟ್ಟು' ಕಾಳಗ ನಡೆಸುವಂತೆ ಪುಸಲಾಯಿಸುವುದು – ಪ್ರೋತ್ಸಾಹಿಸುವುದು. ಇದನ್ನು ನಿರ್ವಹಿಸಲು ಪ್ರತಿ ಕೋಳಿಗೂ ಒಬ್ಬೊಬ್ಬ ನಿಷ್ಣಾತನ ಕೈಚಳಕ – 'ತಂತ್ರ' ಇದ್ದೇ ತೀರಬೇಕು (ಇವನಿಗೆ 'ಕೋಳಿ ಬಿಡುವವನು' ಎಂಬ ಅಡ್ಡ ಹೆಸರು). ಪರಸ್ಪರ ಎಗರಾಡಿ ಮೇಲೆರಗಿ, ಕಟ್ಟಿದ ಬಾಳಿನಿಂದ ಘಾಸಿಗೊಳಿಸಿ ಎದುರಾಳಿಯನ್ನು ಸೋಲಿಸುವುದನ್ನು ನೋಡಲು ಪ್ರೇಕ್ಷಕ ದೊಡ್ಡ ವೃಂದವೇ ಇರುತ್ತಿತ್ತು. ಜತೆಗೆ ಜಿದ್ದಿನ 'ಬಾಜಿ' (ಬೆಟ್ಟಿಂಗ್) ಸಹ ಇರುತ್ತಿತ್ತು.

ಮೊದಲ ಹಬ್ಬದ ದಿವಸ – ಮುಂಜಾನೆ ಒಂದೆರಡು 'ಗಿರಾಕಿ'ಗಳನ್ನು ಬಿಟ್ಟರೆ ಬೇರೆ ಯಾರೂ ಕ್ಲಿನಿಕ್‌ನ ಹತ್ತಿರ ಸುಳಿಯಲಿಲ್ಲ. ಅಂದು 'ನಿಷ್ಠಾವಂತ'ರಿಗೆಲ್ಲ ಉಪವಾಸ ಎಂತಲೇ ನನಗಾಗಿ ಅಡಿಗೆ ಊಟ ಸಿಗಲಿಲ್ಲ. ಬ್ರೆಡ್–ಬಿಸ್ಕೀಟ್ ಹಾಗೂ 'ಅವಲಕ್ಕಿ ಬೆಲ್ಲ'ದಿಂದ ಉದರಂಭರಣ ಮಾಡಬೇಕಾಯಿತು. ಹೊತ್ತು ಪಡುವಣಕ್ಕೆ ತಿರುಗುತ್ತಿದ್ದಂತೆ ಯಜಮಾನರ ತೋಳಿನ ಮೇಲೆ ಕುಳಿತು ಗರ್ವದಿಂದ ಕೊರಳು ಅತ್ತಿತ್ತಲುಗಾಡಿಸುತ್ತ, ಆಗಾಗ ಕೊಕ್ಕೊಕ್ಕೋ ಎಂದು ತನ್ನ ಬರುವಿಕೆ, ಇರುವಿಕೆಯನ್ನು ಸಾಬೀತು ಪಡಿಸುತ್ತ ಡಜನ್ ಹುಂಜಗಳು ಶಾಲೆಯ ಹಿಂಬದಿಯ ಮಾವಿನ ತೋಟದಲ್ಲಿಯೂ ಪಕ್ಕದ ಚೊಟ್ಟೆಗೊರಗನ 'ಚಾಯದ ಅಂಗಡಿ' ಎದುರೂ ಜಮಾಯಿಸಿದ್ದಾಯಿತು. ಸ್ವತಃ ಪಟೇಲರೇ ನೇತೃತ್ವ ವಹಿಸಿ ಕೋಳಿಕಟ್ಟ ಪ್ರಾರಂಭಕ್ಕೆ ಹಸಿರು ನಿಶಾನೆ ತೋರಿಸಿದರು.

ನಾನು ಅಯಾಚಿತವಾಗಿ ದೊರಕಿದ ವಿರಾಮವನ್ನು ಸರಿಯಾಗಿ ಅನುಭವಿಸಲು ನಿರ್ಧರಿಸಿದೆ. ಕ್ಲಿನಿಕ್‌ನ ಬಾಗಿಲನ್ನು ಸ್ವಲ್ಪವೇ ತೆರೆದಿಟ್ಟು (ಅರ್ಥಾತ್ ಹೆಚ್ಚಿನ ಮಟ್ಟಿಗೆ ಮುಚ್ಚಿ) ಒಳಗಿನ ಕೋಣೆಯಲ್ಲಿ ಒಂದು ಪುಸ್ತಕ ಹಿಡಿದುಕೊಂಡು ಓದತೊಡಗಿದೆ. ಎಷ್ಟೋ ಹೊತ್ತು ಕಳೆದ ತರುವಾಯು ಇದ್ದಕ್ಕಿದ್ದಹಾಗೆ ದೊಡ್ಡ 'ಗಲಾಟೆ' ಕೇಳಿಸಿತು. ಹೊರಗೆ ಬಂದು ಕಿಟಕಿಯಿಂದ ಇಣಿಕೆ ನೋಡಿದರೆ – ಒಬ್ಬನನ್ನು ಕೈಕುರ್ಚಿಯ ಮೇಲೆ ಕುಳ್ಳಿರಿಸಿಕೊಂಡು ನಾಲ್ಕು ಜನ ಧಾಂಡಿಗರು ದಂಡಿಗೆಯಂತೆ ಹೊತ್ತು ತರುವುದು ಕಾಣಿಸಿತು. ಹಿಂದೆಯೇ ಗಲಭೆಯೆಬ್ಬಿಸುತ್ತ ದೊಡ್ಡ ಗುಂಪು ಕೂಡ ಬರುತ್ತಿತ್ತು. ಕೋಳಿಕಟ್ಟದ ಕಾದಾಟದಲ್ಲಿ, ಕೋಳಿಬಿಡುವ ನಿಷ್ಣಾತ (Expert–ಸರದಾರ)ನಿಗೆ ಗಾಯವಾಗಿ ರಕ್ತಸ್ರಾವವಾಗುತ್ತಿದ್ದುದರಿಂದ ಕಾಲಿಗೆ ಕೊಳಕು ಮುಂಡಾಸಿನ 'ಎಲೆವಸ್ತ್ರ'ದಿಂದ ಬ್ಯಾಂಡೇಜ್ ಸುತ್ತಿ ಪಾದೆ ಆಸ್ಪತ್ರೆಗೆ ತಂದಿಳಿಸಿದರು.

ಜನರನ್ನೆಲ್ಲ ಹೊರಗೆ ಕಳಿಸಿ, ರೋಗಿಯನ್ನು ತಪಾಸಣೆ ಮಾಡಲು ಹರಸಾಹಸ ಪಡಬೇಕಾಯಿತು. ಕೊನೆಗೊಮ್ಮೆ ಪಟೇಲರೇ ಸ್ವತಃ ಮುಂದೆನಿಂತು ಎಲ್ಲರನ್ನೂ ಆಚೆ ಕಳುಹಿಸಬೇಕಾಯಿತು. ಅನಂತರ 'ಮೀನ ಪೊಟ್ಟೆ' (ಮೊಳಕಾಲಿನ ಮಾಂಸಖಂಡ)ದಲ್ಲಿ 4–5 ಅಂಗುಲ ಉದ್ದದ ಗಾಯವಾಗಿ ರಕ್ತ ಹರಿದಿದ್ದು, ಕ್ರಮೇಣ ಹೆಪ್ಪುಗಟ್ಟಿದ್ದರಿಂದ ಹೆಚ್ಚು ಶ್ರಮವಿಲ್ಲದೆ, ನೋವು ಆಗದ ರೀತಿಯಲ್ಲಿ ಹತ್ತು ಹೊಲಿಗೆ ಹಾಕಿ ಅಗತ್ಯವಾದ ನಂಜು ನಿರೋಧಕ ಮುಲಾಮು ಹಚ್ಚಿದ ಅರಿವೆಯ ಪಟ್ಟಿ ಹಾಕಿ ಮೇಲಿಂದ ದಪ್ಪದ ಹತ್ತಿ ಮುದ್ದೆ ಇಟ್ಟು ಬ್ಯಾಂಡೇಜು ಮಾಡಿದೆ. 'ಟೆಟನಸ್' ನಿರೋಧಕ (ATS) ಚುಚ್ಚುಮದ್ದು ನನ್ನ ಬಳಿ ಇದ್ದಿರಲಿಲ್ಲ. ಮರುದಿನವೇ ಅದನ್ನು ಹಾಕಿಸುವ ಅನಿವಾರ್ಯತೆಯನ್ನು ತಿಳಿಸಿ ತುಸು ವಿಶ್ರಾಂತಿ ತೆಗೆದುಕೊಳ್ಳುವಂತೆ ಕೋಳಿಕಟ್ಟದ ತಜ್ಞಮಹಾಶಯನಿಗೆ ತಿಳಿಸಿ, ಆಚೆ ರೂಮಿಗೆ ಹೋಗಿ ಮುಖ, ಕೈಕಾಲು ತೊಳೆದುಕೊಂಡೆ. ಪಕ್ಕದಲ್ಲೇ ಇದ್ದ ಫ್ಲಾಸ್ಕ್‌ನಿಂದ ಒಂದು ಕಪ್ ಕಾಫಿಯನ್ನು (ಬಿಸಿ ಆರಿದ್ದರೂ) ನಿಧಾನವಾಗಿ ಹೀರಿದೆ. 5 ನಿಮಿಷ ವಿಶ್ರಾಂತಿಯ ತರುವಾಯ 'ಆಪರೇಶನ್ ಪೇಶೆಂಟು' ಹೇಗೆ ಇದ್ದಾನೆ ಅಂತ ನೋಡಲು ಹೋದರೆ ಅಲ್ಲಿ ಒಂದು ಆಶ್ಚರ್ಯ ಕಾದಿತ್ತು. ನಿಶ್ಶಬ್ದ ನೀರವ ಮೌನ ಕವಿದಿತ್ತು. ಒಳಗೆ ಮಂಚದ ಮೇಲೆ ಮಲಗಿಸಿದ್ದ ಪೇಶೆಂಟಾಗಲಿ, ಹೊರಗೆ ಸೇರಿದ ಜನಜಂಗುಳಿಯಾಗಲಿ ಮಾಯವಾಗಿತ್ತು. ಗಾಯಾಳುವನ್ನು ಹೊತ್ತುತಂದಿದ್ದ ಕುರ್ಚಿ ಮಾತ್ರ ಅನಾಥವಾಗಿ ನಿದ್ರಿಸುತ್ತಿತ್ತು!

ನನಗೆ ತುಸು ಗಾಬರಿಯಾಗದಿರಲಿಲ್ಲ. ಆದರೆ ಏನಾದರೂ ಹೆಚ್ಚು ಕಡಿಮೆ ಆಗಿದ್ದರೆ ಅಷ್ಟು ಜನ ಸುಮ್ಮಗಿರುತ್ತಿದ್ದರೆ? ಮತ್ತೆ ಎಲ್ಲಿಗೆ ಹೋದರು... ತಿಳಿಯಲಿಲ್ಲ. ಕ್ಲಿನಿಕ್‌ನಲ್ಲಂತೂ ಟೆನ್‌ಷನ್ ನಿರೋಧಕ ಚುಚ್ಚುಮದ್ದಿಲ್ಲ. ನಂಜುನಿರೋಧಕ ಔಷಧೋಪಚಾರಾದಿಗಳು ಯಾವುದೂ ಇಲ್ಲದೆ ಏನೂ 'ಅನರ್ಥ' ಸಂಭವಿಸದಿರಲಿ ಎಂದು ದೇವರಲ್ಲಿ ಮೊರೆಯಿಡುವ ಸ್ಥಿತಿ ನನ್ನದಾಯಿತು!

ಕಾಸರಗೋಡಿನಿಂದ ಪುತ್ತೂರಿಗೆ ಹೋಗುವ ಸಂಜೆಯ ಬಸ್ಸು ಬರುವ ಸದ್ದು ಕೇಳಿಸಿದ ಕೂಡಲೇ ನಾನು ಕ್ಲಿನಿಕ್‌ನ ಬಾಗಿಲಿಗೆ ಬೀಗ ಜಡಿದು ಬಸ್ ಹತ್ತಿ ಪುತ್ತೂರಿಗೆ ಹೋದೆ. ಗೆಳೆಯರ ಜತೆ ಸೇರಿ ಒಂದು ಸಿನಿಮ ನೋಡಿದೆ. ಮಾಮೂಲಿನಂತೆ ಮುಳಿಯ ಕೃಷ್ಣ ಭಟ್ಟರ ಮನೆಯಲ್ಲಿ ಊಟ ವಸತಿ. ಮುಂಜಾನೆಯ ಬಸ್ಸಿಗೆ ಕ್ಲಿನಿಕ್‌ಗೆ ಮರಳಿದೆ.

ಕಾಂಪೌಂಡರ್ ಒಳಗುಟ್ಟನ್ನೆಲ್ಲ ತೆರೆದಿಟ್ಟ ಒಂದು ತಿಂಗಳ ನಂತರ. ಅರ್ಥಾತ್ ಮುಂದಿನ ಕೋಳಿಕಟ್ಟದ ಮರುದಿನ. 'ಅಂದು' 'ಸುಬ್ಬಪ್ಪ ಮಾಷ್ಟ್ರ ಕೋಳಿ'ಯ ಮೇಲೆ ನೂರು ರೂಪಾಯಿಗೂ ಹೆಚ್ಚು 'ಬೆಟ್' ಕಟ್ಟಿದ್ದರಂತೆ. ಕತ್ತಲಾಗುವುದಕ್ಕೆ ಮುಂಚೆ 'ಜೂಜ'ನ್ನು ಮುಗಿಸಲೇಬೇಕಿತ್ತು. ಹಾಗಾಗಿ ಮಾಷ್ಟ್ರು ಹಿಂದೆ ಮುಂದೆ

ನೋಡದೆ ಹೋಗಿ ಕೋಳಿಯನ್ನು ಮತ್ತೆ 'ಕಣ'ಕ್ಕೆ ಇಳಿಸಿಯೇ ಬಿಟ್ಟರು. ಅವರ ಕೈಚಳಕ ಹೇಗಿತ್ತೆಂದರೆ ಅವರ ಹುಂಜ ವೀರೋತ್ಸಾಹದಿಂದ ಹಾರಿ, ಎದುರು ಕೋಳಿಯನ್ನು ಒಂದೇ ಧಾಳಿಗೆ ರೆಕ್ಕೆ ಹರಿಯುವಷ್ಟು ಗಾಯ ಮಾಡಿದ್ದರಿಂದ ಅದು ನೆತ್ತರು ಸುರಿಸುತ್ತ ಓಡ್ರಿ ಹೋಯಿತು! (ಸೋತಿತು ಅಂತ ಅರ್ಥ). ಮಾಷ್ಟ್ರು ಹತ್ತು ರೂಪಾಯಿ ನೋಟು ಕೊಟ್ಟು ಲೆಕ್ಕಚುಕ್ತಾ ಅಂತ ಬರೆಸಿ ಹೋಗಿದ್ದಾರೆ ಸಾರ್ ಸಾರ್ ಎಂದು ಮಣಿ ಟಿಪ್ಪಣಿಸಿದ.

ಮುಂದಿನದ್ದನ್ನು ಹೇಳಬೇಕಿಲ್ಲವಷ್ಟೇ? ಸೋತವರು (ಬಾಜಿಕಟ್ಟಿ) ಕಳೆದುಕೊಂಡ ಹಣದ ನೆನಪಿನಿಂದ 'ವಾಳೀಸು' (ಹೆಂಡ) ಹಾಕಿಕೊಂಡು ತಮ್ಮ ತಮ್ಮ ಮನೆ ಕಡೆಗೆ ಹೆಜ್ಜೆ ಹಾಕಿದರು. ಗೆದ್ದವರೆಲ್ಲ 'ಗದ್ದಳ' ಮಾಡುತ್ತ ಪಕ್ಕದಲ್ಲೇ ಇದ್ದ ಚೊಟ್ಟೆ ಕೊರಗನ ಅಂಗಡಿ ಸೇರಿ, ಸಂತೋಷವನ್ನು ಸಂಭ್ರಮದಿಂದ ಆಚರಿಸಿದರು. ಅಲ್ಲಿ ಸಿದ್ಧವಿದ್ದ ಕೋಳಿ-ರೊಟ್ಟಿಯ ಭೋಜನ, 'ಗಂಗಸರ' (ಸಾರಾಯಿ) ಪಾನಾದಿಗಳಿಂದ ಮೈಮರೆಯುವಷ್ಟು ಸಂಭ್ರಮ ಪಟ್ಟುಕೊಂಡದ್ದೇ ಪಟ್ಟದ್ದು. ಈ ನಡುವೆ ಸುಬ್ಬಯ್ಯ ಮಾಷ್ಟ್ರು ತನ್ನ ಪಾಲಿನ ಹಣವನ್ನು ಕಿಸೆಗೆ ತೂರುಸಿಕೊಂಡು ಸದ್ದಿಲ್ಲದೆ ಮನೆ ಕಡೆಗೆ ಸಾಗಿದ್ದು ಯಾರ ಗಮನಕ್ಕೂ ಬರಲಿಲ್ಲ. ಸುಬ್ಬಯ್ಯ ಮಾಷ್ಟ್ರು 'ಕೋಳಿಕಟ್ಟ' ಒಂದನ್ನು ಬಿಟ್ಟು ಮತ್ತೆಲ್ಲಾ ವಿಷಯಗಳಲ್ಲಿಯೂ ಅಪ್ಪಟ ಗಾಂಧೀವಾದಿ ಮಾರಾಪು ಮಾಷ್ಟ್ರ ಖಾಸಾ ಶಿಷ್ಯ. ಮಾಂಸ - ಮಧು ವರ್ಜ್ಯ, ಖಾದಿಧಾರಿ ಇತ್ಯಾದಿ ಇತ್ಯಾದಿಗಳನ್ನು ಚಾಚೂತಪ್ಪದೆ ಪಾಲಿಸುತಿದ್ದರು.

"ಮತ್ತೆ ನಿನ್ನೆ ಸಂಜೆ ಕೋಳಿಕಟ್ಟಕ್ಕೆ ಹೋಗುವುದಕ್ಕೆ ಮೊದಲೇ ಇಲ್ಲಿಗೆ ಬಂದು 10 ರೂಪಾಯಿ ನೋಟು ಕೊಟ್ಟು ಲೆಕ್ಕದ ಪುಸ್ತಕದಲ್ಲಿ 'ಜ್ಯಾಡೆ' ಅಂತ ಬರಿಸಿಬಿಡಲು ಹೇಳಿದ್ದಾರೆ. ಜತೆಗಿದ್ದ ಪಟೇಲರು 'ನಿಮ್ಮ ಡಾಕ್ಟರದ್ದು ಸರ್ಜನ್ ಬೆರಳು - ಒಂದು 'ಹುಂಡು' ನೆತ್ತರಾಗಲೀ ಒಂದು ಸ್ವಲ್ಪ ಬೇನೆಯಾಗಲೀ ಇಲ್ಲದೇ ಹೊಲಿಗೆ (ಕಟ್ಟು) ಹಾಕಿದರಲ್ಲ - ಭೇಷ್ 'ಕೋಳಿಕಟ್ಟದ ಸರ್ಜನ್' ಅಂತ ಭಾರೀ ಪ್ರಚಾರ ಸಿಕ್ಕಿದೆ' ಅಂತ ಹೇಳು ಅವರಿಗೆ - ಎಂದು ಮೀಸೆ ತಿರುವಿಕೊಂಡರು ಸಾರ್" ಎಂದರು. ಪುಣ್ಯಕ್ಕೆ 'ಕೋಳಿ ಸರ್ಜನ್' ಅಂತ ಹೇಳಲಿಲ್ಲವಲ್ಲ. ಅದೇ ದೊಡ್ಡದು ಎಂದುಕೊಂಡೆ.

ಸುಬ್ಬಯ್ಯ ಮಾಷ್ಟ್ರಿಗೆ ನಡೆಸಿದ 'ಕೋಳಿಕಟ್ಟ ಸರ್ಜರಿ' ವಿಪುಲ ಪ್ರಚಾರವನ್ನೇನೋ ಪಡೆಯಿತು. ಜತೆಗೆ ಪಿಸುಮಾತಿನ 'ಸಣ್ಣ ನುಡಿ'ಯ ಒಳಹರಿವೂ ಪ್ರಾರಂಭವಾಯಿತು. '... ನಿಜವಾಗಿಯೂ 'ಸರ್ಜರಿ' ಕಲ್ತಿದ್ದಾರಾ? ಅಷ್ಟೇ ಏನು. ಎಲ್.ಎ.ಎಂ.ಎಸ್. ಓದಿದ್ದಾದರೂ ನಿಜವೇನು...? ಮತ್ತೆ ಆ ಡಿಗ್ರಿ ಸರ್ಟಿಫಿಕೇಟ್‌ನ್ನು ಕಟ್ಟು ಹಾಕಿಸಿ ಯಾಕೆ ಕ್ಲಿನಿಕ್‌ನಲ್ಲಿ ತೂಗಹಾಕಿಲ್ಲಾ?...ಲ್ಲಾ...ಲ್ಲಾ ಇತ್ಯಾದಿ ಇತ್ಯಾದಿ.

ಸಂದೇಹದ ಸುಳಿ

ಆಗಿನ ದಿನಗಳಲ್ಲಿ ಪುತ್ತೂರಿನಂಥ ಪಟ್ಟಣಗಳಲ್ಲೇ ಎಮ್.ಬಿ.ಬಿ.ಎಸ್. ಡಾಕ್ಟರುಗಳು 2–3 ಜನ ಇಬ್ಬರು. ಎಲ್.ಐ.ಎಮ್. ಎಂಬ ಮದರಾಸು ಸರಕಾರದ ಕೋರ್ಸ್ ಕಲಿತವರು ನಾಲ್ಕಾರು ಜನರಿದ್ದರು. ಎಲ್.ಎಮ್.ಪಿ (ಎಮ್.ಬಿ.ಬಿ.ಎಸ್.ನ ಕಿರಿಸೋದರ!) ಪ್ರಾಕ್ಟೀಶನರು ಒಬ್ಬರು ಬಹು ಪ್ರಸಿದ್ಧ ಪ್ರಸೂತಿತಂತ್ರಜ್ಞರೆಂದು ಖ್ಯಾತರಾಗಿದ್ದರು. ಆದರೆ – ಈ 'ಲಾಮ್ಸ್' (ಎಲ್.ಎ.ಎಮ್.ಎಸ್.) ಎಂಬುದು ಹೆಚ್ಚು ಜನರಿಗೆ ತಿಳಿದಿರಲಿಲ್ಲ. ಪುತ್ತೂರಿನ ಸುತ್ತಮುತ್ತ ಅಂಥಾ ಡಾಕ್ಟರುಗಳು ಯಾರೂ ಇರಲಿಲ್ಲ! ಇಷ್ಟೇ ಸಾಲದು ಎಂಬಂತೆ ನನ್ನ ನಾನಾ ವಿಧದ, ನಾನಾ ರಂಗದ ಚಟುವಟಿಕೆಗಳು ಸಾಕಷ್ಟು ಪ್ರಚಾರವಾಗಿದ್ದುದರಿಂದ ಇವನು ನಿಜವಾಗಿಯೂ ವೈದ್ಯಕೀಯ ಓದಿ ಪಾಸಾಗಿದ್ದಾನೆಯೇ ಎಂಬ ಸಂದೇಹ ಒಳಗಿಂದೊಳಗೆ ಹೊಗೆಯಾಡುತ್ತಲೇ ಇತ್ತು!

ಇದು ಇಷ್ಟಕ್ಕೇ ಮುಗಿಯಲಿಲ್ಲ. ನಮ್ಮೂರ ಯುವಕರು ಕೆಲವರು 'ಮೈಸೂರು ನೋಡಲಿಕ್ಕೆ ಹೋಗಿದ್ದಾಗ, ನೆನಪಿಗೆ ಬಂದುದು 'ಪಾದೆ ಆಸ್ಪತ್ರೆಯ ಹತ್ತಾಣೆ ಡಾಕ್ಟರು ಮೈಸೂರಿನಲ್ಲಿ ಕಲಿತೆನೆಂದು ಹೇಳುತ್ತಿದ್ದ ಆಯುರ್ವೇದ ಕಾಲೇಜು ಕಾಲೇಜಿನ ಬಳಿಯ ವೃತ್ತದಲ್ಲಿದೆ ಎಂಬುದರಿಂದ ನಾಲ್ಕಾರು ಸಾರಿ ಆ ಸ್ಥಳದ ಸುತ್ತಮುತ್ತ ತಿರುಗಿದರು. Halt and Proceed ಎಂಬ ರಸ್ತೆ ಸಂಚಾರದ ಸೂಚನಾ ಫಲಕವನ್ನೂ ಬಿಡದೆ ಎಲ್ಲಾ ಬೋರ್ಡ್‌ಗಳನ್ನು ಓದಿದರೂ ಎಲ್ಲಿಯೂ 'ಆಯುರ್ವೇದ ಕಾಲೇಜು' ಎಂಬ ಹೆಸರಿನ ಬೋರ್ಡ್ ಗೋಚರಿಸಲೇ ಇಲ್ಲ! ಏನಿದರ ಅರ್ಥ? ಅಂಥಾ ಹೆಸರಿನ ಕಾಲೇಜೇ ಇಲ್ಲ. ಓದಿದ್ದೂ ಇಲ್ಲ; ಡಿಗ್ರಿ ಸರ್ಟಿಫಿಕೇಟ್ ಪಡೆದದ್ದೂ ಇಲ್ಲ! ಎಂದೇ ಇದರ ಅರ್ಥ ಎಂದಲ್ಲವೇ?

ಆ ಹೆಸರಿನ ಕಾಲೇಜೇ ಇಲ್ಲ!

'ಅನುಭವ ಕಥನ'ವನ್ನು ಮುಂದುವರಿಸುವುದಕ್ಕೆ ಮುನ್ನ ಇಲ್ಲಿ ಕೆಲವೊಂದು ಘಟನೆಗಳನ್ನೂ ಅವುಗಳ ಪರಿಣಾಮಗಳನ್ನೂ (ನನಗೆ ಸಂಬಂಧಿಸಿದಂತೆ) ತೀರ ಸಂಕ್ಷಿಪ್ತವಾಗಿಯಾದರೂ ಹೇಳಲೇಬೇಕಾಗಿದೆ.

ನನ್ನ ಎಲ್.ಎ.ಎಂ.ಎಸ್. ಶಿಕ್ಷಣದ ಕೊನೆಯ ಹಂತದ ತೀರಕೊನೆಯ ದಿನಗಳಲ್ಲಿ ಮೈಸೂರಿನ ಆಯುರ್ವೇದದ ಕಾಲೇಜಿನ ಸಮಗ್ರ ಅಭಿವೃದ್ಧಿಗೆ ಸರಕಾರವನ್ನು ಒತ್ತಾಯಿಸುವ ಸಲುವಾಗಿ (ಇತರ ಎಲ್ಲಾ ವಿಧಿ–ವಿಧಾನಗಳು ವಿಫಲವಾದುದರಿಂದ) ಅನಿವಾರ್ಯವಾಗಿ 'ಸತ್ಯಾಗ್ರಹ'ವನ್ನೇ ಆರಂಭಿಸಿದ್ದರು. ಅದು 3 ತಿಂಗಳಷ್ಟು ದೀರ್ಘಕಾಲ ನಡೆಯಿತು. ಅದು ರಾಜಕೀಯವಾಗಿ ಹಾಗೂ

ಆಡಳಿತಾತ್ಮಕವಾಗಿ ಒಂದು ಸಂದಿಗ್ಧ ಕಾಲ–ಮೈಸೂರು (ಸರಕಾರದ) ಆಡಳಿತದ ಕೊನೆಯ ದಿನಗಳಲ್ಲಿ ಪ್ರಾರಂಭವಾದ ಈ ಸತ್ಯಾಗ್ರಹ 'ವಿಶಾಲಮೈಸೂರು' ನಿರ್ಮಾಣದ ದಿನಗಳವರೆಗೂ ಮುಂದುವರಿಯಿತು. ಕೊನೆಗೂ ಆಡಳಿತ ಕಣ್ಣುತೆರೆದುನೋಡಿ ವಿದ್ಯಾರ್ಥಿಗಳ ಹೆಚ್ಚಿನ ಬೇಡಿಕೆಗಳನ್ನು ಒಂದೊಂದಾಗಿ ಕಾರ್ಯರೂಪಕ್ಕೆ ತರಲು ಒಪ್ಪಿಕೊಂಡಿತು. ಅಷ್ಟೇ ಅಲ್ಲ ಒಂದು ಸಂಜೆ ಅದಕ್ಕೆ ನಾಂದಿಹಾಡಿ, 'ಸರಕಾರೀ ಆಯುರ್ವೇದ ಯುನಾನಿ ಕಾಲೇಜು' (ಮೈಸೂರು) ಎಂಬ ನಾಮಫಲಕವನ್ನು ಸದ್ದಿಲ್ಲದೆ ಕೆಳಗಿಳಿಸಿತು. ಅದರ ಸ್ಥಾನದಲ್ಲಿ "College of Indian Medicine" ಎಂಬ ಬೋರ್ಡನ್ನು ಹಾಕಿತು ಅದೇ ಸ್ಥಳ; ಅದೇ ಕಟ್ಟಡ, ಅದೇ ಕಾಲೇಜು; ಅದೇ ಶಿಕ್ಷಣ; ಅದೇ ವಿದ್ಯಾರ್ಥಿಗಳು; ಅದೇ ಶಿಕ್ಷಕರು, ಎಲ್ಲ ಅದೇ, ಆದರೆ, ಬೋರ್ಡ್ ಮಾತ್ರ ಬೇರೆ! (ಇದನ್ನೇ ನಮ್ಮೂರ ಯುವ 'ಮೈಸೂರು ಯಾತ್ರಿಕರು' ಕಂಡದ್ದು!)

ಮೈಸೂರು ಅರಮನೆಯ ಸಂಸ್ಕೃತ ಪಾಠಶಾಲೆಯ ಅಂಗವಾಗಿ ಬಹುಕಾಲದ ಹಿಂದೆ ಪ್ರಾರಂಭವಾಗಿದ್ದ ಆಯುರ್ವೇದ ಪಾಠಶಾಲೆ 1920ರ ದಶಕದಲ್ಲಿ ಗುಂಡ್ಲು ಪಂಡಿತ, ವೈದ್ಯ ಗೋಪಾಲಾಚಾರ್ಯ, ಅಂಬಳೆ ಅಣ್ಣಯ್ಯ ಪಂಡಿತರು ಮೊದಲಾದವರ ನೇತೃತ್ವದಲ್ಲಿ ಸ್ವಂತ ಕಟ್ಟಡವನ್ನು ಹೊಂದಿ, ಕೆ.ಆರ್. ಆಸ್ಪತ್ರೆಯ ಎದುರು ಭವ್ಯವಾದ ಕಟ್ಟಡದಲ್ಲಿ ಪ್ರತಿಷ್ಠಾಪಿತವಾಗಿ ಸ್ವಂತ ಅಸ್ತಿತ್ವವನ್ನು ಪಡೆಯಿತು. ಆಡಳಿತಾತ್ಮಕವಾಗಿ ಸ್ಥಳೀಯ ಸ್ವಯಂಆಡಳಿತ ಹಾಗೂ ಮುಜರಾಯಿ ಇಲಾಖೆಗಳಿಗೆ ಜೋಡಿತವಾಗಿದ್ದ, ಕಾಲದ ಅಗತ್ಯಕ್ಕೆ ಅನುಗುಣವಾಗಿ ಕ್ರಮೇಣ ಆಯುರ್ವೇದದ ಜತೆಗೆ 'ಅಲೋಪತಿ' (ಆಧುನಿಕ 'ವೈದ್ಯಶಾಸ್ತ್ರ') ಶಿಕ್ಷಣವನ್ನೂ ಕಾಲೇಜಿನಲ್ಲಿ ನೀಡುವುದಕ್ಕೆ ವ್ಯವಸ್ಥೆಯಾಯಿತು. ಅದುವರೆಗೆ ಇದ್ದ ಆಯುರ್ವೇದ ವಿದ್ವತ್ ಪರೀಕ್ಷೆ ಹಾಗೂ "ಆಯುರ್ವೇದ ವಿದ್ವತ್" ಪದವಿ ಜತೆಗೆ 'ಎಲ್.ಎ.ಎಮ್.ಎಸ್.' ಉಪಾಧಿಯನ್ನು ನೀಡುವ ಪರಿಪಾಠ ಪ್ರಾರಂಭವಾಯಿತು. ಇವೆಲ್ಲವೂ ಮೈಸೂರು ರಾಜ್ಯ ಸರಕಾರದ ಅಧಿಕೃತ ಇಲಾಖೆಗಳಿಂದಲೇ ನಡೆದರೂ 'ಗುಂಡ್ಲು ಪಂಡಿತರ ವೈದ್ಯ ಪಾಠಶಾಲೆ' ಎಂಬ ಅಡ್ಡಹೆಸರು ಮಾತ್ರ ಹಾಗೆಯೇ ಉಳಿಯಿತು.

1948ರ ಸುಮಾರಿಗೆ ಡಾ॥ ಸಿ. ದ್ವಾರಕಾನಾಥರು ಈ ಕಾಲೇಜಿನ ಪ್ರಾಂಶುಪಾಲರಾಗಿ ನೇಮಕಗೊಂಡ ತರುವಾಯ ಹಲವಾರು ಮಹತ್ವದ ಬದಲಾವಣೆಗಳಾದವು. ಕಾಲೇಜಿನ ಹೆಸರು ಪ್ರಸಿದ್ಧಿಗಳಿಸಿಕೊಂಡು ಕರ್ನಾಟಕದ ವಿವಿಧ ಭಾಗಗಳಿಂದ ವಿದ್ಯಾರ್ಥಿಗಳು ಬಂದು ಸೇರಿದರು. ಅವರು ಸೂಚಿಸಿದ ಬದಲಾವಣೆಗಳಲ್ಲಿ ಕಾಲೇಜಿನ ಪುನರ್ನಾಮಕರಣವೂ ಒಂದು: "ಕಾಲೇಜ್ ಆಫ್ ಇಂಡಿಯನ್ ಮೆಡಿಸಿನ್" ಎಂದಾಯಿತು.

ವೈದ್ಯರಲ್ಲಿ ಮೂರು ವರ್ಗ

ಪಾರಂಪರಿಕವಾಗಿ ಆಯುರ್ವೇದ ಚಿಕಿತ್ಸಾಕಾರ್ಯವನ್ನು ನಿರ್ವಹಿಸಿಕೊಂಡು ಬರುತ್ತಿದ್ದವರ ಸಂಖ್ಯೆ ಕ್ರಮೇಣ ಇಳಿಮುಖವಾಗುತ್ತಿದ್ದುದರಿಂದ, ಆಯುರ್ವೇದ ಶಿಕ್ಷಣವನ್ನು ನೀಡಿ ವೈದ್ಯರನ್ನು ತಯಾರಿಸುವ ಕ್ರಮ ರೂಢಿಗೆ ಬಂತು. ಇವರು ತಜ್ಞರೂ ಪ್ರಾಜ್ಞರೂ ಆದ 'ಗುರು' ಮುಖೇನ ಕಾಲೇಜಿನಲ್ಲಿ ವೈದ್ಯ ವಿದ್ಯೆಯನ್ನು ಕಲಿತವರು. ಇಂತಹವರದು ಇನ್ನೊಂದು ವರ್ಗ; ಮೂರನೆಯ ವರ್ಗ ಸರಕಾರವೇ ಸ್ಥಾಪಿಸಿ ನಡೆಸುತ್ತ ಬಂದ ಸಂಯುಕ್ತ ವೈದ್ಯ ಶಿಕ್ಷಣ ಪಡೆದ ಡಾಕ್ಟರುಗಳು ಈ ಮೂರನೇ ವರ್ಗದ ಡಾಕ್ಟರುಗಳು, ಕಾಲೇಜಿನಲ್ಲಿ 4 ವರ್ಷಗಳ ಆಯುರ್ವೇದ ಶಿಕ್ಷಣದ ಜತೆಗೆ ಆಧುನಿಕ ಚಿಕಿತ್ಸಾ ಪದ್ಧತಿ (ಅಲೋಪತಿಯನ್ನೂ) ಕಲಿತುಕೊಂಡವರು. ಹೀಗಾಗಿ ಈ ಶಿಕ್ಷಣ ವಿಧಾನಕ್ಕೆ 'ಇಂಟಿಗ್ರೇಟೆಡ್ ಮೆಡಿಸಿನ್" ಎಂಬ ನಾಮಕರಣವೂ ಆಯಿತು (ಇದು ಪ್ರಥಮತಃ ಪ್ರಾರಂಭವಾದದ್ದು ಮದರಾಸ್ ಪ್ರಾಂತ್ಯದಲ್ಲಿ. ದಕ್ಷಿಣ ಕನ್ನಡ, ಬಳ್ಳಾರಿ ಜಿಲ್ಲೆಗಳು ಆ ಕಾಲದಲ್ಲಿ ಮದರಾಸ್ ಪ್ರಾಂತ್ಯದಲ್ಲಿದ್ದವು). ಮೈಸೂರಿನಲ್ಲಿ ಆಯುರ್ವೇದ ವೈದ್ಯರು 'ಪಂಡಿತರು' (ಅಲೋಪತಿಯವರು ಎಮ್.ಬಿ.ಬಿ.ಎಸ್., ಎಲ್‌ಎಮ್‌ಪಿ ಇತ್ಯಾದಿ ಡಾಕ್ಟರುಗಳು) ಆಲೋಪತಿ ಆಯುರ್ವೇದ ಸಂಯುಕ್ತ ಶಿಕ್ಷಣ ಪಡೆದ ಎಲ್.ಎ.ಎಮ್.ಎಸ್. ಪದವೀಧರರು ಮಾತ್ರವಾಗಿದ್ದು 'ಎಡೆಬಿಡಂಗಿ'ಗಳಾದರು. ಅತ್ತ ಅಲೋಪತಿ ಶಾಸ್ತ್ರವನ್ನು ಕಲಿತರೂ, ಎಮ್.ಬಿ.ಬಿ.ಎಸ್. ಆ ಸಾಲಿನಲ್ಲಿ ನೋಂದಣಿ ಇಲ್ಲ; ಇತ್ತ ಆಯುರ್ವೇದದ ಸಾಲಿನಲ್ಲೂ ನೋಂದಣಿಗೆ ವ್ಯವಸ್ಥೆ ಇಲ್ಲದ ಸ್ಥಿತಿ ಆಯಿತು. ಎಲ್.ಎ.ಎಮ್.ಎಸ್ ಡಾಕ್ಟರುಗಳು 1950ರ ಸುಮಾರಿಗೆ ಈ ಅವಸ್ಥೆಯಲ್ಲಿದ್ದರು.

ಎಲ್.ಎ.ಎಮ್.ಎಸ್. ಪದವಿ ಪಡೆದ ಹೆಚ್ಚಿನವರು ಗ್ರಾಮಾಂತರ ಪ್ರದೇಶಗಳಲ್ಲಿ ಚಿಕಿತ್ಸಾಲಯ ತೆರೆದರು. ಆ ದೃಷ್ಟಿಯಿಂದ ಗ್ರಾಮೀಣದ ಬಳಗದವರಾದರು; ಅಲ್ಲಿ ಬಡವರ ಹಾಗೂ ಹಿಂದುಳಿದ ಜನಗಳ ನಡುವೆ ರೋಗ ಚಿಕಿತ್ಸೆ ಆಯುರ್ವೇದದ್ದೋ ಅಲೋಪತಿಯದ್ದೋ ಎಂಬುದು ಸಮಸ್ಯೆಯೇ ಅಗಿರಲಿಲ್ಲ. ಕಮ್ಮಿ ವೆಚ್ಚದಲ್ಲಿ ಆದಷ್ಟು ಬೇಗ ರೋಗ ವಿಮುಕ್ತನಾಗಬೇಕೆಂಬುದರಲ್ಲೇ ರೋಗಿಗಳಿಗೆ ಆಸಕ್ತಿ. ಮದ್ರಾಸಿನಲ್ಲಿ ಎಲ್‌ಐಎಮ್ ಡಾಕ್ಟರುಗಳು ಇದಕ್ಕೊಂದು ಮಾದರಿಯಾದರು. ಅವರಿಗೆ ಮದರಾಸು ಸರಕಾರ ಸಂಯುಕ್ತ ವೈದ್ಯಕೀಯ ವಿಭಾಗದಲ್ಲಿ ನೋಂದಣಿ ಮಾಡಿಕೊಂಡಿದ್ದರಿಂದ ಅಲೋಪತಿ ಔಷಧಿಗಳನ್ನು ಸಹ ಬಳಸಿಕೊಂಡು ರೋಗೋಪಚಾರ ಮಾಡುವ ಹಕ್ಕು ಉಳಿಯಿತು. ಮೈಸೂರಿನಲ್ಲಿ ಅಂತಹ ಕಾನೂನು ಇರಲಿಲ್ಲವಾಗಿ ತೊಂದರೆಗಳು ಉದ್ಭವಿಸುವ ಪ್ರಸಂಗವುಂಟಾಯಿತು.

ತಕ್ಷಣ ಎಲ್.ಎ.ಎಮ್.ಎಸ್. ಅಸೋಸಿಯೇಶನ್ – ಮಂಗಳೂರು ವಿಭಾಗದ ಸದಸ್ಯರು ಈ ಅಂಶವನ್ನು ಸರಕಾರಕ್ಕೆ ಮನವರಿಕೆ ಮಾಡಿಕೊಟ್ಟು ಕಾಯ್ದೆಯನ್ನೇ ತರಲು ಒತ್ತಾಯಿಸಿದರು. ಅದರಲ್ಲಿಯೂ ನುಸುಳಿದ್ದ ಕೆಲವು ಲೋಪದೋಷಗಳನ್ನು ತಿದ್ದುಪಡಿ ಮಾಡಿಕೊಂಡು 'ರಿಜಿಸ್ಟ್ರೇಷನ್ ಬೋರ್ಡ್' ಪ್ರಾರಂಭವಾಗುವಂತೆ ಸುಮಾರು ಎರಡು ವರ್ಷಗಳ ಕಾಲ ನಿರಂತರ ಶ್ರಮಿಸಿ, ಯಶಸ್ವಿಯಾದರು. ಡಾ॥ ಜೆ.ಎಸ್. ರಾಮನ್, ಡಾ॥ ಗುರುರಾಜ್, ಡಾ॥ ಎನ್.ಆರ್. ಶೆಟ್ಟಿ ಮೊದಲಾದವರು, ಮಂಗಳೂರಿನ ಡಾ॥ ಕೆ.ಎ. ವಿಠ್ಠಲ್ ಬಳಗದವರು ಅಂತಹವರಲ್ಲಿ ಅಗ್ರಗಣ್ಯರು. ನಾನು ಕಾರ್ಯದರ್ಶಿ ಸ್ಥಾನದಲ್ಲಿದ್ದು ತಿಂಗಳುಗಟ್ಟಲೆ ಶಾಸಕರ ಸರಕಾರಿ ಅಧಿಕಾರಿಗಳ/ ಪತ್ರಕರ್ತರ/ ಹಿರಿಯ ರಾಜಕಾರಣಿಗಳ ಮೇಲೆ ಪ್ರತ್ಯಕ್ಷ/ ಪರೋಕ್ಷ ಒತ್ತಡ ಹೇರಿ ಸರಕಾರ ಸೂಕ್ತ ತೀರ್ಮಾನ ಕೈಗೊಳ್ಳುವಂತೆ ಮಾಡುವುದರಲ್ಲಿ ಯಶಸ್ಸು ದೊರಕಿತು.

ಈ ಎಲ್ಲಾ ಹಾರಾಟ–ಹೋರಾಟಗಳಲ್ಲಿ ಸಂಪೂರ್ಣ ಸೇರಿಹೋಗಿದ್ದು ಆಗಾಗ ಬೆಂಗಳೂರಿಗೆ ಹೋಗುವುದು, ಅಲ್ಲಿ ವಾರಗಟ್ಟಲೆ ಇರಬೇಕಾಗುವುದು ಇತ್ಯಾದಿಗಳಿಂದ 'ಗ್ರಾಮೀಣ ಕ್ಲಿನಿಕ್' ನಿರ್ವಹಣೆ ಸ್ವಲ್ಪ ಕುಂಠಿತವಾಯಿತು.

ಎರಡನೇ ವರ್ಷದ ಪ್ರಾರಂಭ ತುಂಬ ಉತ್ಸಾಹಪೂರ್ಣವಾಗಿತ್ತು. ನಿತ್ಯ ಹೊರರೋಗಿಗಳ ಜತೆಗೆ ಸಂಜೆಯೊಳಗಾಗಿ 2–3 ಮನೆಭೇಟಿಗಳು! ಈಗ ಮನೆಭೇಟಿಯ ಫೀಸ್ ಅವರವರ ಅಂತಸ್ತಿಗೆ ತಕ್ಕಂತೆ ತಾನಾಗಿ ದೊರಕುತ್ತಿತ್ತು.

ಮೋಟಾರ್ ಸೈಕಲ್ ತನ್ನ ಪಾಲಿನ 'ಸಹಯೋಗ' ನೀಡುವುದರಲ್ಲಿ ಸಹಕರಿಸಿತು.

ದೀಪಾವಳಿಗೊಮ್ಮೆ ಲೆಕ್ಕ ಜ್ಯಾಡೆ

ಜೋಗಿ ಮೂಲೆ ನಾರಾಯಣರಾಯರು ತಮ್ಮ ಚಿಕ್ಕ ಮಗಳನ್ನು ಕರೆತಂದವರು ಔಷಧಿ ಸಿಕ್ಕಿದ ಕೂಡಲೇ ಜತೆಗೆ ಬಂದಿದ್ದ ತಮ್ಮ ಕೆಲಸದಆಳಿನೊಂದಿಗೆ ಮಗುವನ್ನು ಮನೆಗೆ ಕಳುಹಿಸಿ, ತಾವೊಂದು ಪತ್ರಿಕೆಯನ್ನು ಓದುತ್ತಾ ಕುಳಿತು ಬಿಟ್ಟರು. ಹಾಜರಿದ್ದ ಇನ್ನಿಬ್ಬರು ರೋಗಿಗಳು ಹೊರಟುಹೋದಮೇಲೆ 'ಡಾಕ್ಟ್ರೇ ನಾನೊಂದು ಮಾತು ಹೇಳುತ್ತೇನೆ – ತಪ್ಪು ತಿಳಿದುಕೊಳ್ಳಬಾರದು ತಾವು' ... ಏನೋ, ಗಹನವಾದ ವಿಚಾರ ಹೇಳಲು ಪೀಠಿಕೆ ಹಾಕಿದರು. ಅವರು ಅನಗತ್ಯದ ಹಾಳುಹರಟೆ ಲೊಟ್ಟಪಟ್ಟಾಂಗದ ವ್ಯಕ್ತಿಯಲ್ಲ ಎಂಬುದು ಗೊತ್ತಿದ್ದರಿಂದ 'ಹೇಳಿ' ಎಂದು ಆಹ್ವಾನ ನೀಡಿದೆ.

'ಮಕ್ಕಳು ಮರಿ ಇರುವ ನಮ್ಮಂಥವರ ಮನೆಯವರಿಗೆಲ್ಲ ನೀವು ಕ್ಲಿನಿಕ್ ತೆರೆದು ಸರಿಯಾದ ಔಷಧಿ ಕೊಟ್ಟು ದೊಡ್ಡ ಉಪಕಾರ ಮಾಡುತ್ತಿದ್ದೀರಿ. ಆದರೆ

ಒಂದೊಂದು ಸಲ 'ನಗದಿ'ಯಿಂದ ಬಿಲ್ ಕೊಡಲು ಕಷ್ಟವಾಗುತ್ತದೆ... ನಿಮ್ಮನ್ನು ನಾನು ಕೇಳಿಕೊಳ್ಳುವುದಿಷ್ಟೇ – 'ನೀವು ಔಷಧಿ ಖರ್ಚನ್ನೆಲ್ಲಾ ದಿನ ದಿನ ರಿಜಿಸ್ಟ್ರಿಯಲ್ಲಿ ದಾಖಲಿಸುತ್ತಿದ್ದೀರಿ. ಅದನ್ನು ಆಗಿಂದಾಗ್ಗೆ ಕೊಡಲು ನಮಗೆ ಕಷ್ಟವಾಗುತ್ತದೆ. ಹಾಗಂತ ನಾವೇನೂ ಮೋಸ ಮಾಡುವುದಿಲ್ಲ. ವರ್ಷಕ್ಕೊಮ್ಮೆ ದೀಪಾವಳಿಯಿಂದ ದೀಪಾವಳಿಗೆ 'ಲೆಕ್ಕ ಜ್ಯಾಡೆ' ಮಾಡುವ ಕ್ರಮವುಂಟಲ್ಲ (ಬಂಡಸಾಲೆಗಳಲ್ಲಿ ಅಂದರೆ ಸ್ಥಳೀಯ ದಿನಸಿ ಅಂಗಡಿ ಇತ್ಯಾದಿಗಳಲ್ಲಿ) ಹಾಗೆ ನೀವೂ ವರ್ಷಾವಧಿಲೆಕ್ಕ ಅಂತ ಮಾಡಿಕೊಂಡರೆ ತುಂಬಾ ಉಪಕಾರ ಆಗುತ್ತದೆ... ತಪ್ಪು ತಿಳಿದುಕೊಳ್ಳಬಾರದು ನೀವು' – ಹೀಗೆ ತಮ್ಮ ಅಹವಾಲು ಹೇಳಿಕೊಂಡು ಉತ್ತರಕ್ಕಾಗಿ ಸ್ವಲ್ಪ ಹೊತ್ತು ಕಾದರು. ನಾನು ಏನು ಹೇಳಲೂ ತೋಚದೆ ಸುಮ್ಮನಿದ್ದೆ. ತಮ್ಮ ಸೂಚನೆಗೆ ಸಮ್ಮತಿ ಇಲ್ಲ ಎಂಬುದಾಗಿ ಭಾವಿಸಿಕೊಂಡು ಚಿಕಿತ್ಸೆಯ ಖರ್ಚು ಅಂತ 2 ರೂಪಾಯಿಗಳನ್ನು ಮೇಜಿನ ಮೇಲೆ ಇಟ್ಟು ನಮಸ್ಕಾರ ಹೇಳಿ ಹೊರಟು ಹೋದರು.

ಈಗ ಚಿಂತಿಸುವ ಸರದಿ ನನ್ನದಾಯಿತು. ರಾಯರು ಸೂಚಿಸಿದ್ದರಲ್ಲಿ 'ಉಭಯತೋಪಿ' ಲಾಭವಿದೆ. ರೋಗಿಗಳಿಗೆ ಯಾವುದೇ ಸಮಯದಲ್ಲಾದರೂ ಔಷಧೋಪಚಾರ 'ಸಿಗುವ' ಭರವಸೆ – ವರ್ಷಕ್ಕೊಮ್ಮೆ ನಗದಿಯಾಗಿ ದೊಡ್ಡ ಮೊತ್ತದ ಹಣ ಕೈಗೆ ಬರುವ ಸಾಧ್ಯತೆ ನನಗೆ... ಈಗ ಸುಮಾರು 150ರಷ್ಟು ರೋಗಿ ಪರಿವಾರ ನನ್ನ ಪಟ್ಟಿಯಲ್ಲಿದೆ. ಪರಿವಾರವೊಂದರಲ್ಲಿ 3–4 ಜನರಾದರೆ ವಾರ್ಷಿಕ ಚಿಕಿತ್ಸಾಫಲಾನುಭವಿಗಳಿಂದ ರೂ. ತಲಾ 20 ರೂಪ್ಯಾ (ವಾರ್ಷಿಕ) ಆದಾಯ ಅಂತ ಲೆಕ್ಕ ಹಾಕಿದರೂ ರೂ... ರೂ... ದೊಡ್ಡ ಮೊತ್ತದ ಹಣ. ಆದರೆ ವರ್ಷಪೂರ್ತಿ ಔಷಧಿ ಅಂಗಡಿಯವರಿಗೆ (ಮಂಗಳೂರಿನ ಮೆಡಿಕಲ್ ಸ್ಟೋರ್‌ನವರಿಗೆ) ಕ್ಲಿನಿಕ್‌ನ ಬಾಡಿಗೆ, ಸ್ಟಾಫ್‌ನ ಸಂಬಳ, ಪೆಟ್ರೋಲ್ ಮತ್ತಿತರ ಖರ್ಚನ್ನು ವರ್ಷದ ತನಕ ನಿಭಾಯಿಸಿಕೊಳ್ಳುವುದು ಹೇಗೆ? ಸಾಲ ಮಾಡಲೆ? ಈ ಹತ್ತಾಣೆ ಡಾಕ್ಟರಿಗೆ ಅಷ್ಟೊಂದು ಹಣ (ಸಾಲ) ಯಾರು ಕೊಡುತ್ತಾರೆ? ... ಚಿಂತನ ಮಂಥನದಲ್ಲಿ ರಾತ್ರಿಯಾದ್ದೇ ಗೊತ್ತಾಗಲಿಲ್ಲ. ಕಾಂಪೌಂಡರ್ ಹೊರಗಿನ ಬಾಗಿಲು ಮುಚ್ಚಿ ಹೊರಟುಹೋಗಿದ್ದ. ರಾತ್ರಿಯ ಊಟ ತಂದಿಟ್ಟ. ಬೋರ್ಡಿಂಗ್ ಭಟ್ಟರೂ ಸ್ವಲ್ಪ ಹೊತ್ತು ನಿಂತಿದ್ದು ಜಾಗ ಖಾಲಿ ಮಾಡಿದ್ದರು... ರು... ರು...

ರಾತ್ರಿಯೆಲ್ಲಾ ಚಿಂತನ ಮಂಥನ ನಡೆದೇ ನಡೆಯಿತು. ಕೊನೆಗೆ 'ಇದ್ದದ್ದೂ ಹೋಯಿತು ಮದ್ದಿನ ಗುಣದಿಂದ' ಅಂತ ಆಗಬಾರದು ಎಂದು ನಿರ್ಧರಿಸಿ ಯಥಾಸ್ಥಿತಿಯನ್ನು ಮುಂದುವರಿಸುವುದೇ ಸರಿ ಎಂದು ನಿರ್ಧರಿಸಿದೆ (ಆದರೆ ಕುಳವಾರುಗಳು ಕ್ರಮೇಣ ತಾವಾಗಿಯೇ ಈ ಕ್ರಮವನ್ನು ಜಾರಿಗೆ ತಂದರು!).

ಒಂದು ಹಲ್ಕೀ ಇಂಜೆಕ್ಷನ್ ಕೊಡಿ

ಸೋಂಪ (ಸೋಮಪ್ಪ) ತನ್ನ ತಾಯಿಯನ್ನು ಕರೆದುಕೊಂಡು ಬಂದವನೇ ಒಂದು ದೀರ್ಘದಂಡ ನಮಸ್ಕಾರ ಹಾಕಿದ (ವಿಷು ಸಂಕ್ರಮಣದ ಮರುದಿನ 'ವಿಷುಕಣಿ'ಗೆ 'ಬುಳೆ ಕಾಣಿಕೆ' ಸಲ್ಲಿಸಿ ಹೀಗೆ ಕಾಲು ಹಿಡಿಯುವ ಸಂಪ್ರದಾಯವಿತ್ತು). ನನಗೆ ತುಸು ಸಂಕೋಚವೇ ಆಯಿತು. ನಾಚಿಕೆಯೂ ಆಯಿತು. ಸೋಂಪ ಒಂದು ಕಾಲದಲ್ಲಿ ನಮ್ಮ 'ಖಾಯಂ' ಒಕ್ಕಲಾಗಿದ್ದವನು. ಕ್ರಮೇಣ ಅಡಿಕೆತೋಟಕ್ಕೆ ಮದ್ದು ಚಿಮುಕಿಸುವುದರಲ್ಲಿಯೂ ಹಣ್ಣುಅಡಕೆಯ ಗೊನೆಗಳನ್ನು ಅಡಿಕೆಮರದಿಂದ ಕೀಳುವುದನ್ನು ತನ್ನ ವಿಶೇಷ ಉದ್ಯೋಗವಾಗಿ ಮಾಡಿಕೊಂಡ. ಅದರಲ್ಲಿ ವರ್ಷಪೂರ್ತಿ ಅಲ್ಲದಿದ್ದರೂ, ಆರು ತಿಂಗಳು ಕಾಲ ಒಳ್ಳೇ ಸಂಪಾದನೆ ಇತ್ತು. ಚೆನ್ನಾಗಿ ದುಡಿದ; ಕುಡಿದ. ಕೊನೆಗೆ ಕೆಲಸ ಮಾಡಲು ಅಸಮರ್ಥನಾಗಲು ಮಕ್ಕಳು ಮನೆಯಿಂದ ಹೊರಗೆ ಹಾಕಿದರು. ಮುದುಕಿ ತಾಯಿಯೊಬ್ಬಳು ಅವನನ್ನು ಹೇಗೋ ಸಂಭಾಳಿಸುತ್ತಿದ್ದಳು. ಎರಡು ಮನೆಗಳಲ್ಲಿ ಹನಿಲುಕೆಲಸ (ಪಾತ್ರೆ ತೊಳೆದು, ನೆಲ ಒರೆಸುವುದು ಇತ್ಯಾದಿ ಕೆಲಸ) ಮಾಡಿ ಗಂಜಿ ಕಾಣಿಸುತ್ತಿದ್ದಳು. ಈಗ ಜ್ಞಾನೋದಯವಾಯಿತೇನೋ ಸೋಂಪನಿಗೆ. ಹೆಂಡ ಬಿಟ್ಟ (ಹೆಂಡತಿ ಮಕ್ಕಳು ಮೊದಲೇ ಬಿಟ್ಟು ಹೋಗಿದ್ದರು). ತಾಯಿಯನ್ನು ಸಾಕಲು ವಿಧಿಯಿಲ್ಲದೆ ತಂಗಿಯ ಮನೆ ಸೇರಿಕೊಂಡ. ಹೆಂಡಬಿಟ್ಟರೂ ಸಂಪಾದನೆಯ ದಾರಿ ಕಾಣಿಸಲಿಲ್ಲ. ಕೊನೆಗೆ 'ಅಡಿಕೆಸುಲಿಯುವ' ಕೆಲಸ ಪ್ರಾರಂಭಿಸಿದ. ದಿನಕ್ಕೆ 2–3 ಆಣೆ ಸಂಪಾದಿಸತೊಡಗಿದ. ಅದರಲ್ಲಿ ಒಂದು ಆಣೆ 'ಧನಿಗಳ' ಮನೆಯಲ್ಲೇ ಉಳಿಸಿ, ಉಳಿದದ್ದನ್ನು ತಂಗಿಗೆ ಕೊಟ್ಟು ದಿನ ದೂಡುತ್ತಿದ್ದ. ಎರಡು ತಿಂಗಳು ಹಾಗೂ ಹೀಗೂ ಮಾಡಿ 2 ರೂಪಾಯಿ (32 ಆಣೆ) ಉಳಿಸಿಕೊಂಡು ಈಗ ತಾಯಿಗೊಂದು ಇಂಜೆಕ್ಷನ್ ಕೊಡಿಸಿ, ಅವಳ ಕಾಯಿಲೆ ರಮ್ಮನೆ ಗುಣಪಡಿಸುವಂತೆ ಪಾದೆ ಆಸ್ಪತ್ರೆಗೆ ಬಂದಿದ್ದ.

ಮುದುಕಿ ಆಗಲೇ ಒಂದು ಕಾಲು ಆಚೆಗೆ ಇರಿಸಿ ಆಗಿತ್ತು ಎಂಬುದು ಸೋಂಪನಿಗೂ ಗೊತ್ತಿತ್ತು. ತಪಾಸಣೆ ಮಾಡಿದ ನನಗೂ ತಿಳಿಯಿತು. ಅಲ್ಲದೆ ಒಂದು ಇಂಜೆಕ್ಷನ್‌ನಿಂದ ಗುಣವಾಗುವ ಕಾಯಿಲೆ ಅಲ್ಲ ಅಂತಲೂ ಅವನಿಗೆ ತಿಳಿದಿತ್ತು. 'ಪಾದೆ ಆಸ್ಪತ್ರೆ ದಾಕುದಾರ ಹತ್ರ ಒಂದು ಇಂಜೆಕ್ಷನ್ ಕೊಡಿಸು' ಅಂತ ತಾಯಿ ಹತ್ತಾರು ಬಾರಿ ಕೇಳಿಕೊಂಡ ಮೇಲೆ ಈಗ ನನ್ನ ಮುಂದೆ ತಾನು 2 ತಿಂಗಳಿಂದ ಸಂಪಾದಿಸಿ (ಉಳಿಸಿದ್ದ) 2 ರೂಪಾಯಿಗಳನ್ನಿಟ್ಟು 'ನೀಟಂಪ' ಅಡ್ಡಬಿದ್ದಿದ್ದಾನೆ.

ಕೋಳೀ ಪಿಳ್ಳೆ ಪೀಸ್

ಗೂನಜ್ಜಿಗೆ ಬೆನ್ನು ಬಾಗಿದೆ; ಕೈ ನಡುಗುತ್ತಿದೆ ಎಲಬು ಚರ್ಮ ಮಾತ್ರ ಇರುವ ವೃದ್ಧೆ. ಯೌವನ ಕಾಲದಲ್ಲಿ ಚೆನ್ನಾಗಿ ಉಂಡುಟ್ಟು 'ಕಾರ್‌ಬಾರ್' ಮಾಡಿದ ಮಹಿಳೆ.

'ನನಗೊಂದು ಮಾತ್ರೆ ಕೊಡು ಡಾಕ್ಟರು. ಅಪ್ಪನಿಗೆ ಕೊಟ್ಟಿದ್ದೆಯಂತಲ್ಲಾ – ಒಂದೇ ಮಾತ್ರೆಗೆ ತಿಂಗಳ ಜ್ವರ ಗುಣ ಮಾಡಿದೆಯಂತಲ್ಲ. ನನಗೂ ಅಂಥಾ ಮಾತ್ರೆ ಕೊಟ್ಟು ಪುಣ್ಯ ಕಟ್ಟಿಕೋ ಡಾಕುಟರ್' – ಎಂದು ಹೇಳಿದ ಗೂನಜ್ಜಿ ಬಗಲಲ್ಲಿ ಇರಿಸಿಕೊಂಡಿದ್ದ ಬಟ್ಟೆಮುಚ್ಚಿದ್ದ ಚಿಕ್ಕ ಬುಟ್ಟಿಯಿಂದ ಒಂದು 'ಕೋಳಿ ಪಿಳ್ಳೆ'ಯನ್ನು ತೆಗೆದು ನೆಲದ ಮೇಲಿಟ್ಟಳು. "ಇದನ್ನು ತೆಕ್ಕೊಂಡು ಒಂದು ಮಾತ್ರೆ ಒಂದೇ ಸರ್ತಿಗೆ ಬೆನ್ನಿನ ಬೇನೆ ಎಲ್ಲ ಕಮ್ಮಿಯಾಗುವ ಮಾತ್ರೆ ಕೊಟ್ಟುಬಿಡು ಡಾಕ್ಟರು..."

ಗೂನಜ್ಜಿಯ ಮಾತಿನಲ್ಲಿದ್ದ ಸ್ವಯಂಪ್ರೇರಿತ ಭರವಸೆಗೆ ಅಚ್ಚರಿಪಡಬೇಕೋ – ಮೌಢ್ಯಕ್ಕೆ ಸಂಕಟ ಪಡಬೇಕೋ ತಿಳಿಯದು. ಆದರೂ – ಕುತೂಹಲದಿಂದ ಕೇಳಿದೆ, 'ಅದೇನು ಇನ್ನೊಂದು ಕೋಳಿಪಿಳ್ಳೆ ಇದ್ದ ಹಾಗಿದೆಯಲ್ಲಾ? ಅದು ಯಾಕೆ?'

'ಅದು ಮಗಾ – ನನ್ನ ಮೊಮ್ಮಕ್ಕಳು ಇಬ್ಬರಿದ್ದಾರಲ್ಲ ಪಾಪ ತಾಯಿ ಕಳ್ಕೊಂಡ ತಬ್ಬಲಿಗಳು. ಮನೇಲಿ ಎರಡು ಹೊತ್ತು ಗಂಜಿಗೇ ತತ್ವಾರ – ಮತ್ತೆ ಏನಾದರೂ ತಿನ್ನಲು ಒಂದಿಷ್ಟು 'ಕುರ್ಲರಿ' (ಮಂಡಕ್ಕಿ/ಹುರಿಯಕ್ಕಿ ಕಳ್ಳೇಪುರಿ) ತೆಕ್ಕೊಂಡು ಹೋಗಿ ಕೊಡೋಣ ಅಂತ ಆಸೆ ಇಟ್ಟುಕೊಂಡಿದ್ದೇನೆ ಡಾಕ್ಟರು – ಅದಕ್ಕೇ!'

ಹಸೆಮಣೆಯಿಂದ ಕೋಳದಕೋಣೆಗೆ

ತಕ್ಕಷ್ಟು ಆಸ್ತಿ–ಪಾಸ್ತಿ ಇದೆ; ಒಬ್ಬನೇ ಮಗ; ಅತ್ತೆ 'ಸದಾ ಮಲಗಿದಲ್ಲೇ' ಎಂಬುದರಿಂದ ತಮ್ಮ ಮಗಳು ಆ ಮನೆಯ ಸೊಸೆಯಾದರೆ ಸುಖವಾಗಿ ಬಾಳಬಹುದೆಂದು ನಂಬಿದ ಬಡ ತಂದೆ ತಾಯಿ ಪ್ರಾಯ 20 ವರ್ಷವಾಗಿದ್ದರೂ ಕಂಕಣಭಾಗ್ಯ ಬಾರದಿದ್ದ 'ಸುಂದರಿ'ಯನ್ನು ಮದುವೆ ಮಾಡಿಕೊಟ್ಟರು. 'ದಿಂಡು' ಕಳೆದ ತರುವಾಯ ಮಗಳನ್ನು ಗಂಡನಮನೆಗೆ ಕಳುಹಿಸಿಕೊಟ್ಟರು ಪತಿ ಪರಮೇಶ್ವರನ ಮನೆಗೆ.

ಈ ಮನೆಯ ವ್ಯವಸ್ಥೆಯೇ ಬೇರೆ ಇತ್ತು. ಮಗ (ಮದುಮಗ)ನನ್ನು ಅಡಿಕೆ ಹಣ್ಣಾಗುತ್ತಿದ್ದುದರಿಂದ 'ತೋಟಕಾಯಲು' ಕಳುಹಿಸಿ ಅಪ್ಪ 'ಜಾಲಿ'ನಲ್ಲಿ (ಅಂಗಳದಲ್ಲಿ) ಒಣಗಲು ಹರಡಿದ್ದ ಅಡಕೆಯ 'ನಿಗ್ರಾಣಿ' ಎನ್ನುತ್ತಾ ಮನೆಯಲ್ಲೇ ಉಳಿಯುವ

ಪದ್ಧತಿಯಿತ್ತು. ಈಗಲೂ ಅದೆ ಮುಂದುವರಿಯಿತು. ನಡು ಇರುಳು ಕಳೆಯುವಷ್ಟರಲ್ಲಿ 'ಕಠಾರನೆ' ಕಿರುಚಿಕೊಂಡು ಸುಂದರಿ ದಡಬಡಿಸಿ ಎದ್ದು ಓಡಿ ಬಂದು ಅತ್ತೆಯ ಕಾಲಬಳಿ ಕುಳಿತು ಬೆಳಗು ಮಾಡಿದಳು. ಏನೋ ಕೆಟ್ಟಕನಸು ಬಿದ್ದಿರಬೇಕೆಂದು ಯಜಮಾನರು ಸಮಾಧಾನ ಹೇಳಿದರು.

ಮಾರನೇ ದಿನ, ಮೂರನೇ ದಿನ ಮತ್ತೇ ಅದೇ ಕಿರುಚಾಟ, ಕೆಟ್ಟಕನಸು ಪುನರಾವರ್ತನೆಯಾಯಿತು. ಭೂತಪ್ರೇತ ಬಾಧೆ ಎಂದು ವಿಭೂತಿ ಮಂತ್ರಿಸಿ ತಂದದ್ದಾಯಿತು. 'ಉರುಬ್ಕ' (ತಾಯಿತ) 'ಕೊರಳಕರ್ಮಣಿ' (ತಾಳಿ ಮಣಿಯ ಸರ)ದ ಜತೆಗೆ ಕೂಡಿಸಿದ್ದಾಯಿತು. ಏನೂ ಗುಣ ಕಾಣಿಸಲಿಲ್ಲ. ಹತ್ತು ಹದಿನೈದು ದಿನ ಕಳೆದರೂ ಪ್ರತಿರಾತ್ರಿ ಹೀಗಾಗುವುದರಿಂದ ಬೇರೆ 'ಉಪಾಯವಿಲ್ಲದೆ' ಕೋಳದಮನೆಯಲ್ಲಿ ರಾತ್ರೆ ಕಟ್ಟಿ ಹಾಕಲು ಪ್ರಾರಂಭವಾಯಿತು. ಮತ್ತು ಅದೇ ಮುಂದುವರಿಯಿತು. ಮುಟ್ಟಿನ ಮೂರುದಿವಸಗಳಲ್ಲಾಗಲಿ ಮನೆಯಜಮಾನರು ಊರಲ್ಲಿ ಇಲ್ಲದಿರುವ ರಾತ್ರಿಗಳಲ್ಲಾಗಲಿ ಕೆಟ್ಟಕನಸು ಸುಂದರಿಯ ಹತ್ತಿರ ಸುಳಿಯುತ್ತಿರಲಿಲ್ಲ.

'ಪಾದೆ ಆಸ್ಪತ್ರೆ ಡಾಕ್ಟರ ಕೈಗುಣ – ಎಲ್ಲರೂ ಹೊಗಳ್ತಾರಲ್ಲ ಒಂದು ಸರ್ತಿ ನಾವೂ ಪರೀಕ್ಷಿಸಿದ ಹಾಗೆ ಆಯಿತು' ಅಂತ ಮಾತಾಡಿಕೊಂಡರು. ಬುಲಾವ್ ಬಂತು. ಕರ್ಣಾಕರ್ಣಿಯಾಗಿ ಒಳಗಿನಗುಟ್ಟು ಕಾಂಪೌಂಡರ್ ಮೂಲಕ ನನ್ನ ಕಿವಿಗೂ ತಲುಪಿತ್ತು. ಹೋಗಿ ನೋಡಿದೆ, ಪರೀಕ್ಷಿಸಿದೆ.

'ಇದು ಗುಣವಾಗುವ ಕೇಸಲ್ಲ. ಅಪ್ಪನ ಮನೆಗೆ ಕಳಿಸಿಬಿಡಿ ಈಗಲೇ, ಇಲ್ಲವಾದರೆ ಮುಂದೆ ತುಂಬಾ ತೊಂದರೆ' ಎಂದು ಉಪದೇಶಿಸಿ ಫೀಸ್ ಕಿಸೆಗೆ ಹಾಕಿಕೊಂಡು ಹಿಂದಿರುಗಿದೆ.

'ನಿಮ್ಮ ಮಗಳು 'ಅರೆಮರುಳಿ' ಅಂತ ಚಿಂತಿಸುವುದು ಬೇಡ – ತನ್ನಿಂದ ತಾನೇ ಗುಣವಾಗುತ್ತದೆ' ಎಂದಷ್ಟೇ ಹೇಳಿ ಕಳುಹಿಸಿದೆ. ಆವೂರಲ್ಲಿ ಅದೇ ಸುಮಾರಿಗೆ ಪ್ರಾರಂಭವಾಗಿದ್ದ ಅಂಗನವಾಡಿ ಕೇಂದ್ರದಲ್ಲಿ 'ಆಯಾ' ಕೆಲಸಕ್ಕೆ ಸೇರಿ – ಮುಂದೆ 'ಹಿಂದಿ' ಕಲಿತು, ಎಲ್ಲೋ ದೂರದ ಊರಿನಲ್ಲಿ ಶಿಕ್ಷಕಿಯಾಗಿ ಸುಖವಾಗಿದ್ದಳು ಎಂದು ತಿಳಿಯಿತು.

ಮದುವೆ ಮನೆಯ ಉಬ್ಬಸ ರೋಗಿ

ಸುಮಾರು 10–12 ಕಿಲೋ ಮೀಟರ್ ದೂರದ 'ಕೊಂಪೆ'ಯ ಸಜ್ಜನ ಮಹಾಶಯರೊಬ್ಬರ ಮನೆಯಲ್ಲಿ ಮಂಗಳಕಾರ್ಯ 'ಎತ್ತಿದ್ದ'ರು (ನಿಶ್ಚಯವಾಗಿತ್ತು). ದೂರದ ಊರಿನ ನೆಂಟಸ್ತಿಕೆ, ಒಂದು ಖಾಸಗಿ ವಾಹನ ತುಂಬ ಬಂದ

'ದಿಬ್ಬಣಿಗ'ರನ್ನು ಊರಾಚೆಯ ಶಾಲೆಯಲ್ಲಿ ಇಳಿಸಿ, ಉಪಚಾರಕ್ಕೆ ವ್ಯವಸ್ಥೆಯಾಗಿತ್ತು. ಮದುವೆ ಮುಹೂರ್ತ ರಾತ್ರೆಗೆ ಇದ್ದರೂ ದೂರದ ಊರೆಂದು 'ವರನ ಕಡೆಯವರು ಬೆಳಿಗ್ಗೆಯೇ ಬಂದು ತಲುಪಿದ್ದರು. ಇದ್ದಕ್ಕಿದ್ದಂತೆಯೇ ಶ್ಯಾಮ ಭಟ್ಟ (ಮದುವೆ ಮನೆಯ ಯಜಮಾನ)ರಿಗೆ ಇದ್ದಕ್ಕಿದ್ದಂತೆಯೇ ಉಬ್ಬಸದ ತೊಂದರೆ ಪ್ರಾರಂಭವಾಯಿತು. ಅವರು 'ನೇವಸ' ರೋಗದಿಂದ ಆಗಾಗ ತೊಂದರೆ ಪಡುತ್ತಿದ್ದು, ನಮ್ಮ ಖಾಯಂ ಕುಳವಾರುಗಳಲ್ಲಿ ಒಬ್ಬರಾಗಿದ್ದರು (ಅವರ ಕುಟುಂಬದ ಎಲ್ಲಾ ಸದಸ್ಯರುಗಳ ಹೆಸರು ಇತ್ಯಾದಿ ಬರೆದ 'ಕುಟುಂಬ ಚಿಕಿತ್ಸಾ ದಾಖಲೆ' (Family Health Record Book) ನಲ್ಲಿ ಸಮಗ್ರವಾಗಿ ದಾಖಲಿಸುತ್ತಿದ್ದೆ). ಪಾದೆ ಆಸ್ಪತ್ರೆ ಡಾಕ್ಟರಿಗೆ ತಕ್ಷಣ ಕರೆ ಹೋಯಿತು.

ಹನ್ನೊಂದು ಗಂಟೆಗೆ ಮದುವೆಮನೆಗೆ ಹೊರಟು ತುರ್ತು ಚಿಕಿತ್ಸಾ ಸಲಕರಣೆಗಳೊಂದಿಗೆ ಅರ್ಧ ಗಂಟೆ ಬೈಕ್‌ನಲ್ಲಿ ಹೋಗಿ ಮತ್ತೊಂದು 45-50 ನಿಮಿಷ 'ನಟರಾಜ್ ಸರ್ವಿಸ್' ಮಾಡಿ ಅಂತೂ ಮಟ ಮಟ ಮಧ್ಯಾಹ್ನ ತಲುಪಿದೆ. ರೋಗಿಗೆ ತಕ್ಷಣ ಉಪಶಮನವಾಗುವಂತೆ ಚುಚ್ಚುಮದ್ದು ಕೊಟ್ಟು, ಮಾತ್ರೆ ನುಂಗಿಸಿ, ಒಂದೈದು ನಿಮಿಷ ಕುದಿಯುವ ನೀರಿನಲ್ಲಿ ಬೆಂದ ಮಿಶ್ರ ಹಬೆಯಿಂದ ಗಂಟಲು ಮೂಗು ಸ್ವಚ್ಛವಾದಾಗ ರೋಗಿ ಎದ್ದು ಕುಳಿಕೊಂಡರು. ಇನ್ನೆರಡು ನಿಮಿಷಗಳಲ್ಲಿ ಉಸಿರಾಟದ ತೊಂದರೆ ಕಮ್ಮಿಯಾಯಿತು. ಒಂದಿಷ್ಟು ಹೊತ್ತು ನಾನು ವಿಶ್ರಮಿಸಿಕೊಂಡು ರೋಗಿ ಸ್ವಸ್ಥನಾದುದನ್ನು ದೃಢಪಡಿಸಿಕೊಂಡು ಹೊರಡುವ ಸಿದ್ಧತೆ ಮಾಡಿದೆ.

'ಕ್ಷಮಿಸಬೇಕು ಡಾಕ್ಟರು. ತುಂಬಾ ತೊಂದರೆಯಾಯಿತು ನಿಮಗೆ – ಬಿಸಿಲು ಬೇರೆ. ಊಟ ತೀರಿಸಿ ಸ್ವಲ್ಪ ವಿಶ್ರಾಂತಿ ತೆಗೆದುಕೊಂಡು ಹೋಗಬಹುದಲ್ಲಾ' ಅಂತ ಕೈಮುಗಿದು ವಿನೀತ ಭಾವದಿಂದ ವಿನಂತಿಸಿದರು. ನನಗೂ ಹಸಿವಾಗಿತ್ತು. ಹೆಚ್ಚು ಉಪಚರಿಸಿಕೊಳ್ಳದೆ ಊಟ ಮುಗಿಸಿ ಮದುವೆ ಚಪ್ಪರದಲ್ಲಿ ಇರಿಸಿದ್ದ ಒಂದು ಮಂಚದಲ್ಲಿ ಕಾಲು ಚಾಚಿ ಕಣ್ಣುಮುಚ್ಚಿಕೊಂಡೆ. ನಿದ್ರೆ ತಂತಾನೇ ಬಂದಿರಬೇಕು.

ಸ್ವಲ್ಪ ಹೊತ್ತಿನಲ್ಲಿ ಎಚ್ಚರವಾದಾಗ ಶ್ಯಾಮಭಟ್ಟರಿಗೆ ಉಬ್ಬಸ ಮತ್ತೆ ಪ್ರಾರಂಭವಾಗಿತ್ತು. ರಕ್ತನಾಳದ ಮೂಲಕ ಹೆಚ್ಚು ಪರಿಣಾಮಕಾರಿಯಾದ ಔಷಧೋಪಚಾರ ಮಾಡಿ ಇನ್ನೇನು ಹೊರಡಲು ಅನುವಾಗುವಷ್ಟರಲ್ಲಿ ಭಟ್ಟರು ಬಂದು ಕೈಗಳನ್ನು ಹಿಡಿದುಕೊಳ್ಳಲು ಮುಂದಾದರು. 'ಡಾಕ್ಟರೇ ಹೇಗಾದರೂ ಮಾಡಿ ಮದುವೆ ಮುಗಿಯುವವರೆಗೆ ಈ ಉಬ್ಬಸದಿಂದ ನನ್ನನ್ನು ಕಾಪಾಡಿ. ದಯವಿಟ್ಟು 'ಧಾರೆ'ವರೆಗೆ ಇದ್ದು ಈ ಕನ್ಯಾದಾನದ ಪುಣ್ಯ ನಿಮ್ಮದು ಅಂತ ಭಾವಿಸಬೇಕು' ಇತ್ಯಾದಿ... ಬಡ ಬಡಿಸಿದರು. ನನಗೂ ಅದು ಸರಿ ಎನ್ನಿಸಿತು.

ಕೂಗಳತೆಯಲ್ಲಿರುವ ಪಟೇಲರ ಮನೆಯಲ್ಲಿ ಅವರ ಮಗ ಮಿಲಿಟೆರಿಯಲ್ಲಿ ಸೇವೆ ಸಲ್ಲಿಸುತ್ತಿರುವ 'ಜವ್ವನಿಗ'. ರಜೆಯಲ್ಲಿ ಊರಿಗೆ ಬಂದಿದ್ದ. ಹೈಸ್ಕೂಲಲ್ಲಿ ಜತೆಗೆ ಓದಿದವರು ಓಡಾಡಿದವರು ನಾವು. ಈಗ ಹೋಗಿ ಒಂದಿಷ್ಟು ಮಾತಾಡಿಸಿಕೊಂಡು ಬರೋಣ ಎನ್ನಿಸಿತು. ಭಟ್ಟರಿಗೂ ಅದು ಸರಿ ಎನ್ನಿಸಿತು. ಹೇಗಿದ್ದರೂ 2 ನಿಮಿಷದ ದಾರಿ ಅಗತ್ಯ ಬಿದ್ದರೆ ಒಂದು 'ಕೂಕಿಲು' ಹಾಕಿದರೂ ಸಾಕು ಬಂದು ಬಿಡುತ್ತೇನೆ ಎಂದು ಅತ್ತ ಹೆಜ್ಜೆ ಹಾಕಿದೆ.

ನಾವು ಕುಶಲ ಸಂಭಾಷಣೆ ನಡೆಸುತ್ತಿದ್ದಂತೆಯೇ ಹಾಗೆ ಒಂದಿಬ್ಬರು ಅತಿಥಿಗಳು (ಅಪರಿಚಿತರು) ಬಂದು ನಮಸ್ಕಾರ ಹೇಳಿದರು. ಅವರಲ್ಲೊಬ್ಬರು ದಿಬ್ಬಣದ ಯಜಮಾನರ ತಮ್ಮ, ಇನ್ನೊಬ್ಬ ಆ ಊರಿನ ಗಣ್ಯ ವ್ಯಕ್ತಿ ನನ್ನ ಜತೆ ಸ್ವಲ್ಪ ಪ್ರೈವೇಟಾಗಿ ಮಾತಾಡಲು ಬಂದುದಾಗಿ ಹೇಳಿದರು.

ಅವರ ಮಾತಿನ ಸಾರಾಂಶ ಇಷ್ಟು:

'ಮದುವೆ ಮನೆಯಲ್ಲಿ ನೇವಸದ ಚಿಕಿತ್ಸೆಗೆ ಅಂತ ನೀವು ಬಂದ ವಿಚಾರ ತಿಳಿಯಿತು. ಎರಡೆರಡು ಸರ್ತಿ ಇಂಜೆಕ್ಷನ್ ಮಾಡಿದ್ದೀರಂತೆ... ರೋಗಿ ಯಾರು ಅಂತ ಸ್ಪಷ್ಟವಾಗಿ ಗೊತ್ತಾಗಲಿಲ್ಲ. ಯಜಮಾನರು ಅಂತ ಹೇಳ್ತಾರೆ. ಅವರ ಮಗಳು ಅಂದರೆ ಮದುಮಗಳೇನೋ ಅಂತ ಅನುಮಾನ ಬಂತು. ಅದನ್ನೇ ಕೇಳುವುದಕ್ಕೆ ಅಂತ ನಿಮ್ಮ ಹತ್ರ ಬಂದಿದ್ದೇನೆ. ಇದು ನಮ್ಮ ಹುಡುಗನ ಭವಿಷ್ಯದ ಪ್ರಶ್ನೆ. ಒಂದು ವೇಳೆ ಹುಡುಗಿಗೆ 'ಉಬ್ಬಸ' ಇದ್ದರೆ ಜೀವನಮಾನ ಪೂರ್ತಿ ಇವನೂ ಅನುಭವಿಸಬೇಕಾಗ್ತದೆ. ಅಲ್ಲವೇ?

ನಾನು ಹೆಚ್ಚು ಮಾತಾಡಲಿಲ್ಲ. 'ನನ್ನ ಕ್ಲಿನಿಕ್‌ನಲ್ಲಿ ಖಾಯಂ ರೋಗಿಗಳ ಚಿಕಿತ್ಸಾ ಪುಸ್ತಕವೇ ಇದೆ. ಅದನ್ನು ತರಿಸಿಕೊಂಡು ನೀವೇ ನೋಡಿಕೊಳ್ಳಬಹುದು' ಎಂದು ಹೇಳಿದೆ. ರೆಕಾರ್ಡ್‌ಗಳನ್ನು ತರಿಸಲು ಜನ ಕಳಿಸಿಯೂ ಆಯಿತು. ನಾನು ಪಟೇಲರ ಮನೆಯಲ್ಲೇ ಇದ್ದೆ. ರೆಕಾರ್ಡ್ ಬುಕ್ ಕೈಸೇರಿದ ಮೇಲೆ ಈ ಮನೆಯ ಎಲ್ಲಾ ರೋಗಿಗಳಿಗೆ ಕೊಟ್ಟ ಚಿಕಿತ್ಸೆಯ ವಿವರ ಅವರವರ ಹೆಸರಿನಲ್ಲಿ ತಾರೀಕುವಾರು ಪ್ರತ್ಯೇಕ ಪುಟಗಳಲ್ಲಿ ಬರೆದಿದ್ದು ಅದರಲ್ಲಿ 'ಉಬ್ಬಸ' ಇದ್ದದ್ದು ಯಜಮಾನರಿಗೆ ಮಾತ್ರ ಎಂಬುದನ್ನು ಅವರೇ ಮನದಟ್ಟು ಮಾಡಿಕೊಂಡರು.

ದಿಬ್ಬಣಿಗರ ಬಣದಲ್ಲಿ ಇದ್ದ ಸಂದೇಹ ಪರಿಹಾರವಾಯಿತು. ಧಾರೆ ಮುಹೂರ್ತಕ್ಕೆ ಸರಿಯಾಗಿ ನಡೆಯಿತು. ನಾನು ಪಟೇಲರ ಮನೆಯಲ್ಲಿ ನಿದ್ದೆ ಮಾಡಿದೆ. ಮುಂಜಾನೆ ಎದ್ದು ಮುಖ ತೊಳೆಯುತ್ತಿದ್ದ ಹಾಗೆ ಶಾಮಭಟ್ಟರು ಪತ್ನೀ ಸಮೇತರಾಗಿ ಬಂದು ನಮಸ್ಕಾರ ಮಾಡಿ 'ನಿಮ್ಮಿಂದ ನಮ್ಮ ಮಗಳ ಮದುವೆ ನಡೆಯಿತು. ಆ ರೆಕಾರ್ಡ್‌ಗಳನ್ನು ಇಟ್ಟ ವಿಷಯ ನಮಗೆ ಮರೆತೇ

ಹೋಗಿತ್ತು. ಅದನ್ನು ಅವರ ಮುಂದೆ ಇಟ್ಟ ಮೇಲೆ ಅವರ ಸಂಶಯ ಪರಿಹಾರವಾಯಿತು' ಇತ್ಯಾದಿ ಇತ್ಯಾದಿ.

ಭಟ್ಟರು ಕೊಟ್ಟ 100 ರೂಪಾಯಿಯ ನೋಟನ್ನು ಕಿಸೆಗೆ ತುರುಕಿಸಿಕೊಂಡು ಕ್ಲಿನಿಕ್‌ನ ದಿಕ್ಕಿನತ್ತ ಹೆಜ್ಜೆ ಇರಿಸಿದೆ.

ನಾರ್ಣಮೂಲೆಯ ಪೊಸಪ್ಪಲ

ಸೇಸಪ್ಪ, ತಿಮ್ಮಪ್ಪ ಅಣ್ಣತಮ್ಮಂದಿರು. ಏಳನೇ ತರಗತಿಯವರೆಗೆ ಓದಿದ್ದರು. ಅನಂತರ 'ಗಟ್ಟ'ಕ್ಕೆ ಹೋಗಿ ಕೊಡಗು/ಚಿಕ್ಕಮಗಳೂರು ಕಾಫಿತೋಟಗಳಲ್ಲಿ ಕೆಲಸಮಾಡುವ ಕೂಲಿಯಾಗಿ ದುಡಿಯಲು ಪ್ರಾರಂಭಿಸಿ 10–12 ವರ್ಷ ಕಳೆಯಿತು. ಈಚೆಗೆ ಊರಿಗೆ ಬಂದು ಕೈಯಲ್ಲಿದ್ದ ಚಿಕ್ಕ ಗಂಟನ್ನು ಬಿಚ್ಚಿ 'ಸೇನವ' (ಶ್ಯಾನುಭಾಗ)ರಿಂದ ಹಿಡಿದು ತಾಶೀಲ್ದಾರರವರೆಗೆ ಬೇಕುಬೇಕಾದವರನ್ನೆಲ್ಲ ಹಿಡಿದು, ಕೈಬೆಚ್ಚಗೆಮಾಡಿ ನಾಯಾರ್‌ಮೂಲೆ ಗುಡ್ಡದ ಅಂಚಿನಲ್ಲಿ ಒಂದು 'ದರಕಾಸ್ತು' ಅಂತ 2–3 ಎಕರೆ ನೆಲವನ್ನು ಪಡೆದುಕೊಂಡಿದ್ದರು. ಅಲ್ಲೇ ಮಣ್ಣು ಗೋಡೆ ಹುಲ್ಲು ಛಾವಣಿಯ ಮನೆಕಟ್ಟಿ ವಾಸಿಸತೊಡಗಿದರು. ಅಪ್ಪ ಅಮ್ಮ ಮತ್ತು ಗಂಡ ಬಿಟ್ಟ ಅಕ್ಕ – ಈಚೆಗೆ ಮದುವೆಯಾದ ಇಬ್ಬರು ಮನೆಸೊಸೆಯಂದಿರು. ಹೀಗೆ ಒಂದು ಸಂಸಾರ ಅವರದು. ಈಗಲೂ 'ನೇಜಿ' ನಡುವುದರಿಂದ ಹಿಡಿದು 'ಬತ್ತಮೆರಿಯುವ'ವರೆಗಿನ ಕೆಲಸಗಳನ್ನು ಅವರಿವರ ಮನೆಗಳಲ್ಲಿ ಅತ್ತೆ ಸೊಸೆಯರು ಸೇರಿ ಮಾಡುತ್ತಿದ್ದರು. ಕೆಲವು ದಿನ ರಸ್ತೆ ಕಾಮಗಾರಿಯಲ್ಲಿ ಅಣ್ಣ ತಮ್ಮಂದಿರು ದಿನಕೂಲಿ ಅಂತಲೂ ದುಡಿಯುತ್ತಿದ್ದರು. ದರ್ಕಾಸ್ತಿನ ಒಂದು ಮೂಲೆಯಲ್ಲಿ ಗುಡ್ಡದ ಹೊಟ್ಟೆಗೆ ಕನ್ನಕೊರೆದು 25–30 ಕೋಲು ಉದ್ದಕ್ಕೆ ಗುಂಡಿ (ಸುರಂಗ) ಕೊರೆದು ಕೊನೆಗೆ ಒಳ್ಳೆ 'ಒರತೆ' (ನೀರಿನ ಮೂಲ) ಸಿಕ್ಕಿತು. ಸರಿ ಒಂದೆಕ್ರೆ ಅಡಿಕೆ ತೋಟ ಹಾಕುವ ನಿರ್ಧಾರ ಮಾಡಿದರು ಅಣ್ಣ ತಮ್ಮ. ಅಪ್ಪ ಈಗ ಮುದುಕನಾದರೂ ಅಷ್ಟಿಷ್ಟು ಕೈಕೆಲಸ ಮಾಡುತ್ತಾ ಸಹಾಯ ನೀಡುತ್ತಿದ್ದ. ಕೂಲಿ ನಡುವಿನ ಬಿಡುವಿನಲ್ಲಿ ಹಾಗೂ ಹೀಗೂ ಮಾಡಿ ಒಂದು 'ತಟ್ಟು' ಅಡಿಕೆ ಸಸಿ ನೆಟ್ಟದ್ದೂ ಆಯಿತು. ಗುಡ್ಡದ ಸೊಪ್ಪುಸದೆ, ಹಟ್ಟಿಯ ಗೊಬ್ಬರ, ಒಲೆಯ ಬೂದಿ, ಸಾಕಷ್ಟು ನೀರು. ಐದನೇ ವರ್ಷದಲ್ಲಿ ಕೆಲವು ಅಡಿಕೆ ಸಸಿಗಳಲ್ಲಿ 'ಸಿಂಗಾರ ಒಡೆದವು'. 'ಪೊಸಪ್ಪಲ'ದ ಅಡಿಕೆಗೊನೆಗಳು ಕಣ್ಣಿಗೆ ತಂಪೆಸೆಯುತ್ತಿದ್ದಾಗಲೇ–ನಾರ್ಣ (ತಂದೆ) ಕಾಲುಜಾರಿ ಬಿದ್ದ; ತೊಡೆಗೆ ಪೆಟ್ಟಾಯಿತು ಕಷ್ಟ ಪಟ್ಟು ಹಳ್ಳಿಯ ಪಂಡಿತರೊಬ್ಬರ ಸಹಾಯದಿಂದ ಗಾಯಕ್ಕೆ 'ಕಟ್ಟು–ಪಟ್ಟು' (ಲೇಪ) ಎಣ್ಣೆ ಕಾವು ಎಲ್ಲ ನಡೆಸಿದರು. ಗಾಯದಿಂದ ನೀರಿನ ಹಾಗಿರುವ ಸ್ರಾವ ಸೋರಲು ಪ್ರಾರಂಭಿಸಿದಾಗ ಓಡಿ ಬಂದದ್ದು ಪಾದೆ ಆಸ್ಪತ್ರೆಗೆ.

ನಾಯೆರ್‌ಮೂಲೆಗೆ ನಡೆದೇ ಹೋಗಬೇಕು 8 ಕಿಲೋಮೀಟರ್ (ಸೇಸು ನನ್ನ ಅಣ್ಣನ ಜತೆಗೆ ಕೆಲವು ವರ್ಷ ಶಾಲೆಗೆ ಹೋಗುತ್ತಿದ್ದ ಎಂಬ ವಿಚಾರ ನನಗೆ ಗೊತ್ತಿದ್ದುದ್ದರಿಂದ) ಮಟ ಮಟ ಮಧ್ಯಾಹ್ನದ ಬಿಸಿಲನ್ನು ಲೆಕ್ಕಿಸದೆ ರೋಗಿಯ ಮನೆ ತಲುಪಿದೆ.

ಬ್ಯಾಂಡೇಜ್ ಬಿಚ್ಚಿ ಗಾಯ ತೊಳೆದು ಪರೀಕ್ಷಿಸಿ ನೋಡಿದಾಗ ಮೂಳೆಗೇನೂ ಪೆಟ್ಟಾಗಿರಲಿಲ್ಲ ಎಂಬುದನ್ನು ಖಾತ್ರಿ ಮಾಡಿಕೊಂಡು ಸ್ವಚ್ಛಗೊಳಿಸಿ, ಜಾತ್ಯಾದಿತೈಲದ ಹತ್ತಿ ಮುದ್ದೆ ಇಟ್ಟು ಮೆದುಪಟ್ಟಿ ಕಟ್ಟಿದೆ. ಕೈತೊಳೆದುಕೊಂಡು ಪ್ರತಿದಿನ ಪಟ್ಟಿ ಬದಲಾಯಿಸಲು ಹೇಳಿದೆ. ಗಾಯ ಬೇಗನೇ ಒಣಗುತ್ತದೆ (ಮಾಯುತ್ತದೆ) ಎಂಬ ಆಶ್ವಾಸನೆ ಕೇಳಿ ಎಲ್ಲರಿಗೂ ಸಮಾಧಾನವಾಯಿತು.

ಒಂದು 'ಬೊಂಡ' ಕೆತ್ತಿ (ಎಳನೀರು ಕೊಚ್ಚಿ) ತಂದು ನನಗೆ ಕೊಟ್ಟ. ಅದರ ನೀರನ್ನು ಕುಡಿದೆ; 'ಕಾಯಿ'ಯನ್ನು ಒಡೆದು ರುಚಿಯಾದ ಎಳತಿರುಳನ್ನು ತೆಗೆದು ಒಂದು ಚಿಕ್ಕ ತಟ್ಟೆಯಲ್ಲಿ ಹಾಕಿ ತುಸು ಸಕ್ಕರೆ ಸಮೇತ ನನ್ನ ಮುಂದಿಟ್ಟಳು ಅವರ ಅಕ್ಕ ಸೀತು. ಬಾಗಿಲ ಮರೆಯಿಂದ ಎರಡುಜತೆ ಕಣ್ಣುಗಳು ಆಕೆಯಿತ್ತ ತಟ್ಟೆಯಿತ್ತ ನೆಟ್ಟಿದ್ದುದು ನನಗೆ ತಿಳಿಯದೇ ಹೋಗಲಿಲ್ಲ. ಚಿಕ್ಕ ಮಕ್ಕಳಲ್ಲವೇ?

'ಛೇ! ಇದೆಲ್ಲ ಬೇಡ; ಇವತ್ತು ಗುರುವಾರ; ನೀರು ಮಾತ್ರ ಸೇವನೆ' ಎಂದು ತಟ್ಟೆಯನ್ನು ಅತ್ತ ಸರಿಸಿ, ಬ್ಯಾಗನ್ನು ಕ್ಲೋಸ್‌ಮಾಡಿ ಹೊರಸಲು ಅಣಿಯಾದೆ.

ಇಷ್ಟು ಹೊತ್ತಿಗೆ ತಿಮ್ಮಪ್ಪ ತೋಟದಿಂದ 'ಕೆಂಪು ಕೆಂಪಾದ ಎರಡು ಅಡಿಕೆಗೊನೆಗಳನ್ನು ಗಿಡದಿಂದ ಕಿತ್ತು ಎರಡೂ ಕೈಗಳಲ್ಲಿ ನೇತಾಡಿಕೊಂಡು ತೋಟದಿಂದ ಬಂದ. 'ಪೊಸಪ್ಪಲ' (ಮೊದಲ ಫಸಲು) ಅದು. ಒಂದು ಗೋಣಿಚೀಲ ತಂದು ಅದರಲ್ಲಿ ಅಡಿಕೆಗೊನೆಯಿಂದ ಅಡಿಕೆಗಳನ್ನು ಕಿತ್ತು ಚೀಲಕ್ಕೆ ತುಂಬಿಸಿ, ಅದರ ಬಾಯಿ ಬಿಗಿದು ಕಟ್ಟಿ ಹೆಗಲಿಗೇರಿಸಿದ, ಇನ್ನೊಂದು ಕೈಯಲ್ಲಿ ನನ್ನ ಕಿಟ್‌ಬ್ಯಾಗ್ ಹಿಡಿದುಕೊಂಡು ಹೊರಗೆ ಹೊರಡುವಾಗ ಎಂದ... ಪೊಸಪ್ಪಲವನ್ನು ದೇವರ ಮುಂದೆ ಇಟ್ಟು ಭಕ್ತಿಯಿಂದ ಎಲ್ಲರೂ ನಮಸ್ಕಾರ ಮಾಡಿ, ಪಾಯಸದ ಊಟದೊಂದಿಗೆ ಸಂತೋಷ ಪಡಬೇಕಾಗಿದ್ದ 'ಪೊಸಪ್ಪಲ' ಈಗೆ ಪಾದೆ ಆಸ್ಪತ್ರೆ ಡಾಕ್ಟರರ 'ವಿಜಿಟ್ ಫೀಸ್' ಕೊಡಲಿಕ್ಕಾಗಿ ಅಮ್ಮದೆಬ್ಯಾರಿ ಅಂಗಡಿಗೆ ಅನಾಮತ್ತಾಗಿ ಸೇರಬೇಕಾಯಿತು ಎಂಬ ಸಂಗತಿ ತಿಳಿಯಿತು. ಮನಸ್ಸು ಖಿನ್ನವಾಯಿತು

ಹೆರಿಗೆಗೆ ಡಬಲ್ ಟ್ಯಾಕ್ಸ್!

ಮುಳಿಯಾಲ ರಾಮಣ್ಣ (ಭಟ್ಟ)ರ ಮಗಳನ್ನು ಪುತ್ತೂರಲ್ಲಿ ಒಂದು ಜವಳಿ ಅಂಗಡಿ ಇರಿಸಿಕೊಂಡಿದ್ದ ಮುಳಿಯ ರಾಮಣ್ಣನಿಗೆ ಮದುವೆಯಾಗಿತ್ತು.

ವರ್ಷಾಂತ್ಯದಲ್ಲಿ 7ನೇ ತಿಂಗಳು 'ಕೋಡಿ ಹೋವು' (ಸೀಮಂತ) ಮುಗಿಸಿ ಮಾವ ರಾಮಣ್ಣ ಮಗಳನ್ನು ಹೆರಿಗೆಗಾಗಿ ಮುಳಿಯಾಲಕ್ಕೆ ಕರೆದು ತಂದಿದ್ದರು (ಅಂಗಡಿ ರಾಮಣ್ಣ ಹೈಸ್ಕೂಲ್‌ನಲ್ಲಿ ನನ್ನ ಸಹಪಾಠಿಯಾಗಿದ್ದ).

ಪುತ್ತೂರಿನಿಂದ ಹೆಂಡತಿಯನ್ನು ಹೆರಿಗೆಗೆ ತವರುಮನೆಗೆ ಕಳುಹಿಸಿ ಕೊಡುವುದಕ್ಕೆ ಮೊದಲು 'ಬೇಬಿ ಮಿಡ್‌ಬಾಯಮ್ಮ' (ಪುತ್ತೂರಿನ ಸುಪ್ರಸಿದ್ಧ ವೈದ್ಯರೊಬ್ಬರ ಹೆರಿಗೆ ವಿಭಾಗದ ಅನುಭವಸ್ಥ ನರ್ಸ್) ಬಳಿ ಪರೀಕ್ಷೆ ಮಾಡಿಸಿ 'ಎಲ್ಲ ಸರಿಯಾಗಿದೆ ಚಿಂತೆ ಬೇಡ' ಎಂಬ ಆಶ್ವಾಸನೆ ಪಡೆದುಕೊಂಡಿದ್ದ. ಅಡ್ಯನಡ್ಕದಲ್ಲಿ ಗ್ರಾಮೀಣ ಕ್ಲಿನಿಕ್ ಇದ್ದೇ ಇದೆಯಲ್ಲಾ ಅಂತ ಸಮಾಧಾನದಿಂದಲೇ ಕಳಿಸಿಕೊಟ್ಟಿದ್ದ ಮೊದಲ ಹೆರಿಗೆಗಾಗಿ ತವರು ಮನೆಗೆ.

ಇದ್ದಕ್ಕಿದ್ದ ಹಾಗೆ ದಿನ ತುಂಬುವುದಕ್ಕೆ ಇನ್ನೂ ಒಂದು ವಾರವಿರುವಾಗಲೇ ಹೆರಿಗೆ ನೋವು ಕಾಣಿಸಿಕೊಂಡಿತು. ರಾಮಣ್ಣ ಮಾವ ಪಾದೆ ಆಸ್ಪತ್ರೆಗೆ ಓಡಿ ಬಂದರು. ನಾನು ಹೋಗಿ ನೋಡಿ ಪರೀಕ್ಷಿಸಿದೆ (ನಿಜವಾಗಿ ನನಗೆ ಅಂಥಾ ತೊಂದರೆ ಏನೂ ಕಾಣಿಸಲಿಲ್ಲ ಆದರೂ...). ಸ್ವಲ್ಪ ಮಾತುಕತೆ ಆಗಿ ಪುತ್ತೂರಿಗೆ ಸ್ವತಃ ರಾಮಣ್ಣ ಮಾವನೇ ಕಾರು ಮಾಡಿಕೊಂಡು ಹೋದರು. ಅಳಿಯ ರಾಮಣ್ಣನ ಜೊತೆ ಮಾತಾಡಲು... ಅಳಿಯ-ಮಾವ ಇಬ್ಬರೂ ಸಮಾಲೋಚಿಸಿ 'ಬೇಬಿ ಮಿಡ್‌ಬಾಯಮ್ಮ'ನನ್ನು ಕಾರಿನಲ್ಲಿ ಕರೆದುಕೊಂಡು ಬಂದರು. ಕಾರು ಅಡ್ಯನಡ್ಕ ತಲುಪುವುದರಲ್ಲಿ ಅಲ್ಲಿಂದಾಚೆ ಮೂರು ಮೈಲು ನಟರಾಜ ಸರ್ವೀಸ್ ಅರ್ಥಾತ್ ಕಾಲು ನಡಿಗೆಯೇ ಗತಿ. ನಾನು ಕ್ಲಿನಿಕ್‌ನ ಕದ ತೆರೆಯುತ್ತಿದ್ದೆ ಸ್ವಲ್ಪವೂ ತೊಂದರೆ ಇಲ್ಲದೇ ಹೆರಿಗೆಯಾಗಿತ್ತು. ಅದನ್ನೆಲ್ಲ ಮುಗಿಸಿಕೊಂಡು ನಾನು ಹಿಂದಿರುಗಿದ್ದೆ. ಆಗ ಮುಂಜಾನೆಯ ಸಮಯ 7 ಗಂಟೆ. ಹಳ್ಳಿಯ ಸೂಲಗಿತ್ತಿ ನೆರವು ನೀಡಿದ್ದಳು.

ಪುತ್ತೂರಿನಿಂದ ನರ್ಸ್ ಹೇಗೂ ಬಂದಾಗಿದೆಯಲ್ಲಾ ಒಮ್ಮೆ ಬಾಣಂತಿ-ಮಗುವನ್ನು ನೋಡಿಕೊಂಡು ಹೋಗುವುದು ಒಳ್ಳೇದು ಎಂದು ಸೂಚಿಸಿದೆ.

'ಈ ಗ್ರಾಮೀಣ ಕ್ಲಿನಿಕ್‌ನಲ್ಲಿ ಒಬ್ಬಳು 'ಮಿಡ್‌ಬಾಯಿ' ಇರುತ್ತಿದ್ದರೆ ಅನುಕೂಲವಿರುತ್ತಿತ್ತು ಅಲ್ವಾ' ಅಂತ ರಾಮಣ್ಣದ್ವಯರಿಗೆ ಅನ್ನಿಸಿದ್ದು ಸಹಜವೇ ಆಗಿತ್ತು. ಅದನ್ನು ಬಾಯಿಯಲ್ಲಿ ಹೇಳಿಯೂ ಆಯಿತು.

ಕೆಲವು ದಿನಗಳ ತರುವಾಯ ಒಂದು ಶನಿವಾರ ಸಂಜೆ ಪುತ್ತೂರಿನ ಮುಳಿಯ ಕೃಷ್ಣ ಭಟ್ಟರ ಬಂಗಾರದ ಅಂಗಡಿ (ಸರಾಫಿಕಟ್ಟೆ)ಯಲ್ಲಿ ಮಿತ್ರವೃಂದದ ಹರಟೆ ನಡೆದಿತ್ತು. ಮಾತಿನ ಮಧ್ಯೆ ರಾಮಣ್ಣ ಹೇಳಿದ 'ಮಾರಾಯ ಹೆರಿಗೆ ಬಾಬ್ತು ನಿನ್ನದು 'ಡಬಲ್ ಟ್ಯಾಕ್ಸ್' ಆತು ನೋಡು' ಎಂದು ಅರ್ಧ ಹಾಸ್ಯ ಅರ್ಧ ನಿಜವಾದ ಧ್ವನಿಯಲ್ಲಿ ಹೇಳಿದ.

'ನಿನ್ನ ಕ್ಲಿನಿಕ್‌ನಲ್ಲೇ ಒಳ್ಳೇ ನರ್ಸ್ ಇದ್ದಿದ್ದರೆ ಒಂದು ಟ್ಯಾಕ್ಸ್ ಕಮ್ಮಿಯಾಗುತ್ತಿತ್ತು' ಎಂದು ಗೆಳೆಯರು ಸೂಚಿಸಿದರು. 'ಹೂಂ' ಆ ಹಳ್ಳಿ ಕೊಂಪೆಗೆ ಯಾವ ನರ್ಸ್ ಬರ್‍ತಾಳೆ ಹೇಳಿ' ಎಂದು ಇನ್ನೊಬ್ಬರು ಟೀಕಿಸಿದರು; ಅದುವರೆಗೂ ಸುಮ್ಮನೆ ಇದ್ದ ಮುಳಿಯ ಕೃಷ್ಣ ಭಟ್ಟರು ಗಂಭೀರಧ್ವನಿಯಿಂದ ಹೇಳಿದ್ದು ಇಷ್ಟು 'ಇದಕ್ಕೆ ಒಂದು 'ಖಾಯಂ ಪರಿಹಾರ' ಇದ್ದು. ಎಂತದು ಗೊಂತಿದ್ದೋ?

'ಒಂದು 'ಡಾಕ್ಟ್ರೆತ್ತಿ'ಯ (ಲೇಡಿ ಡಾಕ್ಟರನ್ನು) ಮದುವೆಯಾಗಿಕೊಂಡರೆ ಎಲ್ಲ ಸುಸೂತ್ರ ಆವುತ್ತು ನೋಡು' ಎಲ್ಲರೂ ಕೈ ಚಪ್ಪಾಳೆ ತಟ್ಟುವುದರೊಂದಿಗೆ ಸಭೆ ಬರ್ಖಾಸ್ತಾಯಿತು.

ಹೊಗಳಿಕೆ, ಜನಪ್ರಿಯತೆ ನಂಬಿಕೆಗಳ 'ಮುಗ್ಗಾಲಿ ವಾಹನ'ವನ್ನೇರಿ ಸಾಗುತ್ತಿರುವಾಗ ತಿರುವುಗಳಲ್ಲಷ್ಟೇ ವಸ್ತುಸ್ಥಿತಿ ಗಮನಕ್ಕೆ ಬರುತ್ತದೆ. ಅತಿಯಾದ ಆತ್ಮವಿಶ್ವಾಸ ಆಪತ್ತುಗಳ ಸರಣಿಯನ್ನೇ ಎದುರಿಸಬೇಕಾಗಿ ಬರುವುದು ಸಹಜವೇ ಸರಿ.

ಅಲ್ಲಾಡಿಸಿದ ಹಲ್ಲು

ನೆಕ್ಕರೆ ಶಾಸ್ತ್ರಿಗಳ ಮನೆಯಿಂದ 'ಬುಲಾವು' ಬಂತು. ಅವರ ಮನೆಯಲ್ಲಿ ವೃದ್ಧೆಯೊಬ್ಬರಿಗೆ ಹಲ್ಲು ನೋವು ಸಹಿಸಲಿಕ್ಕಾಗದಷ್ಟಿದೆ – ಊಟ ಬಿಡಿ – ನೀರು ಕುಡಿಯುವುದಕ್ಕೂ ಕಷ್ಟವಾಗುತ್ತಿದೆ. ಮುಟ್ಟಿದರೆ ಸಾಕು ಕಳಚಿ ಬೀಳುವಷ್ಟು ಅಲ್ಲಾಡುವ ಹಲ್ಲೊಂದನ್ನು ತೆಗೆಯಲು 'ಚಿಮ್ಟಾ' (Dental forceps) ಸಹಿತ ಬರಬೇಕು ಎಂಬುದಾಗಿ ಕರೆಯಬಂದವರು ಸೂಚಿಸಿದರು. 'ಸರಿ' ಎಂದು ಹೊರಟು ಬಿಟ್ಟೆ.

2 ಕಿಲೋ ಮೀಟರ್ ವಾಹದಲ್ಲಿ ಹೋಗಿ ಮುಂದೆ ಅಷ್ಟೇ ದೂರ ಕಾಲ್ನಡಿಗೆಯಿಂದ ತಲಪಬೇಕಾಗಿತ್ತು. ಶಾಸ್ತ್ರಿಗಳ ಮನೆ ಮಟ್ಟಿದಾಗ 'ಧನ್ವಂತರಿ'ಯೇ ಮನೆಬಾಗಿಲಿಗೆ ಬಂದಷ್ಟು ಸಂತೋಷ ಸಂಭ್ರಮ. ಯಥಾ ಪ್ರಕಾರ ಕಾಫಿಲೋಟ ಖಾಲಿಮಾಡಿ, ಫಾರ್‌ಸೆಪ್ಸ್‌ನ್ನು ಕುದಿಯುವ ನೀರಲ್ಲಿ ಅದ್ದಿ ತೆಗೆದು...ದು...ದು ಹಲ್ಲನ್ನು ಮುಟ್ಟಿದೆನೋ ಇಲ್ಲವೋ ಪಟ್ಟೆನ್ನುವ ಶಬ್ದದೊಂದಿಗೆ ಹಲ್ಲಿನ ಚೂರು ಒಸಡು ಬಿಟ್ಟಿತು. ಹಲ್ಲಿನ ಸ್ಥಾನದಲ್ಲಿ ಹತ್ತಿಯ ಚಿಕ್ಕ ಉಂಡೆಯನ್ನು ತುರುಕಿ, ದವಡೆ ಬಿಗಿ ಹಿಡಿದು ಒಂದೈದು ಮಿನಿಟು ಕುಳಿತಿರುವಂತೆ ಅಧಿಕಾರ ವಾಣಿಯಿಂದ 'ಹುಕ್ಕುಂ' ಮಾಡಿದೆ... ಎರಡು ಬಾರಿ ಹತ್ತಿ ಉಂಡೆ ಬದಲಾಯಿಸಿ ತರುವಾಯ ರಕ್ತದ ಬಣ್ಣ 'ಉಂಡೆ'ಯಲ್ಲಿ ಕಾಣಿಸದ ಕಾರಣ ಕಿಟ್ ಬ್ಯಾಗನ್ನು ಪ್ಯಾಕ್ ಮಾಡಿ ಹೊರಡಲು ಅಣಿಯಾದೆ. ಶಾಸ್ತ್ರಿಗಳು ಎರಡು ನೋಟ್‌ಗಳನ್ನು ಮುಂದಿಟ್ಟರು. 'ಬೇಡ ಬೇಡ, ಯಾಕೆ ಇದೆಲ್ಲಾ?' ಎಂದು ಹೇಳಿದರೂ ಅವರು ಅದನ್ನು ಕಿಸೆಗೆ ತುರುಕಿದಾಗ 'ಸರಿ' ಎಂದು ತಲೆ ಅಲ್ಲಾಡಿಸಿ ಕ್ಲಿನಿಕ್ ಕಡೆಗೆ ಹೊರಟೆ.

ಒಂದು ಕಿಲೋಮೀಟರ್ ಬಂದೆನೋ ಇಲ್ಲವೋ ಆಳೊಬ್ಬನು ಉಸಿರುಕಟ್ಟಿ ಓಡಿ ಬಂದು 'ಡಾಕ್ಟರೇ ನೆತ್ತರು ಕಟ್ಟಿಲ್ಲವಂತೆ, ಮತ್ತೆ ನೀವು ಬರಬೇಕಂತೆ' ಎಂಬ 'ವಾರ್ತೆ'ಯನ್ನು ಕೊಟ್ಟ. ನನಗೆ ಮನಸ್ಸಿನಲ್ಲೇ ತುಸು ಗಲಿಬಿಲಿ ಪ್ರಾರಂಭವಾಗಿತ್ತು. ಆಕೆಗೆ ಸಕ್ಕರೆ ಕಾಯಿಲೆ ಇತ್ತಂತೆ. ಹಾಗಂತ 'ಜೋರಾಗಿ' ಇರಲಿಲ್ಲ ಎಂಬ ಸುವಾರ್ತೆಯೂ ತಿಳಿಯಿತು.

ಇಂಜೆಕ್ಷನ್‌ಗಳನ್ನು ಕೊಟ್ಟು ರಕ್ತ ಹೆಪ್ಪುಗಟ್ಟಿಸುವುದಕ್ಕೆ ನನಗೆ ತಿಳಿದ ಎಲ್ಲಾ ವಿಧಾನಗಳನ್ನು ತಕ್ಷಣ ಬಳಸಿ...ಸಿ... ರೋಗಿಯನ್ನು ಅವಲೋಕಿಸುತ್ತಾ ಅಲ್ಲೇ ಉಳಿದೆ. ಸಂಜೆಯಾಗುವಷ್ಟರಲ್ಲಿ 'ರಕ್ತಸ್ರಾವ' ಸಂಪೂರ್ಣವಾಗಿ ನಿಂತಿತ್ತು. ದೀರ್ಘವಾದ ಉಸಿರು ಎಳೆದುಕೊಂಡು ನಾನು ಕ್ಲಿನಿಕ್‌ಗೆ ಮರಳಿದೆ.

ಉದಳುಪುಂಚದ ಮುಲಾಮು

ಪ್ರತಿದಿನ ಮಧ್ಯಾಹ್ನ 2 ಗಂಟೆ ಸುಮಾರಿಗೆ 'ಟಪಾಲ್ ಬಸ್ಸು' (ಪುತ್ತೂರಿನಿಂದ ಕಾಸರಗೋಡಿಗೆ ಹೋಗುವ ಮೈಲ್ ಸರ್ವಿಸ್) ಅಡ್ಯನಡ್ಕ ತಲುಪುತ್ತದೆ. ಒಂದು ದಿನ ಮಧ್ಯಾಹ್ನ ಊಟ ಮುಗಿಸಿ, ವಿಶ್ರಾಂತಿ ತೆಗೆದುಕೊಳ್ಳುತ್ತಿದ್ದೆ. ಬಸ್ ಅನಿರೀಕ್ಷಿತವಾಗಿ ಕ್ಲಿನಿಕ್‌ನ ಮುಂದೆ ನಿಂತಿತು. ಮೈಲ್ ಬಸ್‌ನ ಡ್ರೈವರ್ ಶೆಣೈ ಎಂಬುವರು ತುಂಬಾ ನಿಯತ್ತಿನ ವ್ಯಕ್ತಿ ಎಂಬುದಾಗಿ ಪ್ರಸಿದ್ಧಿ. ಬಸ್ ನಿಲ್ದಾಣದ ವಿನಾ ಇನ್ನೆಲ್ಲೂ 'ಸ್ಟಾಪ್' ಇಲ್ಲವೇ ಇಲ್ಲ. ಅಂಥಾದ್ದರಲ್ಲಿ ಇದೇನು ಇಂದು ಇಲ್ಲಿ ಅಂತ ಯೋಚಿಸುತ್ತಾ ಬಾಗಿಲು ಅರೆತೆರೆದು ನೋಡಿದರೆ ಎರಡು ಮೂರು ಜನ ಹಳ್ಳಿ ಹೆಂಗಸರೂ ಓರ್ವ ಮಹಾಶಯರೂ ಬಸ್ಸಿನಿಂದ ಇಳಿದರು. ಅಷ್ಟೇ ಅಲ್ಲ ಕ್ಲಿನಿಕ್‌ನತ್ತ ನುಗ್ಗಿದ್ದರು. ಆ ಮಹಾಶಯ ವಿದ್ಯಾರ್ಥಿ ಕಾಲದಿಂದ ಮಿತ್ರರಾಗಿರುವ ಪಾರ್ಪಕಜೆ!

ಕ್ಲಿನಿಕ್‌ನಲ್ಲಿ ರೋಗಿಗಳು ಯಾರೂ ಇರಲಿಲ್ಲ. ಎಷ್ಟಾದರೂ ಬಸ್ ಪ್ರಯಾಣ ಮಾಡಿ ದಣಿದು ಬಂದಿದ್ದಾರಲ್ಲ ಅಂತ ಕಾಫಿ ತರಿಸಲೇ ಅಂತ ಕೇಳಿದೆ.

'ಉಪಚಾರ ಎಲ್ಲ ಮತ್ತೆ – ಮೊದಲು ಇವಳ ಕಾಲಿನ 'ಉದಳು ಪುಂಚ' ಪರೀಕ್ಷೆ ಮಾಡಿ ನೋಡಿ ಮದ್ದು ಏನೇನು ಕೊಡ್ತೀರೋ ಕೊಡಿ. ನಿಮ್ಮ ಫೀಸ್ ಎಷ್ಟೇ ಆಗಲಿ – ನಾವು ಕೊಡುತ್ತೇವೆ ಇವಳ ಕಾಲೊಂದು ಗುಣವಾಗಿ ಬಿಡಬೇಕು' ಎಂದು ಸ್ಪಷ್ಟವಾಗಿ ಹೇಳಿದರು ಅವರ ಪೈಕಿ ಹಿರಿಯ ಮಹಿಳೆ. ನನಗೇನು ಅರ್ಥವಾಗಲಿಲ್ಲ. ಮಿಕಿಮಿಕಿ ನೋಡಿದೆ ಅಷ್ಟೆ.

ನನ್ನ ಗೆಳೆಯ ಸಂಕ್ಷಿಪ್ತವಾಗಿ ಹೇಳಿದ್ದಿಷ್ಟು: ಗೌರಿ ಮೂಲೆ ಜೋಯಿಸರ ಪೈಕಿ ಒಬ್ಬರಿಗೆ ಕಾಲಲ್ಲಿ 'ಉದುಳು ಪುಂಚ' ಇತ್ತಂತೆ. "ಇಲ್ಲಿ ನೀನು ಔಷಧಿ ಮಾಡಿ

(ಮುಲಾಮು ಹಚ್ಚಿ) ಅದನ್ನು ಬೇರು ಸಹಿತ ಕಿತ್ತುಬಿಟ್ಟಿಯಂತೆ – ಹಾಗಂತ ಸುದ್ದಿ ಕೇಳಿ ಇವರು ಬಂದಿದ್ದಾರೆ. ಇವರೆಲ್ಲ ನಮ್ಮೂರವರು – ಇವತ್ತು ಇತ್ತ ಕಡೆಗೆ ನಾನು ಬರುವವನಿದ್ದೇನೆ ಅನ್ನುವ ಸಂಗತಿ ತಿಳಿದು ಜತೆಗೆ ಬಂದಿದ್ದಾರೆ. ಇನ್ನು ನೀನುಂಟು ಇವರುಂಟು."

ನಡೆದ ಸಂಗತಿ ನೆನಪಿಗೆ ಬಂತು: ಜೋಯಿಸರ ಪೈಕಿ ಮಹಿಳೆಯೊಬ್ಬರಿಗೆ ಕಾಲಿನ ಬೆರಳ ಸಂದಿನಲ್ಲಿ ಪ್ರಾರಂಭವಾದ ಸಣ್ಣ ವ್ರಣ ಬೆಳೆದು ದೊಡ್ಡದಾಗುತ್ತಲೇ ಹೋಯಿತು. ಯಾವ ಚಿಕಿತ್ಸೆಗೂ ಬಗ್ಗಲಿಲ್ಲ. ಕೊನೆಗೆ ಮಂಗಳೂರಿಗೆ ಹೋಗಿ ಪರೀಕ್ಷೆ ಮಾಡಿಸಿಕೊಂಡು ಬಂದರಂತೆ. ಅಲ್ಲಿ ದೊಡ್ಡ ಆಸ್ಪತ್ರೆಯ ದೊಡ್ಡ ಡಾಕ್ಟರು ಅಮ್ಮ 'ಇದು 'ಉದುಳು ಪುಂಚ' ಇದಕ್ಕೆ ಮದ್ದಿಲ್ಲ. ಕಾಲು 'ಕಡಿಯುವುದ'ರಿಂದ ಅದು ಬೇರೆ ಭಾಗಕ್ಕೆ ಹಬ್ಬುವುದನ್ನು ತಡೆಯಬಹುದು' ಎಂದು ಹೇಳಿದ್ದರಂತೆ. ಆಪರೇಷನ್ ಹೆಸರು ಕೇಳಿಯೇ ಅಲ್ಲಿಂದ 'ಜಾರಿ'ದವರು ಮತ್ತೆ ಮತ್ತೆ ಹಳ್ಳಿ ಮದ್ದು, ಅದು ಇದು ಅಂತ ಮಾಡುತ್ತಿದ್ದಾಗ, 'ಪಾದೆ ಆಸ್ಪತ್ರೆ' ಡಾಕ್ಟ್ರ ಬಗ್ಗೆ ಯಾರೋ ಹೇಳಿದರಂತೆ. ಭಾರೀ ಹುಶಾರು ಡಾಕ್ಟ್ರು. ಎಂಥ ರೋಗಗಳನ್ನೂ ಠಂ ಅಂತ ಗುಣ ಮಾಡಿ ಬಿಡ್ತಾರೆ. ನೀವು ಒಂದು ಸರ್ತಿ ಅವರನ್ನು ನೋಡಿ' ಎಂದು ಉಪದೇಶಿಸಿದ್ದರಂತೆ.

ಯಥಾಪ್ರಕಾರ, ತೊಂದರೆ ಏನು ಎಂದು ಕೇಳಿದ್ದಕ್ಕೆ ನೀವೇ ನೋಡಿ, ತಿಳಿದುಕೊಂಡು ಗುಣವಾಗುವ ಮದ್ದು ಕೊಡಿ ಎಂದು ಹೇಳಿದ್ದರಿಂದ ಮುಂದೆ ಪ್ರಶ್ನಿಸುವುದಕ್ಕೆ ಹೋಗದೆ 'ಏನೇ ಇರಲಿ ಒಮ್ಮೆ ಇಲ್ಲಿಂದ 'ಜಾಗ ಖಾಲಿ ಮಾಡಿ'ದರೆ ಸಾಕು' ಎಂದುಕೊಂಡು ಒಂದು ಚಿಕ್ಕ ಕರಡಿಗೆಯಲ್ಲಿ ಮುಲಾಮು ತುಂಬಿಸಿಕೊಟ್ಟೆ. 'ಒಂದು ಸಾರಿ ನೀವೇ ನಿಮ್ಮ ಕೈಯಿಂದಲೇ ಹಚ್ಚಿಬಿಡಿ ಡಾಕ್ಟ್ರೆ' ಎಂದು ಮತ್ತೆ ಆಜ್ಞಾಪನಾ ವಿಜ್ಞಾಪನೆ ಬಂತು. ಸರಿ ಅಂತ ಹುಣ್ಣನ್ನು ಬರಿಯ ನೀರಿಗೆ ಒಂದು ಹನಿ 'ರೋಸ್ ವಾಟರ್' ಬೆರಸಿ ಹತ್ತಿಯಿಂದ ಒರಸಿ ಮುಲಾಮು ಹಚ್ಚಿ ಬಟ್ಟೆ ಸಡಿಲಪಟ್ಟಿ ಕಟ್ಟಿದೆ. ಇದರಿಂದ ತೃಪ್ತಿಯಾಯಿತೋ ಏನೋ ರೋಗಿಗಳು ನಮಸ್ಕಾರ ಹೇಳಿ ಹೊರಟುಬಿಟ್ಟರು. ನನಗೆ ಪ್ರತಿಫಲ ಅಂತ ಹಣ ಏನೂ ದೊರಕದಿದ್ದರೂ ಪ್ರಚಾರ ಮಾತ್ರ ಬಾಯಿತುಂಬಾ – ಊರುತುಂಬಾ ದೊರಕಿತು.

('ಉದಳುಪುಂಚ' ಅಂದರೆ ತುಳು ಮಾತಿನಲ್ಲಿ 'ಕ್ಯಾನ್ಸರ್ ಹುಣ್ಣು' ಎಂದು ಅರ್ಥ)

ಅದು ಕ್ಯಾನ್ಸರೂ ಅಲ್ಲ; ನಾನು ಕೊಟ್ಟಿದ್ದು ಯಾವ ಸಂಜೀವಿನಿಯೂ ಅಲ್ಲ – 'ದಶಾಂಗಲೇಪ' ಎಂಬ ಆಯುರ್ವೇದ ಔಷಧ ಅಷ್ಟೇ. ರೋಗಿಯ 'ಗ್ರಹಗತಿ' ಚೆನ್ನಾಗಿತ್ತೆಂದೇ ಕಾಲು ಗುಣವಾಗಿರಬೇಕು. ಇದಿಷ್ಟು ನಡೆದ ಸಂಗತಿ.

ಗರ್ಭಿಣಿ –ಹೆರಿಗೆ ಬಾಣಂತಿಯರ ಬವಣೆ

ಬಾಣಂತಿ ಸನ್ನಿ ಎಕ್ಲಾಂಸಿಯಾ ಎ.ಪಿ.ಹೆಚ್/ ಪಿ.ವಿ.ಹೆಚ್. ಹೆಬಿಚ್ಯುವಲ್ 'ಅಬಾರ್ಶನ್' ಥ್ರೆಟನಡ್ ಅಬಾರ್ಶನ್ ಮುಂತಾದ ನಾನಾ ತೊಂದರೆಗಳ ರೋಗಿಗಳನ್ನು ನಿಭಾಯಿಸಲು ನನಗೆ ನೆರವಾದದ್ದು Referal Service. ಮಂಗಳೂರಿನ ಕೆಲವು 'ಸೂಪರ್ ಸ್ಪೆಶಲಿಸ್ಟ್' ಡಾಕ್ಟರುಗಳು ಮತ್ತು 'ಸುಸಜ್ಜಿತ ಆಸ್ಪತ್ರೆ'ಗಳಿಗೂ ಇಂತಹ ಕೇಸುಗಳನ್ನು ರವಾನಿಸುವುದನ್ನು ರೂಢಿಸಿಕೊಂಡೆ. ರೋಗಿಗಳಿಗೆ ನಾನು ರೆಫರ್ ಮಾಡಿದ ಕಾರಣ ಅಲ್ಲಿ ಉತ್ತಮ ಸೇವೆ ದೊರಕಿತು ಎಂಬ ಭಾವನೆ ಇದ್ದುದರಿಂದ ಇದೂ ಒಂದು ಪ್ರಚಾರವೇ ಆಯಿತು. ತನ್ನ ಕೈಯಲ್ಲಿ ಸಾಧ್ಯವಿಲ್ಲದಂತಹ ಕೇಸನ್ನು ತಕ್ಷಣ ಮಂಗಳೂರಿಗೆ ಕಳಿಸುವ ವ್ಯವಸ್ಥೆ ಮಾಡುತ್ತಾರೆ. ಚಾರ್ಜಿನಲ್ಲೂ ಅಷ್ಟಿಷ್ಟು ಕಮ್ಮಿ ಮಾಡಿಸಿಕೊಡುತ್ತಾರೆ ರೆ...ರೆ... ಇತ್ಯಾದಿ

ಬೆಂಗಳೂರಲ್ಲಿ ಓದುತ್ತಿದ್ದ ಪಾರೆ ನಾರಾಯಣ ಎಂಬ ವಿದ್ಯಾರ್ಥಿ ಮಿತ್ರನಿಗೆ ಬಸ್ ಆ್ಯಕ್ಸಿಡೆಂಟ್‌ನಲ್ಲಿ ಕಾಲು–ಕೀಲುಗಳಿಗೆ 'ಜಖಂ' ಆಗಿ (ಮಡಿಕೇರಿ ಬಳಿ ಆದ್ದರಿಂದ) ಅಲ್ಲಿನ ಆಸ್ಪತ್ರೆಗೆ ಸೇರಿಸಿದರಂತೆ. 'ಪೋಲೀಸ್ ಕೇಸು'. ಸುದ್ದಿ ತಿಳಿದ ಕೂಡಲೇ ನೇರವಾಗಿ ಹೋಗಿ ಸಂಬಂಧಪಟ್ಟ ವೈದ್ಯರು, ಪೋಲೀಸರು ಮೊದಲಾದವರನ್ನು ಭೇಟಿಮಾಡಿ, ನನ್ನ ಜವಾಬ್ದಾರಿಯಿಂದ ರೋಗಿಯನ್ನು ಮಂಗಳೂರಿಗೆ ಕರೆತಂದು ಸರಿಯಾದ ಚಿಕಿತ್ಸೆಯ ವ್ಯವಸ್ಥೆಮಾಡಿದೆ. 6 ತಿಂಗಳ ನಂತರ ನಾರಾಯಣ ಮತ್ತೆ ಕಾಲೇಜಿಗೆ ಹೋಗುವಂತಾದ. ಒಂದು 'ಡಿಫ್ತೀರಿಯ' ಕೇಸನ್ನು ಆಸ್ಪತ್ರೆಗೆ ರವಾನಿಸಲು ವಿಳಂಬವಾದ ಕಾರಣ ಶಿಶು ಶವವಾಗಿ ಮನೆಗೆ ಮರಳಿದ ಘಟನೆಯೂ ನಡೆಯಿತು.

ಇಂತಹ ಹಲವಾರು ಸಂಭವಗಳು 'ಸ್ವಂತ ಕಾರು' ಇರಬೇಕಾದ ಅಗತ್ಯವನ್ನು ಮನದಟ್ಟು ಮಾಡಿತು.

ಬಾಡಿಗೆಕಾರಿನ ಶುದ್ಧೀಕರಣ

ಬೆಣ್ಣೆಪ್ಪಾರೆಯ ಎದುರಲ್ಲಿ ಒಂದು ಪಳ್ಳಿ (ಮುಸಲ್ಮಾನರ ಪ್ರಾರ್ಥನಾ ಮಂದಿರ) ಇದೆ. ಅಲ್ಲಿ ಬೇರೆ ಊರಿನಿಂದ ಬಂದ ಹೊಸತಾಗಿ ನೇಮಕಗೊಂಡಿದ್ದ ಮುಕ್ರಿಬ್ಯಾರಿಯವರ ಸಂಬಂಧಿಯೊಬ್ಬ ಬೇಸಗೆ ರಜೆಯಲ್ಲಿ ನಾಲ್ಕು ದಿನ ಕಳೆಯಲೆಂದು ಬಂದಿದ್ದ. ಆತನ ಜೊತೆಗೆ ಸೇರಿಕೊಂಡು ಪಳ್ಳಿಯ ಆವರಣದಲ್ಲಿ ಒಂದು ರಾತ್ರಿಶಾಲೆ 'ವಯಸ್ಕರ ಶಿಕ್ಷಣ' ಪ್ರಾರಂಭಿಸಿದ್ದೆವು. ಒಂದೇ ತಿಂಗಳಲ್ಲಿ 'ಓದು ಬರಹ' ಎಂಬ ಘೋಷಣೆ ನಮ್ಮದಾಗಿತ್ತು. ಅದರಿಂದ ಎಷ್ಟು ಜನ ಅಕ್ಷರಸ್ಥರಾದರೋ ನೆನಪಿಲ್ಲ.

ತಿಂಗಳ ಕೊನೆಗೆ ಬೇಸಗೆ ರಜೆ ಮುಗಿದ ಕೂಡಲೇ ಆತ ತನ್ನ ಊರಿಗೆ ಹೊರಟು ಹೋದ.. ಆತ ಹೈಸ್ಕೂಲು ವಿದ್ಯಾರ್ಥಿ ನನ್ನಂತೆಯೇ.

ನಾನು ಹೈಸ್ಕೂಲಿನಲ್ಲಿ ಓದುತ್ತಿದ್ದುದರಿಂದ ಹಾಸ್ಟೆಲ್ ವಾಸಕ್ಕೆ ಮರಳಿದೆ. ಇದೆಲ್ಲ ನಡೆದದ್ದು ಸುಮಾರು 15 ವರ್ಷಗಳ ಹಿಂದೆ. ಆ ವಯಸ್ಕರ ಶಿಕ್ಷಣ ಕಾರ್ಯಕ್ರಮಕ್ಕೆ (ಮುಕ್ರಿಬ್ಯಾರಿ) ಮ್ಯಾನೇಜರ್ ಆಗಿದ್ದರು.

ಒಂದು ದಿನ ರಾತ್ರಿ 10 ಗಂಟೆಯ ಸಮಯಕ್ಕೆ ಮುಕ್ರಿಬ್ಯಾರಿ ತೀರ ಗಾಬರಿಯಿಂದ ಬಂದು ನನ್ನನ್ನು ಎಬ್ಬಿಸಿದರು. ಅವರ ಹೆಂಡತಿಗೆ 6ನೇ ಹೆರಿಗೆ. ಹೆರಿಗೆ ನೋವು ಪ್ರಾರಂಭವಾಗುತ್ತಲೇ ರಕ್ತಸ್ರಾವವಾಗತೊಡಗಿತು. ಸಂಜೆ ಹೊತ್ತುಕಂತುವ ಸಮಯದಲ್ಲಿ 'ಬೇನೆ' ಶುರುವಾಗಿತ್ತು. 'ಈಗ ರಕ್ತಸ್ರಾವ ನಿಲ್ಲುವುದಿಲ್ಲ. ಬೇಗ ಹೆರಿಗೆಯಾಗುವ ಲಕ್ಷಣವೂ ಕಾಣುವುದಿಲ್ಲ ಅಂತ ತಮ್ಮ ತಾಯಿ ಹೇಳಿದ್ದಾರೆ. ನೀವು ಒಮ್ಮೆ ಬಂದು ನೋಡಬೇಕಲ್ಲ ಡಾಕ್ಟ್ರೆ' ಎಂದು ಅಂಗಲಾಚಿದರು. ನಾನು ಮರುಮಾತಾಡದೆ ಕಿಟ್‌ಬ್ಯಾಗ್ ಸಹಿತ ಹೊರಟೆ.

'ಬ್ಯಾರಿ ರಕ್ತಸ್ರಾವದಿಂದ ತೀರಾ ದಣಿದಿದ್ದು ದೇಹ ಸ್ಥಿತಿ ಅಪಾಯಕಾರಿ ಘಟ್ಟದಲ್ಲಿತ್ತು. 'ಪ್ರಸವಪೂರ್ವ ರಕ್ತಸ್ರಾವ' ಎಂದಿಗೂ ಅಪಾಯಕಾರಿ. ಕಷ್ಟದ ಹೆರಿಗೆ, ಇದಂತೂ 6ನೇ ಹೆರಿಗೆ ತಕ್ಷಣ ಮಂಗಳೂರಿಗೆ ರೋಗಿಯನ್ನು ಸಾಗಿಸಬೇಕೆಂದು ಸೂಚಿಸಿದೆ. ಅಲ್ಲದೆ ರಕ್ತಪೂರಣಕ್ಕಾಗಿ ಇಬ್ಬರು ಮೂವರು ಜತೆಗೆ ಬಂದರೆ ಅನುಕೂಲ ಎಂದು ಹೇಳಿದೆ. ಆಗ 'ಬ್ಲಡ್ ಬ್ಯಾಂಕ್' ಇದ್ದದ್ದು ಮಂಗಳೂರಿನ 'ವೆನ್‌ಲಕ್' ಹಾಸ್ಪಿಟಲ್‌ನಲ್ಲಿ ಮಾತ್ರ. ಅದು ನಮ್ಮೂರಿನಿಂದ 50 ಕಿಲೋಮೀಟರ್‌ನಷ್ಟು ದೂರ.

ಅಪ್ಪಣ್ಣಭಟ್ಟರೆಂಬ ಮಹನೀಯರೊಂದು ಸ್ವಂತ ಕಾರಿಟ್ಟಿದ್ದರು... ಆಗೀಗ ಸ್ವಂತಕ್ಕೆ ಡ್ರೈವಿಂಗ್‌ನ ಶೋಕಿಗೆ ಕಾರು ಓಡಿಸುತ್ತಿದ್ದರೂ ಅಗತ್ಯ ಬಿದ್ದಾಗ 'ಬಾಡಿಗೆಗೆ' ಕಾರು ನೀಡುವ ವ್ಯವಸ್ಥೆ ಕೂಡ ಇತ್ತು. ಇದಕ್ಕಾಗಿ ಕೃಷ್ಣ ನಾಯ್ಕ ಎಂಬ ಡ್ರೈವರನನ್ನು ದಿನಗೂಲಿ ಆಧಾರದಲ್ಲಿ ನೇಮಿಸಿಕೊಂಡಿದ್ದರು. ಡ್ರೈವರನ್ನು ಬರಹೇಳಿ ಆಯಿತು. ಆದರೆ ಕಾರಿನ ಕೀಲಿಕೈ ಮಾತ್ರ ಅಪ್ಪಣ್ಣ ಭಟ್ಟರ ಮನೆಯಲ್ಲಿತ್ತು. ದುರ್ದೈವದಿಂದ ಅಂದು ಅವರು ಮನೆಯಲ್ಲಿರಲಿಲ್ಲ. ಯಾವುದೋ ಒಂದು ಕಾರ್ಯನಿಮಿತ್ತ ಹೊರಗೆ ಹೋಗಿದ್ದರು. ಅವರಿಲ್ಲದೆ ಬೀಗದಕ್ಕೆ ಕೊಡಲು ಅವರ ಮನೆಯಲ್ಲಿ ಒಪ್ಪಿಗೆಸಿಕ್ಕಲಿಲ್ಲ. ಕೊನೆಗೆ ನಾನೇ ಹೋಗಿ ಪರಿಸ್ಥಿತಿಯ ಅನಿವಾರ್ಯತೆಯನ್ನು ತಿಳಿಸಿ ನನ್ನ ಜವಾಬ್ದಾರಿ ಮೇಲೆ ಕಾರಿನ ಬೀಗದಕ್ಕೆ ತೆಗೆಸಿ ಕೊಟ್ಟೆ. ಇಷ್ಟೆಲ್ಲಾ ಆದ ಮೇಲೆ ಕಾರಲ್ಲಿ ರೋಗಿಯ ಜತೆಗೆ ಮುಕ್ರಿ ಬ್ಯಾರಿಗಳು ಅವರ ತಾಯಿ, ಇಬ್ಬರು ಮಹಿಳೆಯರು ರಕ್ತದಾನಕ್ಕೆ ಒಪ್ಪಿಕೊಂಡ ಒಂದಿಬ್ಬರು ಮತ್ತು ನಾನು ಇಷ್ಟು ಮಂದಿಯನ್ನು ತುಂಬಿಕೊಂಡು ಕಾರು ಮಂಗಳೂರು ಕಡೆಗೆ ಮುಖಮಾಡಿ ಹೊರಟಿತು.

ಕಾಲ ಮಿಂಚಿ ಹೋಗಿತ್ತು. ಕಾರು ಮಂಗಳೂರು ತಲಪುವುದಕ್ಕೆ ಮೊದಲೇ ರೋಗಿ 'ಅಲ್ಲಾಹು'ವಿನ ರಾಜ್ಯಕ್ಕೆ ತೆರಳಿದ್ದಳು. ನಡುರಾತ್ರಿ ಕಳೆದು ಮುಂಜಾವಿನ ಹೊತ್ತಿಗೆ ನಾವು ಹಿಂತಿರುಗಿದೆವು. ಮುಕ್ರಿ ಬ್ಯಾರಿಗಳು ಶವಸಂಸ್ಕಾರದ ವ್ಯವಸ್ಥೆಗೆ ಮುಂದಾದರು. ನಾನು ಕ್ಲಿನಿಕ್‌ನಲ್ಲಿ ನಿದ್ರೆಮಾತ್ರೆಯೊಂದನ್ನು ನುಂಗಿ ವಿಶ್ರಮಿಸಿದೆ. ಮುಂದಿನ ಘಟನಾವಳಿಗಳನ್ನು ಸಂಕ್ಷೇಪವಾಗಿ ಹೇಳುವುದಾದರೆ 'ಶವ' ಸಾಗಾಣಿಕೆ ಮಾಡಿದ್ದರಿಂದ ಕಾರು ಅಪವಿತ್ರವಾಯಿತು. ಅದನ್ನು 'ಶುದ್ಧ ಮಾಡಲು' ಬಹಳ ಹಣ ಖರ್ಚಾಗುತ್ತದೆ. ಹಣ ತಂದುಕೊಡು ಅಂತ ಡ್ರೈವರನ್ನು ಬೆದರಿಸಿದರಂತೆ –'ನೀನು ಇನ್ನು ನನ್ನ ಕಾರನ್ನು ಮುಟ್ಟುವುದು ಬೇಡ' ಎಂದು ಹೇಳಿದರಂತೆ. ಡ್ರೈವರ್ ಕೃಷ್ಣ ನಾಯ್ಕ ಈಗ ಸಂಕಟಕ್ಕೆ ಸಿಕ್ಕಿಕೊಂಡಿದ್ದ.

ಕೃಷ್ಣ ನಾಯ್ಕ ಹೆಚ್ಚು ಓದು ಬರಹ ಕಲಿತವನಲ್ಲ. ದೇಹದಾರ್ಢ್ಯವೂ ಇಲ್ಲ. ಜತೆಗೆ 3 ಜನ ಮಕ್ಕಳು, ಹೆಂಡತಿ ಮತ್ತು ಮುದುಕಿ ತಾಯಿ (ಎಂಕಮ್ಮ). ಅವನಿಗೆ ಗೊತ್ತಿದ್ದು ಒಂದೇ ವಿದ್ಯೆ – ಕಾರು ಡ್ರೈವಿಂಗ್. ಅದರಿಂದಲೇ ಅವರ ಉಪಜೀವನ – ಆ ಇಡೀ ಕುಟುಂಬ ಬದುಕು ನಡೆಯಬೇಕು.

ಕಾರು ತರಲು ನಾನೇ ಹೇಳಿದ್ದು ಎಂಬ ಕಾರಣದಿಂದ ಯಜಮಾನರ ಅಪ್ಪಣೆ ಇಲ್ಲದೆ ಕಾರು ನಡೆಸಿದ್ದಕ್ಕೆ ಕೆಲಸ ಕಳೆದುಕೊಂಡು ನಿರುದ್ಯೋಗಿಯಾಗಿಬಿಟ್ಟಿದ್ದಾನೆ. ನಾನೇನು ಮಾಡಲೀಗ?... ಯೋಚನೆಯಿಂದ ತಲೆಬಿಸಿ ಆದರೂ ಪರಿಹಾರ ಕಾಣಿಸಲಿಲ್ಲ. ತಲೆಕೆಳಗೆ ಹಾಕಿಕೊಂಡ ಕೃಷ್ಣ ನಾಯ್ಕ ಕ್ಲಿನಿಕಿನ ಒಂದು ಮೂಲೆಯಲ್ಲೇ ಕುಳಿತಿದ್ದ.

ಸಂಜೆ ಪುತ್ತೂರಿಗೆ ಹೋಗುವ ಬಸ್ ಬರುವ ಹೊತ್ತಾಗುತ್ತಲೇ ಕೃಷ್ಣನ ಜತೆಯಲ್ಲಿ ಬಸ್ ಹತ್ತಿ ಪುತ್ತೂರಿಗೆ ಹೋದೆ. ಅಲ್ಲಿಂದ ಲಾರಿಯೊಂದನ್ನೇರಿ ಸುಳ್ಯ ಮಾರ್ಗವಾಗಿ ಸಂಪಾಜೆ ತಲುಪಿದಾಗ ರಾತ್ರಿ 10 ಗಂಟೆ.

2 ಕಿಲೋಮೀಟರ್ ದೂರದಲ್ಲಿದೆ ಡಾ॥ ಕೆ.ಆರ್. ಗೋಪಾಲ (ಕೀಲಾರು ಗೋಪಾಲಕೃಷ್ಣಯ್ಯ) ಅವರ ಮನೆ. ಗೋಪಾಲ ಮೈಸೂರಲ್ಲಿ 'ಮೆಡಿಕಲ್' ಓದಲು ಬಂದ ಪ್ರಾರಂಭದ ದಿನಗಳಲ್ಲಿ ನನ್ನ ಕೊಠಡಿಯಲ್ಲೇ ಇದ್ದು ಅನಂತರ ಅನುಕೂಲವಾದ 'ಫ್ರೆಂಡ್ಸ್ ಹೋಮ್' ಮಾಡಿಕೊಂಡರು. ಇಷ್ಟೇ ಅಲ್ಲದೆ ನನ್ನ ಬಂಧು ಹಾಗೂ ಅಭಿಮಾನಿ ಕೂಡ ಆಗಿದ್ದರು.

ಡಾ॥ ಗೋಪಾಲ್ ಒಂದು ಹೊಸ ಮಾದರಿಯ ಜೀಪನ್ನು ಈಗ್ಗೆ ಎರಡು ತಿಂಗಳ ಹಿಂದೆ ಕೊಂಡುಕೊಂಡಿದ್ದರು. ನಮ್ಮ ಕ್ಲಿನಿಕ್‌ವರೆಗೂ ಬಂದು ಹೋಗಿದ್ದರು. 'ಹಳೇ ಕಾರು ಏನಾಯಿತು?' ಅಂತ ಕೇಳಿದ್ದಕ್ಕೆ 'ಯಾಕೆ? ನಿನಗೆ ಬೇಕೋ? ತೆಕ್ಕೊಂಡು ಹೋಗು' ಎಂದು ಅರ್ಧ ಹಾಸ್ಯದ ಮಾತು ಕೂಡ ಹೇಳಿದ್ದ.

ಈಗ ಅದು ಸತ್ಯವಾಯಿತು. ನಡೆದ ಘಟನಾವಳಿಗಳನ್ನೆಲ್ಲ ಹೇಳಿದ ಮೇಲೆ ಏನನ್ನೂ ಹೇಳದೆ ಹಳೇ ಕಾರಿನ ಕೀಲಿಕೈ, ರಿಜಿಸ್ಟ್ರೇಷನ್ ಪುಸ್ತಕ ಎರಡನ್ನೂ ಕೊಟ್ಟು 'ಬೇರೆ ವ್ಯವಸ್ಥೆ ಆಗುವವರೆಗೆ' ಎಂದಷ್ಟೇ ಹೇಳಿದ. ಮೋರೆಯಲ್ಲಿ ಒಂದು ಕಿರುನಗು ಮಿಂಚಿದ್ದ.

ಅಲ್ಲೇ ರಾತ್ರಿ ಊಟ, ನಿದ್ರೆ ಮುಗಿಸಿಕೊಂಡು ನಸುಕಿಗೇ ಹೊರಟು ಮಂಗಳೂರಿಗೆ ಹೋಗಿ, ಆರ್‌ಟಿಓ ಕಛೇರಿಯಲ್ಲಿ ಕಾರಿನ ಮಾಲಿಕತ್ವದ ಹೆಸರನ್ನು ಬದಲಾಯಿಸಿಕೊಂಡು ಸೀದಾ ನಮ್ಮೂರ ರಸ್ತೆ ಹಿಡಿದೆವು.

ಸಂಜೆ ಹೊತ್ತು ಕಂತುತ್ತಿದ್ದ ಹಾಗೆಯೇ ಕಾರು ಗ್ರಾಮೀಣ ಕ್ಲಿನಿಕ್‌ನ ಮುಂದೆ ನಿಂತಿತು.

ಕುಟುಂಬವೈದ್ಯ (ಅನಧಿಕೃತ) ಗೌರವಪದವಿ

ನನ್ನನ್ನು ಚಿಕ್ಕಂದಿನಿಂದಲೂ ಏಕವಚನದಿಂದ ಸಂಬೋಧಿಸುತ್ತಿದ್ದ ಆಢ್ಯರಿಗೆ ಈಗ 'ಪೇಚಾಟ'ವಾಗುತ್ತಿತ್ತು. ಅಂತಹ ಸಂದರ್ಭಗಳಲ್ಲಿ 'ನಾವು' ಎಂಬ ವಿಶಿಷ್ಟ ಪ್ರಯೋಗವನ್ನು ಕೆಲವರು ಬಳಸುತ್ತಿದ್ದರು. ಹೆಚ್ಚಿನವರಿಗೆ 'ಅಣ್ಣ' 'ಮಾವ' ಇನ್ನು ಕೆಲವರಿಗೆ 'ಭಾವ' ಹೀಗೆ ಕಾಲ್ಪನಿಕ ಕೌಟುಂಬಿಕ ನೆಲೆಯು ಒಂದು ಸ್ಥಾನಮಾನ ಸೃಷ್ಟಿಯಾಯಿತು.

'ಕುಟುಂಬವೈದ್ಯ' (Family Physician) ಎಂಬುದಾಗಿ ನಾನೂ ಅದನ್ನು ಆಸ್ವಾದಿಸಿಕೊಂಡೆ. ಸತ್ಯನಾರಾಯಣ ಪೂಜೆಯಿಂದ ತೊಡಗಿ, ತಿಥಿ, ದೇವಕಾರ್ಯಗಳಿಗೂ 'ಎಷ್ಟು ಹೊತ್ತಿಗಾದರೂ ಸರಿ ಒಂದು ಸಾರಿ ಬಂದು ಹೋಗಬೇಕು' ಎಂಬ ಆತ್ಮೀಯ ಆಹ್ವಾನಗಳು ಬರಹತ್ತಿದ್ದವು. ಇನ್ನು ಶುಭ ಕಾರ್ಯಗಳು, ಉಪನಯನ ನಾಮಕರಣ ಇತ್ಯಾದಿಗಳಿಗಂತೂ ಸಾಕಷ್ಟು ಸ್ವಾಗತ – ಸುಸ್ವಾಗತ ಇದ್ದೇ ಇತ್ತು. 'ಹೇಗಿದ್ದರೂ Motorcycle ಇತ್ತಲ್ಲ ಸರ್ರಂತ ಹೀಗೆ ಹೋಗಿ ಹಾಗಿ ಬಂದು ಬಿಡಬಹುದಲ್ಲ' ಅಂತ ಅವರು ಆಹ್ವಾನದ ಜತೆಗೆ ಒತ್ತಾಯವನ್ನು ಮಾಡುತ್ತಿದ್ದರು.

ಕೋರ್ಟಿನಲ್ಲಿ ಸಾಕ್ಷಿದಾರನಾಗಿ

ಮೊದಲಿನಿಂದಲೂ ನನ್ನ ಕುಳುವಾರು ಸಾಕಷ್ಟು ಶ್ರೀಮಂತರು ಹಾಗೂ ಕೈತುಂಬ ಬಿಲ್ ಭರಿಸುವವರೂ ಆಗಿದ್ದ ಒಂದು ಕುಟುಂಬದ ಅಪ್ರಿಯ ಪ್ರಸಂಗವೊಂದರಲ್ಲಿ ಕೋರ್ಟಿನಲ್ಲಿ ಸಾಕ್ಷಿಹೇಳುವುದು ಅನಿವಾರ್ಯವಾಗಿ ನನ್ನ ಪಾಲಿಗೆ ಬಂತು. ತಕ್ಕಮಟ್ಟಿನ ವಿದ್ಯಾವಂತರು. ಮನೆಯಲ್ಲಿ ಯಜಮಾನರನ್ನು

ಕಳೆದುಕೊಂಡ ತಾಯಿ, ಇಬ್ಬರ ಗಂಡುಮಕ್ಕಳ ಸಂಸಾರ ಅದು. ದೊಡ್ಡಮಗನಿಗೆ, ಇನ್ನೂ ಹೈಸ್ಕೂಲ್‌ನಲ್ಲಿ ಓದುತ್ತಿದ್ದ ಹುಡುಗಿಯೊಂದಿಗೆ ಮದುವೆಯಾಯಿತು. ಮನೆಗೆ ಬಂದ ಸೊಸೆ ಈ ಕುಟುಂಬದ ಸಂಪ್ರದಾಯ - ವಿಧಿ ವಿಧಾನ ವ್ಯವಸ್ಥೆಗಳಿಗೆ ಒಗ್ಗಿಕೊಳ್ಳಲಿಲ್ಲವೆಂದು ತವರುಮನೆಗೆ ಕಳಿಸಿಬಿಟ್ಟರು. ಅಷ್ಟೇ ಅಲ್ಲದೆ 'ಆತ'ನಿಗೆ ಇನ್ನೊಂದು 'ಹೆಂಡತಿ'ಯನ್ನು ತಂದರು.

'ರಾಜಿ' ಪ್ರಯತ್ನಗಳೇನೋ ನಡೆದವು. ಪ್ರಯೋಜನವಾಗಲಿಲ್ಲ. ಓದುವ ಹಂಬಲ ಹೊತ್ತಿದ್ದ ಮಗಳಿಗೆ ಅವಳ ತಂದೆತಾಯಿ–ಅಣ್ಣ ತಮ್ಮಂದಿರು ಪೂರ್ಣ ಬೆಂಬಲ ನೀಡಿದರು. ಕಾಲೇಜು ಶಿಕ್ಷಣದವರೆಗೆ ನಡೆಯಿತು. ಕೊನೆಗೊಮ್ಮೆ ವಿವಾಹ ವಿಚ್ಛೇದನಕ್ಕಾಗಿ ನ್ಯಾಯಾಲಯದಲ್ಲಿ 'ಕೇಸು' ನಡೆಯಿತು. ಅಲ್ಲಿ 'ಎರಡನೇ ಹೆಂಡತಿ'ಯಾಗಿ ಮನೆಗೆ ಬಂದವಳ ಬಗ್ಗೆ ನಮಗೆಲ್ಲ ಎಷ್ಟೇ ಕನಿಕರ ಇದ್ದರೂ ಕೋರ್ಟಿನಲ್ಲಿ 'ಅದನ್ನು' ವಿರೋಧಿಸಲೇಬೇಕಾಯಿತು. ನಾನೊಬ್ಬ ಸಾಕ್ಷಿದಾರನಾಗಿ ನ್ಯಾಯ ಸ್ಥಾನದಲ್ಲಿ ಹೇಳಿಕೆ ನೀಡಿದೆ. ಮುಂದೆ ವಿಚಾರಣೆ ನಡೆದು 'ಎರಡನೇ ಹೆಂಡತಿಯ' ಸ್ಥಾನ ಅನೂರ್ಜಿತವಾಯಿತಾದರೂ ಮೊದಲನೇ ಮದುವೆಯಾಗಿದ್ದ ಹೆಂಡತಿ ವಿಚ್ಛೇದನ ಪಡೆದುಕೊಂಡು ತನ್ನ ಸ್ವಾತಂತ್ರ್ಯವನ್ನು ಪಡೆದದ್ದೂ ಆಯಿತು (ಮುಂದೆ M.B.B.S., M.D. ಓದಿ ಉತ್ತಮ ಚಿಕಿತ್ಸಕಳಷ್ಟೆ ಅಲ್ಲದೆ ಸಮಾಜಮುಖಿ ವೈದ್ಯೆ ಎಂಬುದಾಗಿ ಜನಮನ್ನಣೆಯೂ ದೊರಕಿತು).

ನಾನು ನೀಡಿದ ಸಾಕ್ಷಿ ರೋಗ–ವೈದ್ಯ–ಚಿಕಿತ್ಸೆಯ ಪರಿಧಿಯ ಆಚೆಗಿದ್ದರೂ ವೈದ್ಯಕೀಯ 'ನೀತಿ ಸಂಹಿತೆ'ಯನ್ನು ಕಡೆಗಣಿಸಿದನೆಂದು ಒಂದೆಡೆಯಿಂದ ಕೇಳಿಬಂದರೆ 'ಕೈತುಂಬ ಹಣ ಪಡೆದ ಸಾಕ್ಷಿ' ಎಂಬ ಆರೋಪವೂ ಬಂತು. ನಿಜ. ಇವೆಲ್ಲಾ ಪಿಸುನುಡಿ ಅಷ್ಟೇ. ಮಹಿಳೆಯೊಬ್ಬಳ ಗಂಡ–ಅತ್ತೆ ಮತ್ತವರ ಪರಿವಾರದಿಂದ ಹೇಳಲಾರದ ಸಂಕಟಕ್ಕೆ ಬಲಿಯಾದ ವಿಚಾರ ಗೊತ್ತಿದ್ದುದರಿಂದ ಮಾನವೀಯತೆ ಹಾಗೂ ನ್ಯಾಯದೊರಕಲಿ ಎಂಬುದಕ್ಕಾಗಿ ನಾನು ಸಾಕ್ಷಿ ಹೇಳಿದ್ದೆ. ಆ ಕುಟುಂಬ ನನ್ನ ಆಪ್ತಮಿತ್ರರ ಸಾಲಿನಲ್ಲಿದ್ದುದರಿಂದ ಅನ್ಯಾಯದ ವಿರುದ್ಧ ದನಿಎತ್ತುವುದು ಅಗತ್ಯವೆಂಬುದು ನನ್ನ ದೃಢವಾದ ನಂಬಿಕೆಯಾಗಿತ್ತು.

ಮೂರನೇ ವರ್ಷ ಕಾಲಿಟ್ಟಿತು ಕಾರಿನ ಜತೆಗೆ. 'ಪಾದೆ ಡಾಕುಟ್ರು ಮಸ್ತ್ ಕಾಸು ಮಲ್ಪೇರುಗೆ. ಇತ್ತೆ ಕಾರುಡೇ ಪೋಪುನೆ–ಬರ್ಪುನೆ' (ಪಾದೆಡಾಕ್ಟ್ರು ಈಗ ಕೈತುಂಬ ಸಂಪಾದನೆ ಮಾಡ್ತಿದ್ದಾರೆ. ಕಾರಿನಲ್ಲೇ ಅವರ ಓಡಾಟ ಈಗ) ಎಂಬರ್ಥದ ಮಾತುಗಳು ನಮ್ಮ ಹತ್ತಾಣೆ ರೋಗಿಗಳ ನಡುವಿಂದಲೂ ಕೇಳಿ ಬರತೊಡಗಿತು ಎಂದಮೇಲೆ 'ಇತರರು' ಹೇಗೆ ಸುಮ್ಮಗಿರುತ್ತಾರೆ? ಅವರವರ ಮಟ್ಟಕ್ಕೆ ಸರಿಯಾದ ವಿಮರ್ಶೆ ನಡೆಸಿದರು. ಒಟ್ಟಿನಲ್ಲಿ ಹೇಳುವುದಾದರೆ ಪಾದೆ ಆಸ್ಪತ್ರೆಯ ಹತ್ತಾಣೆ

ಡಾಕ್ಟ್ರು ಈಗ ಮೇಲಂತಸ್ತಿನ ಹಾದಿಯಲ್ಲಿದ್ದಾರೆ ಎಂಬುದು ಜನಾಭಿಪ್ರಾಯದ ಸಾರಾಂಶ!

'ಹೇಗೂ ಕಾರಿದೆಯಲ್ಲ – ಒಮ್ಮೆ ಬಂದು ಹೋಗಲಿ' ಎಂಬ ಮನೆಭೇಟಿಯ ಕರೆಗಳು ಸ್ವಲ್ಪ ಮಟ್ಟಿಗೆ ಹೆಚ್ಚಿದರೂ ಮೂರು ತಿಂಗಳ ಕೊನೆಯಲ್ಲಿ ದೊರಕಿದ ಸಂಪಾದನೆಯ ಅರ್ಧಾಂಶ ಪೆಟ್ರೋಲಿಗಾಗಿಯೇ ಖರ್ಚಾಗಿತ್ತು ಎಂಬುದು ನಿಜ. 'ಹಳೇಕಾರು ಸಾರ್ ಮೈಲೇಜ್ ಕೊಡುವುದಿಲ್ಲ' ಎಂಬುದಾಗಿ ಡ್ರೈವರ್‌ನ ಸಮಜಾಯಿಶಿ ಇದ್ದೇ ಇತ್ತು. ಇನ್ನೂ ಒಂದು ಎಚ್ಚರಿಕೆಯ ಗಂಟೆಯು ಕೂಡ ಬಾರಿಸಿತ್ತು. 'ಇದು ಬ್ರಿಟಿಷ್ ಮೇಕ್ ವಾಹನ ಸಾರ್ – ಈಗ ಬಿಡಿಭಾಗ ಸಿಕ್ಕೋದಿಲ್ಲ. ಜತೆಗೆ ತೀರ ಹಳೇಮಾಡೆಲ್ 1930ರ ತಯಾರಿಕೆ (ನಾನು ಹುಟ್ಟುವುದಕ್ಕೂ ಒಂದು ವರ್ಷ ಮುಂಚಿತವಾಗಿ ತಯಾರಾದದ್ದು!) ಕಾರಿನ ಬೆಲೆಯನ್ನು ತಕ್ಷಣ ಪಾವತಿಸಬೇಕಾಗಿರಲಿಲ್ಲವಾದರೂ – ಬಾಕಿ ಇರಿಸುವಂತಿಲ್ಲವಲ್ಲ! ಕೊನೆಗೆ ಡ್ರೈವರನೇ ಒಂದು ಉಪಾಯ ತೋರಿಸಿಕೊಟ್ಟ 'ಆಸ್ಪತ್ರೆ ಕಾರ್ಯಕ್ಕಾಗಿ (ಅರ್ಥಾಥ್ ನನ್ನ ಸ್ವಂತಕ್ಕಾಗಿ) ಬೇಕಿರದ ಸಮಯದಲ್ಲಿ ಬಾಡಿಗೆಗೆ ಓಡಿಸಿದರೆ ಸಂಪಾದನೆಯೂ ಆಗುತ್ತದೆ. ಅನಾವಶ್ಯಕವಾದ ಹೋಮ್ ವಿಸಿಟ್‌ಗಳೂ ಕಮ್ಮಿಯಾಗುತ್ತವೆ. 'ಸರಿ'ಯೆಂದು ಒಪ್ಪಿಗೆ ಕೊಟ್ಟೆ. ಡ್ರೈವರ್‌ನ ಆಡಳಿತದಲ್ಲಿ ಅಂದರೆ ಪ್ರವಾಸಿಗರಿಂದ ವಸೂಲಿ ಪೆಟ್ರೋಲ್ ಇತ್ಯಾದಿ ಖರ್ಚುವೆಚ್ಚಗಳನ್ನು ನೋಡಿಕೊಂಡು ಉಳಿತಾಯದಲ್ಲಿ ಅರ್ಧಪಾಲು ಕಾರಿನ ಸಾಲಕ್ಕೂ ಉಳಿದದ್ದರಲ್ಲಿ ಸಮಪಾಲು ನಮ್ಮಿಬ್ಬರೊಳಗೂ (ಇದು ಒಳ ವ್ಯವಸ್ಥೆ ಹಾಗೆಯೇ ಎಲ್ಲರಿಗೂ ಕ್ರಮೇಣ ತಿಳಿದುಬಂದರೂ) ಗುಟ್ಟಾಗಿಯೇ ಉಳಿಯಿತು.

ಕಾಸರಗೋಡು (ವಿ)ಶೇಷ ಪ್ರಶ್ನೆ

'ಕಾಸರಗೋಡನ್ನು (ತಾಲೂಕನ್ನು) ಈಗ ಕೇರಳಕ್ಕೆ ಕಸಿಕಟ್ಟಿದ್ದಾರೆ. ರಾಜಕೀಯ ಗೊಂದಲ ಮತ್ತೆ ಮತ್ತೆ ತಲೆಎತ್ತುತ್ತಲೇ ಇತ್ತು. ಚುನಾವಣೆಯೂ ಬಂತು. 'ಕರ್ನಾಟಕ ವಾದಿಗಳು (ಸಮಿತಿ)' ಮೈಕೊಡವಿಕೊಂಡು ಎದ್ದು ನಿಂತಿತು. ಕೇರಳ ವಿಧಾನಸಭೆಯ ಎರಡೂ ಸ್ಥಾನಗಳಿಗೆ (ಮಂಜೇಶ್ವರ ಕಾಸರಗೋಡು) ಕನ್ನಡಿಗ ಅಭ್ಯರ್ಥಿಗಳನ್ನು ನಿಲ್ಲಿಸಿದ್ದೂ ಆಯಿತು. ಚುನಾವಣೆಯ ಪ್ರಚಾರ ಬಿರುಸಿನಿಂದ ಪ್ರಾರಂಭವಾಯಿತು. ಮಂಜೇಶ್ವರ ಕ್ಷೇತ್ರದಿಂದ ಕಳ್ಳಿಗೆ ಮಹಾಬಲಭಂಡಾರಿ ಸ್ಪರ್ಧಿಯಾದರು. ತುಂಬ ಸಮರ್ಥರು; ಉತ್ತಮ ವಾಗ್ಮಿ, ಜನಪ್ರಿಯ ನ್ಯಾಯವಾದಿ ಹಾಗೂ ಸಾಹಿತಿ ಇಷ್ಟೆಲ್ಲಾ ಅರ್ಹತೆ ಇದ್ದರೂ ಎಲ್ಲಾ ವಿಧದಿಂದಲೂ ಪ್ರಯತ್ನ–ಅಲ್ಲ ಭಗೀರಥ ಪ್ರಯತ್ನ–ನಡೆಸುವ ಅವಶ್ಯಕತೆಯೂ ಇತ್ತು. ಕಾಂಗ್ರೆಸ್‌ನಿಂದ ಹಾಗೂ ಎಡಪಕ್ಷದಿಂದ ಸ್ಪರ್ಧಿಗಳಿದ್ದು ಬಿರುಸಿನ ಸ್ಪರ್ಧೆ ಏರ್ಪಟ್ಟಿತ್ತು.

ಒಂದು ದಿನ ಕಾಸರಗೋಡು ಕರ್ನಾಟಕ ಪ್ರಾಂತೀಕರಣ ಸಮಿತಿಯ ಕಡೆಯಿಂದು ಒಂದು ಪತ್ರ ಬಂತು. ಮಹಾಬಲಭಂಡಾರಿಯವರ ಸಹಿ ಇದ್ದ ಪತ್ರ ಅದು. ಸಾರಾಂಶ ಇಷ್ಟು: ಹಿಂದೆ ಬೆಂಗಳೂರಿನಲ್ಲಿದ್ದಾಗ ಕಾಸರಗೋಡು ವಿಭಜನೆಯನ್ನು ವಿರೋಧಿಸಿ ನೀವು ದುಡಿದವರು, ಬೆಂಗಳೂರಲ್ಲಿ ಕಾಸರಗೋಡು ಕನ್ನಡಿಗರ ಧ್ವನಿಯನ್ನು ಪ್ರಬಲಗೊಳಿಸಿದವರು. ಈಗ ಚುನಾವಣೆಯ ಕಣಕ್ಕಿಳಿದಿರುವುದುರಿಂದ ತನಗೆ ಸಂಪೂರ್ಣ ಸಹಾಯ ಸಹಕಾರ ಬೆಂಬಲಬೇಕಾಗಿರುತ್ತದೆ. ಇತ್ಯಾದಿ ಇತ್ಯಾದಿ.

ಒಂದಿಷ್ಟು ಹಣ ಕಳಿಸೋಣ. ಅಡ್ಯನಡ್ಕದಲ್ಲಿ ಒಂದು ಸಾರ್ವಜನಿಕ ಸಭೆ ಪ್ರಚಾರಕ್ಕಾಗಿ ಏರ್ಪಡಿಸೋಣ... ಹೀಗೆಲ್ಲಾ ಯೋಚಿಸುತ್ತಿದ್ದಾಗಲೇ. ಹಿರಿಯ ಮಿತ್ರರೊಬ್ಬರು ಬಂದರು. ನೇರವಾಗಿ, ಭಂಡಾರಿಯವರು ಸ್ವಹಸ್ತದಿಂದ ಬರೆದ ಚಿಕ್ಕ ಚೀಟಿಯೊಂದನ್ನು ಕೊಟ್ಟರು. ಅದರಲ್ಲಿದ್ದ ಪ್ರತ್ಯೇಕ ವಿನಂತಿ ಏನೆಂದರೆ 'ನಿಮ್ಮ ಕಾರನ್ನು 2 ವಾರಗಳ ಮಟ್ಟಿಗೆ ಡ್ರೈವರ್ ಸಮೇತ ಕಳುಹಿಸಿಕೊಟ್ಟು ಉಪಕರಿಸಿ, ಜವಾಬ್ದಾರಿ ನನ್ನದು ನೀವೇನು ಯೋಚನೆ ಮಾಡಬೇಡಿ ಡಾಕ್ಟ್ರೆ!. 'ಓಟು' ಮುಗಿದ ಮರುದಿನ ಮುಂಜಾನೆ ಕಾರು ಕ್ಲಿನಿಕ್‌ನ ಮುಂದೆ ನಿಂತಿರುತ್ತದೆ. ಆ ಗ್ಯಾರಂಟಿ ನಾನು ಕೊಡುತ್ತೇನೆ' ಎಂಬ ಒಗ್ಗರಣೆ ನನ್ನ ಮಿತ್ರೋತ್ತಮನದು. ಹೀಗಾಗಿ ನನಗೆ ವಿಧಿಯಿಲ್ಲದಾಯಿತು

ರಾಜ್ಯ ಪುನರ್ವಿಂಗಡಣೆಯ ಕಾಲದಲ್ಲಿ 'ಕಾಸರಗೋಡು ಕರ್ನಾಟಕದಿಂದ ಕೇರಳಕ್ಕೆ 'ಕಸಿ' ಮಾಡುವುದನ್ನು ವಿರೋಧಿಸಿ ಪ್ರಚಂಡ ಚಳುವಳಿ ನಡೆದಾಗ ನಾನು ಬೆಂಗಳೂರಿನಲ್ಲಿದ್ದೆ (ಅದು ನನ್ನ ಹೌಸ್ ಸರ್ಜನ್ ಕೋರ್ಸಿನ ಕೊನೇ ದಿನಗಳಾಗಿದ್ದವು). ಅಲ್ಲೇ ಇದ್ದು ಚಳುವಳಿಯ ಬಗ್ಗೆ ಪ್ರಚಾರ ಮಾಡಿ ಚಳುವಳಿಗೆ ಹಿರಿಯರ ಸಾಹಿತಿಗಳ ರಾಜಕಾರಣಿಗಳ ಹೊಸದಾಗಿ ರಚನೆಯಾದ ವಿಶಾಲ ಮೈಸೂರು ಸರಕಾರದ ಪ್ರೋತ್ಸಾಹಕ್ಕಾಗಿ ಓಡಾಡುತ್ತಿದ್ದೆ. ಊರಲ್ಲಿನ ಗೆಳೆಯರೆಲ್ಲರೂ ಅಷ್ಟರಲ್ಲೇ ಜೈಲು ಭರೋ ಸತ್ಯಾಗ್ರಹಿಗಳಾಗಿದ್ದರು. ನಾನೊಬ್ಬನೇ ಹೊರಗುಳಿದಿದ್ದೆ (ಅದು ಅನಿವಾರ್ಯವಾಗಿತ್ತಾದರೂ). ಒಳ ಮನಸ್ಸಿನ ಅಳುಕು ಇದ್ದೇ ಇತ್ತು. ಈಗ ಕಿರು ನೆರವು ನೀಡಿ ಪ್ರಾಯಶ್ಚಿತ್ತದ ಪ್ರಯತ್ನ ಮಾಡುವುದು ಅಗತ್ಯವೆನ್ನಿಸಿತು. ಪೆಟ್ರೋಲ್ ಕೂಪನ್ ಇದ್ದುದರಿಂದ ಹತ್ತು ಕೂಪನ್‌ಗಳಿಗೆ ಸಹಿ ಹಾಕಿ ಡ್ರೈವರ್ ಕೈಗಿತ್ತು 'ಜೈ ಕಾಸರಗೋಡು' ಎಂದು ಮನಸ್ಸಿನಲ್ಲೇ ಹೇಳಿ ಕಳುಹಿಸಿದೆ.

ಚುನಾವಣೆ ಮುಗಿಯಿತು. ಓಟಿನ ಎಣಿಕೆಯೂ ಆಯಿತು. ನಿರೀಕ್ಷೆಯಂತೆ ದೊಡ್ಡ ಪ್ರಮಾಣದ ಓಟುಗಳನ್ನು ಪಡೆದು ಕಾಸರಗೋಡು ಕರ್ನಾಟಕ ಪ್ರಾಂತೀಕರಣ ಸಮಿತಿಯ ಅಭ್ಯರ್ಥಿಕಳ್ಳಿಗೆ ಮಹಾಬಲ ಭಂಡಾರಿಯವರೇ ಗೆದ್ದಿದ್ದರು. ಆದರೆ ಕಾಸರಗೋಡು ಕ್ಷೇತ್ರದಲ್ಲಿ ನೆಲಹುಕ್ಕೆ ಜಾರಿಹೋಗಿತ್ತು.

'ಮಳೆ ನಿಂತರೂ ಹನಿಕ್ಕುಟ್ಟು' (ಮರಗಿಡಗಳ ಎಲೆಗಳಿಂದ ತೊಟ್ಟಿಕ್ಕುವ ನೀರಹನಿ) ನಿಲ್ಲಲಿಲ್ಲ ಎಂಬ ಗಾದೆಯಂತೆ ನನಗೆ ಅದರ ಅನುಭವವಾಗಲು 20 ದಿನಗಳು ಬೇಕಾಯಿತು ಅಷ್ಟೆ.

ಎಲೆಕ್ಷನ್ ಪ್ರಚಾರದ ಸಮಯದಲ್ಲಿ ... ಊರಿನಲ್ಲಿ ರಭಸದಿಂದ ಕಾರು ಓಡಿಸುತ್ತಿದ್ದ ನಿಮ್ಮ ಕಾರಿನ ಡ್ರೈವರ್ ಜಾಗ್ರತೆಯಿಂದ ಕಾರು ನಡೆಸದೆ ನಮ್ಮ ಮನೆಯ ದನಕ್ಕೆ ಪೆಟ್ಟಾಗುವಂತೆ ಗುದ್ದಿರುತ್ತಾನೆ (ಅದು ರಸ್ತೆ ಬದಿಯಲ್ಲಿ ಹುಲ್ಲು ಮೇಯುತ್ತಿತ್ತು). ಅದನ್ನು ಪಶುವೈದ್ಯ ಶಾಲೆಯಲ್ಲಿ ಚಿಕಿತ್ಸೆಗೆ ದಾಖಲು ಮಾಡಿಸಿದ್ದು ಇಂಜೆಕ್ಷನ್, ಮದ್ದು, ಮೇವು ಅಂತ ತುಂಬಾ ಹಣ ಖರ್ಚಾಗಿರುತ್ತದೆ. ಈ ಎಲ್ಲಾ ನಷ್ಟವನ್ನು ನೀವು ವಾರದೊಳಗೆ ಕೊಡದಿದ್ದರೆ ಕಾನೂನು ರೀತ್ಯಾ ಕ್ರಮಕೈಗೊಳ್ಳಬೇಕಾಗಿರುತ್ತದೆ. ಎಂಬ ನೋಟೀಸು ನನ್ನ ಕೈಸೇರಿತು.

ಏನು ಮಾಡುವುದೆಂದು ನನಗೆ ತಿಳಿಯಲಿಲ್ಲ ಸೀದಾ ಪುತ್ತೂರಿಗೆ ಹೋದೆ ಅಲ್ಲಿ ವಕೀಲ ಬೋಳಂತಕೋಡಿಈಶ್ವರ ಭಟ್ಟರನ್ನು ಕಂಡು ಮಾತಾಡಿದೆ. (ಈಶ್ವರಭಟ್ಟರು, ಪುತ್ತೂರಿನ ಕರ್ನಾಟಕ ಸಂಘದ ಮೂಲಕ 113ಕ್ಕೂ ಹೆಚ್ಚು ಪುಸ್ತಕ ಪ್ರಕಟಿಸಿದ ಪ್ರಸಿದ್ಧರು ಹಾಗೂ ನಾವು ಒಂದೇ ಹೈಸ್ಕೂಲಿನಲ್ಲಿ ಓದಿದವರು. ಹೀಗೆ ಪರಿಚಿತರು.)

ಪತ್ರವನ್ನು ತಮ್ಮ ಫೈಲಿನಲ್ಲಿ ಸೇರಿಸಿಕೊಂಡು, ಏನು ಮಾಡಬಹುದೋ ನೋಡೋಣ ಕಾಸರಗೋಡು ಬೇರೆ ತಾಲ್ಲೂಕಷ್ಟೇ ಅಲ್ಲ. ಬೇರೆ ರಾಜ್ಯ. 'ರಾಜಿ' ಮಾಡಿಕೊಳ್ಳುವುದೇ ಸೂಕ್ತ ಅಂತ ಕಾಣುತ್ತದೆ ಎಂದು ಆಪ್ತಸಲಹೆ ನೀಡಿದರು. ಕೊನೆಗೆ ಅವರೆಂದ ಹಾಗೆ ಚಿಕಿತ್ಸೆಯ ಖರ್ಚು ವೆಚ್ಚ ಮೇಲೊಂದಿಷ್ಟು ಹಣ ಕೊಟ್ಟು ಕೇಸನ್ನು 'ಮುಗಿಸಿ' ಕೈತೊಳೆದುಕೊಂಡದ್ದಾಯಿತು. ಕೈಗೆ ಹತ್ತಿದ ಕೊಳೆ ತೊಳೆಯಲು 500 ರೂಪಾಯಿ ಬೆಲೆಯ ದೊಡ್ಡ ಸಾಬೂನೇ ಬೇಕಾಯಿತು! ತುಸು ಮಂಕಾಗಿಯೇ ಕ್ಲಿನಿಕ್‌ಗೆ ವಾಪಾಸಾದೆ.

ಇದುವರೆಗೆ ತುಟಿ ಪಿಟಕ್ ಎನ್ನದ ಇದ್ದ ಡ್ರೈವರ್ 'ಸಾರ್ ಒಂದು ವಿಷಯ ನಿಮಗೆ ಹೇಳಬೇಕಾಗಿತ್ತು' ಎಂದ. ಇವನ ಅಸಡ್ಡೆಯಿಂದ ಇಷ್ಟೆಲ್ಲಾ ರಂಪರಾಮಾಯಣವಾದರೂ ನಾನು ಅವನ ಮೇಲೆ ಮುನಿಸು ತೋರಿಸಲಿಲ್ಲ. ಅಸಹನೆ ಇತ್ತು ನಿಜ. ಮತ್ತೆ ಇನ್ನೇನು ಹೊಸ 'ಕೋತ್ರಾಸು' (ಕುತಂತ್ರ) ಅಂತ ನಿರ್ಲಕ್ಷದಿಂದಲೇ ಇದ್ದೆ. 'ಸಾರ್ ಆ ಮನುಷ್ಯನಿಗೆ (ಕಂಪ್ಲೇಂಟ್ ಮಾಡಿದ ವ್ಯಕ್ತಿಗೆ) ಈಗ ಈ ಕಾರಿನ ಮೇಲೆ ತುಂಬಾ ಮೋಹ ಆಗಿ ಬಿಟ್ಟಿದೆ ಸಾರ್ ಈ ಕಾರಿನ ಪ್ರಚಾರದಿಂದಲೇ ಭಂಡಾರಿಯವರು ಗೆದ್ದಿದ್ದಾರೆ. ಡಾಕ್ಟರು ಸಾಹೇಬರು ಕೊಡ್ತಾರೋ ಇಲ್ಲವೋ. ಕೊಡುವ (ಮಾರಾಟ ಮಾಡುವ) ಅಭಿಪ್ರಾಯವಿದ್ದರೆ ಕೊಂಡುಕೊಳ್ಳಲು

ತಾನು ಸಿದ್ಧ. 'ರೆಡಿಕ್ಯಾಶ್' ಅಂತ ಹೇಳಿದ್ದಾನೆ ಸಾರ್. ಈಗ ಖರ್ಚು ಮಾಡಿದ ಹಣದ ಡಬ್ಬಲ್ ಸೇರಿಸಿ ಬೆಲೆ ಹೇಳಿದರೂ ಕೊಡ್ತಾರೆ ಸಾರ್. 'ವ್ಯಾಪಾರ ಕುದುರಿಸಲಾ ಸಾರ್' ಎಂದು ಪ್ರಾರ್ಥಿಸಿದ. ಈ ಇಡೀ ಘಟನೆಯಿಂದ ನನ್ನ ಮನಸ್ಸು ರೋಸಿಹೋಗಿತ್ತು. ಅಲ್ಲದೆ ಡಾ॥ ಗೋಪಾಲ್‌ಗೆ ಕೊಡಬೇಕಾಗಿದ್ದ ಬೆಲೆಯ ಶೇಕಡಾ 10 ರಷ್ಟು ಅಂಶ ಕೂಡಾ ಸಂದಾಯವಾಗಿಲ್ಲ. ತಿಂಗಳು 6 ಕಳೆದಿದೆ ಎಂಬುದರಿಂದ ಏನಾದರೂ ಮಾಡಿಕೋ ಇನ್ನೊಂದು ಸಲ ವಕೀಲರ ಹತ್ತಿರ ಹೋಗುವಂತೆ ಮಾತ್ರ ಮಾಡಬೇಡ ಎಂದು ಹೇಳಿದೆ.

ಕೃಷ್ಣನಾಯ್ಕ ವ್ಯವಹಾರವನ್ನೆಲ್ಲಾ ತುರ್ತಾಗಿ ನಿರ್ವಹಿಸಿ, ಕೀಲಾರಿಗೆ ಹೋಗಿ ಅವರ ಹಣ ಮುಟ್ಟಿಸಿ ಮಂಗಳೂರಿನ ಕಾರಿನ ಮಾಲಿಕತ್ವ ಇತ್ಯಾದಿಗಳನ್ನು ಬದಲಿಸುವ ಕಾರ್ಯವನ್ನು ಮುಗಿಸಿಕೊಂಡ. ನನ್ನ ಮುಂದೆ 500 ರೂಪಾಯಿಗಳನ್ನಿಟ್ಟು ನನಗೆ ಖರ್ಚು ಅಂತ 200 ರೂಪಾಯಿ ಬೇರೆ ಕೊಟ್ಟಿದ್ದಾರೆ ಅಂತ ಹೇಳಿ ನಮಸ್ಕರಿಸಿ ಹೊರಟುಹೋದ.

ವಿಚಾರವಾಣಿಯೊಂದಿಗೆ : ಪತ್ರಿಕಾ ಪ್ರಪಂಚಕ್ಕೆ ನುಸುಳಿದೆ.

ಕ್ಲಿನಿಕ್‌ನ ಮುಂಭಾಗದಲ್ಲಿ ಹಳೆಯದೇ ಆದರೂ ಕಾರು ಅಂತ ಒಂದು ನಾಗಾಲಿವಾಹನ ನಿಂತಿದ್ದರಿಂದ ಬಡವರ ಎದೆಗೂ ಒಂದು ಸಣ್ಣ ಶಾಕ್ ಆಗಿತ್ತಂತೆ – ಎಲ್ಲಿ ಹತ್ತಾಣೆ 'ವಿಲೇವಾರಿ ರೇಟನ್ನು ಏರಿಸಿಬಿಡುತ್ತಾರೋ ಅಂತ ಒಳಗೊಳಗೇ ಎದೆ 'ಪುಕುಪುಕು'! ಆದರೆ ಅಂಥಾದ್ದೇನೂ ಬದಲಾವಣೆ ಕ್ಲಿನಿಕ್‌ನಲ್ಲಿ ಕಾಣಿಸಲಿಲ್ಲ. ಈಗ ಶ್ರೀಮಂತ ವರ್ಗ ಮಾತ್ರ ಬಿಸ್‌ನೆಸ್ ಸ್ವಲ್ಪ ಡಲ್ ಅಂತ ಗುಸು ಗುಸು ಆಗುತ್ತಿದ್ದದ್ದು ಮಾತ್ರ ನಿಜ. ಕಾರು ಮಾರಿದ್ದು ಯಾಕೆ? ಅಂತ ಜಿಜ್ಞಾಸೆ ಕೂಡ ನಡೆಯಿತಂತೆ!

ಪಾರ್ವಕಜೆ ಒಂದು ಚೀಟಿ ಕಳುಹಿಸಿ 'ಈ ಶನಿವಾರ ಪುತ್ತೂರು ಬಸ್‌ಸ್ಟಾಂಡಿನಲ್ಲಿ ಕಾದಿರುತ್ತೇನೆ ಮಾತಾಡಲಿಕ್ಕಿದೆ' ಅಂತ ತಿಳಿಸಿದ್ದರಿಂದ ವಾರಾಂತ್ಯದ ರಜೆಯಲ್ಲಿ ಬೇರೇನೂ ಕಾರ್ಯಕ್ರಮ ಇಟ್ಟುಕೊಳ್ಳದೆ ಪುತ್ತೂರು ತಲುಪಿದೆ. ಪಾರ್ವಕಜೆ ಜೊತೆಗೆ ಇನ್ನೊಂದಿಬ್ಬರು ಪರಿಚಿತರೂ ಅಲ್ಲಿ ಸೇರಿದ್ದರು. ಬಸ್‌ಸ್ಟಾಂಡಿನಿಂದ ಕೂಗಳತೆ ದೂರದಲ್ಲಿದ್ದ ಪಂಚಾಯತ್ ಅತಿಥಿ ವಿಶ್ರಾಂತಿಗೃಹದಲ್ಲಿ ಬೈಠಕ್ ನಡೆಯಿತು.

ಅದೊಂದು ಆಪ್ತಾಲೋಚನೆ ಸಮಾವೇಶ. ಯಾವದೇ ಸಾಂಪ್ರದಾಯಿಕ ಕಟ್ಟುಕಟ್ಟಳೆಗಳಿಲ್ಲದೆ ನೇರವಾಗಿ ವಿಚಾರ ವಿನಿಮಯ ನಡೆಯಿತು. ಅಲ್ಲಿ ಇದ್ದ ವಿಷಯ ಒಂದೇ ಒಂದು – 'ಪುತ್ತೂರಿನಿಂದ ಒಂದು ಪತ್ರಿಕೆ ಹೊರಡಿಸೋದು' ಅದಕ್ಕೆ ಬೇಕಾಗುವ ಬಂಡವಾಳ 10–15 ಸಾವಿರ ರೂಪಾಯಿಗಳನ್ನು ಸಂಗ್ರಹ

ಮಾಡುವ ಕೆಲಸ ಪಾರ್ಪಕಜೆಯವರದ್ದು. ಪ್ರಿಂಟಿಂಗ್‌ಪ್ರೆಸ್ ನೋಡಿಕೊಳ್ಳಲು ಕಂಪೋಸಿಂಗ್ ಪ್ರಿಂಟಿಂಗ್ ಎರಡೂ ಗೊತ್ತಿದ್ದ ರಾವ್, ಪತ್ರಿಕೆಯ ಕೆಲಸಕ್ಕೆ 'ಗೋಕುಲ್' ಸ್ಥಳವನ್ನು ಕೂಡಾ ಈಗಾಗಲೇ ನೋಡಿ ಇರಿಸಲಾಗಿತ್ತು, ಪೋಲೀಸ್ ಸ್ಟೇಷನ್ ರಸ್ತೆಯಲ್ಲಿ ಕೊಂಬೆಟ್ಟು ಗುಡ್ಡದ ಎದುರು. ಒಂದು ಕನ್ನಡ ಪತ್ರಿಕೆಯೊಂದು ಪ್ರತಿವಾರ ಪ್ರಕಟವಾಗಬೇಕು. ಹೆಸರು – 'ವಿಚಾರವಾಣಿ' (10 ವರ್ಷಗಳ ಹಿಂದೆ ಪುತ್ತೂರಿನಿಂದಲೇ ಶಿವರಾಮಕಾರಂತರು ಪ್ರಾರಂಭಿಸಿ ನಡೆಸುತ್ತಿದ್ದು ಅನಂತರ ಮಂಗಳೂರಿಗೆ ಸ್ಥಳಾಂತರಗೊಂಡು ಮುಂದೆ ಅಲ್ಲೂ ಬಹಳ ದಿವಸ ನಡೆಯದೆ ನಿಂತುಹೋಗಿದ್ದ ಆ ಪತ್ರಿಕೆ ಅದು). ಈ ಎಲ್ಲ ಕಾರ್ಯಗಳಿಗೆ ಸರ್ವಶ್ರೀ ವಾರಣಾಶಿ ಸುಬ್ರಾಯ ಭಟ್ಟರು (ಮುಂದೆ ಕ್ಯಾಂಪ್ಕೋ ಸಂಸ್ಥೆಯ ಸ್ಥಾಪಕ ಖ್ಯಾತ ನಾಮರು.) ಬಡೆಕ್ಕಿಲ ಮಹಾಬಲ ಭಟ್ಟರು ಇತ್ಯಾದಿ ಹಿಂದಿನ ದಿನಗಳ ಚಂದಾದಾರರ ಪಟ್ಟಿ ದೊರಕಿಸಿಕೊಂಡಿದ್ದು ಅದರಲ್ಲಿ 500 ಹೆಸರುಗಳನ್ನು ಆರಿಸಿ ಪ್ರಾರಂಭದ ವಾಚಕವರ್ಗ ನಿರ್ಮಿಸುವುದು ಇತ್ಯಾದಿ.

ಅರ್ಧ ಸಿದ್ಧತೆ ಈಗಾಗಲೇ ನಡೆದಿತ್ತು. ಇನ್ನುಳಿದದ್ದು ಒಂದೇ ಕೆಲಸ; 'ಸಂಪಾದಕ–ಪ್ರಕಾಶಕ' ಹೆಸರಿಗೆ ಅಂಕಿತ ಹಾಕುವುದು – ಇದು ಅನಿರೀಕ್ಷಿತವಾಗಿಯೇ ಬಂದಿದ್ದರೂ ಈ ಆಹ್ವಾನವನ್ನು (ಅವಕಾಶವನ್ನು) ಬಿಟ್ಟುಬಿಡಲು ಸಾಧ್ಯವಾಗಲಿಲ್ಲ ನನಗೆ! ಹೀಗಾಗಿ ಜಿಲ್ಲಾಧಿಕಾರಿಯ ಕಾರ್ಯಾಲಯದಲ್ಲಿ ಪುತ್ತೂರಿನಿಂದ ಪ್ರಕಟವಾಗುವ 'ವಿಚಾರವಾಣಿ' ವಾರಪತ್ರಿಕೆ ಸಂಪಾದಕ ಪ್ರಕಾಶಕನಾಗಿ ಡಾ॥ ಎಂ.ಬಿ. ಮರಕಿಣಿಯಾದ ನಾನು ಘೋಷಿಸಿಕೊಂಡುಬಿಟ್ಟೆ. ಮುಂದೆ ಸಾಂಕೇತಿಕವಾಗಿ ಮಾಲಿಕತ್ವ ಕೂಡ ಜತೆಗೆ ಬಂತು!

1960ನೇ ಇಸವಿಯ ಉತ್ತರಾರ್ಧದಲ್ಲಿ ಹೊಸ 'ವಿಚಾರವಾಣಿ' ಪ್ರಕಟವಾಗಲಾರಂಭಿಸಿತು.

ಹಿಂದೆ ವಿಚಾರವಂತರು ರೂಪಿಸಿದ್ದ ಪತ್ರಿಕೆ 'ವಿಚಾರವಾಣಿ' ಬದಲಾದ ಪರಿಸ್ಥಿತಿಗೆ ಸರಿ ಹೊಂದಿಕೊಳ್ಳುವಂತೆ ಹೊಸ ವೈವಿಧ್ಯಪೂರ್ಣ ಮಾಧ್ಯಮವಾಗಿ ಮಾರ್ಪಾಡುಗೊಳ್ಳಬೇಕಾಗಿತ್ತು. ಈ ವಿಚಾರವಾಗಿ ಕುಂದಾಪುರದ ಸಮಾಜವಾದಿ ಯುವಕರೊಬ್ಬರು ಹತ್ತು ಹನ್ನೆರಡು ದಿವಸ ಪುತ್ತೂರಿನಲ್ಲೇ ವಾಸ್ತವ್ಯ ಹೂಡಿ 'ವಿಚಾರವಾಣಿ'ಗೊಂದು ಹೊಸ ಆಯಾಮ ನಿರ್ಮಾಣವಾಗುವುದಕ್ಕೆ ನೆರವಾದರು. ಜನಪ್ರತಿನಿಧಿಯಾಗುವುದಕ್ಕಿಂತ ಜನರು ತಾವೇ ತಮ್ಮ ಆಸೆ, ಆಕಾಂಕ್ಷೆಗಳನ್ನು, ನೋವು ನಲಿವುಗಳನ್ನು ಕುಂದು ಕೊರತೆಗಳನ್ನು ನನಸು ಕಲ್ಪನೆಗಳನ್ನು ಪ್ರಕಟಿಸುವುದಕ್ಕೆ 'ವಿಚಾರವಾಣಿ' ಒಂದು ಮಾಧ್ಯಮವಾಗಬೇಕೆನ್ನುವ 'ಅವಕಾಶವಾಣಿ'ಯಾಗುವ ನಿಟ್ಟಿನಲ್ಲಿ ಬುನಾದಿ ಹಾಕಿದ್ದಾಯಿತು.

ನಾಲ್ಕಾರು ವಾರಗಳ ಮಟ್ಟಿಗೆ ಪತ್ರಿಕೆ ಪ್ರಕಟವಾಗಲು ಎಲ್ಲ ಅನುಕೂಲತೆಗಳನ್ನು ಮಾಡಿಕೊಟ್ಟದ್ದರಿಂದ ವಾರಕ್ಕೊಮ್ಮೆ ಶನಿವಾರ ಸಂಜೆ ಕಾರ್ಯಾಲಯಕ್ಕೆ ಭೇಟಿಕೊಟ್ಟು 'ಓಕೆ' ಎನ್ನುತ್ತಿದ್ದೆ. ಆದರೆ ಆ ದಿನಗಳು ಬೇಗನೇ ಕಳೆದವು. ತಿಂಗಳ ಸಂಬಳ ತೆಗೆದುಕೊಂಡು ಮನೆಗೆ ಹೋದ ಪ್ರಿಂಟರ್, ಕಂಪೋಜಿಟರ್ ಮತ್ತೆ ಇತ್ತ ತಲೆಹಾಕಲಿಲ್ಲ! ಪತ್ರಿಕೆಯನ್ನು ನೋಡಿಕೊಳ್ಳುತ್ತಿದ್ದ 'ಗೋಕುಲ' ಸಣ್ಣ ವೈಮನಸ್ಸು ಕಾರಣವಾಗಿ ವಿದಾಯ ಹೇಳಿದರು. ಪಾರ್ಪಕಜೆಯವರು ಇಷ್ಟು ಹೊತ್ತಿಗಾಗಲೇ ರಾಜಕೀಯದಲ್ಲಿ ತುಂಬಾ ಮುಂದೆ ಹೋಗಿದ್ದರು... ರು... ರು... ಯಾರಿಗೂ ಬಿಡುವಿಲ್ಲವಾದರೂ ನಾನು ಮಾತ್ರ ಬಿಡುವಂತಿರಲಿಲ್ಲವಲ್ಲ?

ಈ ನಡುವೆ ಹಳೆಯ ಸ್ನೇಹಿತ 'ಪರಮಾನಂದ' (ದಿ॥ ಯರ್ಮುಂಜ ರಾಮಚಂದ್ರರ 'ಪಾಂಚಜನ್ಯ' ಹಸ್ತಪತ್ರಿಕೆಯ ಜತೆಸಂಪಾದಕರಾಗಿದ್ದ ಮಹಾರಾಯ) ತಾನಾಗಿ ಜವಾಬ್ದಾರಿ ವಹಿಸಿಕೊಂಡು ಪ್ರೆಸ್ ಹಾಗೂ ಪತ್ರಿಕೆಗೆ ಹೆಗಲುಕೊಟ್ಟು, ಕೆಲಸ ನಿಂತುಹೋಗದಂತೆ ನೋಡಿಕೊಂಡರು. ತಾವೇ ಸ್ವತಃ ಕಂಪೋಸಿಂಗ್ ಕಲಿತರು. ಪ್ರೆಸ್ ಮ್ಯಾನೇಜಮೆಂಟನ್ನೂ ನೋಡಿಕೊಂಡರು. ಈ.ಪಿ.ಎಸ್. ರಾಮ್ 'ವಿಚಾರವಾಣಿ'ಯಲ್ಲಿ ಪ್ರೂಫ್‌ನ್ನು ತಿದ್ದಿದರು. ಪತ್ರಿಕೆ ಕೊನೆಯುಸಿರೆಳೆಯುವವರೆಗೂ ಅವಿಶ್ರಾಂತವಾಗಿ ದುಡಿದರು.

ನಾನು ವಾರಕ್ಕೊಮ್ಮೆ ಭೇಟಿ ಕೊಡುವ ಬದಲು ವಾರಕ್ಕೆ 2–3 ಬಾರಿ ಪುತ್ತೂರಿಗೆ ಹೋಗತೊಡಗಿದೆ (ಸೋಮವಾರ ಬುಧವಾರ ರಾತ್ರಿ ಅಲ್ಲೇ ಪ್ರೆಸ್ಸಿನಲ್ಲೇ ಬೆಂಚುಗಳನ್ನು ಜೋಡಿಸಿ ನ್ಯೂಸ್ ಪೇಪರ್‌ಹೊದೆದು ಕೊಂಡು ರಾತ್ರಿ ಕಳೆಯುತ್ತಿದ್ದೆ). ಶನಿವಾರ – ಭಾನುವಾರ ಚಂದಾದಾರರನ್ನು, ಜಾಹೀರಾತುಗಳನ್ನು ಅರಸಿಕೊಂಡು ಓಡಾಡಬೇಕಾಗುತ್ತಿತ್ತು. ಈ ಎಲ್ಲ ಹಾರಾಟ ಹೋರಾಟಗಳಿಗೆ 'ಕಾರು' ಅನಿವಾರ್ಯವಾದ್ದರಿಂದ ಎರಡನೇ ಬಾರಿಗೆ ಒಂದು ಕಾರನ್ನು ಕೊಂಡುಕೊಂಡೆ ('ಬೇಬೀ ಫೋರ್ಡ್' 1936ನೇ ಇಸವಿಯ ಮಾಡೆಲ್). ಬ್ಯಾಂಕ್‌ನಿಂದ ಸಾಲ ಮಾಡಿ ಅವರಿಗೆ ಹಣ ಕೊಟ್ಟೆ. ಡ್ರೈವರ್ ಕೃಷ್ಣ ಈಗ ಬೇರೆಯವರಲ್ಲಿ ಖಾಯಂ ಕೆಲಸಕ್ಕೆ ಸೇರಿದ್ದರಿಂದ ನಾನೇ ಡ್ರೈವರೂ ಆದೆ.

ಕ್ರಮೇಣ ಹಳೆ ಚಂದಾದಾರರಲ್ಲಿ ಹೆಚ್ಚಿನವರು ವರ್ಗಣಿಯನ್ನು ಪಾವತಿ ಮಾಡುವ ಮನಸ್ಸು ಮಾಡದಿದ್ದರೂ ಹೊಸ ಚಂದಾದಾರರ ಸಂಖ್ಯೆ ಹೆಚ್ಚಬೇಕಾಯಿತು. ಹಳ್ಳಿಗಳಲ್ಲಿ ಉತ್ಸಾಹಿ ಯುವಕರು ಬನ್ನಿ ಎಂದು ಆಹ್ವಾನ ನೀಡುತ್ತಿದ್ದರು. ಕೆಲವು ಹಳೇ ಚಂದಾ ವಸೂಲಿ ಆದದ್ದರ ಜೊತೆಗೆ ಹೊಸ ಚಂದಾದಾರರೂ ದೊರಕುತ್ತಿದ್ದರು.

ಆಗ ಮಂಗಳೂರಲ್ಲಿ ಪತ್ರಿಕೋದ್ಯೋಗಿಯಾಗಿದ್ದ 'ಪ.ಗೋ' ವಿಚಾರವಾಣಿ ಕಾರ್ಯಾಲಯಕ್ಕೆ ಸೇರಿಕೊಂಡರು. ಪತ್ರಿಕೆ ಹೊಸ ಕಳೆಯಿಂದ ಮಿಂಚತೊಡಗಿತು.

ನನಗೆ ತುಸು ವಿರಾಮ ಸಿಕ್ಕಿತು ಎನ್ನುವಷ್ಟರಲ್ಲಿ ಪ.ಗೋ. ಸ್ವಂತ ಪ್ರೆಸ್-ಪತ್ರಿಕೆ ಮಾಡುವುದಕ್ಕೆಂದು ಮಂಗಳೂರಿಗೆ ಮರಳಿದರು. ಅಲ್ಲಿಗೆ ನಾನೂ ನನ್ನ ಪತ್ರಿಕಾಪ್ರಪಂಚವೂ ಎಂಬ ಸ್ಥಿತಿ ಖಾಯಂ ಆಯಿತು.

ಚುನಾವಣೆಯ ಬಿರುಗಾಳಿ

ಇಷ್ಟರಲ್ಲಿ ಹೊಸತಾಗಿ ಅಸ್ತಿತ್ವಕ್ಕೆ ಬಂದ 'ತಾಲ್ಲೂಕು ಅಭಿವೃದ್ಧಿ ಮಂಡಳಿ'ಯ ಚುನಾವಣೆ ಘೋಷಣೆಯಾಯಿತು. ಗ್ರಾಮೀಣ ಸಂಘ ಸಂಸ್ಥೆಗಳು ರಾಜಕೀಯ ಪಕ್ಷಗಳ ಕಕ್ಷೆಯಿಂದ ಹೊರಗಿರಬೇಕು ಎಂಬ ಅಭಿಪ್ರಾಯಕ್ಕೆ ಜನಬೆಂಬಲವಿತ್ತು. ಚುನಾವಣೆಯಲ್ಲಿ 'ಪಕ್ಷಾತೀತ ಸ್ವತಂತ್ರ ಹುರಿಯಾಳು'ಗಳು ಸ್ಪರ್ಧಿಸಿ ಗೆಲ್ಲುವಂತಾದರೆ ಗ್ರಾಮಸ್ವರಾಜ್ಯದ ಹಾದಿಯಲ್ಲಿ ಒಂದು ಪ್ರಧಾನ ಹೆಜ್ಜೆ ಮುಂದಿಟ್ಟಂತೆ ಎಂದು ಭಾವಿಸಿದ ಹಲವರು ಪಕ್ಷಾತೀತರಾಗಿ ಚುನಾವಣೆಗೆ ಇಳಿದರು. ನಮ್ಮ ತಾಲ್ಲೂಕಿನಲ್ಲಿ ಸುಮಾರು 30 ಮಂದಿ ಅಭ್ಯರ್ಥಿಗಳು ಈ ಅಭಿಪ್ರಾಯ ಹೊಂದಿದವರಿದ್ದು ಶ್ರೀ ವಾರಣಾಶಿ ಸುಬ್ರಾಯ ಭಟ್ಟರು ಎಲ್ಲರ ಸಂಪರ್ಕ ಸಾಧಿಸಿ ಒಂದು ವೈಚಾರಿಕ ತತ್ವಾಧಾರಿತ ಪಕ್ಷಾತೀತ ಸಮರ್ಪಕ ಚುನಾವಣೆಯಾಗಿ ಸೂಕ್ತ ಅಭ್ಯರ್ಥಿಗಳು ಗೆಲ್ಲುವಂತೆ ಪ್ರಯತ್ನಿಸಿದರು. 'ವಿಚಾರವಾಣಿ' ಇದನ್ನು ಬೆಂಬಲಿಸಿತು. ತಾಲ್ಲೂಕು ಅಭಿವೃದ್ಧಿ ಮಂಡಳಿಯ ಬಗ್ಗೆ (ಹೊಸದಾಗಿ ರಚಿತವಾದ್ದರಿಂದ) ಜನರಿಗೆ ತಿಳುವಳಿಕೆ ನೀಡಲು ವಿಶೇಷಾಂಕವೊಂದನ್ನು ವಿಚಾರವಾಣಿ ಪ್ರಕಟಿಸಿತು. ನಾನು ವೈಯಕ್ತಿಕವಾಗಿ ಚುನಾವಣೆಯಲ್ಲಿ ಸ್ಪರ್ಧಿಸಲಿಲ್ಲ. ನಮ್ಮ ಸುತ್ತಮುತ್ತಲಿನ ಗ್ರಾಮಗಳಲ್ಲಿ 3 ವಾರಗಳ ಕಾಲ ಹಗಲಿರುಳು ಪ್ರಚಾರ ನಡೆಸಿದೆ. ಸಣ್ಣ ರಸ್ತೆ ಅಪಘಾತದಲ್ಲಿ ಕಾರು ಮತ್ತೆ ರಿಪೇರಿಗೆ ಹೋಯಿತು. ಅಕ್ಷರಶಃ ಪಾದಯಾತ್ರೆ ಮಾಡಿ 2-3 ಗ್ರಾಮಗಳಲ್ಲಿ ಬಿರುಸಿನ ಪ್ರಚಾರ ನಡೆಸಿದೆ. ನಮ್ಮ ಸ್ನೇಹಿತರು ಹಲವರು ಬೇರೆಬೇರೆ ಊರುಗಳಿಂದ ಬಂದು ಸಹಕರಿಸಿದರು.

ಚುನಾವಣೆ ನಡೆದು, ಓಟಿನ ಎಣಿಕೆ ಆಯಿತು. ಇಡೀ ತಾಲ್ಲೂಕಿನಲ್ಲಿ ಒಬ್ಬ ಸ್ವತಂತ್ರ (ಪಕ್ಷಾತೀತ) ಅಭ್ಯರ್ಥಿ ಮಾತ್ರ ಗೆದ್ದಿದ್ದ. ಹಲವರು ಠೇವಣಿ ಕಳೆದುಕೊಂಡಿದ್ದರು. ನಮ್ಮ ಕನಸು ಚೂರುಚೂರಾಯಿತು. 'ಚುನಾವಣೆಯಲ್ಲಿ ಗೆದ್ದವರು ಸೋತಂತೆ, ಸೋತವರು (ಅಭ್ಯರ್ಥಿ) ಸತ್ತಂತೆ' ಎಂಬ ಮಾತಿದೆ. ಅದಕ್ಕೆ ಉತ್ತರಾರ್ಧವೆಂಬಂತೆ ಸೋತ ಅಭ್ಯರ್ಥಿಗಳ ಪರ ಕೆಲಸ ಮಾಡಿದವರು ಜೀವಚ್ಛವವಾಗಿ ಉಳಿದರು. ನನ್ನ ಸ್ಥಿತಿ ಇದೇ ಆಯಿತು.

ಚುನಾವಣೆಯ ಕಾವು ತಣಿಯಿತು. ಎಲ್ಲರೂ ತಮ್ಮತಮ್ಮ ವ್ಯವಸಾಯ-ವ್ಯವಹಾರ-ಉದ್ಯೋಗಗಳತ್ತ ಗಮನ ಹರಿಸತೊಡಗಿದರು. ಮೂರು ವಾರಗಳ ಕಾಲ ಕ್ಲಿನಿಕ್‌ನ ಮುಖ ನೋಡದ್ದರಿಂದಲೋ ಏನೋ ಕ್ಲಿನಿಕ್ ಬರಿದೋ ಬರಿದು

ಎನ್ನಿಸಿತು. ಒಂದಷ್ಟು ದಿನಗಳ ತರುವಾಯ ಪರಿಸ್ಥಿತಿ ಸುಧಾರಿಸಿದರೂ ಹತ್ತಾಣೆ ಡಾಕ್ಟ್ರ ಹತ್ತಿರ ಬಡವರು ಒಬ್ಬೊಬ್ಬರಾಗಿ ಬರತೊಡಗಿದರೂ ಅದರ ಗುಂಪು ಕ್ಷೀಣಿಸಿತ್ತು. ಶ್ರೀಮಂತ ವರ್ಗದಲ್ಲಿ ಹೆಚ್ಚಿನವರು ಬೇರೆ ದಾರಿ ತಾವೇ ನೋಡಿಕೊಳ್ಳತೊಡಗಿದರು...

ಈ ಅವ್ಯವಸ್ಥೆಗಳ ನಡುವೆ ಮಂಗಳೂರಿನ ಔಷಧಿ ವ್ಯಾಪಾರಿ ಸಂಸ್ಥೆಯೊಂದರಲ್ಲಿ ಕಳೆದ ನಾಲ್ಕು ವರ್ಷಗಳಿಂದ ಔಷಧಿ ತರಿಸುತ್ತಿದ್ದರೂ ಒಂದಿಷ್ಟು ಬಾಕಿ ಉಳಿಸಿ ಕೆಲಕಾಲ ಕಳೆದಿತ್ತು. ಇತ್ತೀಚಿನ ದಿನಗಳಲ್ಲಿನ ಅವ್ಯವಸ್ಥೆಯಿಂದ ಮತ್ತೆ ಮತ್ತೆ ಹೆಚ್ಚು ಔಷಧಿ ತರಿಸುವುದಾಗಲಿಲ್ಲ. ಅಷ್ಟೇ ಅಲ್ಲದೆ ಹಿಂದಿನ ಬಾಕಿ ಸುಮಾರು 2 ಸಾವಿರ ರೂಪಾಯಿಗಳಷ್ಟಿರಬಹುದು, ಪಾವತಿ ಮಾಡುವುದಕ್ಕೂ ಸಾಧ್ಯವಾಗಲಿಲ್ಲ. ಒಂದು ದಿನ ಲಾಯರ್ ನೋಟೀಸ್ ಬಂತು – 15 ದಿನಗಳ ವಾಯಿದೆಯಲ್ಲಿ ಅದರ ಬಾಕಿ ಹಣ ಚುಕ್ತಾ ಮಾಡಲು! ಹೇಗೋ ಮಾಡಿ ಅದನ್ನು ಪರಿಹರಿಸಿಕೊಂಡೆ ಎನ್ನುವಷ್ಟರಲ್ಲಿ ಕ್ಲಿನಿಕ್ ಕಟ್ಟಡದ ಮಾಲೀಕರಾದ ಹಾಜಿಯರ್ ಸಾಹುಕಾರರು 1 ತಿಂಗಳೊಳಗಾಗಿ ಕಟ್ಟಡವನ್ನು ಖಾಲಿ ಮಾಡಿ ಬಿಟ್ಟುಕೊಡಲು ಅಪೇಕ್ಷಿಸಿ ವಕೀಲರ ಮೂಲಕ ನೋಟೀಸು ಕೊಡಿಸಿದರು! ಇದರಿಂದ ತುಂಬಾ ಇಕ್ಕಟ್ಟಿನ ಪರಿಸ್ಥಿತಿ ಉದ್ಭವಿಸಿತು. ಹಿರಿಯ ಮಿತ್ರರಾದ ಚೌರ್ಕಾಡು ಅಣ್ಣಯ್ಯ ಜೋಯಿಸರು ಮಧ್ಯಸ್ಥಿಕೆ ವಹಿಸಿ, ಆದಷ್ಟು ಬೇಗನೆ ಎಂದರೆ ಮುಳಿಯಾಲ ಸುಬ್ಬಣ್ಣಭಟ್ಟರ ಹಳೆಯ ಕಟ್ಟಡವೊಂದನ್ನು ರಿಪೇರಿ ಮಾಡುವಂತೆ ಒತ್ತಾಯಿಸಿ ಅದು ತಯಾರಾಗುವವರೆಗೆ ಕಾಲಾವಧಿ ದೊರಕಿಸಿಕೊಟ್ಟರು. ಅಡ್ಯನಡ್ಕ ಪೇಟೆಯ ನಡುವೆ ಹಿಂದೆ ಪೋಸ್ಟ್ ಆಫೀಸ್ ಇದ್ದ ಕಟ್ಟಡಕ್ಕೆ ಪಾದೆ ಕ್ಲಿನಿಕ್ ವರ್ಗವಾಯಿತು.

ವಿದೇಶದಲ್ಲಿ ಶಿಕ್ಷಣದ ಅವಕಾಶ

ವೈದ್ಯಕೀಯ ಕ್ಷೇತ್ರದಲ್ಲಿ ನನ್ನ ಅನುಭವ ಮತ್ತು ಜ್ಞಾನವನ್ನು ಹೆಚ್ಚಿಸಿಕೊಳ್ಳಬೇಕಾದ ಅಗತ್ಯ ನನಗೆ ಮನವರಿಕೆಯಾಗಿತ್ತು. ಆ ಬಗ್ಗೆ ಮತ್ತೆ ಮತ್ತೆ ಚಿಂತನೆ ನಡೆಸುತ್ತಿದ್ದೆ. ಆದರೆ ದೇಶದ ಯಾವ ಭಾಗದಲ್ಲೂ ಎಲ್.ಎ.ಎಂ.ಎಸ್. ಓದಿದವರಿಗೆ 'ಉನ್ನತ ಶಿಕ್ಷಣ' ನೀಡುವ ವ್ಯವಸ್ಥೆಯಿರಲಿಲ್ಲ. ಹೊಸದಾಗಿ 'ಎಂ.ಡಿ' (ಆಯುರ್ವೇದ) ಎಂಬ ಎರಡು ವರ್ಷಗಳ ಉನ್ನತ ಶಿಕ್ಷಣವೇನೋ ಪ್ರಾರಂಭವಾಗಿತ್ತಾದರೂ ಅದು ಎಷ್ಟರಮಟ್ಟಿಗೆ ಗ್ರಾಮೀಣ ಜನರ ಆರೋಗ್ಯ ರಕ್ಷಣೆಯ ಅವಶ್ಯಕತೆಗಳನ್ನು ಪೂರೈಸಲು ನೆರವಾಗುವುದೆಂಬ ಭರವಸೆಯೂ ಇರಲಿಲ್ಲ. ಹೀಗಾಗಿ ಒಮ್ಮೆ ದೆಹಲಿ ತನಕ ಹೋಗಿ ಆಗ ಭಾರತ ಸರಕಾರದ ವೈದ್ಯಕೀಯ ವಿಭಾಗದಲ್ಲಿ ಹಿಂದೆ ಆಯುರ್ವೇದ ಶಾಖೆಯ ಹಿರಿಯ ಅಧಿಕಾರಿಗಳಾಗಿ ಮೈಸೂರು ಕಾಲೇಜಿನಲ್ಲಿ ಪ್ರಿನ್ಸಿಪಾಲರಾಗಿದ್ದ ಡಾ॥ ದ್ವಾರಕಾನಾಥರು ಇದ್ದುದರಿಂದ ಅವರನ್ನು ಕಂಡು

ಮಾತಾಡಿದೆ. ಖರ್ಚುವೆಚ್ಚಗಳನ್ನು ನಿಭಾಯಿಸಬಹುದಾದರೆ ಜರ್ಮನಿಯ ಹ್ಯಾಂಬರ್ಗ್‌ನಲ್ಲಿ ಉಷ್ಣವಲಯದ ಕಾಯಿಲೆಗಳ ರೋಗೋಪಚಾರ ಹಾಗೂ ವಿಶೇಷ ಶಿಕ್ಷಣ ಪಡೆಯುವ ಅವಕಾಶವಿರುವುದನ್ನು ತಿಳಿಸಿದರು. ಅಲ್ಲಿಂದಲೇ ಒಂದು ಪತ್ರ ಬರೆದಿದ್ದೆ – ಅದಕ್ಕೆ ಬಂದ ಉತ್ತರಕ್ಕೆ ಕೂಡಾ ಕೆಲವು ವಿವರಗಳನ್ನು ತಿಳಿಸಿದ್ದೆ. ಇದೆಲ್ಲ ಆರೇಳು ತಿಂಗಳ ಹಿಂದಿನ ವೃತ್ತಾಂತ. ಈಗ ಟಪ್ಪಾಲಿನಲ್ಲಿ ಒಂದು ಪತ್ರ ಬಂತು. ಮುಂದಿನ ಶಿಕ್ಷಣ ಕೋರ್ಸ್‌ಗೆ ನಿಮ್ಮನ್ನು ಆಯ್ಕೆ ಮಾಡಲಾಗಿದೆ ಎಂಬುದಾಗಿ ತಿಳಿಸಿತ್ತು ಆ ಪತ್ರ.

ಮತ್ತೆ ದೆಹಲಿಗೆ ಬಂದೆ. ಗುರುಗಳಿಂದ ಸಂಪೂರ್ಣ ಮಾಹಿತಿ ಪಡೆದು ಅಲ್ಲಿಂದಲೇ ಪಾಸ್‌ಪೋರ್ಟ್ 'ಫಾರಿನ್ ಎಕ್ಸ್‌ಚೇಂಜ್ ಪರ್ಮಿಟ್' ಇತ್ಯಾದಿಗಳಿಗೆ ಬೇಕಾದ ಕಾರ್ಯಗಳನ್ನು ನಿರ್ವಹಿಸಿದೆ. 10 ವಾರಗಳ ಕಾಲ ಪುಣೆಯ ಡೆಕ್ಕನ್ ಕಾಲೇಜಿನಲ್ಲಿದ್ದು 'ಗಯಥೆ' ಸಂಸ್ಥೆಯವರ ತುರ್ತು ಜರ್ಮನ್ ಭಾಷಾ ಶಿಕ್ಷ ಕೋರ್ಸ್‌ಗೆ ಸೇರಿಕೊಂಡು – ಅಷ್ಟೋ ಇಷ್ಟೋ ಜರ್ಮನ್ ಭಾಷೆಯನ್ನು ಕಲಿತುಕೊಂಡೆ.

ಸಕಾಲದಲ್ಲಿ ಪಾಸ್‌ಪೋರ್ಟ್, ವೀಸಾ, ಫಾರಿನ್ ಎಕ್ಸ್‌ಚೇಂಜ್, ಪರ್ಮಿಟ್ ಎಲ್ಲವೂ ಕೈಗೆ ಬಂದವು. ಈಗಿನ್ನು ಬೇಕಾದ್ದು 'ಇಂಡಿಯನ್ ಕರೆನ್ಸಿ' (ಅರ್ಥಾತ್ ಖರ್ಚಿಗೆ ಅಗತ್ಯವಾದಷ್ಟು ಹಣ!) ಮುಂಬೈಯಲ್ಲಿದ್ದ ರಾಮಚಂದ್ರ ಉಚ್ಚಿಲರ ಸಲಹೆಯಂತೆ ಕರ್ನಾಟಕ ಬ್ಯಾಂಕ್, ಸಿಂಡಿಕೇಟ್ ಬ್ಯಾಂಕ್‌ಗಳ ಮೇಲಧಿಕಾರಿಗಳನ್ನು ಕಂಡು ಮಾತಾಡಿ, ಅರ್ಧದಷ್ಟು ಹಣ ಸಾಲವಾಗಿ ಪಡೆದುಕೊಂಡೆ. 'ಇನ್ನರ್ಧಕ್ಕೆ ಏನ್ಮಾಡೋಣ' ಎಂದು ಚಿಂತಿಸುವಾಗ ಮತ್ತೆ ಉಚ್ಚಿಲರೇ ಗುಟ್ಟಿನಲ್ಲಿ ಹೇಳಿದರು. 'ಈ ಹಣ ತೆಗೆದುಕೊಂಡು ಹೋಗಿ ಸದ್ಯಕ್ಕೆ ಅನಂತರ ಅಲ್ಲಿಂದ ಇನ್ನೊಂದು ಹಣದ ಅವಶ್ಯಕತೆ ಇದೆ ಅಂತ ಕಾಲೇಜು ಮುಖ್ಯಸ್ಥರ ಶಿಫಾರಸಿನೊಂದಿಗೆ ಅರ್ಜಿ ಕಳಿಸಿ. ನಾನಿಲ್ಲಿ ಅದನ್ನು ನೋಡಿಕೊಳ್ಳುತ್ತೇನೆ ಎಂದರು.

ಈಗ ಪ್ರೆಸ್, ವಿಚಾರವಾಣಿ, ಕ್ಲಿನಿಕ್ ಮೊದಲಾದವುಗಳ ಜವಾಬ್ದಾರಿಯನ್ನು ಇತರರಿಗೆ ವರ್ಗಾಯಿಸುವುದು ಅನಿವಾರ್ಯವಾಯಿತು. ಅಧಿಕೃತವಾಗಿ ಪಾರ್ಪಕಜೆಯವರಿಗೆ ವಾಣಿ ಪ್ರಿಂಟರಿಯನ್ನು (ನಮ್ಮ ಪ್ರೆಸ್ಸಿನ ಹೆಸರು), ಶಂಪಾ ದೈತೋಟರವರಿಗೆ ವಿಚಾರವಾಣಿಯ ಸಂಪಾದಕ–ಪ್ರಕಾಶತ್ವವನ್ನೂ ಹಸ್ತಾಂತರಿಸಿದೆ.

ಕ್ಲಿನಿಕ್‌ಗೆ ಅದೇ ತಾನೇ ವೈದ್ಯಶಿಕ್ಷಣ ಮುಗಿಸಿಕೊಂಡು ಪ್ರಾಕ್ಟೀಸಿಗಾಗಿ ಸ್ಥಳದ ಹುಡುಕಾಟ ನಡೆಸುತ್ತಿದ್ದ ಡಾ॥ ಕೆ.ಎಂ. ಕೃಷ್ಣಭಟ್ಟರು ಅರೆಕಾಲಿಕ ವೈದ್ಯರಾಗಿ ಕೆಲಸಮಾಡಲು ಒಪ್ಪಿಕೊಂಡರು. ವಿಟ್ಲದಲ್ಲಿ ಸ್ವಂತ ಕ್ಲಿನಿಕ್ ತೆರೆದು ಅತ್ಯಲ್ಪ ಕಾಲಾವಧಿಯಲ್ಲೇ ಒಳ್ಳೆಯ ಹೆಸರು ಗಳಿಸಿದ್ದ ಲೇಡಿ ಡಾಕ್ಟರರು ವಾರಕ್ಕೊಮ್ಮೆ

ಗ್ರಾಮೀಣ ಕ್ಲಿನಿಕ್ಕನ್ನು ಸಂದರ್ಶಿಸಲು ಮುಂದಾದರು. ಇತರ ಎಲ್ಲಾ ಜವಾಬ್ದಾರಿ ಕಾಂಪೌಂಡರ್ ಮಣಿಗೆ ಒಪ್ಪಿಸಿದೆ.

ಇಷ್ಟೆಲ್ಲಾ ತಯಾರಿಯ ನಂತರ ಮುಂಬೈ ಬಂದರಿನಿಂದ ಹಡಗಿನ ಮೂಲಕ ಕಡಲಾಚೆಗೆ ಮುಖಮಾಡಿ ಹೊರಟೆ. ಆಗ ನನ್ನ ಜೇಬಿನಲ್ಲಿ ಪಾಸ್‌ಪೋರ್ಟ್, ಫಾರಿನ್ ಎಕ್ಸ್‌ಚೇಂಜ್ ಪರ್ಮಿಟ್, ಹ್ಯಾಂಬರ್ಗ್‌ನ 'ಟ್ರೋಪೆನ್ ಇನ್ಸ್‌ಟಿಟ್ಯೂಟ್'ನಿಂದ ತರಬೇತಿಗೆ ದೊರಕಿದ ಪ್ರವೇಶ ಪತ್ರ ಮತ್ತು 500 ರೂಪಾಯಿ ಮೌಲ್ಯದ ಡಾಲರ್ ಮಾತ್ರ. ಹಾಗೂ ಅವಸರಕ್ಕೆ ಹೊಲಿಸಿಕೊಂಡ ಎರಡು ಸೂಟುಗಳು – ಇಷ್ಟೇ ನನ್ನ ಜತೆಗೆ ಇದ್ದದ್ದು.

❊ ❊ ❊

೬

ಹ್ಯಾಂಬರ್ಗ್ ಮತ್ತು ಲಂಡನ್‌ನಲ್ಲಿ ಡಿ.ಟಿ.ಎಂ, ಸಿ.ಸಿ.ಎಫ್.ತರಬೇತಿ ಮುಗಿಸಿಕೊಂಡು

ಸ್ವದೇಶಕ್ಕೆ ಮರಳಿ ಬಂದ ಮೇಲೆ

ಮುಂಬೈಯಿಂದ ಹಡಗಿನಲ್ಲಿ ಹೊರಟವನು ಮಾರ್ಸಲಿಸ್ ಬಂದರಿನಲ್ಲಿಳಿದೆ. ಅಲ್ಲಿಂದ 'ಟ್ರಾನ್ಸ್ ಯೂರೋಪ್' ರೈಲು ಹಿಡಿದು ಹ್ಯಾಂಬರ್ಗ್ ತಲಪಿ ಹದಿಮೂರು ದಿವಸಗಳ ಸುದೀರ್ಘಪ್ರಯಾಣ ಮುಗಿಸಿದೆ. 'ಟ್ರೋಪನ್ ಇನ್‌ಸ್ಟಿಟ್ಯೂಟ್'ನಲ್ಲಿ ಡಿಟಿಎಂ ಕೋರ್ಸ್ ಮುಗಿಸಿಕೊಂಡು ಲಂಡನ್‌ಸೇರಿದೆ. ಅಲ್ಲಿ ಮೊದಲಿಗೆ ವೈ.ಎಂ.ಸಿ.ಎ. ಪ್ರವಾಸಿಗೃಹದಲ್ಲಿದ್ದು ಮುಂದೆ 'ಇಂಡಿಯನ್ ಹಾಸ್ಟೆಲ್' ಸೇರಿಕೊಂಡೆ. ಭಾರತದ ಹೈಕಮೀಷನರ್ ಆಗಿದ್ದ ಕೃಷ್ಣಮೆನನ್ ಬಹಳ ಹಿಂದೆಯೇ ಸ್ಥಾಪಿಸಿದ್ದ ಈ ವಿದ್ಯಾರ್ಥಿನಿಲಯದಲ್ಲಿ ತಕ್ಕಮಟ್ಟಿನ ಅನುಕೂಲತೆಗಳಿದ್ದವು; ವೆಚ್ಚವೂ ದುಬಾರಿ ಆಗಿರಲಿಲ್ಲ.

ಅಂತರರಾಷ್ಟ್ರೀಯ ಕುಟುಂಬಯೋಜನಾ ಸಂಸ್ಥೆ (ಐ.ಪಿ.ಪಿ.ಎ.) ನಡೆಸುತ್ತಿದ್ದ ಜನನನಿಯಂತ್ರಣ- ಕುಟುಂಬಕಲ್ಯಾಣ ಕಾರ್ಯಕ್ರಮಕ್ಕೆ ಸಂಬಂಧಿಸಿದ ಎರಡು ಕೋರ್ಸ್‌ಗಳಿಗೆ ಸೇರಿಕೊಂಡೆ. ಕ್ರೈಡನ್ ಮೊದಲಾದ ಲಂಡನ್‌ನ ಪ್ರಸಿದ್ಧ ಆಸ್ಪತ್ರೆಗಳಲ್ಲಿ ಪ್ರತ್ಯಕ್ಷಶಿಕ್ಷಣ-ತರಬೇತಿಗಳನ್ನೂ ಪೂರೈಸಿದೆ. ಅದೇತಾನೆ ವಿಶ್ವ ಆರೋಗ್ಯ ಸಂಸ್ಥೆಯ ನೇತೃತ್ವದಲ್ಲಿ ರೂಪುಗೊಳ್ಳುತ್ತಿದ್ದ'ಎಲ್ಲರಿಗೂ ಆರೋಗ್ಯ' ಎಂಬ ವಿಚಾರಧಾರೆಗೆ ಸಂಬಂಧಿಸಿದ ಕೆಲವು ಚರ್ಚಾಗೋಷ್ಠಿಗಳಲ್ಲಿ ಭಾಗವಹಿಸಿದೆ. 'ಸಮುದಾಯ ಆರೋಗ್ಯ'ದ ಬಗ್ಗೆ ಕೂಡ ಸ್ವಯಂಸೇವಾ ಸಂಘಟನೆಗಳು ನಿರ್ವಹಿಸುತ್ತಿದ್ದ ತರಬೇತಿ ಶಿಬಿರಗಳಲ್ಲಿ ಪಾಲ್ಗೊಂಡೆ. ಮುಂದೆ ಎರಡು ತಿಂಗಳ ನಂತರ ಡಬ್ಲಿನ್‌ನ (ಐರ್‌ಲ್ಯಾಂಡ್) ಸುಪ್ರಸಿದ್ಧ ಟ್ರಿನಿಟಿ ಆಸ್ಪತ್ರೆಯಲ್ಲಿ ನಿಯೋಜಿತವಾಗಿದ್ದು 'ನವಜಾತ ಶಿಶುಸಂರಕ್ಷಣೆ' ತರಬೇತಿಗೆ ಸೇರಿಕೊಳ್ಳಲು ಸಿದ್ಧತೆ ಮಾಡಿಗೊಳ್ಳುತ್ತಿದ್ದೆ.

ಅಷ್ಟರಲ್ಲಿ ಮುಂಬೈನಿಂದ ರಾಮಚಂದ್ರ ಉಚ್ಚಿಲರು ಬರೆದ ಒಂದು ಚಿಕ್ಕ ಪತ್ರ ನನ್ನನ್ನು ಗಾಬರಿಗೊಳಿಸಿತು: 'ದೇಶದ ಉತ್ತರ ಭಾಗದಲ್ಲಿ ಗಡಿತಂಟೆ ವಿಪರೀತಕ್ಕೆ ಹೋಗಿರುವ ಕಾರಣ, ವಿದೇಶೀ ವಿನಿಮಯದ ಪರವಾನಿಗೆಯನ್ನು ವಿಸ್ತರಿಸುವುದು ಸಾಧ್ಯವಾಗಲ್ಲಿಕ್ಕಿಲ್ಲ. ಆದಷ್ಟುಬೇಗನೆ ವಾಪಾಸಾಗುವುದಕ್ಕೆ ವ್ಯವಸ್ಥೆಮಾಡಿಕೊಳ್ಳಿ. ವಿಮಾನದ ಟಿಕೇಟನ್ನು 'ಬ್ಯಾಂಕ್ ಮೂಲಕ ಇಲ್ಲಿಂದ ಕಳಿಸಬಹುದು' ಎಂಬುದು ಆ ಪತ್ರದ ಸಾರಾಂಶ.

ಮೂರುವಾರಗಳಲ್ಲಿ ಭಾರತಕ್ಕೆ ಹಿಂತಿರುಗಿಹೋಗುವ ನಿರ್ಧಾರಮಾಡಿದೆ. ಈಗಾಗಲೇ ಒಂದೆರಡುಬಾರಿ ಸೇರಿದ್ದ 'ದಕ್ಷಿಣ ಭಾರತದಲ್ಲಿ ಸಮುದಾಯ ಆರೋಗ್ಯ ರಕ್ಷಣೆ' ಎಂಬ ವಿಚಾರಗೋಷ್ಠಿಯ ಮೂರನೇ ಸಮಾವೇಶದಲ್ಲಿ ಅಮೂಲ್ಯವಾದ ಹಲವಾರು ಅಂಶಗಳು ನನ್ನ ಗಮನಕ್ಕೆ ಬಂದವು. 'ಆಂಧ್ರಪ್ರದೇಶದ– ಅದರಲ್ಲೂ ತೆಲಂಗಾಣ ಭಾಗದಲ್ಲಿ ಆರೋಗ್ಯ ರಕ್ಷಣಾ ಕಾರ್ಯಕ್ರಮ ತೀರಕೆಳಮಟ್ಟದಲ್ಲಿದೆ... ಹೈದರಾಬಾದ್ ಕರ್ನಾಟಕ ಭಾಗದ (ರಾಯಚೂರು–ಬೀದರ್–ಗುಲಬರ್ಗಾ) ಜಿಲ್ಲೆಗಳಲ್ಲಿ ತೀರ ಕಳಪೆ. ಹರಿಜನ ಗಿರಿಜನ–ಲಂಬಾಣಿ ವರ್ಗದತ್ತ ಗಮನ ಹರಿದೇ ಇಲ್ಲ' ಇತ್ಯಾದಿ, ಇತ್ಯಾದಿ ಅಂಶಗಳು ನನ್ನನ್ನು ಚಿಂತನಪರನನ್ನಾಗಿ ಮಾಡಿತು.

ಈ ಸಮಾಲೋಚನೆಯಲ್ಲಿ ಭಾಗವಹಿಸಿದ ತರುವಾಯ ನನಗೆನಿಸಿದ್ದು ಇಷ್ಟು. 'ನಮ್ಮೂರಲ್ಲಿರುವುದಕ್ಕಿಂತಲೂ ಹೆಚ್ಚು ಕಷ್ಟ–ಸಂಕಷ್ಟಗಳನ್ನು ಅನುಭವಿಸುವ ಜನಸಮುದಾಯವಿದೆ. ಅಲ್ಲಿ ಏನೇನೂ ಇಲ್ಲ' (ಅದು ಗುಲಬರ್ಗದ ಸುತ್ತ ಮುತ್ತಣ ಪ್ರದೇಶ)

ತೀರ ವೈಯುಕ್ತಿಕವಾದ ಒಂದು ಘಟನೆಯನ್ನು ನಾನಿಲ್ಲಿ ಬರೆಯುತ್ತಿದ್ದೇನೆ. ಒಂದು ಭಾನುವಾರದ ಬಿಡುವಿನಲ್ಲಿ ಹೆಚ್ಚಿನವರು ಹೊರಗೆ ಹೋಗಿದ್ದಾಗ ನಾನು 'ಗ್ಯಾಸ್' ಅಗ್ಗಿಷ್ಟಿಕೆಯ ಮುಂದೆ ಕುಳಿತು ಚಳಿಕಾಯಿಸಿಕೊಳ್ಳುತ್ತಿದ್ದೆ. ಕೈಯಲ್ಲಿ ಹೆಸರಿಗೆ ಒಂದು ಪುಸ್ತಕ ಇತ್ತು. ಠಾಕ–ಠೀಕಾಗಿ ಡ್ರೆಸ್ ಮಾಡಿಕೊಂಡಿದ್ದ ಸಾಹೇಬರೊಬ್ಬರು ಯಾರನ್ನೋ ನೋಡಲು ಬಂದವರು ಅವರಿಲ್ಲ ಎಂಬ ಸಮಾಚಾರ ತಿಳಿದು ಫೋನ್ ಮೂಲಕ ಯಾರೊಡನೆಯೋ ಸಂಭಾಷಣೆಗೆ ತೊಡಗಿದರು. ಅನಿಮಿತ್ತವಾಗಿಯೇ ಅವರ ಮಾತಿನ ತುಣುಕುಗಳು ನನಗೆ ಕೇಳಿಸುತ್ತಿತ್ತು. ನಡು ನಡುವೆ 'ತುಳುಭಾಷೆ'ಯ ಕೆಲವು ಶಬ್ದಗಳು ಕಿವಿಗೆ ಬಿದ್ದದ್ದರಿಂದ ನಾನು ಉತ್ಸುಕನಾದೆ. ಸಂಭಾಷಣೆ ಮುಗಿಸಿ, ಹೊರಡುವಷ್ಟರಲ್ಲಿ ನಾನೇ ಅವರ ಬಳಿ ಹೋಗಿ ಅಸಾಂಪ್ರದಾಯಿಕವಾಗಿಯೇ ಆದರೂ ಹಸ್ತಲಾಘವ ಮಾಡಿ, ಪರಿಚಯ ಹೇಳಿಕೊಂಡೆ. ಅವರೂ ನಗುಮುಖದಿಂದಲೇ ಪ್ರತಿಸ್ಪಂದಿಸಿದರು. ಅವರ ಹೆಸರು ಅರವಿಂದ ಸುಂದರ್ ಅಂತಲೇ ಪರಿಚಿತರು ಎಂದು ತಿಳಿಯಿತು. ಸುಂದರ್ ನಮ್ಮ ಪುತ್ತೂರು ಹೈಸ್ಕೂಲ್‌ನ ಕ್ಲಾರ್ಕ್ ಕೃಷ್ಣನಾಯಕರ ಸಮೀಪದ ಸಂಬಂಧಿ ಎಂದೂ

ತಿಳಿಯಿತು. ಎರಡೇದಿನಗಳಲ್ಲಿ ತುಂಬಾ ಆತ್ಮೀಯರಾದೆವು. ತನ್ನ ಶಿಕ್ಷಣಕ್ಕೆ ಅವರು ಸಹಾಯಮಾಡಿದ್ದರೂ ಕೌಟುಂಬಿಕ ಮನಸ್ತಾಪದಿಂದ 'ಸುಂದರ್' ತನ್ನ ಸೋದರಮಾವ ಕೆ.ಕೆ. ನಾಯ್ಕರ ಜತೆ ಸಂಪರ್ಕವಿಟ್ಟುಕೊಳ್ಳಲಿಲ್ಲ. ಅದಕ್ಕಾಗಿ ಈಗ ತನಗೆ ತುಂಬಾ ನೋವಾಗಿದೆ ಎಂದೆಲ್ಲಾ ಹೇಳಿಕೊಂಡರು. ನೀವು ಊರಿಗೆ ಹೋದಾಗ ದಯವಿಟ್ಟು ಪುತ್ತೂರಿಗೆ ಹೋಗಿ, ನನ್ನ ಪರವಾಗಿ ಕ್ಷಮೆಯಾಚನೆ ಮಾಡುತ್ತೀರಾ? ಸ್ಕಾಲರ್‌ಷಿಪ್‌ನಲ್ಲಿ ಇಂಗ್ಲೆಂಡಿಗೆ ಓದಲು ಬಂದಿರುವುದರಿಂದ ಅದನ್ನು ಮುಗಿಸಿಕೊಂಡು ಮುಂದಿನ ವರ್ಷಾಂತ್ಯದಲ್ಲಿ ಹಿಂದಿರುಗುತ್ತೇನೆ – ಆಗ ಖಂಡಿತವಾಗಿ ಅವರನ್ನು ಭೇಟಿಯಾಗುತ್ತೇನೆ ಅಂತ ಹೇಳಲು ಮರೆಯಬೇಡಿ' ಎಂದು ಗೋಗರೆದರು.

ನಾನು ನನ್ನ 'ಎಸ್.ಎಸ್.ಎಲ್.ಸಿ. ಪರೀಕ್ಷೆ ಫೀಸ್' ಪ್ರಕರಣವನ್ನು ಅವರಿಗೆ ಹೇಳಿದೆ – ಇಬ್ಬರೂ ಸ್ವಲ್ಪ ಹೊತ್ತು ಕೆ.ಕೆ.ಯವರ ಗುಣಗಾನಮಾಡಿದೆವು; ಮೆಲುಕುಹಾಕಿದೆವು. ಮುಂದೆ ಊರಿಗೆ ಹೋದಾಗ ಕೆ.ಕೆ.ಯವರನ್ನು ಭೇಟಿಮಾಡಿ – ಎಲ್ಲವನ್ನೂ ವರದಿಸಿದಾಗ ಅವರಿಗಾದ ಸಂತೋಷಕ್ಕೆ ಪಾರವೇ ಇಲ್ಲ. ಎರಡು ಕುಟುಂಬಗಳ ನಡುವಣ ಮೈಮನಸ್ಸು ಪರಿಹಾರವಾಗಿ ಸುಂದರ್ ಹಿಂತಿರುಗಿ ಬರುವ ಗಳಿಗೆಯನ್ನೇ ಎದುರು ನೋಡುವಂತಾಯಿತು.

ಸ್ವದೇಶಕ್ಕೆ ಹಿಂದಿರುಗಿದ ನಾನು ಮುಂಬೈಯಲ್ಲಿ ಪ್ರೊ॥ ಶ್ರೀನಿವಾಸ ಹಾವನೂರ, ರಾಮಚಂದ್ರ ಉಚ್ಚಿಲ ಮೊದಲಾದವರೆನ್ನೆಲ್ಲ ಮಾತಾಡಿಸಿ ಅನಂತರ ಪುತ್ತೂರಿಗಾಗಿ ಮರಕಿಣಿಗೆ ತಲುಪಿದೆ.

ಮರುದಿನ ಅಡ್ಯನಡ್ಕಕ್ಕೆ ಹೋದೆ. ಮಣಿಯಾಣಿ ಆಗಲೇ ಬಂದು ಕ್ಲಿನಿಕ್‌ನ ಬಾಗಿಲಲ್ಲೇ ನಿಂತಿದ್ದ. ಒಳಗೆ ಹೋಗಿ ಕುಳಿತೆ. ಒಬ್ಬಿಬ್ಬರು ಪರಿಚಿತರು ಬಂದು ಮಾತಾಡಿಸಿಕೊಂಡು ಹೋದರು. ಹನ್ನೊಂದು ಗಂಟೆಗೆ ಡಾ॥ ಕೆ.ಎಂ.ಭಟ್ಟರು ಬಸ್ಸಿನಿಂದ ಬಂದಿಳಿದರು. ಸ್ವಲ್ಪಹೊತ್ತು ಕುಶಲಸಂಭಾಷಣೆ ನಡೆದಮೇಲೆ ಬೀಗದಕೈ ಗೊಂಚಲನ್ನು ಟೇಬಲ್‌ಮೇಲಿಟ್ಟು ತಾನಿನ್ನು ಹೊರಡುತ್ತೇನೆ ಎಂದು ಹೇಳಿ ಹೊರಟೇಬಿಟ್ಟರು.

ಸಂಜೆವರೆಗೆ ಬಂದವರ ಜತೆಗೆ ಮಾತಾಡಿ ಮನೆಗೆ ಮರಳಿದೆ.

ವಾರದ ಮೇಲೆ ವಾರ ಕಳೆದರೂ ಗಿರಾಕಿಗಳಲ್ಲಾಗಲಿ, ಕುಳವಾರುಗಳಲ್ಲಾಗಲಿ ಉತ್ಸಾಹವೇನೂ ಕಾಣಿಸಲಿಲ್ಲ. ದಿನಕ್ಕೆ ಒಬ್ಬರೋ ಇಬ್ಬರೋ ರೋಗಿಗಳು ಬರುತ್ತಿದ್ದರು ಅಷ್ಟೆ. ತಿಂಗಳಕೊನೆಯಲ್ಲಿ ಲೆಕ್ಕನೋಡಿದರೆ 35 ರೂಪಾಯಿ ಜಮೆ ಆಗಿತ್ತು! 'ಇನ್ನೂ ಎರಡು ತಿಂಗಳು ನೋಡೋಣ' ಎಂದುಕೊಂಡು ರೋಗಾರ್ತರ ಆಗಮನದ ನಿರೀಕ್ಷೆಯಲ್ಲಿ ಕಾಲಹಾಕಿದೆ.

ಒಂದು ದಿನ ಇದ್ದಕ್ಕಿದ್ದ ಹಾಗೆ ನೋವಿನಿಂದ ನರಳತೊಡಗಿದೆ. ಬಹುದಿನಗಳಿಂದಲೂ ಆಗಾಗ ತೊಂದರೆಕೊಡುತ್ತಿದ್ದ 'ಇಂಗ್ವೈನಲ್ ಹರ್ನಿಯಾ' ಕಿಬ್ಬೊಟ್ಟೆ ಬಳಿಯಲ್ಲಿ ಈಗ ಉಲ್ಬಣಿಸಿತ್ತು. ನೇರ ಮಂಗಳೂರಿಗೆ ಹೋಗಿ, 'ಕಂಕನಾಡಿ ಆಸ್ಪತ್ರೆ'ಯ ಡಾ॥ ವೆಂಕಟ್ರಾವ್ ಅವರನ್ನು ಭೇಟಿಯಾಡಿದೆ; 'ಕೂಡಲೇ ಅಡ್ಮಿಟ್‌ಆಗಿ-ನಾಳೆಯೇ ಆಪರೇಷನ್‌ಮಾಡೋಣ' ಎಂದರು (ಮುಂದಿನ ನಾಲ್ಕುವಾರ ಅವರು ರಜೆಮೇಲೆ ವಿದೇಶ ಪ್ರವಾಸ ಕೈಗೊಳ್ಳುವವರಿದ್ದರು).

'ಆಪರೇಷನ್' ತೊಂದರೆ ಇಲ್ಲದೆ ನಡೆಯಿತು. ಎಲ್ಲಾ ಅನುಕೂಲತೆಗಳಿರುವ ಸ್ಪೆಶಲ್‌ವಾರ್ಡ್‌ನ ಒಂದು ಚಿಕ್ಕ ಕೊಠಡಿಯಲ್ಲಿ ಮುಂದಿನ 10-12 ದಿನಗಳನ್ನು ಕಳೆದು ಅನಂತರ ಮನೆಗೆ ಹೋಗಬಹುದು ಎಂಬುದಾಗಿ ಡಾ॥ ವೆಂಕಟ್ರಾವ್ ತಿಳಿಸಿ ಪ್ರವಾಸಕ್ಕೆ ಹೊರಟರು. ಅವರಿಗೆ ವಂದನೆ ಹೇಳಿದೆ. ಆಗ ಮಂಗಳೂರಿನಲ್ಲೇ ಉದ್ಯೋಗ ಮಾಡುತ್ತಿದ್ದ ಪೆಲತಡ್ಕ ನಾರಾಯಣ ನಿತ್ಯವೂ ಬಂದು ಅಗತ್ಯಗಳೇನಾದರೂ ಇದ್ದರೆ ಒದಗಿಸಿಕೊಟ್ಟು ಹೋಗುತ್ತಿದ್ದ. ನನಗೆ ವಿಶ್ರಾಂತಿಯ ಅವಧಿ ಪ್ರಿಯವಾಗಿತ್ತು.

ಐದಾರು ದಿನಗಳ ನಂತರ ನಾಲ್ಕಾರು ಸ್ನೇಹಿತರ ಗುಂಪೊಂದು 'ರೋಗಿಯನ್ನು' ನೋಡಲು ನಮ್ಮೂರಿನಿಂದ ಬಂದಿದ್ದರು. ಅವರಲ್ಲಿ ಹೆಚ್ಚಿನವರು ಮಂಗಳೂರಿನಲ್ಲಿ ಏನೇನೋ ಕೆಲಸವಿದ್ದುದರಿಂದ ಬಂದು ನನ್ನನ್ನೂ ಮಾತಾಡಿಸಿದರು. 'ಮತ್ತೊಮ್ಮೆ ಬಂದು ಕಾಣುತ್ತೇವೆ' ಎಂದು ಹೇಳಿ ಹೊರಟುಬಿಟ್ಟರು. ಇಬ್ಬರು ವೈದ್ಯರು ಮಾತುಕತೆ ಆಡುತ್ತ ಸ್ವಲ್ಪ ಹೊತ್ತು ಉಳಿದರು.

ಕಳೆದ ಎರಡು ಮೂರು ತಿಂಗಳಲ್ಲಿ ನನ್ನ 'ಪ್ರಾಕ್ಟೀಸ್'ನ ಪರಿಸ್ಥಿತಿ ಹೇಗಿತ್ತು ಎಂಬುದು ಅಷ್ಟೇನು ಗುಟ್ಟಾಗಿ ಉಳಿದಿರಲಿಲ್ಲ. ಆದ್ದರಿಂದ 'ಮುಂದೇನು' ಎಂಬುದರ ಬಗ್ಗೆ ಕೂಡ ಚಿಂತನೆ ಮಾಡುವುದು ಅನಿವಾರ್ಯವಾಗಿತ್ತು.

'ಇತ್ತೀಚೆಗೆ ತನಗೆ ಮನೆಯೊಳಗಿನ ವಾತಾವರಣ ಅಷ್ಟೇನು ಹಿತಕರವಾಗಿಲ್ಲ; ಅಷ್ಟೇ ಅಲ್ಲದೆ ಪರಿಸ್ಥಿತಿಯ ಒತ್ತಡಗಳಿಂದಾಗಿ ನೆಮ್ಮದಿ ಕಳೆದುಕೊಳ್ಳುವ ಹಾಗಾಗುತ್ತಿದೆ' ಎಂಬುದಾಗಿ ಡಾ॥ ಸಬಿತಾ ತನ್ನೆದೆಯೊಳಗಿನ ನೋವನ್ನು ಬಿಚ್ಚಿಟ್ಟಿದ್ದರು. ಪರಿಸ್ಥಿತಿ ಕೈಮೀರುವುದಕ್ಕೆ ಮುನ್ನವೇ ಬದಲಿ ವ್ಯವಸ್ಥೆ ಮಾಡಿಕೊಳ್ಳುವುದು ಅಗತ್ಯ ಎಂದು ಟಿಪ್ಪಣಿ ಸೇರಿಸಿದರು. ಡಾ॥ ರಣಬೀರ್ ತಾರಾನಾಥ್ ಅವರು ವಿಟ್ಲದ ಸರಕಾರಿ ಆಸ್ಪತ್ರೆಯಲ್ಲಿ ವೈದ್ಯರಾಗಿ ಕೆಲಸಮಾಡುತ್ತಿದ್ದರು. ರಣಬೀರ್ ಪಂಡಿತ ತಾರಾನಾಥರ ಎರಡನೇ ಪುತ್ರ ಹಾಗೂ ನಮ್ಮ ಆತ್ಮೀಯಬಳಗದ ಓರ್ವ ಸದಸ್ಯ.

ತುಂಬಾಹೊತ್ತು ವಿಚಾರ-ವಿಮರ್ಶೆ, ಪರಮಾರ್ಶೆ ನಡೆದರೂ ಖಚಿತವಾದ ಯಾವುದೇ 'ಪರಿಹಾರ'ಕಾಣಿಸಲಿಲ್ಲ. ಸಬಿತಾ ತಾನು ವಿಟ್ಲದ ತನ್ನ 'ಶಾಪ್'ನ್ನ

ಮುಚ್ಚುವ ಅಭಿಪ್ರಾಯಕ್ಕೆ ಬಂದಿರುವುದಾಗಿ ಹೇಳಿದರು. ಇತ್ತೀಚೆಗೆ ಡಾ॥ ರಣಬೀರ್ ನನ್ನ ಮುಂದೆ ಒಂದು ಸಲಹೆಯನ್ನು ಇಟ್ಟಿದ್ದರು.

'ಮಂತ್ರಾಲಯದ ಬಳಿ ತುಂಗಭದ್ರಾ'ದಲ್ಲಿ ತಮ್ಮ ತಂದೆ ಸ್ಥಾಪಿಸಿದ್ದ 'ತಾರಾನಾಥ ಚಿಕಿತ್ಸಾಲಯ' (ಪ್ರೇಮಾಯತನ) ಈಗ ನಿಷ್ಕ್ರಿಯವಾಗಿದೆ (ಪಂಡಿತ ತಾರಾನಥರು ಸ್ವರ್ಗಸ್ಥರಾಗಿ ಸುಮಾರು 20 ವರ್ಷಗಳು ಕಳೆದಿವೆ) ಆ ಚಿಕಿತ್ಸಾಲಯವನ್ನು ಪುನಃಪ್ರಾರಂಭಿಸಲು ತನಗೆ ಆಸೆಯಿದ್ದರೂ– ಸದ್ಯ ಸರಕಾರೀ ಸೇವೆಯನ್ನು ಬಿಟ್ಟು ಬರುವಂತಿಲ್ಲ. ಅಲ್ಲಿ ಚಿಕಿತ್ಸಾಲಯ ಅಷ್ಟೇ ಅಲ್ಲ– 'ನರ್ಸಿಂಗ್‌ಹೋಂ' ನಡೆಸಲು ಕೂಡ ಎಲ್ಲ ಅನುಕೂಲತೆಗಳಿವೆ. (ಹಿಂದೆ ಇತ್ತು). ಅಲ್ಲಿಗೆ ಹೋಗುವುದಾದರೆ– ಅದಕ್ಕೆ ಬೇಕಾದ ಅನುಕೂಲತೆಗಳನ್ನು ನಾನು ಒದಗಿಸಿಕೊಡುತ್ತೇನೆ' ಎಂದೂ ಹೇಳಿದರು. ಇದರ ಬಗ್ಗೆ ಕೂಡ ವಿಮರ್ಶೆ ನಡೆಯಿತು.

ಇಷ್ಟಾದರೂ ಯಾವ ನಿರ್ಧಾರಕ್ಕೂ ಬಾರದೆ 'ಇನ್ನೊಮ್ಮೆ ಭೇಟಿಯಾಗುವ' ಎಂದು ಹೇಳಿ ಮಾತುಕತೆಗೆ ಮುಕ್ತಾಯಹಾಡಿದ್ದಾಯಿತು. ಅವರು ಹೊರಟುಹೋದರು. ನಾನು ವಿಚಾರಮಗ್ನನಾದೆ.

ಆಸ್ಪತ್ರೆಯಿಂದ ಬಿಡುಗಡೆಯಾಗಿ ಕೆಲವುದಿನಗಳ ವಿಶ್ರಾಂತಿಗೆಂದು ಬೆಂಗಳೂರಿಗೆ ಹೋದೆ. ಅಲ್ಲಿ ವೆಂಕಟರಾಜ ಪಾನಸೆಯವರ ಮನೆಯಲ್ಲಿ ಸುಮಾರು 15 ದಿವಸ 'ವಿಶ್ರಾಂತಿ'ಅನುಭವಿಸಿದೆ. ಪಾನಸೆಯವರು ಬಹುದಿನಗಳಿಂದ ಪರಿಚಿತರು. ಸ್ನೇಹಜೀವಿ. ಪತ್ರಿಕೋದ್ಯೋಗಿಯಾಗಿ ಬೆಂಗಳೂರಿನಲ್ಲಿ ಕಾಲೂರಿದ್ದರು. ಅವರ ಮನೆಯವರು ತವರಿಗೆ ಹೋಗಿದ್ದ ಕಾರಣ ಮನೆಯಲ್ಲಿ ಏಕಾಂಗಿಯಾಗಿ ನಾನೊಬ್ಬನೇ ಇದ್ದು 'ಚಿಂತನ– ಮಂಥನ' ನಡೆಸುವುದಕ್ಕೆ ಅನುಕೂಲವಾಯಿತು. ಕೊನೆಗೊಂದು ದಿನ ತನ್ನ ಮನೆಯವರು ಮಗ ಸಹಿತ ನಾಳೆ ಮುಂಜಾನೆ ಹಿಂತಿರುಗುತ್ತಾರೆ ಎಂಬ ಶುಭವಾರ್ತೆಯನ್ನು ಪಾನಸೆ ನೀಡಿದಾಗ– ನಾನು ಮುಂದಿನ ನನ್ನ ಜೀವನದ ಬಗ್ಗೆ ಖಚಿತ ನಿರ್ಧಾರ ಕೈಗೊಳ್ಳಲೇ ಬೇಕಾಯಿತು.

ರಾತ್ರೆ ಬೆಳದಿಂಗಳಲ್ಲಿ ಕುಳಿತು ಪಾನಸೆಯವರೊಂದಿಗೆ ಎಲ್ಲವಿಚಾರಗಳನ್ನು ಹಂಚಿಕೊಂಡೆ.

'ತಾರನಾಥ ಆಶ್ರಮದ ಚಿಕಿತ್ಸಾಲಯವನ್ನು ಪುನಃಪ್ರಾರಂಭಿಸುವುದಕ್ಕೆ ಯಾಕೆ ನಿರ್ಧರಿಸುತ್ತಿಲ್ಲ?' ಎಂದು ಪ್ರಶ್ನೆಹಾಕಿದರು ಪಾನಸೆ.

'ಅದು ದೊಡ್ಡ–ಪ್ರಬುದ್ಧ ವ್ಯಕ್ತಿಗಳಿದ್ದ ಸ್ಥಳ. ಹೆಸರಾಂತ ಸಂಸ್ಥೆ'– ಅಂತಹ ನೆರಳಲ್ಲಿ ಯಾಕೆ–ಹೇಗೆ ಅಂತ ಸಂದೇಹವೋ ಅಲ್ಲ ಸಂಕೋಚವೋ' ಎಂದು ಕೂಡ ಅವರೇ ಪ್ರಶ್ನೆ ಹಾಕಿದರು.

'ಅಂಥದ್ದೇನೂ ಇಲ್ಲ. ಆದರೂ–'

'ನೋಡಿ, ಇನ್ನು ವಿಳಂಬಿಸುವುದು ಬೇಡ. ಆದಷ್ಟು ಬೇಗ ಗ್ರಾಮೀಣ ಕ್ಲಿನಿಕ್‌ನ್ನು ಮುಚ್ಚಿ– ತಾರಾನಾಥ ಚಿಕಿತ್ಸಾಲಯವನ್ನು ಪುನರಾರಂಭಿಸಲು ಮುಂದಾಗಬಾರದೇ' ಎಂಬುದಾಗಿ ಪಾನಸೆಯವರು ಸ್ನೇಹಸಲಹೆ ನೀಡಿದರು.

'ಇದೇ ಸರಿ ಅಂತ ಕಾಣುತ್ತದೆ' ಎಂದು ಹೇಳಿ ಶುಭರಾತ್ರಿಯೊಂದಿಗೆ ನಾನು ನಿದ್ರಾದೇಶಕ್ಕೆ ತೆರಳಿದೆ.

ಮುಂಜಾನೆ ಮಂಗಳೂರಿನತ್ತ ಪ್ರಯಾಣಿಸಿದೆ.

ಸುಮಾರು ಹದಿನೈದು ದಿನಗಳ ಹಿಂದಿನ ಒಂದು 'ಮಾತುಕತೆ'ಯಬಗ್ಗೆ ಬರೆಯುತ್ತಿದ್ದೇನೆ.

ಮಂಗಳೂರಿನ ಕಂಕನಾಡಿಯ ಫಾದರ್ ಮುಲ್ಲರ್ ಆಸ್ಪತ್ರೆಯಲ್ಲಿ 'ಆಪರೇಷನ್ ಆದನಂತರ ನಿಯಮಪ್ರಕಾರದ ಹತ್ತು ಹನ್ನೆರಡು ದಿನಗಳ ಶಸ್ತ್ರಕ್ರಿಯೆಯನಂತರದ ವಿಶ್ರಾಂತಿ ಇತ್ಯಾದಿಗಳನ್ನು ಮುಗಿಸಿ– ಮರುದಿನ 'ಡಿಸ್ಚಾರ್ಜ್' ಆಗುವವನಿದ್ದೆ.

ಮದ್ಯಾಹ್ನ ಸ್ವಲ್ಪ ಹೊತ್ತು ಮೀರಿದ ಕಾರಣ ಟೇಬಲ್ ಮೇಲೆ ಇರಿಸಿದ್ದ ಆಹಾರವನ್ನು ಅವಸರವಸರವಾಗಿ ಮುಗಿಸುತ್ತಿದ್ದೆ. ಊಟ ರುಚಿಯಾಗಿತ್ತು, ಹಸಿವೂ ಚೆನ್ನಾಗಿತ್ತು. ಕೊನೆಯ ತುತ್ತನ್ನು ಕೈಗೆತ್ತಿಕೊಳ್ಳಬೇಕೆನ್ನುವುದರಲ್ಲಿದ್ದಾಗ ಅರೆತೆರೆದ ಕೋಣೆಯ ಬಾಗಿಲಿನಿಂದ ಒಳಗೆ ಬಂದ 'ಎಂತ ಊಟ ಜೋರಾಗಿ ಸಾಗಿದ ಹಾಂಗಿದ್ದು' ಎಂಬ ಪರಿಚಿತ ಧ್ವನಿ ಕೇಳಿಸಿತು.

ಕೈಯಲ್ಲಿ ತುತ್ತನ್ನು ಹಿಡಿದುಕೊಂಡೇ ಅತ್ತ ಮುಖಮಾಡಿ, ಓಹೋ–ನೀನೋ– ಬಾ, ಬಾ,'ಎಂದು ಆಹ್ವಾನಿಸಿದೆ. ಜತೆಗೆ ಹೀಗೆ ಒಕ್ಕಣಿಸಿದೆ. 'ಉಂಬಾಗ ಬಂದೋರು ಭಾರಿ ಹತ್ರಾಣೋರು'ಹೇಳುವ ಗಾದೆ ಇದ್ದು.

'ಹಾಂಗೊಂದು ಗಾದೆ ಇದ್ದೋ ಎನಗೆ ಗೊಂತಿಲ್ಲೆ. ಇನ್ನೂ ಎಂತೆಲ್ಲಾ ಗಾದೆಗೊ ಇದ್ದೋ ಏನೋ' ಕಿರುನಗೆಯೊಂದಿಗೆ ಕಚಗುಳಿ ಇಡುವ ಮಾರ್ದನಿಯ ಉತ್ತರ ಬಂತು.

'ಅದೆಂತಾರೂ ಇರಲಿ, ಕೂರು. ಆನು ಕೈತೊಳಕ್ಕೊಂಡು ಬತ್ತೆ' ಎನ್ನುತ್ತಾ ಉಟದ ತಟ್ಟೆಯನ್ನು ಟೇಬಲ್ಲಿನ ಮೂಲೆಗೆ ತಳ್ಳಿ, 'ಬೇಸಿನ್'ನಲ್ಲಿ ಕೈಬಾಯಿ ತೊಳೆದುಕೊಂಡು ಬಂದು–

'ಹೊಟ್ಟೆ, ರಜಾ ಬಾದಿ ಭಾಳಾ ಆಯಿದು–ಹಾಸಿಗೆಲಿ ಕಾಲು ಬಿಡ್ಸುತ್ತೆ' ಎಂದು ಹೇಳಿ ಕಾಲುಚಾಚಿದೆ.

'ಹ್ಹೂ–ಹೇಳು ಸಬಿತಾ, ಎಂತ ಸಮಾಚಾರಾ'

'ಆನು ವಿಟ್ಲದ ಕ್ಲೀನಿಕ್‌ನ ಕ್ಲೋಸ್‌ಮಾಡಿದೆ'

'ಮತ್ತೆ, ಮುಂದೆ?'

'ರಣಬೀರ ಹೇಳಿದ, ತುಂಗಭದ್ರ–'ಪ್ರೇಮಾಕ್ಲಿನಿಕ್'

ಒಂದು ಕ್ಷಣ ನನ್ನ ಎದೆ ಧಡಕ್‌ಎಂದಿತು ಅಲ್ಲಿಗೆ ಹೋಗುವ ವಿಚಾರಮಾಡಿದ್ದು ನಾನು ಆದರೆ ಇದೇನು ಈಗ? ಸ್ವಲ್ಪಹೊತ್ತು ಸುಮ್ಮನಿದ್ದು ಮನಸ್ಸು ಸ್ಥಿಮಿತಕ್ಕೆ ಬಂದಮೇಲೆ ಏನೋ ಹೇಳಲು ಬಾಯಿ ತೆರೆಯುವಷ್ಟರಲ್ಲಿ

'ಅಲ್ಲಿ ನರ್ಸಿಂಗ್‌ಹೋಂ ನಡೆಶುಲೆ ಅಕ್ಕು– ಇಬ್ರೂ ಸೇರಿಗೊಂಡರೆ'

ಮತ್ತೊಮ್ಮೆ ಎದೆ ಡವಡವ. ಇದ್ದಬದ್ದ ಧೈರ್ಯವನ್ನೆಲ್ಲ ಒಟ್ಟುಗೂಡಿಸಿ ಕೇಳಿದೆ.

'ನೀನು– ಎನ್ನ' (ನನ್ನನ್ನು..)

ಮುಂದಿನ ಶಬ್ದವನ್ನು ಉಸುರುವ ಅಗತ್ಯ ಬರಲಿಲ್ಲ.

ನನ್ನ ಕೆನ್ನೆಯಮೇಲೆ ಎರಡುಹನಿ ಕಣ್ಣೀರುಬಿತ್ತು– ಅದು ಸುಖೋಷ್ಣವಾಗಿತ್ತು. ಪ್ರೀತಿ, ವಿಶ್ವಾಸದ, ಆತ್ಮೀಯ ಭರವಸೆಯ, ಸ್ನೇಹ ಪೂರ್ವಕವಾದ ಆನಂದಾಶ್ರು.

ಹಿಂದೊಮ್ಮೆ– ನಾನು ವಿದೇಶದಿಂದ ಮರಳಿಬಂದು ಅಡ್ಯನಡ್ಕದ ಕ್ಲಿನಿಕ್‌ನಲ್ಲಿ 'ನೊಣ ಜಾಡಿಸುತ್ತ' ಕುಳಿತಿದ್ದ ಸಂದರ್ಭದಲ್ಲಿ, ನನ್ನ ಆರ್ಥಿಕ ಸ್ಥಿತಿಗತಿಯಬಗ್ಗೆ ಚಿಂತನ ನಡೆದಿತ್ತು. ನಮ್ಮತಂದೆ, ತಮ್ಮ ಅಭಿಪ್ರಾಯದಂತೆಯೇ ನಾಲ್ಕು ಜನ ಮಕ್ಕಳಿಗೆ ಮರಕಿಣಿ ಮನೆ ಮತ್ತು ಆಸ್ತಿಯನ್ನು ಹಂಚಿಕೊಟ್ಟಿದ್ದರು. ಅಣ್ಣನಿಗೆ ಸ್ವಲ್ಪ ದೂರದಲ್ಲಿದ್ದ ಮಿತ್ತಡ್ಕದ ಗದ್ದೆ–ತೋಟವನ್ನು (ಒಂದು ಚಿಕ್ಕ ಮನೆ ಸಹಿತ) ಕೊಟ್ಟಿದ್ದರು. ನಾನು ಸ್ವತಃ ಸಂಪಾದಿಸುತ್ತಿದ್ದ ಕಾರಣ ಆಸ್ತಿಯಲ್ಲಿ ಪಾಲು ಬೇಡವೆಂದಿದ್ದೆ.ಆದರೆ ಕಾನೂನು ಪ್ರಕಾರ– ಕೇವಲ ಸಾಂಕೇತಿಕವಾಗಿ ಎಂಬಂತೆ ಒಂದು ಸ್ವಲ್ಪ ಗದ್ದೆಯನ್ನು (ಅದರ ಮೇಲಿದ್ದ ಸಾಲದ ಹಣವನ್ನೂ) ನನ್ನ ಹೆಸರಲ್ಲಿ ಮಾಡಿದ್ದರು. ನಾನು ಜಮೀನು ಮತ್ತು ಸಾಲ–ಎಲ್ಲವನ್ನೂ ಅಣ್ಣನ ಪಾಲಿಗೆ ಒಪ್ಪಿಸಿಕೊಟ್ಟು ಕೈತೊಳೆದುಕೊಂಡಿದ್ದೆ.

ನನಗೆ ಆಗ 'ರೋರಿಂಗ್ ಪ್ರಾಕ್ಟೀಸ್' ಇತ್ತು. (ಕೈತುಂಬ ಹಣ ಓಡಾಡುತ್ತಿತ್ತು) ಈಗ ಅದು ನೆಲಕಚ್ಚಿದೆ. ಹೊಲ ಮನೆ ಯಾವುದೂ ಇಲ್ಲ. ವಿದೇಶ ವಿದ್ಯಾಭ್ಯಾಸಕ್ಕಾಗಿ ಬ್ಯಾಂಕ್‌ಗಳಲ್ಲಿ ಮಾಡಿದ ಸಾಲದ ಹೊರೆ ದೊಡ್ಡಮೊತ್ತದ್ದಾಗಿತ್ತು. ಇಷ್ಟರಲ್ಲೇ ಮರುಪಾವತಿಯ ಕಂತುಗಳು ಪ್ರಾರಂಭವಾಗುತ್ತವೆ.. ಸಂಪಾದನೆಯದಾರಿ ನೋಡಲೇಬೇಕಾಗಿದೆ ಎಂಬಿತ್ಯಾದಿ ಹಲವಾರು ಅಂಶಗಳು ಮಾತಿನ ಗ್ರಾಸವಾಗಿದ್ದವು ನಮ್ಮ ಆತ್ಮೀಯ ಗುಂಪಿನಲ್ಲಿ.

* * *

೭

ಮಂತ್ರಾಲಯಂ ರೋಡ್ ಸ್ಟೇಶನ್ ಬಳಿಯ ಪ್ರೇಮಾಯತನ ಆಶ್ರಮದಲ್ಲಿ

ದಿ॥ ಪಂಡಿತ ತಾರಾನಾಥರ ಪ್ರೇಮಚಿಕಿತ್ಸಾಲಯ ಪುನರಾರಂಭ

ಬೆಂಗಳೂರಿನಿಂದ ಹಿಂತಿರುಗಿ ಬಂದಮೇಲೆ ಪ್ರತಿ ದಿನ ನಾಲ್ಕಾರು ರೋಗಿಗಳು ಬರತೊಡಗಿದರು. ಇದುವರೆಗೂ ಕ್ಲಿನಿಕ್‌ನ ಬಾಗಿಲು ತೆರೆದು ಕಾದಿರುತ್ತಿದ್ದ ಕಾಂಪೌಂಡರ್ ಮಣಿಯ ಪ್ರಯತ್ನ ವಿಫಲವಾಗಲಿಲ್ಲ. ಹಳೇ ರೆಕಾರ್ಡ್‌ನೋಡಿ ಔಷಧಿ ವಿತರಿಸುತ್ತಿದ್ದ. ಇದನ್ನೆಲ್ಲಾ ನೋಡುತ್ತಿದ್ದ ಸರಕಾರೀ ಡಿಸ್ಪೆನ್ಸರಿಯ ಹೊಸ ಡಾಕ್ಟರು ಸಂಜೆಹೊತ್ತು ನಮ್ಮ ಕ್ಲಿನಿಕ್‌ನಲ್ಲೇ ಕುಳಿತು ರೋಗಿಗಳನ್ನು ಪರೀಕ್ಷಿಸಿ, ಔಷಧಿ ಸೂಚಿಸಲು ಪ್ರಾರಂಭಿಸಿದರಂತೆ. (ಅವರು ಇತ್ತೀಚೆಗೆ ಟ್ರಾನ್ಸ್‌ಫರ್ ಆಗಿ ಬಂದವರು. ಮೈಸೂರಿನಲ್ಲಿ ನನಗಿಂತ ಒಂದೆರಡು ವರ್ಷಗಳ ನಂತರದ ಎಲ್.ಎ.ಎಂ.ಎಸ್ ಪದವಿ ಪಡೆದ ಡಾಕ್ಟರು). ಕ್ರಮೇಣ ರೋಗಿಗಳ ಹಾಜರಾತಿ ಹೆಚ್ಚತೊಡಗಿತು. ಒಂದೆರಡು ಎಮರ್ಜೆನ್ಸಿ ಕೇಸ್‌ಗಳು ಕೂಡ ಬಂದವು.

ಬ್ಯಾಂಕ್ ಮ್ಯಾನೇಜರುಗಳನ್ನು ಭೇಟಿಯಾಗಿ ಒಳರೋಗಿಗಳ ಹಾಸಿಗೆಗಳೂ ಇರುವ ದವಾಖಾನೆ ತೆರೆಯುವ ಪ್ರಯತ್ನದಲ್ಲಿದ್ದೇನೆಂದು ಹೇಳಿದಾಗ ಸಾಲದ ಮರುಪಾವತಿಯ ವಾಯಿದೆ ಪ್ರಾರಂಭವಾಗುವುದನ್ನು ಒಂದಷ್ಟು ಕಾಲ ಮುಂದೂಡಲು ಒಪ್ಪಿಕೊಂಡರು. ಇನ್ನೊಂದು ಬ್ಯಾಂಕ್ ಒಳರೋಗಿಗಳ ಆಸ್ಪತ್ರೆ ಎಂಬುದರಿಂದ ವಿಶೇಷ ರಿಯಾಯತಿ ದರದ ಬಡ್ಡಿಯಲ್ಲಿ ಸಾಲ ಕೊಡಲು ಮುಂದೆ ಬಂದುದರಿಂದ ಸಂಕಟ ಸದ್ಯಕ್ಕೆ ದೂರವಾಯಿತು.

'ತುಂಗಭದ್ರಾ' ಚಿಕಿತ್ಸಾಲಯವನ್ನು ಪುನಶ್ಚೇತನಗೊಳಿಸುವುದೇ ಮೊದಲಾದ ಎಲ್ಲಾ ವಿಚಾರಗಳನ್ನು ಅಣ್ಣನಿಗೆ ಈಗಾಗಲೇ ಹೇಳಿದ್ದೆ. ಹೆಚ್ಚೇನು ಮಾತಾಡುವ ಸ್ವಭಾವದವರಲ್ಲವಾದ್ದರಿಂದ ಸಮ್ಮತಿ ದಕ್ಕಿದೆ ಎಂದು ಅರ್ಥೈಸಿಕೊಂಡೆ.

ಒಂದು ಮುಂಜಾನೆ ಮಂಗಳೂರಿನ 'ನವಭಾರತ' ದಿನಪತ್ರಿಕೆಯಲ್ಲಿ 'ಡಾ॥ ಮರಕಿಣಿಯವರು ಗ್ರಾಮೀಣ ಕ್ಲಿನಿಕನ್ನು ಮುಚ್ಚಿ ತುಂಗಭದ್ರ (ಕರ್ನೂಲ್ ಜಿಲ್ಲೆ)ಗೆ ತೆರಳುತ್ತಿದ್ದಾರೆ' ಎಂಬ ವಾರ್ತೆ ಪ್ರಕಟವಾಯಿತು. ಹಿಂದಿನ ಸಂಜೆಯೇ ಕ್ಲಿನಿಕ್‌ನ್ನು ಖಾಲಿಮಾಡಿ, ಬೀಗದಕೈಯನ್ನು ಕಟ್ಟಡದ ಮಾಲಿಕ ಮುಳಿಯಾಲ ಸುಬ್ಬಣ್ಣಭಟ್ಟರಿಗೆ ವಂದನೆಗಳೊಂದಿಗೆ ತಲಪಿಸಲು ಕಾಂಪೌಂಡರ್ ಮಣಿಗೆ ಹೇಳಿದೆ. ಕೆಲವು ಪೀಠೋಪಕರಣಾದಿಗಳನ್ನು ಮನೆಗೆ ಮಂಡಿಸಿದ್ದೆ. ಇನ್ನುಳಿದುದನ್ನು ವಿಲೇವಾರಿ ಮಾಡುವುದಾಗಿ ಮಣಿ ಒಪ್ಪಿಕೊಂಡಿದ್ದ.

ಮರುದಿನ ಮುಂಜಾನೆ ಮರಕಿಣಿಯ ಅಡಿಕೆತೋಟ–ಕಾಪಿಕಾಡು–ಬೆಣ್ಣೆಪಾರೆಗುಡ್ಡೆಗಳನ್ನೆಲ್ಲ ಸುತ್ತುಹಾಕಿ ಬಂದು ಸ್ನಾನಮಾಡಿ ಉಪಾಹಾರಮುಗಿಸಿದೆ. ಬಾಡಿಗೆಯ ಕಾರು ಆಗಲೇ ಬಂದು ಮನೆಯಬಳಿ ರಸ್ತೆಯಲ್ಲಿ ನಿಂತಿತ್ತು. ಜತೆಗೆ ಅಣ್ಣನೂ ಹೊರಟಿದ್ದರು. ನನ್ನ ಬಟ್ಟೆಬರೆಗಳನ್ನೆಲ್ಲ ನನ್ನ ಕಾರಿನ ಡಿಕ್ಕಿಯಲ್ಲಿ ತುಂಬಿದೆ.

'ದೇವರಿಗೆ 'ಅಡ್ಡಬಿದ್ದು' (ನಮಸ್ಕಾರಮಾಡಿ), ಅಪ್ಪನ ಕಾಲುಹಿಡಿದು ಆಶೀರ್ವಾದ ಕೇಳಿಕೋ' ಎಂಬುದಾಗಿ ಭಾವ ಹಿಂದಿನ ದಿನವೇ ಹೇಳಿಹೋಗಿದ್ದರು. ಅಪ್ಪನ ಪಾದ ಮುಟ್ಟಿ ವಂದಿಸಿದೆ. ಅನಂತರ 'ಸಬಿತಾ–ನಾನು ಮದುವೆಯಾಗುತ್ತೇವೆ' ಎಂದು ಹೇಳಿದೆ. ಒಂದು ಕ್ಷಣ ಸುಮ್ಮಗಿದ್ದು, 'ಸರಿ' ಎಂದು ಹೇಳಿ, ತೋಟದ ಕಡೆಗೆ ಹೊರಟುಹೋದರು.

ಅಣ್ಣ–ನಾನು ಕಾರಿನಲ್ಲಿ ಪ್ರಯಾಣಮಾಡಿ ಪುತ್ತೂರಿಗೆ ಬಂದೆವು. ಅಲ್ಲಿ ಡಾ॥ ರಣಬೀರ್ ತಾರಾನಾಥರು ಬಂದು ಸೇರಿಕೊಂಡರು. ನಾನು ಮುಳಿಯ ಕೃಷ್ಣಭಟ್ಟರ ಮನೆಗೆ ತೆರಳಿ ವಿದಾಯ ಹೇಳಿದೆ. ಗುಡ್ ಲಕ್ ಎಂದು ಬೀಳ್ಕೊಟ್ಟರು. ನಾವು ಪ್ರಯಾಣ ಮುಂದುವರೆಸಿದೆವು. ಮರುದಿನ ಸೂರ್ಯೋದಯವಾಗುತ್ತಿದ್ದಂತೆಯೆ ಕಾರು 'ತುಂಗಭದ್ರದ ಪಂಡಿತ ತಾರಾನಾಥ (ಪ್ರೇಮಾಯತನ) ಆಶ್ರಮದ ಬಂಗಲೆ'ಯ ಅಂಗಳವನ್ನು ತಲುಪಿತು. ಸಬಿತಾ ಮತ್ತು ಇತರರು ಸ್ವಾಗತಿಸಿದರು.

ಆಶ್ರಮದ ಇನ್ನೊಂದು ಪಾರ್ಶ್ವದಲ್ಲಿ ಸತ್ಯನಾರಾಯಣ ದೇವಸ್ಥಾನವಿತ್ತು. ಅಲ್ಲಿ ಸಬಿತಾ ಮತ್ತು ನಾನು ಸರಳ ವಿವಾಹವಾಗಿ ದಾಂಪತ್ಯಜೀವನಕ್ಕೆ ಕಾಲಿಟ್ಟೆವು.

ಅಣ್ಣ ಮತ್ತು ಡಾ॥ ರಣಬೀರ್ ಊರಿಗೆ ಹೊರಟುಹೋದರು.

ಇಲ್ಲಿ ಉಲ್ಲೇಖಿಸಬೇಕಾಗಿರುವ ಇನ್ನೊಂದು ವಿಚಾರವಿದೆ. ಹೈಸ್ಕೂಲಿನ ಮೊದಲನೇ ವರ್ಷದ ವಿದ್ಯಾರ್ಥಿಯಾಗಿದ್ದಾಗಲೇ ಸಬಿತಾ ಮದುವೆ ನಡೆದಿತ್ತು (ಬಾಲ್ಯವಿವಾಹ). ಆಧ್ಯಾತ್ಮದತ್ತ ಅಪಾರ ಒಲವಿದ್ದ ಆ ವಿದ್ಯಾವಂತ, ಶ್ರೀಮಂತ ಹಾಗೂ ರೂಪವಂತ ಯುವಕ ಸಾಂಸಾರಿಕ ಜೀವನವನ್ನು ಪ್ರಾರಂಭಿಸಲೇ ಇಲ್ಲ. ತನ್ನ ಅಕ್ಕನಮನೆಯಲ್ಲೇ ಇದ್ದುಕೊಂಡು ಸಬಿತಾ ವಿದ್ಯಾಭ್ಯಾಸವನ್ನು ಮುಂದುವರೆಸಿ

ಮೈಸೂರಿನಲ್ಲಿ ವೈದ್ಯಶಿಕ್ಷಣಪಡೆದು L.A.M.S. ಪದವಿ ಪಡೆದು ಡಾಕ್ಟರಾಗಿ ಊರಿಗೆ ಹಿಂತಿರುಗಿ (ವಿಟ್ಲದಲ್ಲಿ) ಸ್ವಂತ ಚಿಕಿತ್ಸಾಲಯವನ್ನು ಪ್ರಾರಂಭಿಸಿ, ಶ್ರದ್ಧೆಯಿಂದ ರೋಗಿಗಳ ಉಪಚಾರನಡೆಸಿ, ಅನತಿಕಾಲದಲ್ಲೇ ಜನಾದರಣೆಗಳಿಸಿ ಯಶಸ್ವೀ ವೈದ್ಯೆ ಎನಿಸಿದರೂ ದಾಂಪತ್ಯ ಜೀವನ ಸಾಧ್ಯವಾಗದ ಕಾರಣ ಕೋರ್ಟ್ ವಿಚ್ಛೇದನ ನೀಡಿತ್ತು.

ಪ್ರೇಮ ಚಿಕಿತ್ಸಾಲಯ ಪ್ರಾರಂಭವಾದ ಸುದ್ದಿ ತಿಳಿದು ರೋಗಿಗಳು ಬರಲಾರಂಭಿಸಿದರು. ಕ್ರಮೇಣ ದೂರದೂರದ ಹಳ್ಳಿಗಳಿಂದಲೂ ಚಕ್ಕಡಿ (ಎತ್ತಿನಗಾಡಿ)ಗಳಲ್ಲಿ ಚಿಕಿತ್ಸೆಗಾಗಿ ಬರತೊಡಗಿದರು. ಹೆಚ್ಚುಕಡಿಮೆ ಪ್ರತಿದಿನ ಎಂಬಂತೆ ಮಧ್ಯಾಹ್ನದವೇಳೆಗೆ 8–10 ಎತ್ತಿನ ಬಂಡಿಗಳು ಬಂಗಲೆಯ ವಿಶಾಲ ಆವರಣದ ನೆರಳಿನಲ್ಲಿ ನಿಂತಿರುತ್ತಿದ್ದವು. ನೊಗ ಬಿಟ್ಟಿದ್ದರಿಂದ ಎತ್ತುಗಳು 'ಕಾವಲಿ' (ತುಂಗಾಬಲಕಾಲುವೆ)ಯ ನೀರನ್ನುಕುಡಿದು ಮರಗಳ ತಂಪುನೆರಳಲ್ಲಿ ಮಲಗಿ ವಿಶ್ರಾಂತಿಯನ್ನು ಅನುಭವಿಸುತ್ತ ಮೆಲುಕಾಡಿಸುತ್ತಿದ್ದವು. ಹಳ್ಳಿಯ ಜನಗಳು ಮನೆಯಿಂದಲೇ ತಂದ ಬುತ್ತಿಯನ್ನು ಬಿಚ್ಚಿ ರೊಟ್ಟಿ–ಚಟ್ನಿ ತಿನ್ನುತ್ತಿದ್ದರು. ಮೂರು ಕಲ್ಲುಗಳನ್ನಿಟ್ಟು ಒಲೆಹೂಡಿ ಅದರ ಮೇಲೊಂದು ಪಾತ್ರೆ ಇರಿಸಿ ತರಕಾರಿಯನ್ನೋ ಬೇಳೆಯನ್ನೋ ಬೇಯಿಸಿಕೊಳ್ಳುತ್ತಿದ್ದರು. ಚಿಕಿತ್ಸೆಯ ವೆಚ್ಚವೆಂದು ರೋಗಿಗಳಿಗೆ 'ಇಷ್ಟೇ' ಅಂತೇನೂ ದರ ನಿಗದಿಸಿರಲಿಲ್ಲ. ಜನರೆ ತಮ್ಮ ತಮ್ಮ ಅನುಕೂಲ–ಅಂತಸ್ತುಗಳಿಗೆ ತಕ್ಕಂತೆ ಅರ್ಧರೂಪಾಯಿಂದ ಹಿಡಿದು 10ರೂಪಾಯಿಗಳವರೆಗೆ ಕೊಟ್ಟುಹೋಗುತ್ತಿದ್ದರು. ಒಂದೊಂದು ಬಾರಿ ಸ್ವಲ್ಪ ಕಠಿಣ ಕಾಯಿಲೆಯ ರೋಗಿಗಳೂ ಬರುತ್ತಿದ್ದರು. ಕೆಲವರನ್ನು ಒಳರೋಗಿಗಳಾಗಿ ನಾಲ್ಕಾರುದಿನ ಇರಿಸಬೇಕಾಗುತ್ತಿತ್ತು. ಅದಕ್ಕಾಗಿ ಕೊಠಡಿಗಳೇನೋ ಇದ್ದವು, ಆದರೆ ಬರಿನೆಲ ಅಷ್ಟೇ. ಇದನ್ನು ತಿಳಿದ ಸ್ಥಳೀಯರು ಕೆಲವರು–ಶಿವಾರೆಡ್ಡಿ, ಅಜ್ಜಿಮುಲ್ಲ ಆಚಾರಿ ಮೊದಲಾದವರು ಊರಿನ ಬಡಗಿಗಳಿಂದಲೇ ಅತಿಕಮ್ಮಿವೆಚ್ಚದ 'ನೇವಾರ್ ಮಂಚ'ಗಳನ್ನು ಮಾಡಿಸಿ ತಂದರು. ಹುಸೇನ್‌ಸಾಬ್ ಹೋಗಿ ಜೈಲಿನಲ್ಲಿ ತಯಾರಿಸುತ್ತಿದ್ದ ದಪ್ಪದ ಹಚ್ಚಡಗಳನ್ನು ತರಿಸಿಕೊಟ್ಟರು. (ಬೆಲೆ 4 ರೂಪಾಯಿ). ಈಎಲ್ಲಾ ಕಾರ್ಯಗಳಲ್ಲಿ ಶಂಕರರಾವ್ ಮುಶ್ರೀಫ್ ಎಂಬುವರು ತುಂಬ ಮುತುವರ್ಜಿವಹಿಸಿ, ನೆರವಾಗುತ್ತಿದ್ದರು. ಬಿಜಾಪುರ ಮೂಲದ ಶಂಕರರಾಯರು ಪುಣೆಯ ಬಾಳೆಹಣ್ಣು ಮಂಡಿವ್ಯಾಪಾರಿಗಳ ಪರವಾಗಿ ಶ್ರೀರಾಮಪುರ ಮತ್ತು ಸುತ್ತುಮುತ್ತಲಿನ ಹಳ್ಳಿಗಳಲ್ಲಿ ರೈತರು ಬೆಳೆಸುತ್ತಿದ್ದ ಬಾಳೆ ಗೊನೆಗಳ ಖರೀದಿ ಮತ್ತು ಸಾಗಾಣಿಕೆಯನ್ನು ಮಾಡುತ್ತಿದ್ದರು. ಅವರತಾಯಿ ಪುತ್ಥಳೀಬಾಯಿ ವಯೋವೃದ್ಧೆಯಾಗಿದ್ದರೂ ನಮಗೆ ಬೇಕುಬೇಕಾದ ಗೃಹಕೃತ್ಯದ ಹಲವಾರು ಅನುಕೂಲತೆಗಳನ್ನು ಒದಗಿಸಿಕೊಟ್ಟರು. ನಮಗೆ ಜೋಳದ ರೊಟ್ಟಿಯ ರುಚಿಯನ್ನು ತೋರಿಸಿಕೊಟ್ಟವರೇ ಈ ಅಜ್ಜಿ.

ನಮ್ಮ ಸಂಸಾರರಥ ಹೀಗೆ ಸಾಗತೊಡಗಿತು. ನಮ್ಮ ಜತೆಗೇ ಬಂದಿದ್ದ ಅಮ್ಮಣ್ಣಿ ಅಡಿಗೆ ಮನೆಯ ವ್ಯವಸ್ಥೆ ನೋಡಿಕೊಳ್ಳುತ್ತಿದ್ದಳು. ಚಂದ್ರಾವತಿ ಶುಶ್ರೂಷಾ ಕಾರ್ಯದಲ್ಲಿ ನೆರವು ನೀಡುವುದರಿಂದ ನಮ್ಮ ಶ್ರಮ ಸ್ವಲ್ಪ ಕಮ್ಮಿಯಾಗುತ್ತಿತ್ತು.

ಸುಮಧುರವಾದ ರಾತ್ರಿ, ಹಿತವಾದ ನಿದ್ದೆ ಮುಗಿಸಿ ಉಷಃಕಾಲಕ್ಕೇ ಎದ್ದು ಬಂಗಲೆಯ ಮೇಲ್ಛಾವಣಿಯಲ್ಲಿ ಕುಳಿತುಬಿಟ್ಟರೆ ಸಾಕು. ಚೈತನ್ಯದ ಹೊಸ ಪರಿಸರವೇ ಸೃಷ್ಟಿಯಾಗಿರುವ ಅನುಭವವಾಗುತ್ತಿತ್ತು. ಆಶ್ರಮದ ಸುತ್ತಮುತ್ತ ಬೆಳೆದುನಿಂತ ಗಿಡಮರಗಳಮೇಲೆ ಇರುಳಲ್ಲಿ ಬಿದ್ದ ಮಿತವಾದ ತಂಪು ಇಬ್ಬನಿಯ ಮೂಲಕ ಜಮೆಯಾಗಿ ಒಂದೊಂದಾಗಿ ತೊಟ್ಟಿಕ್ಕುವ ಟಪ್‌ಟಪ್ ಮೆದುಸದ್ದಿನ ನೀರಹನಿಗಳು, ಸುತ್ತಮುತ್ತಲ ಪೈರುಪಚ್ಚೆಗಳ ಹೊಲದಲ್ಲಿನ ಬತ್ತ-ಕಬ್ಬು-ತೆಂಗು, ಬಾಳೆಗಳ ಸಾಲನ್ನು ಹಾಯ್ದು ಬೀಸುವ ಹಗುರವಾದ ತಂಗಾಳಿ, ತನ್ನಷ್ಟಕ್ಕೇ ನಸುನಗುತ್ತಾ ಮೆಲ್ನುಡಿಗಳಿಂದ ಕಿಲಕಿಲ ಸದ್ದಿನೊಂದಿಗೆ ನಿಧಾನವಾಗಿ ಹರಿಯುತ್ತಿರುವ ತುಂಗಭದ್ರಾನದಿ-ಹಳಿಗಳಮೇಲೆ ಗಡಗಡ ಸದ್ದಿನೊಂದಿಗೆ ಸಿಳ್ಳಿಹಾಕುತ್ತಾ ಓಡಾಡುವ ರೈಲುಗಳ ಸದ್ದು, ಅವುಗಳ ಕೂ ಸಿಳ್ಳೆ – ಪಕ್ಷಿಗಳ ಚಿಲಿಪಿಲಿ – ಹೀಗೆ ಅನುಭವಿಸಲು ಹೃದಯಂಗಮವಾದ ಮುದನೀಡುವ ಪರಿಸರದಲ್ಲಿ ಮೈಮರೆತು ಕುಳಿತು ಕ್ರಮೇಣ ಬಾಲಸೂರ್ಯನ ಬೆಚ್ಚಗಿನ ಹೊಂಬಿಸಿಲು ಪ್ರಖರವಾಗತೊಡಗಿದಾಗ ಕೆಳಗಿಳಿದುಬಂದು ನಿತ್ಯ ನೈಮಿತ್ತಿಕಕ್ಕೆ ತೊಡಗುತ್ತಿದ್ದೆ.

ಊರಿನಿಂದ ಮೊದಲು ಬಂದು ಭೇಟಿಕೊಟ್ಟವರು ಅಪ್ಪ. ನಾಲ್ಕಾರುದಿನ ಇದ್ದು, ಸುತ್ತಮುತ್ತಲ ಕೆಲವು ಸ್ಥಳಗಳನ್ನೂ ಮಂತ್ರಾಲಯವನ್ನೂ ಸಂದರ್ಶಿಸಿ ಹಿಂದಿರುಗಿದರು. ರಜೆಯ ದಿನಗಳನ್ನನುಸರಿಸಿ ತಮ್ಮಂದಿರೂ ಬಂದು ಹೋದರು. ರಾಮಚಂದ್ರ ಉಚ್ಚಿಲರು ಮುಂಬೈನಿಂದ ಬಂದು ಹಂಪಿಯಲ್ಲಿ ಜರಗಿದ ಪುರಂದರೋತ್ಸವದಲ್ಲಿ ಭಾಗವಹಿಸಿದರು. ಕ್ರಮೇಣ ಪಂಡಿತ ತಾರಾನಾಥರ ಶಿಷ್ಯರೂ, ಅಭಿಮಾನಿಗಳೂ ಬೇರೆ ಬೇರೆ ಊರುಗಳಿಂದ ಬರಲಾರಂಭಿಸಿದರು. ದೂರದ ಒಂದು ಹಳ್ಳಿಯಲ್ಲಿದ್ದ ವೈದ್ಯ 'ಅಕ್ಕಿ'ಯವರು ಮೊದಲು ಬಂದವರು (ಇವರು ಪಂಡಿತಜೀಯವರ ಆದ್ಯಶಿಷ್ಯರಲ್ಲೊಬ್ಬರಾಗಿದ್ದರು). ಕ್ರಮೇಣ ರಾಯಚೂರು, ಕರ್ನೂಲು, ಬಳ್ಳಾರಿ, ಹುಬ್ಬಳಿ-ಧಾರವಾಡ ಮೊದಲಾದ ವಿವಿಧ ಊರುಗಳಿಂದಲೂ ಬಂದು ಹೋಗತೊಡಗಿದರು. ಚಿಕ್ಕಮಗಳೂರಿನ 'ತಾರಾನಾಥ ರಸೌಷಧಿ ವರ್ಕ್ಸ್'ನ ಅಧ್ಯಕ್ಷರು ಕುಟುಂಬ ಸಮೇತ ಬಂದು ಎರಡು ಮೂರು ದಿವಸವಿದ್ದು ಹೋದರು. (ಪಂಡಿತ ತಾರಾನಾಥರ ಕಿರಿಯ ಸಹೋದರ ಅಮೃತರಾಯರು (ಅಂಬಣ್ಣ) ಇಲ್ಲೇ ವಾಸವಿದ್ದು ಅವರ ಜತೆ ತುಂಬಾ ಮಾತುಕತೆ ನಡೆಸಿದ್ದರು) 'ಮಾಸ್ಟರ್‌ಜೀ' (ಪಂಡಿತ ತಾರಾನಾಥರ ಶಿಷ್ಯರು ಅವರನ್ನು ಸಂಬೋಧಿಸುತ್ತಿದ್ದರು) ಯವರ ಮರಣಾನಂತರ ಆಶ್ರಮದಲ್ಲಿ ಅವರು ವಾಸಿಸುತ್ತಿದ್ದ ಬಂಗಲೆಯ ಪಕ್ಕದಲ್ಲೇ

ನಿರ್ಮಿಸಿದ್ದ ಸಮಾಧಿ ಕಾಲಕ್ರಮೇಣ ನಿರ್ಲಕ್ಷಕ್ಕೊಳಗಾಗಿ ಶಿಥಿಲಾವಸ್ಥೆಗೆ ತಲುಪಿತ್ತು. ನಾನು ಅದನ್ನು ಸ್ವಚ್ಛಗೊಳಿಸಿ ಪುನರ್ವ್ಯವಸ್ಥೆಗೊಳಿಸಿದ್ದೆ. ಅಷ್ಟೇ ಅಲ್ಲದೆ ಸಮಾಧಿಯ ಬಳಿಯೇ ಇದ್ದ ದೀಪಸ್ತಂಭವನ್ನು ಪುನರ್ನವೀಕರಿ, ಸೂರ್ಯಾಸ್ತಕ್ಕೆ ಸರಿಯಾಗಿ ಪ್ರತಿ ದಿನ ಸಂಜೆ ಹಣತೆ ಇರಿಸಿ ಬೆಳಕು ಬೀರುವಂತೆ ವ್ಯವಸ್ಥೆಗೊಳಿಸಿದ್ದೆ. ಇದನ್ನು ಅತಿಥಿಗಳು ಶ್ಲಾಘಿಸಿದರು. ಮುಂದೆ ಇನ್ನೊಂದಷ್ಟು ಕಾರ್ಯಕ್ರಮಗಳನ್ನು ಹಾಗೂ ನಿಂತುಹೋಗಿದ್ದ ಔಷಧಿಯ ಘಟಕವನ್ನು ಪುನರಾರಂಭಿಸುವ ಬಗ್ಗೆ ಆಸಕ್ತಿ ವ್ಯಕ್ತಪಡಿಸಿದರು.

ಹೀಗೆ 'ಸುಖ-ಸಂತೋಷ'ದಿಂದ ದಿನಗಳು ಉರುಳುತ್ತಿರುವಾಗ, ಡಾ॥ ರಣಬೀರ್ ತಾರಾನಾಥರು ಬೆಂಗಳೂರಿನ ತಮ್ಮ ಕೆಲವು ಗೆಳೆಯರೊಂದಿಗೆ ಬಂದರು. ನಾಲ್ಕು ದಿನವಿದ್ದು ಹೊರಡುವ ಮುನ್ನ- ತಾವು ಆದಷ್ಟು ಬೇಗನೆ ಬಂದು ಇಲ್ಲೇ ನೆಲಸುವುದಾಗಿ ಹೇಳಿದರು. ಅದರ ಜತೆಗೆ ನಮ್ಮ ಟೀಮಿನಲ್ಲಿ ಶುಶ್ರೂಷಾ ವ್ಯವಸ್ಥೆಯನ್ನು ನಿರ್ವಹಿಸುತ್ತಿದ್ದ ಚಂದ್ರಾವತಿಯನ್ನು ವಿವಾಹವಾಗುವ ಅಪೇಕ್ಷೆ ಇರುವುದಾಗಿಯೂ ತಿಳಿಸಿದರು. ಚಂದ್ರಾ ವಿಟ್ಲದ ಡಾ॥ ಸಬಿತಾ ಕ್ಲಿನಿಕ್‌ನಲ್ಲಿ ಪ್ರಾರಂಭದಿಂದಲೂ ನೆರವಾಗುತ್ತಿದ್ದು ತುಂಗಭದ್ರಕ್ಕೂ ಜತೆಯಲ್ಲೇ ಬಂದಿದ್ದರು. ಚಂದ್ರಾ-ರಣಬೀರ್‌ರ ಪ್ರೇಮಾಸಕ್ತಿ ನಮಗೆ ಗೊತ್ತಿತ್ತು. ಈಗ ಶುಭಮಸ್ತು 'ಶುಭಸ್ಯಶೀಘ್ರಂ' ಎಂದೆವು.

ನಮ್ಮ ಹೆಗಲಮೇಲಿದ್ದ ಸಾಲದಹೊರೆಯ ಮರುಪಾವತಿ (ಕಂತುಗಳು) ಪ್ರಾರಂಭವಾಗುವ ದಿನಗಳು ಸಮೀಪಿಸುತ್ತಿದ್ದವು. ನಾವೀಗ ಬೇರೆ ವ್ಯವಸ್ಥೆ ನೋಡಿಕೊಳ್ಳಬೇಕಾದ ಅನಿವಾರ್ಯತೆ ಉಂಟಾಯಿತು.

ಕಳೆದ ನಾಲ್ಕಾರು ತಿಂಗಳಲ್ಲಿ ಗುಲಬರ್ಗದ ಪ್ರಸಿದ್ಧ ಶಸ್ತ್ರಚಿಕಿತ್ಸಾತಜ್ಞರಾದ ಡಾ॥ ಎಸ್.ಎಸ್. ನರಕಣಗಿಯವರು ಪ್ರೇಮ ಚಿಕಿತ್ಸಾಲಯಕ್ಕೆ ಬಂದು ಕೆಲವು ಆಪರೇಷನ್‌ಗಳನ್ನು ಮಾಡಿಹೋಗಿದ್ದರು. ಇತ್ತೀಚೆಗೆ ಮತ್ತೊಮ್ಮೆ ಬಂದಾಗ ಈ ವಿಚಾರ ತಿಳಿದು ಗುಲಬರ್ಗ ಜಿಲ್ಲೆಯ ಚಿತ್ತಾಪುರ (ತಾಲ್ಲೂಕು ಕೇಂದ್ರ) ನಿಮಗೆ ಸರಿಹೋಗಬಹುದು ಎಂದು ಸೂಚಿಸಿದರು.

ತಿಂಗಳ ಕೊನೆಯಲ್ಲಿ ನಮ್ಮ ಬಿಡಾರ ಚಿತ್ತಾಪುರ ತಲುಪಿತು.

* * *

೮

ಹೈದ್ರಾಬಾದ್ ಕರ್ನಾಟಕದ ಹಿಂದುಳಿದ ಚಿತ್ತಾಪುರದಲ್ಲಿ

ಮೈಸೂರು ದವಾಖಾನೆ – ಚಿತ್ತಾಪುರದ ಮಿತ್ರರು

ಹೈದ್ರಾಬಾದ್ ನಿಜಾಮಶಾಹೀ ಆಡಳಿತಕ್ಕೆ ಸೇರಿದ್ದ ರಾಯಚೂರು–ಬೀದರ್–ಗುಲಬರ್ಗ (ಈಗ ಕೊಪ್ಪಳ ಮತ್ತು ಯಾದಗಿರಿ) ಜಿಲ್ಲೆಗಳು ತೀರ ಹಿಂದುಳಿದ ಪ್ರದೇಶವಾಗಿದ್ದು, 'ಮೊಗ್ಲಾಯಿ' ಊರುಗಳೆಂಬ ಅಡ್ಡಹೆಸರನ್ನು ಪಡೆದಿದ್ದವು. ಚಿತ್ತಾಪುರವು ವಿಸ್ತಾರವಾದ ತಾಲ್ಲೂಕಿನ ಕೇಂದ್ರವಾಗಿದ್ದರೂ ಚಿಕ್ಕಪಟ್ಟಣದಂತಹ ದೊಡ್ಡಹಳ್ಳಿಯೇ ಆಗಿತ್ತು. ನಾವು ಅಲ್ಲಿ 'ಮೈಸೂರು ದವಾಖಾನೆ' ಎಂಬ ಹೆಸರಿನ ಒಂದು ಚಿಕಿತ್ಸಾಲಯವನ್ನು ಪ್ರಾರಂಭಿಸಿ ಸುಮಾರು 14–15 ವರ್ಷಗಳಕಾಲ ಸಮರ್ಪಕವಾಗಿ ನಡೆಸಿದೆವು. ಈ ಅವಧಿಯನ್ನು ಹದಿನಾಲ್ಕು ವರ್ಷಗಳ 'ವನವಾಸ' ಎಂಬುದಾಗಿ ವಿನೋದಕ್ಕೆ ಹೇಳುತ್ತಿದ್ದರೂ ಅದು ನಮ್ಮ ಯೌವನಾವಧಿಯ ದಿನಗಳಾಗಿದ್ದವು. ನಮ್ಮ ಇಬ್ಬರು ಮಕ್ಕಳೂ ಚಿತ್ತಾಪುರದಲ್ಲಿಯೇ ಹುಟ್ಟಿಬೆಳೆದರು; ವಿದೇಶ ಶಿಕ್ಷಣಕ್ಕಾಗಿ ಮಾಡಿದ್ದ ಬ್ಯಾಂಕ್‌ಸಾಲ ಮರುಪಾವತಿಯಾಯಿತು. ಸಾಹಿತ್ಯಕ–ಶೈಕ್ಷಣಿಕ–ಸಾಂಸ್ಕೃತಿಕ ಚಟುವಟಿಕೆಗಳು ಚಿಗುರಿದವು. ಮುಖ್ಯವಾಗಿ 'ಶಿಶುವಿಹಾರ' ಎಂಬ ಹೆಸರಿನಿಂದ ಪ್ರಾರಂಭಿಸಿದ ಶಿಕ್ಷಣಸಂಸ್ಥೆ ಈಗ ಶಿಕ್ಷಣದ ಹೈಸ್ಕೂಲ್ ವರೆಗೆ ಬೆಳೆದಿದೆ – ಹಾಸ್ಟೆಲ್ ಕೂಡಾ ಇದೆ. ಉಪಯುಕ್ತ ವಿದ್ಯಾಸಂಸ್ಥೆಯಾಗಿ ರೂಪುಗೊಂಡಿದೆ. (ಅದನ್ನು ಮಂಗಳೂರಿನ 'ಬೆಥನಿ ಎಜ್ಯುಕೇಶನ್ ಸೊಸೈಟಿ' ನಡೆಸುತ್ತಿದೆ). ಸಾಮಾಜಿಕವಾಗಿ–ಸಾಂಸ್ಕೃತಿಕವಾಗಿ ಹಲವಾರು ಕಾರ್ಯಕ್ರಮಗಳು ಪ್ರಾರಂಭವಾದವು. ಗಣೇಶೋತ್ಸವ, ದಸರಾ, ದೀಪಾವಳಿ ಮೊದಲಾದ ಹಬ್ಬಗಳು ಜನಜಾಗೃತಿಯ ಸಾರ್ವಜನಿಕ ಕಾರ್ಯಕ್ರಮಗಳಾಗಿ ರೂಪುಗೊಂಡವು. ಚಿತ್ತಾಪ್ರೆಸ್. ಯುವಕರ ಸಂಘ. ಉಚಿತ ವಾಚನಾಲಯ–ಹೀಗೆ ಹಲವು ಚಟುವಟಿಕೆಗಳು ನಡೆದವು. ಎರಡು–ಮೂರು ವರ್ಷ ಮಳೆಬೀಳದೆ ದುರ್ಭರ ಬರಗಾಲ ಪರಿಸ್ಥಿತಿ ತಲೆದೋರಿದಾಗ ಸಂತ್ರಸ್ತರಿಗೆ 25 ಕಡೆಗಳಲ್ಲಿ ಗಂಜಿಕೇಂದ್ರಗಳನ್ನು ನಡೆಸಿದ್ದುದರ

ಜತೆಗೆ ಉಚಿತ ಚಿಕಿತ್ಸೆ, ವಸ್ತ್ರದಾನ, ಪಶುಮೇವು, ಮೊದಲಾದ ಅಗತ್ಯ ಸೌಲಭ್ಯಗಳನ್ನೂ ಒದಗಿಸಲಾಯಿತು. ಯುವಸಂಘದ ನೇತೃತ್ವದಲ್ಲಿ ನಡೆದ ಈ ಸೇವಾ ಕಾರ್ಯಕ್ರಮಗಳ ಮುಕ್ತಾಯ ಸಮಾರಂಭಕ್ಕೆ ಕರ್ನಾಟಕದ ಅಂದಿನ ರಾಜ್ಯಪಾಲರು ಮುಖ್ಯ ಅತಿಥಿಗಳಾಗಿಬಂದು, ಯುವಕರ ಸೇವಾಮನೋಧರ್ಮವನ್ನು ಶ್ಲಾಘಿಸಿದರು. ನಾನು ಈ ಎಲ್ಲಾ ಕಾರ್ಯಕ್ರಮಗಳ ಗೌರವ ನಿರ್ದೇಶಕನಾಗಿದ್ದೆ.

ಚಿತ್ತಾಪುರದಲ್ಲಿ ಗೃಹರಕ್ಷಕದಳ ಕೂಡ ಪ್ರಾರಂಭವಾಯಿತು. ನಮ್ಮ ಮೈಸೂರು ದವಾಖಾನೆಯು ಹೆರಿಗೆವಾರ್ಡ್ ಸಹಿತವಾಗಿ ಒಳರೋಗಿಗಳಿಗೂ ದೂರದೂರಿಂದ ಬಂದ ಹೊರರೋಗಿಗಳಿಗೂ ಹೆಚ್ಚಿನ ಅನುಕೂಲ ಕಲ್ಪಿಸಿಕೊಟ್ಟಿತ್ತು. ಇನ್ನಷ್ಟು ಹೆಚ್ಚು ಜನಮುಖಿಯಾಗಬೇಕೆಂಬ ಉದ್ದೇಶದಿಂದ ದೂರದೂರದ 25 ಗ್ರಾಮಗಳ–ಹಾಗೂ ಲಂಬಾಣೀತಾಂಡಗಳ ಬಳಿ ಹೋಗಲು ಸಂಚಾರೀ ಚಿಕಿತ್ಸಾಘಟಕವನ್ನು ಕೂಡ ಪ್ರಾರಂಭಿಸಿದ್ದಾಯಿತು. ಅದು ಹೆಚ್ಚು ಕಾಲ ನಡೆಯಲಿಲ್ಲ.

ಪ್ರತಿವರ್ಷ ರಜಾದಿನಗಳಲ್ಲಿ ಊರಿನಿಂದ ಬಂಧುಬಳಗದ ಹಲವಾರು ಮಕ್ಕಳುಬಂದು ಸಂತೋಷದಿಂದ ಕಾಲ ಕಳೆದು ಹೋಗುತ್ತಿದ್ದರು. ಮೈಸೂರಲ್ಲಿ ಓದುತ್ತಿದ್ದ ತಮ್ಮಂದಿರಿಗಂತೂ ಇದು ಎರಡನೇ ಮನೆಯಾಗಿತ್ತು. ಅಪ್ಪ ವರ್ಷಕೊಮ್ಮೆ ಬಂದು 10–15 ದಿವಸ ಇರುತ್ತಿದ್ದರು. ತಮ್ಮ ವೆಂಕಟ್ರಮಣ ಇಲ್ಲೇ ಇದ್ದು ಅನಂತರ ಅರ್ಧಕ್ಕೇ ಕೈ ಬಿಟ್ಟಿದ್ದ ವೈದ್ಯಕೀಯ ಶಿಕ್ಷಣವನ್ನು ಮುಂದುವರಿಸಿ ಎಮ್.ಬಿ.ಬಿ.ಎಸ್. ಪಾಸಾದ.

ಕೇವಲ ಒಂದು ನಾಮಕಾವಾಸ್ತೆ ಸರಕಾರೀ ದವಾಖಾನೆ ಇದ್ದ ಚಿತ್ತಾಪುರದಲ್ಲಿ 3–4 ಜನ ಸುಶೀಕ್ಷಿತ ವೈದ್ಯರು ಬಂದು ನೆಲಸಿದರು. ಮೂರು ಹೈಸ್ಕೂಲುಗಳು 3–4 ಖಾಸಗೀ ಶಿಕ್ಷಣ ಸಂಸ್ಥೆಗಳು ಕ್ರಮೇಣ ತಲೆಎತ್ತಿದವು. ಕೈಗಾರಿಕಾ ತರಬೇತಿಕೇಂದ್ರವೂ, ಬ್ಯಾಂಕ್ ಹಾಗೂ, ಇತರ ಉದ್ಯಮಗಳೂ ಬೆಳೆಯುವುದಕ್ಕೆ ಪ್ರಾರಂಭವಾದವು. ಬಹುಮುಖದ ಅಭಿವೃದ್ಧಿಯ ಹಾದಿಯಲ್ಲಿ ಚಿತ್ತಾಪುರವು ಹೆಜ್ಜೆಹಾಕಲು ಪ್ರಾರಂಭವಾದುದಕ್ಕೆ ಮೈಸೂರು ದವಾಖಾನೆ ಪ್ರಚೋದಕ ಹಾಗೂ ಸ್ಫೂರ್ತಿ ನೀಡಿತು ಎಂಬುದಾಗಿ ಜನರು ಹೇಳತೊಡಗಿದರು. ಈ ಕಾರ್ಯಕ್ರಮಕ್ಕೆ ವಿದೇಶೀ ಧನಸಹಾಯವಿದ್ದು ಹರಿಜನ ಗಿರಿಜನರ ಆರೋಗ್ಯರ ರಕ್ಷಣೆ ಕಾರ್ಯ ನಡೆಸಿದೆ.

1977ರಲ್ಲಿ ಆಂಧ್ರ ಪ್ರದೇಶದ ಕೃಷ್ಣ ಜಿಲ್ಲೆ (ಪೂರ್ವಸಮುದ್ರತೀರ)ಯಲ್ಲಿ ಭಾರೀ ತುಫಾನ್‌ಹಾವಳಿ ಸಂಭವಿಸಿತು. ಅಲ್ಲಿನ ಚಂಡಮಾರುತ ಹಾಗೂ ಪ್ರವಾಹ ಪೀಡಿತರಿಗೆ ನೆರವು ನೀಡಿ ಅದರ ಪುನರ್‌ವಸತಿಗಾಗಿ ಹೈದ್ರಾಬಾದ್‌ನ 'ಅವೇರ್' ಸ್ವಯಂಸೇವಾಸಂಸ್ಥೆಯನ್ನು ಮೊದಲು ನಾನು ಸೇರಿದೆ. ಅನಂತರ ಸಚಿತಾ ಸಹಿತ ಪಡಕ್ಕಲ್ ಎಂಬ ಹಳ್ಳಿಯಲ್ಲಿ ತಳವೂರಿದೆವು.

ಚಿತ್ತಾಪುರದ 15 ವರ್ಷಗಳ ಬದುಕಿನ ಸಿಹಿ–ಕಹಿ ನೆನಪುಗಳನ್ನು 'ಚಿತ್ತಾಪುರದ ಚಿತ್ರ' ಎಂಬುದಾಗಿ ಪುಸ್ತಕ ರೂಪದಲ್ಲಿ ಬರೆದು ಪ್ರಕಟಿಸುತ್ತಿರುವುದರಿಂದ ಆ ಬಗ್ಗೆ ಇಷ್ಟೇಹೇಳಿ ನಿಲ್ಲಿಸುತ್ತೇನೆ.

ಟಿಪ್ಪಣಿ :

'ಚಿತ್ತಾಪುರ ವಾಸ'ದ ದಿನಗಳಲ್ಲಿ ವೈದ್ಯ ಜೀವನದ ಅನುಭವಗಳ ಕುರಿತು ಹಲವಾರು ಲೇಖನಗಳನ್ನು ಬರೆದೆ. ಸುಧಾ, ಪ್ರಜಾಮತ, ಕಸ್ತೂರಿ ಮೊದಲಾದ ಪತ್ರಿಕೆಗಳಲ್ಲಿ ಅವು ಪ್ರಕಟವಾದವು. ಅಷ್ಟೇ ಅಲ್ಲದೆ ವೈದ್ಯ ಸಾಹಿತ್ಯ ಪತ್ರಿಕೆಗಳ ಗಮನವನ್ನು ಸೆಳೆಯಿತು. ಬೆಳಗಾವಿಯಲ್ಲಿ ಸಮಾವೇಶಗೊಂಡ ಅಖಿಲ ಕರ್ನಾಟಕ ವೈದ್ಯ ಸಾಹಿತಿಗಳ ಸಮ್ಮೇಳನದಲ್ಲಿ ಭಾಗವಹಿಸಲು ನನ್ನನ್ನು ಆಹ್ವಾನಿಸಿದರು. ಅದೇ ಸಂದರ್ಭದಲ್ಲಿ ಹಿರಿಯ ವೈದ್ಯ ಲೇಖಕರಾದ ಅಶೋಕ ಪೈ ರವರು ನನ್ನ 'ಧನ್ವಂತರಿ' ಛಾಪಿನ ಬರಹಗಳ ಬಗ್ಗೆ ಕಿರುವಿಮರ್ಶೆ ಮಾಡಿ ಬೆನ್ನುತಟ್ಟಿದರು. ಆಗ ಲೇಖನಗಳು ಪುಸ್ತಕರೂಪದಲ್ಲಿ ಪ್ರಕಟವಾಗಿರದಿದ್ದರೂ ಈ ರೀತಿ ವಿಮರ್ಶಾಪೂರ್ವಕ ಪ್ರಶಂಸೆ ನೀಡಿದ್ದು ನನಗೆ ವಿಶೇಷವೆನ್ನಿಸಿತು. ಚಿತ್ತಾಪುರದ ಬಳಿಯಲ್ಲಿರುವ 'ನಾಗಾಯಿ'ಯ ಶಿಲಾಶಾಸನ ಹಾಗೂ 4 ಶತಮಾನಗಳ ಹಿಂದಿನ ದೇವಾಲಯಗಳ, ಅಗ್ರಹಾರದ ಹಾಗೂ ಪುಸ್ತಕಭಂಡಾರ ಸಹಿತವಾದ ಗುರುಕುಲದ ಬಗ್ಗೆ ಬರೆದ 'ಸರಸ್ವತಿಯ ತವರು ನಾಗಾಯಿ' ಶಬ್ದಚಿತ್ರವನ್ನು ಧಾರವಾಡ ಆಕಾಶವಾಣಿ ನಿಲಯವು ಪ್ರಸಾರಮಾಡಿತು. ಹಲವಾರು ಲೇಖನಗಳನ್ನು ಕೂಡ ಬರೆದು ಬೇರೆಬೇರೆ ಪತ್ರಿಕೆಗಳಲ್ಲಿ ಪ್ರಕಟಿಸಿದೆ.

ಧಾರವಾಡದ ಕರ್ನಾಟಕ ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಕೇಂದ್ರದವರ ಸೂಚನೆ ಮೇಲೆ 'ವಿಷವೈದ್ಯಶಾಸ್ತ್ರ' ಎಂಬ ಪುಸ್ತಕವನ್ನು ಬರೆದೆ. ಅದನ್ನು ಅವರು ಪ್ರಕಟಿಸಿದರು. ಕನ್ನಡದಲ್ಲಿ ವಿಷ ವೈದ್ಯದ ಬಗ್ಗೆ ಬರೆದ ಕೆಲವೇ ಕೃತಿಗಳನ್ನು ಇದು ಅಗ್ರಗಣ್ಯವಾಗಿದೆ ಎಂಬ ಪ್ರಶಂಸೆಯೂ ದೊರಕಿತು. ಇಲ್ಲಿ ಉಲ್ಲೇಖಿಸಬಹುದಾದ ಇನ್ನೊಂದು ಘಟನೆ ಇದೆ. ಚಿತ್ತಾಪುರದ ಬಸವರಾಜಪ್ಪ ಎಂಬ ಶಿಕ್ಷಕರ ಸಂಬಂಧಿಯೊಬ್ಬರು ಟೈಫಾಯ್ಡ್ ಜ್ವರದಿಂದ ಬಳಲಿ ನರಳುತ್ತಿದ್ದು, ಅವರಿಗೆ ಚಿಕಿತ್ಸೆ ನೀಡುತ್ತಿದ್ದೆ. ನಮ್ಮ ಮೈಸೂರು ದವಾಖಾನೆಯ ಒಳರೋಗಿಯಾಗಿ ಅವರು ಭಾರತೀಯ ಸೇನಾ ವಿಭಾಗದ ಅಧಿಕಾರಿಯಾಗಿದ್ದು ರಜಾ ಕಾಲದಲ್ಲಿ ತನ್ನ ಹೆಂಡತಿ ಮಕ್ಕಳ ಜತೆಗಿರಲು ಮಾವನ ಮನೆಗೆ ಚಿತ್ತಾಪುರಕ್ಕೆ ಬಂದಿದ್ದಾಗ ಈ ಘಟನೆ ನಡೆಯಿತು. ಜ್ವರಮುಕ್ತರಾಗಲು ಇನ್ನೂ 4–6 ದಿನಗಳು ಬಾಕಿ ಇದ್ದಾಗಲೇ ಅವರ 'ರಜೆ' ಮುಗಿದುಹೋದ ಕಾರಣ ಮಿಲಿಟರಿ ಕ್ಯಾಂಪ್‌ಗೆ ಹಿಂತಿರುಗಲೇಬೇಕಾಗಿತ್ತು. ಚಿಕಿತ್ಸೆ ಕೂಡಾ ಮಿಲಿಟರಿ ಆಸ್ಪತ್ರೆ ಅಥವಾ ಸರಕಾರೀ ಆಸ್ಪತ್ರೆಗಳಲ್ಲಿಯೇ

ಆಗಬೇಕಾಗಿದ್ದು, ನನ್ನ ಖಾಸಗೀ ಚಿಕಿತ್ಸಾಲಯದಲ್ಲಿ ಶುಶ್ರೂಷೆ ನಡೆಯುತ್ತಿದ್ದುದು ನಿರುಪಯೋಗವಾಗುತ್ತದೆಂದು ಹೇಳಿ ನನ್ನ ಸಲಹೆಯನ್ನು ನಿರ್ಲಕ್ಷಿಸಿ, ಮಿಲಿಟರಿ ಕ್ಯಾಂಪ್‌ನತ್ತ ಹೋಗಲು ರೈಲುಹತ್ತಿದರು – ಜ್ವರದಿಂದ ತತ್ತರಿಸುತ್ತಿದ್ದರೂ ಲಕ್ಷಿಸದೆ. ಮುಂದೇನಾಯಿತೋ ನನಗೆ ತಿಳಿಯದು. 6 ತಿಂಗಳ ನಂತರ ಅವರು ಮಿಲಿಟರಿ ಕ್ಯಾಂಪ್‌ಗೆ ತಲುಪಿದಾಗ ಅವರನ್ನು ಕೋರ್ಟ್‌ಮಾರ್ಷಲ್ ಮೂಲಕ ವಿಚಾರಣೆಗೆ ಗುರಿಮಾಡಲಾಯಿತು. ಹಿಮಾಲಯದ ಅಂಚಿನಲ್ಲಿರುವ 'ತವಾಂಗ್' ನಗರದ ಬಳಿಯ ಮಿಲಿಟರಿ ಕ್ಯಾಂಪ್‌ನ ಕೋರ್ಟ್‌ನಲ್ಲಿ ವಿಚಾರಣೆಯಾಯಿತು. ನನ್ನನ್ನು ಸಾಕ್ಷಿಯಾಗಿ ಹಾಜರಾಗಲು ಕರೆಸಿ 18–20 ದಿನಗಳ ಕಾಲ ಕ್ಯಾಂಪ್‌ನಲ್ಲೇ ಇಟ್ಟು ವಿಚಾರಣೆಯ ಸಮಯ ನನ್ನನ್ನು ಸಾಕಷ್ಟು ಅಡ್ಡಸವಾಲುಗಳಿಂದ ಪೇಚಿಗೆ ಸಿಲುಕಿಸಲು ಪ್ರಯತ್ನಿಸಿದ 'ಜಾಗ್' (ಮಿಲಟರೀ ವಕೀಲರು) ನಾನು ಹಾಜರುಪಡಿಸಿದ ರಿಕಾರ್ಡ್ ದಾಖಲೆ ಹಾಗೂ ಕೊಟ್ಟ ಸಮರ್ಪಕವಾದ ಉತ್ತರಗಳಿಂದ ಆರೋಪವನ್ನು ಸಾಬೀತುಮಾಡಲು ಸಾಧ್ಯವಾಗದೇಹೋಯಿತು. ಲೆಫ್ಟಿನೆಂಟ್ ಬಸವರಾಜ್ ಆರೋಪಮುಕ್ತರಾದರು. ಹಿಮಾಚಲದ ಸಾನ್ನಿಧ್ಯದಲ್ಲಿ ಮಿಲಿಟರೀ ಕ್ಯಾಂಪ್ ಹಾಗೂ ಕೋರ್ಟ್ ಮುಖ್ಯಸ್ಥರಿಂದ ಅನುಮತಿ ಪಡೆದು ಕೇಸನ್ನು ಯಶಸ್ವಿಯಾಗುವಂತೆ ಮಾಡಿದ ಅವಕಾಶ ದೊರಕಿದ ಏಕೈಕ ಎಲ್‌ಎಂಎಸ್ ವೈದ್ಯ ನೀವೆಂದು ನನ್ನನ್ನು ಪ್ರಶಂಸಿಸಿ ಹೇಳಿದರು.

* * *

ಭಾಗ - 2

ಗ್ರಾಮಾಭಿವೃದ್ಧಿಯ ಗಾಣ

ಸ್ವಯಂಸೇವಾಸಂಸ್ಥೆಗಳ ಕಾರ್ಯಕ್ರಮದಲ್ಲಿ ಇಪ್ಪತ್ತೈದು ವರ್ಷಗಳು

೧

ಗಿರಿಜನ– ಹರಿಜನ ಅಭಿವೃದ್ಧಿ ಕಾರ್ಯಕ್ರಮ

ಅವೇರಿನ ತೇರು

ಆಂಧ್ರ ಪ್ರದೇಶದ ತೀರ ಹಿಂದುಳಿದ ತೆಲಂಗಾಣ ವಿಭಾಗದ ಒಂದು ಗ್ರಾಮ– ಪಡಕ್ಕಲ್. ಅದು ಗುಡ್ಡಗಾಡಿನ ಒಣ ಭೂಮಿ. ಹೊಲ–ಗದ್ದೆಗಳಲ್ಲಿ ಹೆಚ್ಚಿನವು ಕೆಲವು ಶ್ರೀಮಂತ ಕುಟುಂಬದ ವಶವಿದ್ದು. ಬಡವರು ಎಕರೆ–ಎರಡೆಕರೆ ಹೊಲಗಳಲ್ಲಿ ನೆತ್ತರನ್ನು ಬೆವರಾಗಿ ಮಾಡಿ ದುಡಿದು ಕಷ್ಟದಿಂದ ಜೀವಿಸುತ್ತಿದ್ದರು. ಅನಿವಾರ್ಯ ಸಂದರ್ಭಗಳಲ್ಲಿ ಸಾಲ–ಸೋಲ ಮಾಡಿ ಅದಕ್ಕಾಗಿ ಜಮೀನನ್ನು ಸಾಲಿಗರ ವಶಕ್ಕೆ ಕೊಟ್ಟು, ತಮ್ಮ ಹೊಲದಲ್ಲಿ ತಾವೇ ಜೀತದಾಳುಗಳಾಗಿ ದುಡಿಯುಬೇಕಾಗುತ್ತಿತ್ತು. ಗುಡಿಸಲುಗಳಲ್ಲಿ ವಾಸ. ತೀರ ಬಡವರು ಜೋಪಡಿ ವಾಸಿಗಳು. ಪಡ್ಕಲ್‌ನಲ್ಲಿ ಈ ವರ್ಗದವರೇ ಅಧಿಕಮಂದಿ.

ಶ್ರೀಮಂತ ವರ್ಗದವರದ್ದು ತಾರಸಿ ಮನೆ. ರೆಡ್ಡಿಗಾರು, ದೊರಾ, ಪಟೇಲುವಾಳ್ಳು, ದಣೀ ಎಂಬುದಾಗಿ ಸಂಬೋಧಿಸುತ್ತಿದ್ದರು. ಬಡವರು ದೊರೆಗಳ ಮುಂದೆ ಕೈ ಕಟ್ಟಿಕೊಂಡು ತಲೆಬಾಗಿ ನಿಂದಿರಬೇಕಾಗಿತ್ತು.

ಹೆಂಗಸರು 'ದೊರೆ' ಬಂಗಲೆಯನ್ನು ಹಾದುಹೋಗುವಾಗ ಬೆನ್ನುಬಾಗಿಸಿ, ತಲೆಯಮೇಲೆ ಕೈಎತ್ತಿಹಿಡಿದುಕೊಂಡೇ ಸಾಗಬೇಕಾಗಿತ್ತು. ಎಲ್ಲಾ ಬಗೆಯ ಶೋಷಣೆಗೆ ತುತ್ತಾಗಿ ನಲಿವೆಂಬುದೇ ಇಲ್ಲದೆ, ನೋವಿನೊಂದಿಗೆ ಬಡವರ ಬಾಳು, ಬದುಕು ತಲೆ ತಲಾಂತರದಿಂದ ಸಾಗಿಬರುತ್ತಿತ್ತು. ನೆಲಹೊಲ, ಧನಧಾನ್ಯ, ಅಧಿಕಾರ, ವಿದ್ಯೆ, ಸ್ಥಾನಮಾನಗಳು ಹೆಚ್ಚಿನಮಟ್ಟಿಗೆ ದೊರೆಗಳ ಸೊತ್ತಾಗಿರುತ್ತಿತ್ತು. ಪಡಕ್ಕಲ್ ಗ್ರಾಮದ ಒಂದು ದೊರೆಕುಟುಂಬದ ಕಿರಿಯ ಸದಸ್ಯ ಪಂಚಾಯತ್ ಅಧ್ಯಕ್ಷ, ಇನ್ನೊಬ್ಬ ತಾಲುಕು ಪಂಚಾಯತ್‌ಸಮಿತಿಯ ಅಧ್ಯಕ್ಷ, ಮೂರನೆಯವರು ಎಂ.ಎಲ್.ಎ. ಇದೇ ಕುಟುಂಬಕ್ಕೆ ಸೇರಿದ ಇತರ ಕೆಲವು ಸದಸ್ಯರು ಪೋಲೀಸ್ ಪಟೇಲ್,

ಶಾಲಾಶಿಕ್ಷಕರು, ಟಪಾಲ್ ಇಲಾಖೆ, ಪಶುಸಂಗೋಪನೆ, ಹಾಲು ಸಂಗ್ರಹಣಾ ಕೇಂದ್ರ-ಹೀಗೆ ಎಲ್ಲೆಲ್ಲೂ ಇರುತ್ತಿದ್ದರು. ಅವರು ಹೇಳಿದ್ದೇ ಕಾನೂನು ಮಾಡಿದ್ದೇ ನ್ಯಾಯವಾಗಿತ್ತು.

'ಅವೇರ್'- ಹೈದರಾಬಾದ್ ಮೂಲದ ಒಂದು ಸ್ವಯಂಸೇವಾಸಂಸ್ಥೆಯಾಗಿದ್ದು ಗ್ರಾಮಾಭಿವೃದ್ಧಿಯ ಕಾರ್ಯಗಳನ್ನು ನಿರ್ವಹಿಸುತ್ತಿತ್ತು. ಪಡಕ್ಕಲ್ ಸುತ್ತಮುತ್ತಲಲ್ಲಿ ಹಲವಾರು ಲಂಬಾಣಿ ತಾಂಡಗಳಿದ್ದು-ಅವುಗಳೂ ಸೇರಿದಂತೆ ಹರಿಜನ-ಗಿರಿಜನರ ಬಡಜನರ-ಶೋಷಿತರ-ಸಮಗ್ರ ವಿಕಾಸ್ ಕಾರ್ಯಕ್ರಮದ ಪ್ರಾರಂಭಿಕ ಹೆಜ್ಜೆಯಾಗಿ ಪಡಕ್ಕಲ್‌ನಲ್ಲಿ 'ಅವೇರ್' ಸಾಮಾಜಿಕ ಆರೋಗ್ಯ ಕೇಂದ್ರವನ್ನು ಪ್ರಾರಂಭಿಸಲು ಮುಂದಾಗಿತ್ತು.

2.9.1977 ರಂದು ಪಡಕ್ಕಲ್‌ನ ಗ್ರಾಮಪಂಚಾಯತಿ ಕಟ್ಟಡದಲ್ಲಿ ಸೇರಿದ್ದ ಸಮಾರಂಭದಲ್ಲಿ ಉದ್ಘಾಟನೆ ನಡೆಯಿತು. ಊರಿನ ಆಢ್ಯರು-ಹಿರಿಯರು ಬಂದು ಕುಳಿತಿದ್ದರು. ಕಿಟಕಿಯ ಹೊರಗೆ ಇಬ್ಬರು ಮೂವರು ಲಂಬಾಣಿ ಜನರೂ ಕೆಲವು ಹರಿಜನರೂ ನಿಂತು, ಇಣಿಕಿ ನೋಡುತ್ತಿದ್ದರು. ದೊರೆ ನರಹರಿರೆಡ್ಡಿಯವರು ಪಕ್ಕದಲ್ಲೇ ಇರಿಸಿದ್ದ'ಕಿಟ್ ಬ್ಯಾಗ್' ನಿಂದ ಸ್ಟೆತೋಸ್ಕೋಪನ್ನು ತೆಗೆದು ನನ್ನಕೈಗಿತ್ತು, 'ಇನ್ನು ಎಲ್ಲರಿಗೂ ಪಡಕ್ಕಲ್ಲನಲ್ಲಿಯೇ ಚಿಕಿತ್ಸೆ ದೊರಕುತ್ತದೆ' ಎಂದು ನಾಟಕೀಯವಾಗಿ ಹೇಳಿ ಕ್ಲಿನಿಕ್ಕನ್ನು ಉದ್ಘಾಟಿಸಿದರು. ಅವೇರ್ ಛೇರ್‌ಮನ್ ಪಿ.ಕೆ.ಎಸ್. ಮಾಧವನ್ ಶುಭ ಹಾರೈಸಿದರು. ಹತ್ತು ಹದಿನೈದು ನಿಮಿಷಗಳಲ್ಲಿ ಮುಗಿದ ಸಮಾರಂಭದ ತರುವಾಯ 'ಅವೇರ್' ಪರಿವಾರ ದೊರೆ ಬಂಗಲೆಯಲ್ಲಿ ಉಪಾಹಾರ ಸೇವಿಸಿ, ಅವರನ್ನು ಕೂಡಿಕೊಂಡು ಹೈದ್ರಾಬಾದ್‌ಗೆ ಪ್ರಯಾಣಿಸಿದರು. (ರೆಡ್ಡಿಯವರು ಹೈದಾಬಾದ್‌ನಲ್ಲಿ ವಾಸ್ತವ್ಯ ಹೂಡಿದ್ದು ಆಗಾಗ ಪಡಕ್ಕಲ್ಲಿಗೆ ಬಂದ ಹೋಗುತ್ತಿದ್ದರು.)

'ಮೋಹನದಾಸ್' ಅರ್ಥಾತ್ 'ದಾಸು' ಎಂಬ ಸಹಾಯಕನೊಬ್ಬನ ನೆರವಿನಿಂದ 'ತೆಲುಗು' ಭಾಷೆ ತಿಳಿಯದಿದ್ದರೂ ಅರೆಬರೆ ಹಿಂದಿ-ಇಂಗ್ಲೀಷ್‌ಗಳ ಮೂಲಕ ರೋಗಿಗಳೊಂದಿಗೆ ಸಂಭಾಷಿಸುತ್ತ ರೋಗತಪಾಸಣೆ ಮಾಡಿ, ಚಿಕಿತ್ಸೆ ಹಾಗೂ ರೋಗೋಪಹಾರ ಮಾಡಲು ಪ್ರಾರಂಭಿಸಿದೆ. ಮಧ್ಯಾಹ್ನ 1 ಗಂಟೆಯ ಹೊತ್ತಿಗೆ 10-12 ಜನ ರೋಗಿಗಳನ್ನು ಚಿಕಿತ್ಸೆಮಾಡಿ ತೀರ ಕಮ್ಮಿದರದಲ್ಲಿ ಔಷಧಿಯ ವೆಚ್ಚವನ್ನು ಪಡೆದು ರಸೀದಿ ಕೊಟ್ಟು ಮೊದಲ ದಿನವನ್ನು ಪ್ರಾರಂಭಿಸಿದೆ. ಸಾರ್, ದೊರೆ ಬಂಗಲೆಗೆ ಹೋಗಬೇಕಂತೆ-ಅಲ್ಲೇ ನಿಮ್ಮ ಊಟ ವಿಶ್ರಾಂತಿ (ವಾಸ್ತವ್ಯದ) ವ್ಯವಸ್ಥೆ ಮಾಡಿದ್ದಾರೆ "ಎಂದು ಹೇಳಿದ ದಾಸು. ನಾನು ದೊರೆಬಂಗಲೆಯತ್ತ ಹೆಜ್ಜೆ ಹಾಕಿದೆ. ನರಸಿಂಹಲು (ದೊರೆ ಬಂಗಲೆಯ ಉಸ್ತುವಾರಿ) ಬಡಿಸಿದ 'ಅನ್ನ ಸಾರು' ತಿಂದು ಸ್ವಲ್ಪಹೊತ್ತು ವಿಶ್ರಮಿಸಿ ಮತ್ತೆ ಕ್ಲಿನಿಕ್‌ಗೆ ಮರಳಿವೆ.

ಕ್ಲಿನಿಕ್‌ನಲ್ಲಿ ರೋಗಿಗಳಾರೂ ಕಾದಿರಲಿಲ್ಲ. ಕುತೂಹಲದಿಂದ ಡಾಕ್ಟರು ಸಾಹೇಬರನ್ನು ನೋಡಲು ಕೆಲವು ವಿದ್ಯಾರ್ಥಿಗಳು ಬಂದು ಕಾದಿದ್ದರು. ಅರೆಬರೆ ಇಂಗ್ಲಿಷ್, ಹಿಂದಿ, ತೆಲುಗು ಮಿಶ್ರಣದೊಂದಿಗೆ ಅವರೊಡನೆ ಸಂಭಾಷಿಸಲು ಪ್ರಾರಂಭಿಸಿದೆ. 'ನಿಮ್ಮ ಊರನ್ನು ತೋರಿಸುತ್ತೀರಾ' ಎಂದು ಕೇಳಿದಾಗ ಸಂತೋಷದಿಂದ ನನ್ನನ್ನು ಕರೆದುಕೊಂಡು ಊರು-ಕೇರಿಗಳನ್ನು ತೋರಿಸಲು ಪ್ರಾರಂಭಿಸಿದರು. ಕೊಕ್ಕರೆಕೆರೆ, ಹರಿಜನಕೇರಿ, ಮುಸ್ಲಿಂ ವಠಾರ, ಇತರ ಕೆಳವರ್ಗದ ಜನರ ಓಣಿಗಳು-ಹೀಗೆ ಪಡಕ್ಕಲ್ಲಿನ ಕೆಲವು ಭಾಗಗಳನ್ನು ಪರಿಚಯಿಸಿದರು. ನಾಲ್ಕಾರು 'ಪಟೇಲ್ ವಾರಿ' ಮನೆಗಳನ್ನು ದೂರದಿಂದಲೇ ನೋಡಿ ಹಿಂದಿರುಗಿದೆವು. ಮುಂದಿನ ವಾರ ಈ ಊರು-ಕೇರಿ ಸಂಚಾರವನ್ನು ಸುತ್ತಾ ಮುತ್ತಲಿನ ಕೆಲವು ಹಳ್ಳಿಗಳಿಗೂ, ಲಂಬಾಣಿತಾಂಡಗಳಿಗೂ ವಿಸ್ತರಿಸಿದ್ದರಿಂದ 'ಗ್ರಾಮಜೀವನ ಪುನರ್ದರ್ಶನ' ವಾಯಿತು.

8-10 ದಿವಸಗಳ ತರುವಾಯ 'ದೊರೆ' ಹೈದ್ರಾಬಾದಿನಿಂದ ಪಡಕ್ಕಲ್ಲಿಗೆ ಬಂದಿಳಿದರು 'ದೊರೆಸಾನಿ' ಸಹಿತ. ಸ್ವಲ್ಪಹೊತ್ತಿನಲ್ಲಿ 'ದರ್ಬಾರು' ಜಮೆಯಾಯಿತು. ಹಾಲೆ-ಹವಾಲೆಗಳನ್ನು ಪರಾಂಬರಿಸುತ್ತ ನಡುವೆ 'ಅವೇರ್' ಆಸ್ಪತ್ರೆ ಬಗ್ಗೆ ಕೂಡ 'ಅಪಸ್ವರ' ಕೇಳಿಸಿದಾಗ 'ಪಿಲುವಂಡಿ ವಂದನೆ ಆ ಡಾಕ್ಟರಾಯನ' ಎಂದು ನನಗೆ -ಬುಲಾವ್ ಕಳಿಸಿದರು. ಕಾದು ಕುಳಿತಿದ್ದ ರೋಗಿಗಳನ್ನು ನೋಡಿದ ತರುವಾಯ ದರ್ಬಾರಿಗೆ ರೋದೆ. ದೊರೆ 'ಬಂಗಲೆ' ಯ ಚಾವಡಿಯಲ್ಲಿ ಮಂಚದ ಮೇಲೆ ಆಸೀನರಾಗಿದ್ದರು. ಯಥಾಪ್ರಕಾರ ಜನರು ಸುತ್ತಾ ನೆರೆದಿದ್ದರು. ನಾನು ನೇರವಾಗಿ ಹೋಗಿ ಮಂಚದಲ್ಲಿ ದೊರೆಯ ಬಳಿ ಕುಳಿತೆ. ಸಭಾಸದರು ಕಕ್ಕಾಬಿಕ್ಕಿಯಾಗಿ ಬೆದರಿದ ಕಣ್ಣುಗಳಿಂದ ಒಮ್ಮೆ ನನ್ನತ್ತ-ಇನ್ನೊಮ್ಮೆ ಕಿಟಕಿಯತ್ತ ನೋಡಿದರು. (ಎಲಾ ಇವರ! ದೊರೆ ಮಂಚದಲ್ಲಿ ಕುಳಿತುಬಿಟ್ಟರಲ್ಲ ಡಾಕಟರಾದರೇನಂತೆ!)

ಯಾರದೋ ಹಾಲೆ-ಹವಾಲೆ ವಿಚಾರಿಸುತ್ತಿದ್ದ ದೊರೆ ಅದನ್ನು ಮೊಟಕುಗೊಳಿಸಿ ನನ್ನತ್ತ ತಿರುಗಿದರು. ನಾನು 'ನಮಸ್ಕಾರ-ಬರಲಿಕ್ಕೆ ಹೇಳಿದರಂತೆ' ಎಂದೆ.

ಒಂದು ಕ್ಷಣ ಸುಮ್ಮನಿದ್ದು ದೊರೆ ಕೇಳಿದರು: 'ಹೇಗಿದೆ ಪಡಕ್ಕಲ್ ಕ್ಲಿನಿಕ್.'

'ತಕ್ಕಮಟ್ಟಿಗೆ ಚೆನ್ನಾಗಿ ನಡೆದಿದೆ. ಹತ್ತಿರದ ಹಳ್ಳಿಗಳಿಂದ ಕೂಡ ಜನ ಬರ್ತಿದ್ದಾರೆ' ಎಂದೆ.

'ಪಾಪ ಬಡವರು, ಇನ್ನೆಲ್ಲಿಗೆ ಹೋಗ್ತಾರೆ' ಎಂದು ಕನಿಕರಿಸಿದರು. ಒಂದು ಕ್ಷಣ ಕಳೆದು ಔಷದಕ್ಕೆ ಹಣ ತಕ್ಕೊಳ್ತಿದ್ದೀರಂತೆ ನೀವು! ಎಂದು ತುಸುಗಡಸು ಧ್ವನಿಯಲ್ಲಿ ಹೇಳಿದರು ದೊರೆ.

'ಬಹಳಕಮ್ಮಿ ಚಾರ್ಜ; ಔಷಧಿ ಖರ್ಚು ದಿನಕ್ಕೆ ಅರ್ಧ ರೂಪಾಯಿ; ಇಂಜೆಕ್ಷನ್ ಕೊಟ್ಟಿದ್ದರೆ ಎರಡು ರೂಪಾಯಿ ಅಷ್ಟೇ.'

'ಅವರೆಲ್ಲ ಬಡವರು; ಪಾಠ ಊಟಕ್ಕೆ ಗತಿಇಲ್ಲದವರು. ಅವರಿಂದ ಹಣ ವಸೂಲಿ ಅಂದ್ರೆ?' ಈಗ ಧಣಿಗಳ ಧ್ವನಿಯಲ್ಲಿ ಖಚಿತ ಆಕ್ಷೇಪಣೆ ಇತ್ತು. 'ಬರೀ ಔಷಧಿ ಖರ್ಚು ಬಹಳ ಕಮ್ಮಿ ಎಂದರೇನು?'

'ದುಡ್ಡು ತೆಗೆದುಕೊಂಡು ಔಷಧಿ ಕೊಡಲಿಕ್ಕೆ ಅಂತ ನಿಮ್ಮನ್ನು ಇಲ್ಲಿಗೆ ಕರೆಸಿದ್ದ? ಫಾರಿನ್ ಫಂಡ್ಸ್ ಬರ್ತಿದೆ. ಫ್ರೀ ಟ್ರೀಟ್‌ಮೆಂಟ್ ಮಾಡುವುದು ಬಿಟ್ಟು–'

'ಖರ್ಚಿನಲ್ಲಿ ನಾಲ್ಕಾಣೆ ಭಾಗ ಜನರಿಂದ ತಗೋತಿರಲಿ ಅಂತ ಶರ್ತ ಹಾಕಿದ್ದಾರೆ ಆಸ್ಟ್ರೇಲಿಯಾದ ಆ ಸೊಸೈಟಿಯವರು ಅದಕ್ಕೆ–'

'ಡಾಕ್ಟರ್–ಇದು ಆಸ್ಟ್ರೇಲಿಯಾ ಅಲ್ಲ ಪಡಕ್ಕಲ್, ಡಾಕ್ಟರ್–ಪಡಕ್ಕಲ್. ಇಲ್ಲಿ ನೋಡಿ ನಾವು ತೀರ್ಮಾನ ಮಾಡಿದ್ದು ನಡೆಯುತ್ತೆ.....'

'ಅವೇರ್–ಹೈದ್ರಾಬಾದ್ ಆಫೀಸಿನ ಸಭೆಯಲ್ಲಿ ಆದ ತೀರ್ಮಾನ ಸಾರ್ ಇದು. ಈ ಅರ್ಧ ರೂಪ್ಯಾಚಾರ್ಜ್‌ಮಾಡುವುದು.'

'ಅವೇರು–ಪಿವೇರ್ ಏನಿಲ್ಲ. ನೀವು ಫ್ರೀ ಟ್ರೀಟ್‌ಮೆಂಟ್ ಕೊಡ್ಬೇಕು, ಅಷ್ಟೇ'

–ಅಷ್ಟರಲ್ಲಿ ಒಳಗಿನಿಂದ ಕರೆ ಬಂದದ್ದರಿಂದ ದೊರೆ ಮನೆಯೊಳಗೆ ಹೋದರು. ನಾನು ಕ್ಲಿನಿಕ್‌ನತ್ತ ಹೆಜ್ಜೆ ಹಾಕಿದೆ.

ಒಬ್ಬಿಬ್ಬರನ್ನು ಬಿಟ್ಟು ಉಳಿದವರು ಯಾರೂ ಕಿರುಪ್ರಮಾಣದ 'ಬಿಲ್' ಕೊಡಲು ಅಡ್ಡಿ ಎತ್ತಿದ್ದಿಲ್ಲ. ನಾನು ನನ್ನ ಹಾದಿಯಲ್ಲೇ ಮುಂದುವರಿದೆ... ಸಂಜೆ ಬಸ್ಸಿಗೆ ದೊರೆ ದೊರೆಸಾನಿ ಸಹಿತ ಬಸ್ ಹತ್ತಿದರು. ಉಸ್ತುವಾರಿ ನರಸಿಂಹಲು ಬಂಗಲೆಯ ಬಾಗಿಲಿಗೆ ಬೀಗಜಡಿದು ಓಡೋಡಿ ಹೋಗಿ ಅವರ ಹಿಂದೆಯೇ ಬಸ್ ಏರಿದ. ನನ್ನ 'ಬಿಸ್ತರ' ಜಗಲಿಯ ಹೊರಗಿನ ಕಟ್ಟೆಯ ಮೇಲೆ ಎಸೆಯಲಾಗಿತ್ತು.

ಸಮಾಚಾರ ತಿಳಿದ ಕಂಪೌಂಡರ್ ದಾಸು 'ನನ್ನ' ಟ್ರಂಕ್– ಹಾಸಿಗೆಬಟ್ಟೆಗಳ ಸುರುಳಿಯನ್ನು ಎತ್ತಿಕೊಂಡು ಬಂದು ಕ್ಲಿನಿಕ್‌ನಲ್ಲಿರಿಸಿದ. ಮರುದಿನ ಊರಿನ ಹೊರವಲಯದಲ್ಲಿದ್ದ ಇನ್ನೊಂದು ಖಾಲಿ (ಸರಕಾರೀ) ಕಟ್ಟಡವನ್ನು ಅಷ್ಟಿಷ್ಟು ರಿಪೇರಿ ಮಾಡಿ ನನ್ನ ವಾಸವ್ಯಕ್ಕೆ ವ್ಯವಸ್ಥೆ ಮಾಡಿದ. ಕಡ್ತಾಲ್ ಪೇಟೆಗೆ ಹೋಗಿ ಅಡಿಗೆ ಊಟಕ್ಕೆ ಅಗತ್ಯವಾದ ಪಾತ್ರೆಗಳನ್ನು ತಂದು ಕೊಟ್ಟುದರಿಂದ ಅನ್ನ–ಸಾರು ಮಾಡಿಕೊಂಡು ಕೈ ಅಡಿಗೆಗೆ ಪ್ರಾರಂಭಿಸಿದೆ.

'ದೊರೆ ಮಾತಿಗೆ ಎದುರುತ್ತರ ಹೇಳಿದ ಈ ಡಾಕ್ಟರ ಗ್ರಹಚಾರ ಕೆಟ್ಟಿದೆ, ಇನ್ನೆಷ್ಟು ದಿನ ಇಲ್ಲಿಯೇ ಇರುತ್ತಾನೋ ಏನೋ' ಎಂದು ಅವರಿವರು ಮಾತಾಡಿಕೊಳ್ಳುತ್ತಿರುವುದಾಗಿ 'ದಾಸು' ವರದಿ ತಂದ!

ಯಸ್.ಎಸ್.ಎಲ್.ಸಿ ಪರೀಕ್ಷೆಯ 'ಸಪ್ಲಿ ಮೆಂಟ್ರ'ಗೆ ಮುಗಿಸಿಕೊಂಡ ಹಲವು ನಿರುದ್ಯೋಗಿ ಯುವಕರು ಜತೆಗೆ ಸೇರಿಕೊಂಡುದರಿಂದ ನಮ್ಮ ಗ್ರಾಮಪ್ರವಾಸ-ಗ್ರಾಮಗಳಿಂದಾಚೆಗೆ ಇರುವ ಲಂಬಾಣಿ ತಾಂಡಗಳನ್ನೂ ತಲಪಿತು. ಅಲ್ಲಿ ನಮಗೆ ಸ್ವಾಗತವೇನೂ ದೊರಕದಿದ್ದರೂ 'ಅವೇರು' ಆಸುಪತ್ರೆಯ ಸಮಾಚಾರ ತಲುಪಿತು. ಕೆಲವು ಲಂಬಾಣಿ ಮಹಿಳೆಯರು 'ಅವೇರು' ಸಂಘಕ್ಕೆ ಸೇರಿದರೆ ನಮಗೇನು ಲಾಭ ಸಿಗುತ್ತೆ ಎಂದು ಪ್ರಶ್ನಿಸಿದರು. ನಿಮ್ಮ ಮಕ್ಕಳನ್ನು' 'ಸಾಲೀ ಬರೀಲಿಕ್ಕೆ' ಯಾಕೆ ಕಳಿಸುತ್ತಿಲ್ಲ ಎಂದೂ ನಾನು ಮರು ಪ್ರಶ್ನೆ ಹಾಕಿದೆ. ನಮ್ಮ ತಾಂಡದಾಗೆ ಸಾಲೆ ಇಲ್ಲ. ಊರಾಗಿನ ಸಾಲಿಗೆ ನಾವು ಹೋಗಾಂಗಿಲ್ಲ- ಎಂಬ ಉತ್ತರ ಬಂತು.

'ತಾಂಡಾದಾಗೇ ಸಾಲೆ ಮಾಡಿದ್ರೆ ನಿಮ್ ಮಕ್ಕಳನ್ನು ಓದಿಸ್ಲಿಕ್ಕೆ ಕಳಿಸ್ತೀರಾ ಎಂದು ಕೇಳಿದ್ದಕ್ಕೆ ಅವರು 'ಸಾಲಿತೆರೀರಿ, ನೋಡೋಣು' ಎಂದರು. ನಮ್ಮ ಯುವಕ ಪಡೆ ದಿವಸದಲ್ಲಿ ಒಂದೆರಡು ಗಂಟೆಗಳಷ್ಟು ಹೊತ್ತು 'ಪಾಠ' ಮಾಡುವುದಕ್ಕೆ ಮುಂದಾದರು. ಸಿಲಾರ್‌ಪುರತಾಂಡ, ವರಾದಾರಂ ತಾಂಡ ಹೀಗೆ ಕೆಲವು ದೊಡ್ಡ ತಾಂಡಗಳಲ್ಲಿ ಶಾಲಾ ವಯಸ್ಸಿನ 25–30 ಮಕ್ಕಳನ್ನು ಸೇರಿಸಿ 'ಸಾಲಿ' ಪ್ರಾರಂಭ ಮಾಡಿದ್ದೂ ಆಯಿತು. ಮಕ್ಕಳು ತುಂಬಾ ಉತ್ಸಾಹದಿಂದ ಪಾಲ್ಗೊಂಡರು. ಅವರಿಗೆ ಒಂದನೇ ತರಗತಿಯ ಪಠ್ಯ ಪುಸ್ತಕವನ್ನು ನಾವು ಒದಗಿಸಿದಾಗ ಸ್ಲೇಟು, ಬಳಪಗಳನ್ನು ತಾವಾಗಿ ತಂದುಕೊಂಡರು. ಈ ನಡುವೆ ತಾವೂ ಕಲೀಬೇಕೆಂಬುದಾಗಿ ಕವಿರುಯಂತಹ ಕೆಲವು ಲಂಬಾಣಿ ಮಹಿಳೆಯರು ಅಪೇಕ್ಷಿಸಿದರು. ಕೆಲವು ದಿವಸ ಅವರಿಗೂ 'ಸಾಲಿ' ನಡೆಯಿತು –ಮುಖ್ಯವಾಗಿ ತಮ್ಮ ಹೆಸರನ್ನು 'ಸಹಿ' ಹಾಕುವಷ್ಟು ಮಟ್ಟಿಗೆ ಕಲಿತುಕೊಳ್ಳುವದು ಅವರಿಗೆ ಸಾಧ್ಯವಾಯಿತು. ಇದು ಸಾರ್ವಜನಿಕವಾಗಿ ಪ್ರಕಟವಾಗಲು ಮುಂದಿನ ಅಸೆಂಬ್ಲಿ ಇಲೆಕ್ಷನ್ ಅವಕಾಶವಾಯಿತು. ಚುನಾವಣೆಯ ಮತಪತ್ರ ಪಡೆದುಕೊಳ್ಳಲು ಬೆರಳಿಗೆ 'ಚುಕ್ಕಿ' ಹಾಕಿಸಿಕೊಂಡ ತರುವಾಯ 'ವೀರಮುದ್ರೆ' (ಎಡಹೆಬ್ಬೆಟ್ಟಿನ ಗುರುತು) ನೀಡಿ ಮತಪತ್ರ ಪಡೆಯುತ್ತಿದ್ದವರು ಈ ಬಾರಿ ಪೆನ್‌ನಿಂದ ಸಹಿ ಮಾಡಲು ಮುಂದಾದಾಗ ಅಲ್ಲಿನ ಆಫೀಸರುಗಳಿಗೆ ಆದ ಆಶ್ಚರ್ಯ ಅಷ್ಟಿಷ್ಟಲ್ಲ. ರುಕಲಿ ಬಾಯಿ ಹಿಂದೆ ತಾಂಡಾದ ಹತ್ತಿ ಪ್ಪತ್ತುಮಂದಿ 'ಲಂಬಾಣಮ್ಮ'ಗಳು ಸಹಿ ಹಾಕಿದ್ದು ಒಂದು ಬಹುದೊಡ್ಡ ಸುದ್ದಿಯಾಯಿತು!

ಹರಿಜನ-ಗಿರಿಜನ ಯುವಜನ ಸಮಾವೇಶ

ಹರಿಜನರಾಗಲಿ ಇತರ ಹಿಂದುಳಿದ ವರ್ಗದವರಾಗಲಿ-ಲಂಬಾಣಿ ಜನಗಳಾಗಲಿ ಪ್ರತ್ಯೇಕ ಪ್ರತ್ಯೇಕವಾಗಿರುತ್ತಿದ್ದರಲ್ಲದೆ ಎಂದೂ ಒಂದುಗೂಡಿರಲಿಲ್ಲ. ಯುವಕರ ಒಂದು ಸಮಾವೇಶವನ್ನು ಪಡಕ್ಕಲ್‌ನಲ್ಲಿ ಸಂಘಟಿಸಲು ಮುಂದಾದಾಗ ಈ ಸಮಾಚಾರ ತಿಳಿದು 'ದೊರೆ' ಗಳು ಗರಂ ಆದರು. ಒಂದುಬಾರಿ ಆಸ್ಪತ್ರೆಗೇ

ಬಂದು ನೇರವಾಗಿ ಆಕ್ಷೇಪಿಸಿದರು. 'ಡಾಕ್ಟರ್ ನೀವು ರೋಗಿಗಳಿಗೆ ಔಷಧಿಕೊಡಿ; ಅದನ್ನು ಬಿಟ್ಟು ಈ ಸಭೆ ಸಂಘಟನೆ ಅಂತ ಕೈಹಾಕುವುದು ಬೇಡ. ಅದು ನಿಮ್ಮ ಕೆಲಸವಲ್ಲ' ಎಂದರು.

ಈ ಮಾತಿನಿಂದ ನಮ್ಮ ಯುವಕ ಸೇನೆ ಇನ್ನಷ್ಟು ಉತ್ಸಾಹಿತರಾದರು. ಪಡಕ್ಕಲ್ ಸುತ್ತುಮುತ್ತಲ ತಾಂಡ ಹಾಗೂ ಹಳ್ಳಿಗಳಿಂದ ಜನಗಳು ಬಂದು ಸೇರಿ ಸಭೆ ನಡೆಸಿದರು. ಇದರಲ್ಲಿ ರಾಜಕೀಯದ ಒಂದು ಶಬ್ದವೂ ಬಾರದಂತೆ ಜಾಗ್ರತೆ ವಹಿಸಿ, ಕೇವಲ ಆರೋಗ್ಯ, ಶಿಕ್ಷಣ, ಉಪವೃತ್ತಿ (ವಕ್ರಾವಳ ಇತ್ಯಾದಿ) –ಹೀಗೆ 'ಅಸಂದಿಗ್ಧ ವಿಚಾರಗಳನ್ನೇ ಮಾತಾಡಲು ವ್ಯವಸ್ಥೆ ಮಾಡಿದ್ದಲ್ಲದೆ, ವಯಸ್ಕರಶಿಕ್ಷಣ ಇಲಾಖೆ, ಆರೋಗ್ಯ ಇಲಾಖೆ ಮೊದಲಾದ ಸರಕಾರೀ ಇಲಾಖೆಗಳ ತಾಲೂಕು ಮಟ್ಟದ ಅಧಿಕಾರಿಗಳನ್ನು ಬರಮಾಡಿ ಅವರಿಂದಲೇ ಭಾಷಣ ಮಾಡಿಸಿದೆ. 'ಅವೇರ್' ಥೇರಮನ್ನರು ಕೂಡಾ ಭಾಗವಹಿಸಿ ಕಾರ್ಯಕ್ರಮ ಯಶಸ್ವಿಯಾಯಿತು.

ಗಡೀಪಾರಿನ ಹುಕುಂ

ಈಗ 'ಪ್ರತಿಭಟನೆ' ಪೆದ್ದಪಟೇಲ್ ಅವರ ಸರದಿ. 'ತಿಂಗಳ ಕೊನೇ ತಾರಿಕು ಸಂಬಳ ತೆಗೆದುಕೊಂಡು ಹೈದ್ರಾಬಾದಿನಿಂದ ಸೀದಾ ನಿಮ್ಮೂರಿಗೆ ಹೋಗಿಬಿಡಿ– ನಿಮ್ಮ 'ವಸ್ತು' ಗಳನ್ನು ರೈಲ್ವೆಪಾರ್ಸೆಲ್ ಮಾಡಿ ಕಳಿಸ್ತೇವೆ' ಎಂಬುದಾಗಿ ತಮ್ಮ ಆಪ್ತನೊಬ್ಬನ ಮೂಲಕ ಹೇಳಿಕಳುಹಿಸಿದರು M.L.A. 'ರೋಗಿಗಳು ಎಲ್ಲಿತನಕ ಚಿಕಿತ್ಸೆಗೆ ಬರುತ್ತಾರೋ– ಅಲ್ಲಿತನಕ ಔಷಧೋಪಚಾರ ಮಾಡುತ್ತಿರುತ್ತೇನೆ. ಅಷ್ಟೇಅಲ್ಲದೆ 'ನಮ್ಮ ಖರ್ಚುವೆಚ್ಚಗಳ ಹಣವನ್ನು ಕೊಡುವುದು ನಿಮ್ಮ ದಣಿಗಳಲ್ಲ ಎಂಬುದಾಗಿ ನಿಮ್ಮ ದೊರೆಗೆ ನೆನಪಿರಲಿ' ಎಂದು ಎದುರುತ್ತರದ ಧ್ವನಿಯಲ್ಲಿ ಹೇಳಿದೆ.

ನಿಜ–ಎಂ.ಎಲ್.ಎ. ಸಾಹೇಬರಿಗೆ ಇದನ್ನು ಜ್ಞಾಪಿಸುವ ಅಗತ್ಯ ಬೀಳಲೇ ಇಲ್ಲ. ಮುಂದಿನ ವಿಧಾನಸಭೆಯ ಅಧಿವೇಶನದಲ್ಲಿ ಒಂದು ವಿಶೇಷ ಚರ್ಚೆಗೆ – ಅವಕಾಶ ಒದಗುವಂತೆ ಮಾಡಿಸಿಕೊಂಡರು. ವಿದೇಶೀದೇಣಿಗೆಯ ಹಣವನ್ನು ಈ ಅವೇರು ಜನಗಳು ದುರುಪಯೋಗ ಮಡುತ್ತಿದ್ದಾರೆ ಎಂದು ಆಪಾದನೆ ಮಾಡಿದರು.

ಚಿಕಿತ್ಸೆ ನೀಡುವ ಹೆಸರಿನಲ್ಲಿ ವಿದೇಶದಿಂದ ಹಣ ಬೇಡಿಕೊಂಡು ಬಂದು ಇಲ್ಲಿ ಮಜಾ ಮಾಡ್ತಾರೆ.... 'ಪಡಕ್ಕಲ್' ಡಾಕ್ಟರು ಒಂದು ಗುಳಿಗೆ ಕೊಟ್ಟರೂ ರೂಪಾಯಿ–ಎರಡು ರೂಪಾಯಿ ಬಡವರಿಂದ ವಸೂಲಿ ಮಾಡ್ತಾರೆ.... ಇದನ್ನು ಬಹಿಷ್ಕರಿಸಬೇಕು. ಅವೇರ್‌ನ ಬ್ಯಾಂಕ್ ಖಾತೆಗಳನ್ನು ಮುಟ್ಟುಗೋಲು ಹಾಕಬೇಕು; ಅವೇರಿನವರನ್ನು ಗಡೀಪಾರು ಮಾಡಬೇಕು ಇತ್ಯಾದಿ ಇತ್ಯಾದಿ ಭಾರೀ ಆವೇಶದ

ಮಾತುಗಳನ್ನು ಹೇಳಿದರು. ಅದನ್ನು ಗಂಭೀರವಾಗಿ ಪರಿಗಣಿಸಿದ ಸರಕಾರ ಒಂದು ವಿಚಾರಣಾ ಸಮಿತಿಯನ್ನು ನೇಮಕಮಾಡಿ, ಸ್ಥಳೀಯ ತನಿಖೆ ಮಾಡಿ ವರದಿ ನೀಡಲು ತೀರ್ಮಾನಿಸಿತು. ಸಮಿತಿ ಸದಸ್ಯರು ಪೋಲೀಸ್ ಬಲದೊಂದಿಗೆ ಪಡಕ್ಕಲ್ಲಿಗೂ ಬಂದರು. ಅವರೆದುರಿಗೇ ದಿನದ ಔಷಧಿಗೆ ಎಂಟಾಣೆ ಮಾತ್ರ ತೆಗೆದುಕೊಳ್ಳುವುದನ್ನು ಕಂಡರು.

ಅಷ್ಟೇ ಅಲ್ಲದೆ ಹಿಂದಿನ ಮೂರು–ನಾಲ್ಕು ದಿವಸಗಳ ಹಿಂದೆ ಚಿಕಿತ್ಸೆಗೆ ಬಂದಿದ್ದವರ ಕೈಯಲ್ಲಿದ್ದ ಅವರ ಬಳಿಯಿದ್ದ ರಸೀದಿಯನ್ನು ಸ್ವತಹಾ ನೋಡಿ, ಎಲ್ಲವನ್ನು ಯಥಾವತ್ ವರದಿ ಮಾಡಿದರು. ನನ್ನ ವಿದೇಶೀ ಶಿಕ್ಷಣದ ಸರ್ಟಿಫಿಕೇಟನ್ನು ಸಹ ನೋಡಿಕೊಂಡರು. 'ಇಷ್ಟೆಲ್ಲಾ ಓದಿಕೊಂಡವರು ಈ ಹಳ್ಳಿ ಕ್ಲಿನಿಕ್‌ನಲ್ಲಿ ಯಾಕೆ ಇದ್ದೀರಿ?' ಎಂದು ಕೂಡ ಪ್ರಶ್ನಿಸಿದರು.

'ನಾನು ಸ್ವಯಂಸೇವಾ ಪ್ರವೃತ್ತಿಯವನಾಗಿರುವುದರಿಂದ 'ಅವೇರ್' ಸಂಸ್ಥೆಯಲ್ಲಿ ಸೇರಿ ಗ್ರಾಮಾಭಿವೃದ್ಧಿ ಕಾರ್ಯಕ್ರಮಗಳನ್ನು ನಿರ್ವಹಿಸುವ ನಿಟ್ಟಿನಲ್ಲಿ ಕೆಲಸ ಮಾಡುತ್ತಿದ್ದೇನೆ' ಎಂದು ಹೇಳದ್ದಲ್ಲದೆ 'ಲಿಖಿತ' ರೂಪದಲ್ಲೂ ಬರೆದು ಕೊಟ್ಟೆ.... 'ಅವೇರ' ನ ಇನ್ನೂ ಎರಡು ಪ್ರಾಜೆಕ್ಟ್‌ಗಳನ್ನು ಪರಿಶೀಲಿಸಿ, ಸಮಿತಿ ನೀಡಿದ ವರದಿ– ಮುಂದೇನಾಯಿತೋ ಯಾರಿಗೂ ತಿಳಿಯದು! ಇದಕ್ಕೂ ಮುನ್ನ ಅಸೆಂಬ್ಲಿಯಲ್ಲಿ ಶಾಸಕ ಮಹಾಶಯರು ಕೂಗಾಡಿದ ಮರುದಿವಸವೇ ವಿಚಾರಣಾಸಮಿತಿಯನ್ನು ಸರಕಾರ ನೇಮಕ ಮಾಡಿದ ಸುದ್ದಿಯನ್ನು ಓದಿ–

'ಈ ವಿಚಾರಣಾಸಮಿತಿಯ ನೇಮಕವನ್ನು ನಾವು ಸ್ವಾಗತಿಸುತ್ತೇವೆ. ಘಟನಾವಳಿಗಳ ಸತ್ಯಾಸತ್ಯತೆ ಹೊರಬೀಳಲಿ' ಎಂದು ನಾವು ಜಾಹೀರಾತು ರೂಪದಲ್ಲಿ ಹೈದ್ರಾಬಾದಿನ ಎಲ್ಲಾ ಪ್ರಮುಖ ಪತ್ರಿಕೆಗಳಲ್ಲೂ ಪ್ರಕಟಿಸಿದ್ದೆವು!

'ತುಫಾನ್' ಬಾಧಿತರ ನೆರವಿಗೆ

ಮಚಲಿ ಪಟ್ಟಣದ ಸುತ್ತಾಮುತ್ತಲಿನ ಸುಮಾರು 150 ಗ್ರಾಮಗಳು, 1977ರ ಕೊನೆಯಲ್ಲಿ ಬಂಗಾಳಕೊಲ್ಲಿಯಲ್ಲಿ ಎದ್ದ ಭಾರೀ 'ತುಫಾನ್' ನಿಂದ ನೆಲಸಮವಾದವು. ಪಡಕ್ಕಲ್‌ನಿಂದ ಚಿಕಿತ್ಸಾ ಸಾಧನಗಳು ಹಾಗೂ ಪುನರ್ವಸತಿ ಕಲ್ಪಿಸುವ ಆಸಕ್ತಿಯಿಂದ ಲಂಬಾಣಿ ಜನರ ಗುಂಪಿನೊಂದಿಗೆ ಧಾವಿಸಿದೆವು. ಅಲ್ಲಲ್ಲಿ ಉರುಳಿ ಬಿದ್ದಿದ್ದ ಹೆಚ್ಚಿನ ವಸ್ತುಗಳನ್ನೇ ಬಳಸಿಕೊಂಡು ಲಂಬಾಣಿ ಸ್ವಯಂಸೇವಕರ ಗುಂಪು ಅತಿ ಶೀಘ್ರವಾಗಿ ಚಿಕ್ಕ ಚಿಕ್ಕ ಗುಡಿಸಲುಗಳನ್ನು ನಿರ್ಮಿಸಿ ನಿರಾಶ್ರಿತರಿಗೆ ಪುನರ್ವಸತಿ ಕಲ್ಪಿಸಿತು. ಮುಂದೆ ಡಾ.ಎಂ.ವಿ. ಭಟ್ ಹಾಗೂ ಇಂಜಿನಿಯರ್ ವಸಂತಕುಮಾರರ ನೇತೃತ್ವದಲ್ಲಿ ಅವೇರಿನ ಒಂದು ಶಾಖೆಯೇ ನಿರ್ಮಾಣಗೊಂಡು ಮೂರು ವರ್ಷಗಳ

ಕಾಲ ಸತತ ದುಡಿದು ಕೋಣ ಸೀಮೆಯ 13 ಹಳ್ಳಿಗಳನ್ನು ಸಂಪೂರ್ಣ ಪುನರ್ನಿರ್ಮಿಸಿ ದಾಖಲೆ ಸೃಷ್ಟಿಸಿದರು. ಚಿನ್ನಾಪುರದಲ್ಲಿ ಪಡಕ್ಕಲ್ ಮಾದರಿಯ ಅವೇರ್ ಆರೋಗ್ಯ ಕೇಂದ್ರವೂ ನಿರ್ಮಿತವಾಯಿತು.

ಮುಂದಿನ ವರ್ಷ ಪ್ರಕಾಶಂ ಜಿಲ್ಲೆಯ 'ಕಾವಲಿ' ಪರಿಸರದಲ್ಲಿ ಸಮುದ್ರ ತೀರದ ಮೀನುಗಾರರ ವಸತಿಗಳು ಬಿರುಗಾಳಿ–ಮಳೆಗಳ ಅನಾಹುತದಿಂದ ಜನ ನಿರಾಶ್ರಿತರಾದಾಗ, ಪಡಕ್ಕಲ್ ಗುಂಪು ಧಾವಿಸಿ ಅಲ್ಲಿಯೂ ಸಹಾಯಹಸ್ತ ಚಾಚಿ ನೆರವನ್ನು ಒದಗಿಸುವ ಕಾರ್ಯ ಪ್ರಾರಂಭಿಸಿದ ಮೇಲಂತೂ ಪಡಕ್ಕಲ್ ಗುಂಪಿಗೆ ಜನಪ್ರಿಯತೆ ಮತ್ತು ಕೀರ್ತಿ ಇನ್ನಷ್ಟು ವೃದ್ಧಿಸಿತು. ಕ್ರಮೇಣ ಈ ಸಮಾಚಾರ ಪಟ್ಟಣಗಳಿಗೂ ಹಬ್ಬಿ ಮೂರು ಜನ ಉತ್ಸಾಹಿ ಡಾಕ್ಟರಗಳು ಔಷಧಿ ಸಹಿತ ಪ್ರಾಜೆಕ್ಟನಲ್ಲಿ ಸೇವೆಸಲ್ಲಿಸಲು ಮುಂದೆ ಎಂದರು. ಅಲ್ಲದೆ ನಗರದ ಹಲವುಹಿರಿಯ ಡಾಕ್ಟರುಗಳು ವಾರಕ್ಕೊಮ್ಮೆ ಚಿನ್ನಾಪುರಕ್ಕೆ ಬಂದು ವಿಶೇಷ ನೆರವು ನೀಡಲು ಪ್ರಾರಂಭಿಸಿದರು.

ಇಲ್ಲಿನ ವ್ಯವಸ್ಥೆ ಸುಗಮವಾಗಿ ನಡೆಯಬಹುದೆಯ ಭರವಸೆ ಮೂಡಿದ ತುವಾಯ ನಾನು ನಮ್ಮ ಮೂಲಸ್ಥಾನಕ್ಕೆ (ಪಡಕ್ಕಲ್ಲಿದೆ) ಹಿಂದಿರುಗಿದೆ.

ನನಸಾಯಿತು ಗರೀಬರ ಕನಸು

ಇದೇ ಸಂದರ್ಭದಲ್ಲಿ ಜರುಗಿದ ಸಾರ್ವತ್ರಿಕ ಚುನಾವಣೆಯಲ್ಲಿ 'ದೊರೆ' ಗುಂಪಿನ ಉಮೇದ್ವಾರರು ಭಾರೀ ಮುಖಭಂಗ ಅನುಭವಿಸಿದರು. ಚಾಣಾಕ್ಷರಾದ ಎಂ.ವಿ ಪೆದ್ದ ಪಟೇಲ್– ವಿಧಾನಸಭೆಯ ಹಂಗೇಬೇಡವೆಂದುಕೊಂಡು ರಾಜ್ಯಸಭೆಯ ಸದಸ್ಯ ಗಳಿಸಿ ಶಾಶ್ವತವಾಗಿ ದೆಹಲಿಯನ್ನು ಸೇರಿಕೊಂಡರು!

ಚುನಾವಣೆ ಬಂದಾಗಲೆಲ್ಲ 'ಪೋಲಿಂಗ್ ಬೂತ್' ಆಗಿ ಪಂಚಾಯತ್ ಕಟ್ಟಡವನ್ನು ಬಳಸುತ್ತಿದ್ದುದರಿಂದ ಪ್ರತಿಬಾರಿಯೂ ಚಿಕಿತ್ಸಾವ್ಯವಸ್ಥೆಯನ್ನು ತಾತ್ಕಾಲಿಕವಾಗಿ ರಸ್ತೆಬದಿಯಲ್ಲಿ ನಡೆಸಬೇಕಾಗಿ ಬರುತ್ತಿದ್ದುದನ್ನು ಕೊನೆಗೊಳಿಸಲು ಸ್ವಂತ ಕಟ್ಟಡದ ಅವಶ್ಯಕತೆಯನ್ನು ಹೈದ್ರಾಬಾದ್‌ನ ಆಡಳಿತದ ಗಮನಕ್ಕೆ ತಂದೆ. ಅಲ್ಲದೆ ನೋವಿಬ್‌ದ ಸಂಸ್ಥೆಗೂ ದಾನಿಗಳಿಗೂ ಮನವರಿಕೆ ಮಡಿಕೊಟ್ಟೆ. ಮುಂದೆ 5 ಎಕರೆ ನೆಲವನ್ನು ಆಸ್ಪತ್ರೆಯ ಹೆಸರಲ್ಲಿ ರಿಜಿಸ್ಟರ ಮಾಡಿಸಿದರೆ ಕಟ್ಟಡ ನಿರ್ಮಿಸಲು ನೆರವು ನೀಡುವ ಆಶ್ವಾಸನೆ ಕೂಡಾ ದೊರಕಿತು. ಸ್ಥಳೀಯ ಸಜ್ಜನ ಮಹಾಶಯರೊಬ್ಬರನ್ನು ವಿನಂತಿಸಿಕೊಂಡು 5 ಎಕರೆ ನೆಲವನ್ನು ಆಸ್ಪತ್ರೆಗಾಗಿ ಕೈವಶ ಮಾಡಿಕೊಳ್ಳಲಾಯಿತು. ನಿಧಾನವಾಗಿ ಕಟ್ಟಡ ಮೇಲಕ್ಕೇಳಲು ಮೊದಲಾಯಿತು.

'ಪಡಕ್ಕಲ್ ಕ್ಲಿನಿಕ್'ನಲ್ಲಿಯೂ ಕೆಲಸ ಹೆಚ್ಚುತ್ತಿತ್ತು. ದೂರದೂರದ ಹಳ್ಳಿಗಳಿಂದ ಕೂಡಾ ರೋಗಿಗಳು ಬರುತ್ತಿದ್ದರು. ಸಮಾಜವಿಕಾಸ ಕಾರ್ಯಕ್ರಮ ಬಿಡುವಿಲ್ಲದೆ

ಸಾಗುತ್ತಿತ್ತು. ಹೀಗಾಗಿ, ಚಿತ್ತಾಪುರದಲ್ಲಿದ್ದ ನಮ್ಮ 'ಮೈಸೂರು ದವಾಖಾನೆ'ಯನ್ನು ಮುಚ್ಚಿ ಸಬಿತಾ ಮತ್ತು ಮಕ್ಕಳು ಪಡಕ್ಕಲ್ಲಿಗೇ ಬಂದರು. ಮಕ್ಕಳು ಶಿಕ್ಷಣಕ್ಕಾಗಿ ಬೇರೆ ಬೇರೆ ಕಡೆಗೆ ಹೋಗಬೇಕಾಗಿ ಬಂದಿತ್ತು. ಮಗಳು ಗೌರಿ ಹೈದ್ರಾಬಾದಿನ ನೃಪತುಂಗ ಕಾಲೇಜಿಗೆ ಸೇರಿದಳು. ಮಗ ನಾರಾಯಣ ಬಳ್ಳಾರಿಯಲ್ಲಿ ಹಾಸ್ಟೆಲಲ್ಲಿದ್ದುಕೊಂಡು ಹೈಸ್ಕೂಲ್ ಓದಿದ. ಪಡಕ್ಕಲ್‌ನಲ್ಲಿ ವಾಸಕ್ಕೆ ನಾವು ಮತ್ತೆ 'ದೊರೆಬಂಗಲೆ' ಗೆ ಹೋದೆವು. ತಿಂಗಳಿಗೆ 100 ರೂಪಾಯ ಬಾಡಿಗೆಗೆ ಒಂದು ಭಾಗವನ್ನು ನಮಗೆ ಬಿಟ್ಟುಕೊಟ್ಟರು. ಈಗೀಗ ದೊರೆಸಾಹೇಬ ಪಡಕ್ಕಲ್ಲಿಗೆ ಬರುವುದು ಕಮ್ಮಿಯಾಯಿತು. ಎಲ್ಲ ವ್ಯವಹಾರ ವ್ಯವಸಾಯಗಳನ್ನು ಉಸ್ತುವಾರಿಯ ಮೂಲಕವೇ ಸಾಗಿಸುತ್ತಿದ್ದರು.

ಗರ್ಭಿಣಿಯರು, ಬಾಣಂತಿಯರು ಹಾಗೂ ಮಕ್ಕಳು ಈಗ 'ಡಾಕ್ಟರಮ್ಮ' ಬಂದದ್ದರಿಂದ ಚಿಕಿತ್ಸೆಗೆ ಹೆಚ್ಚು ಸಂಖ್ಯೆಯಲ್ಲಿ ಬರತೊಡಗಿದರು. ಪ್ರತಿಯೊಂದು ಹಳ್ಳಿಯಲ್ಲಿಯೂ ಓರ್ವ ಆರೋಗ್ಯಕಾರ್ಯಕರ್ತೆಯನ್ನು ತರಬೇತಿನೀಡಿ ನೇಮಿಸಿದ್ದೂ ಆಯಿತು. ಅವರಿಗೆ ಅತ್ಯಲ್ಪ ಸಂಭಾವನೆ ನೀಡಲಾಯಿತು. ಪರಿಸ್ಥಿತಿ ಸುಧಾರಿಸತೊಡಗಿತು. ತರಬೇತಿ ಕಾರ್ಯಕ್ರಮವನ್ನು ಲಂಬಾಣಿತಾಂಡಕ್ಕೂ ವಿಸ್ತರಿಸಿದೆವು. ಅವೇರಿನ ಇತರ ಪ್ರಾಜೆಕ್ಟಗಳಿಂದಲೂ ಮಹಿಳಾ ಪ್ರತಿನಿಧಿಗಳು ಬಂದು ತರಬೇತಿ ಪಡೆದುಹೋಗುವುದು ಕೂಡ ಪ್ರಾರಂಭವಾಯಿತು.

ಲಂಬಾಣಿ ಜನಾಂಗದ ಓರ್ವ ಮುಖಂಡನೂ ಉತ್ತಮ ಕಾರ್ಯಕರ್ತನೂ ಆದ ಬಕ್ಯಾ ನಾಯಕನಿಗೆ ಕಡ್ತಾಲ್‌ನಲ್ಲಿ ನಡುಹಗಲೇ 'ಪಟೇಲ್‌ವಾಳು' ಯಾವುದೋ ನೆಪ ತೆಗೆದು ತಮ್ಮ ಗೂಂಡಾಗಳಿಂದ ಹೊಡೆದು ರಕ್ತಹರಿಯುವಂತೆ ಗಾಯಮಾಡಿ ಓಡಿ ಹೋದರು. ಸುದ್ದಿತಿಳಿದ ಇತರ ತಾಂಡಗಳ ನಾಯಕರು ಬಂದು ಮೊದಲು ಬಕ್ಯಾನನ್ನು ತಾಂಡಕ್ಕೆ ಸಾಗಿಸಿ, 'ಜಡೀಬೂಟಿ' (ವನಸ್ಪತಿ) ಔಷಧಿ ರೂಡಿಸಿದರು.

ಮರುದಿನ ತಲ್ಪಕುರ್ತಿ ತಾಲೂಕಿನ ಪ್ರಮುಖ ತಾಂಡಗಳಿಂದ ನಾಯಕರು ಬಕ್ಯಾತಾಂಡಕ್ಕೆ ಬಂದು ಸೇರಿ ಸುದೀರ್ಘ ಚರ್ಚೆ ನಡೆಸಿದರು 'ದೊರೆಗಳಿಗೆ ಪಾಠ ಕಲಿಸಿಯೇ ಬಿಡಬೇಕು' ಎಂದು ಒಮ್ಮತದ ತೀರ್ಮಾನಕ್ಕೆ ಬಂದರು. ಇನ್ನೆರಡು ದಿನಗಳಲ್ಲಿ 'ಮಾರಾಮಾರಿ' ನಡೆಸುವ ನಿರ್ಧಾರ ಮಾಡಿ ಚದುರುವ ಮೊದಲು, ಹಿರಿಯ ಲಂಬಾಣಿ ನಾಯಕ ಸಕ್ರೂ ನಾಯಕನ ಸಲಹೆಯಂತೆ 'ಒಂದು ಮಾತು ಅವರಿಗೂ ಹೇಳಿ ಬಿಡೋಣ' ಎಂದು ಪಡಕ್ಕಲ್‌ಗೆ ನಡುರಾತ್ರಿಯಲ್ಲಿ ಆರೇಳು ಜನರ ಒಂದು ಶಿಷ್ಟಮಂಡಳಿ ಬಂತು. ಅವರ ಎಲ್ಲಾ ಮಾತುಗಳನ್ನು ಸಾವಧಾನದಿಂದ ಕೇಳಿ, 'ಮುಂದಿನ ಗತಿ ಏನು ಎಂಬುದನ್ನು ಯೋಚಿಸಿದ್ದೀರಾ' ಎಂದು ಪ್ರಶ್ನಿಸಿದೆ. 'ಅದೇನೇ ಆಗಲಿ-ಒಂದುಕೈ ನೋಡಿಯೇ ಬಿಡೋಣ... ಪ್ರತಿಯೊಂದು ದೊರೆ ಪಟೇಲು ಕುಟುಂಬದ ಒಬ್ಬನಿಗೆ ಕೈ

ಕಾಲು ಮುರಿದು ಹಾಕಿಯೇ ತೀರುತ್ತೇವೆ' ಎಂಬ ಆವೇಶದ ಮಾತೂ ಬಂತು. ನಾನು ಇನ್ನಷ್ಟು ಶಾಂತ ಸ್ವರದಲ್ಲಿ ಕೇಳಿದೆ 'ಮುಂದೇನಾಗುತ್ತೇ?' ಅದಕ್ಕೆ ಉತ್ತರ ಬರಲಿಲ್ಲ. ನಾನೇ ಪ್ರಶ್ನೆಗೆ ಉತ್ತರ ಕೊಟ್ಟೆ: ದೊರೆಗಳು ಪೋಲೀಸರನ್ನು ಕರೆದುಕೊಂಡು ಬರುತ್ತಾರೆ. ತಾಂಡತಾಂಡಗಳಲ್ಲಿ ನುಗ್ಗಿ ಹೊಡೆದು-ಬಡಿದು ಅರೆಜೀವ ಮಾಡ್ತಾರೆ, ಮಕ್ಕಳನ್ನು ಬೂಟುಗಾಲಿನಿಂದ ತುಳಿಯುತ್ತಾರೆ... ಹೆಣ್ಣ ಮಕ್ಕಳನ್ನು ಹಾಳು ಮಾಡುತ್ತಾರೆ, ಇಡೀ ತಾಂಡವನ್ನೇ ನರಕ ಮಾಡುತ್ತಾರೆ. ನೀವು ರಕ್ಷಣೆಗಾಗಿ ಯಾರ ಬಳಿಗೆ ಹೋಗ್ತೀರಿ' ಕೋರ್ಟಿಗೆ ಹೋಗ್ತೀರಾ? - ದೊರೆಗಳು ಹಣ ಅಧಿಕಾರ ಎಲ್ಲವನ್ನು ಬಳಸಿಕೊಂಡು ನ್ಯಾಯವನ್ನು ಖರೀದು ಮಾಡುತ್ತಾರೆ. ನೀವೆಲ್ಲ ಜೈಲಿಗೆ ಹೋಗ್ತೀರಿ, ನಿಮ್ಮ ಮಕ್ಕಳು ಮರಿ ಅನಾಥರಾಗುತ್ತಾರೆ... ಹೆಂಗಸರು ಬಿಕ್ಷೆ ಬೇಡಬೇಕಾಗುತ್ತದೆ.... ಬೇಕೇನು ಇದೆಲ್ಲಾ- ಹೇಳಿ'. ಎಂದು ಹೇಳಿದೆ

'ಹಾಗಾದರೆ ನಾವೀಗ ಏನು ಮಾಡಬೇಕು ಅಂತೀರಿ?' ಎಂಬ ಪ್ರಶ್ನೆ ಇಟ್ಟರು. ನಾನು ಅಹಿಂಸಾತ್ಮಕ ಪ್ರತಿಭಟನೆಯ ಮಾರ್ಗವನ್ನು ಸೂಚಿಸಿದೆ.

ನಾಲ್ಕು ದಿನಗಳ ತರುವಾಯ, ಕಲ್ವಕುರ್ತಿ ಪಟ್ಟಣಕ್ಕೆ ಸಮೀಪದಲ್ಲಿರುವ ಒಂದು ಮೈದಾನದಲ್ಲಿ ಗಿರಿಜನ ಹರಿಜನ ಮೈಕ್' ಮಹಾಸಭೆ ನಡೆಯಿತು. ತಾಂಡ ತಾಂಡಗಳಿಂದ ತಮಟೆ ಬಾರಿಸಿಕೊಂಡು ಹಾಡು ಹಾಡುತ್ತ ಬಂಡಿಗಟ್ಟಲೆ ಲಂಬಾಣಿ ಜನರು-ಮಕ್ಕಳು ಮರಿ ಸಹಿತ ಮಹಿಳೆಯರು, ಪುರುಷರು ಸಾವಿರ ಸಂಖ್ಯೆಯಲ್ಲಿ ಮೈಕ್ ಮಹಾಸಭೆಗೆ ಜಮೆಯಾದರು. ಕೊಂಬು ಕಹಳೆ ಊದುತ್ತ ಡಪ್ಪು ಬಡಿಯುತ್ತಾ ಹರಿಜನ ಸಮುದಾಯವು ಕೂಡ ಉತ್ಸಾಹದಿಂದ ಬಂದು ಸೇರಿತು. ಸೇರಿದ ಭಾರೀ ಜನಸ್ತೋಮ, ಅಭೂತ ಪೂರ್ವವೆನ್ನಿಸಿತು.

ಮೈಕ್ ಹಿಡಿದುಕೊಂಡು ಬಲಾಢ್ಯರು ದಣಿಗಳು ದೊರಗಳು, ಮಾಡುತ್ತಿದ್ದ ಅನ್ಯಾಯದ ವಿರುದ್ಧ ಧ್ವನಿ ಎತ್ತರಿಸಿ ಉತ್ಸಾಹದ ಭಾಷಣಮಾಡಿ, 'ಹರಿಜನ ಗಿರಿಜನರ ಮೇಲಾಗುವ ಅತ್ಯಾಚಾರ-ಅನಾಚಾರವನ್ನು ಇನ್ನು ಸಹಿಸಿಕೊಂಡು ಸುಮ್ಮನಿರುವುದಕ್ಕೆ ಸಾಧ್ಯವಿಲ್ಲ' ಎಂದು ಸ್ಪಷ್ಟ ಸಂದೇಶವನ್ನು ಜಾಹೀರು ಪಡಿಸಿದರು. ಕೊನೆಯಲ್ಲಿ ಬಕ್ಯಾ ನಾಯಕ ಸ್ವತಃ ತನಗಾದ ಅನ್ಯಾಯ ಕೇವಲ ಒಬ್ಬ ವ್ಯಕ್ತಿಗಾದದ್ದಲ್ಲ. ಇಡೀ ಬಡ ಜನರಿಗೆ ಮುಖ್ಯವಾಗಿ ಗಿರಿಜನ-ಹರಿಜನ ವರ್ಗಕ್ಕೆ ಆದ ಅನ್ಯಾಯ- ಅಪಮಾನ. ನಾವೆಲ್ಲರೂ ಒಕ್ಕಟ್ಟಿನಿಂದ ಇದ್ದರೆ ಇನ್ನೊಮ್ಮೆ ಇನ್ನೆಂದೂ ಇಂತಹ ಮಸಲತ್ತಿಗೆ ದೊರೆಗಳು ಇಳಿಯಲಿಕಲ್ಲ ಎಂದು ಹೇಳಿ ಕೈಮುಗಿದ.

ಅಷ್ಟರಲ್ಲಿ ಕತ್ತಲು ಕವಿಯಿತು. ತಮಟೆ ಡೊಳ್ಳು, ಡಪ್ಪು, ಕೊಂಬು, ಕಹಳೆ. ಏಕಕಾಲಕ್ಕೆ ಮೊಳಗಿದವು. ತಕ್ಷಣ ಕೈಯ್ಯಲ್ಲೊಂದು ದೀವಟಿಗೆಯನ್ನು ಹಿಡಿಮಕೊಂಡು

ಸಾಲುಸಾಲಾಗಿ ಮೈಲುದ್ದದ ಮೆರವಣಿಗೆ ಸಾಗಿತು. ಕಲ್ವಕರ್ತಿಯ ಜನ ನಿಬ್ಬೆರಗಾಗಿ ನೋಡುತ್ತಿದ್ದಾ ಹಾಗೇ-

'ನಿನ್ನ ಕೋ ಪಟೇಲಾ ನಿನ್ನ ಕೋ'

(ಎಣಿಸಿ ಕೋ ಪಟೇಲ್, ಎಣಿಸಿ ಕೋ)

ಎಂಬ ಉದ್ಘೋಷ ಮುಗಿಲು ಮುಟ್ಟಿತು.

'ನಮ್ಮ ತಂಟೆಗೆ ಬಂದರೆ ಹುಶ್ಯಾರ್- ಎಂಬ ಬೆಂಕಿ ಸಂದೇಶವನ್ನು ದೊರೆ ಸಮುದಾಯಕ್ಕೆ ನೀಡುವುದರೊಂದಿಗೆ ಕಾರ್ಯಕ್ರಮ ಮುಕ್ತಾಯವಾಯಿತು.

ಪಡಕ್ಕಲ್‌ನ ಅವೇರ್ ಆಸ್ಪತ್ರೆಯನ್ನು ಸ್ವಯಮಾಧರಿತ ಘಟಕವನ್ನಾಗಿ ಮಾಡುವ ಅಪೇಕ್ಷೆಯಿಂದ ಒಂದು ಸಲಹಾ ಪತ್ರವನ್ನು ತಯಾರಿಸಿ ಅದರಲ್ಲಿ ೭ ಜನ ಸದಸ್ಯರಿದ್ದು ಆವರ್ತವಾಗಿ ಹರಿಜನರ-ಗಿರಿಜನರ ಮಹಾಸಭೆಯ ಅಧ್ಯಕ್ಷರು ಘಟಕದ ಅಧ್ಯಕ್ಷರಾಗಿಯೂ ಆಸ್ಪತ್ರೆಯ ವೈದ್ಯಾಧಿಕಾರಿ ಕಾರ್ಯದರ್ಶಿಯಾಗಿಯೂ ಇರುವಂತೆ ಸೂಚಿಸಲಾಗಿತ್ತು. ನೋವಿಬ್‌ನ ಅಪೇಕ್ಷೆಯಂತೆ ಹಲವು ಆರ್ಥಿಕ ಉತ್ಪತ್ತಿಯ ಪ್ರಾಜೆಕ್ಟಗಳನ್ನೂ ತಯಾರಿಸಿ ಸೇರಿಸಲಾಗಿತ್ತು. 'ಅವೇರ್ ಛೇರಮನ್' ಸ್ಥಾಪಕರು ಮತ್ತು ಗೌರವ ಅಧ್ಯಕ್ಷರು ಎಂದೂ ಸೂಚಿಸಿದೆ. ಟಿಪ್ಪಣಿ ರೂಪದ ಈ ಸಂದೇಶದ ಪ್ರತಿಯನ್ನು ಹೈದ್ರಾಬಾದದ ಕಾರ್ಯಾಲಯಕ್ಕೆ ಕಳಿಸಿಯೂ ಇದ್ದೆ. ಆದರೆ ಅದು ಫಲಪ್ರದವಾಗಲಿಲ್ಲ.

ಹರಿಜನ–ಗಿರಿಜನರ ಆಸ್ಪತ್ರೆ ಉದ್ಘಾಟನೆಯಾಯಿತು

ಪಡಕ್ಕಲ್‌ನ ಹಿರಿಯರೆಡ್ಡಿ ಒಬ್ಬರು 5 ವರ್ಷಗಳ ಹಿಂದೆ ಒಂದು ರಾತ್ರೆ ಇದ್ದಕ್ಕಿದ್ದ ಹಾಗೆ ತೀವ್ರ ವಾಂತಿ ಭೇದಿಯಿಂದ ನರಳಿ ನಿಧನರಾಗಿದ್ದರು. ಯಾವುದೇ ವಿಧವಾದ ಚಿಕಿತ್ಸಾಸೌಲಭ್ಯ ಇರಲಿಲ್ಲ ಎಂಬುದರಿಂದ ಇಲ್ಲಿ ಒಂದು ಆಸ್ಪತ್ರೆ ಇರಬೇಕೆಂಬ ಅಭಿಪ್ರಾಯ ಮೂಡಿತು. ಅದರ ಪರಿಣಾಮವೇ ಪಂಚಾಯತಿ ಕಟ್ಟಡದಲ್ಲಿ ಪ್ರಾರಂಭವಾದ ಅವೇರ್‌ನ ದವಾಖಾನೆ. (ಪಂಚಾಯತ್ ಸಮಿತಿ 'ಸೂಪರ್ ಸೀಡ್' ಆಗಿತ್ತು) ಇದೀಗ ಪಡಕ್ಕಲ್‌ನಿಂದ ಕೂಗಳತೆಯ ಅಂತರದಲ್ಲಿ ಪೆದ್ದೂರಿನಲ್ಲಿ ಸುಸಜ್ಜಿತ ಚಿಕಿತ್ಸಾಲಯ ಸಿದ್ಧವಾಯಿತು. ಉದ್ಘಾಟನೆಗೆ ಸುತ್ತುಮುತ್ತಲ ಹತ್ತಾರು ಗ್ರಾಮಗಳಿಂದ ಹಾಗೂ ಎಲ್ಲಾ ಲಂಬಾಣಿ ತಾಂಡಗಳಿಂದಲೂ ಜನರು ತಂಡೋಪತಂಡವಾಗಿ ಬಂದು ಸೇರಿದರು. ಅವೇರಿನ ಇತರ 8–10 ಪ್ರಾಜೆಕ್ಟ್‌ಗಳಿಂದ ಖಮ್ಮಂ, ಕೃಷ್ಣಾ, ನೆಲ್ಲೂರು, ನಲಗೊಂಡಾ ಜಿಲ್ಲೆಗಳಿಂದ ಲಾರಿಗಟ್ಟಲೆ 'ಬಡವರು'

ಬಂದು ಜಮಾಯಿಸಿದರು. ನೋವಿಬ್ ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ನೆದರ್ ಲ್ಯಾಂಡ್ಸ್ ನಿಂದ ಸ್ವತಹ ಆಗಮಿಸಿದ್ದರು. ಜನಜಂಗುಳಿಯಿಂದ ತಾನೇ ತಾನಾಗಿ ಹೊರ ಹೊಮ್ಮಿದ ಆನಂದೋತ್ಸಾಹ, ತಮಟೇ, ಡೋಲು, ಕೊಂಬು, ಕಹಳೆಗಳ ಬಾಜನದೊಂದಿಗೆ ಹಾಡು–ನೃತ್ಯ–ಗೀತಗಳ ಸಂಭ್ರಮದ ಮಂಟಪವಾಯಿತು. ಮೊದಲಬಾರಿಗೆ ದಲಿತರು, ಹಿಂದುಳಿದವರು, ಆದಿವಾಸಿಗಳು, ವನವಾಸಿಗಳು, ಗುಡ್ಡಗಾಡು ಜನರು ಬಡವರ್ಗದ ಜನಸಮುದಾಯ ತಮ್ಮದೇ ಆದ ಒಂದು 'ಸ್ವಂತ' ಆಸ್ಪತ್ರೆ ಪ್ರಾರಂಭವಾದ ಸಂತೋಷದಿಂದ ಮೆರೆದರು.

ನೆದರ್ ಲ್ಯಾಂಡ್ಸ್‌ರಲ್ಲಿ ಅಭಿವೃದ್ಧಿ ಆಯೋಗದ ಸಮಾವೇಶ

ಅಭಿವೃದ್ಧಿಕಾರ್ಯಕ್ರಮ ನೆರವು ಪಡೆಯುತ್ತಿರುವ ಸ್ವಯಂಸೇವಾಸಂಸ್ಥೆಗಳು ಹಾಗೂ ಆರ್ಥಿಕ ನೆರವು ನೀಡುವ ಸಂಸ್ಥೆಗಳ ನಡುವೆ ನೇರ ಸಂವಾದ ನಡೆಯುವ 'ಕಮೀಶನ್ ಆಫ್ ಡಯಲಾಗ್' ಆಯೋಗದ ಅಧಿವೇಶನದಲ್ಲಿ ಭಾಗವಹಿಸುವಂತೆ ಬಂದ ಆಹ್ವಾನವನ್ನು ಸ್ವೀಕರಿಸಿ ನೆದರ್‌ಲ್ಯಾಂಡ್ಸ್ 'ದಿಗೇಗ್' ಸಮಾವೇಶದಲ್ಲಿ ಪಾಲ್ಗೊಂಡು ಬಂದ ನಂತರ ಅವೇರ ಆಸ್ಪತ್ರೆಯ ಮುಂದಿನ ದಿನಗಳ ಕುರಿತು ಚಿಂತನ ಮಂಥನ ನಡೆಸಿದೆ. ಆರ್ಥಿಕ ವಿಚಾರಗಳಲ್ಲಿ ತಜ್ಞರನ್ನೂ, ಅನುಭವಗಳಿಸಿದ ಹಿರಿಯರನ್ನಷ್ಟೇ ಅಲ್ಲದೆ ಗ್ರಾಮೀಣ ಆರೋಗ್ಯ ಕಾರ್ಯಕ್ರಮಗಳಲ್ಲಿ ನಿರತವಾಗಿದ್ದ ಕೆಲವು ಸ್ವಯಂಸೇವಾಸಂಸ್ಥೆಗಳನ್ನೂ ಪ್ರತ್ಯಕ್ಷ ಸಂದರ್ಶಿಸಿ ಚರ್ಚಿಸಿದೆ.

ಆರ್ಥಿಕನೆರವು ಮುಂದಿನ 3 ವರ್ಷಗಳಲ್ಲಿ ಹಂತ ಹಂತವಾಗಿ ಕಮ್ಮಿ ಕಮ್ಮಿಯಾಗಿ 4ನೇ ವರ್ಷದ ನಂತರ ಸಂಪೂರ್ಣ ನಿಂತುಹೋಗುವುದು ಕ್ರಮ. ಹೀಗಾಗಿ ಬೆಳೆಯುತ್ತಿರುವ ಆಸ್ಪತ್ರೆಯ ಕಾರ್ಯಕ್ರಮಗಳನ್ನು ಹೊಂದಿಕೊಂಡು ಹೆಚ್ಚುತ್ತಿರುವ ಖರ್ಚು ವೆಚ್ಚಗಳನ್ನು ಸರಿತೂಗಿಸಿಕೊಂಡು ಅತ್ಯಂತ ಕಡಿಮೆ ಶುಲ್ಕದ ಸೇವಾನಿರ್ಧಾರವನ್ನು ಮುಂದುವರಿಸುವುದಕ್ಕೂ ಹೊಂದಾಣಿಕೆ ಬರುವಂತೆ ಕಾರ್ಯಕ್ರಮವನ್ನು ರೂಪಿಸುವುದು ಅನಿವಾರ್ಯವಾಯಿತು.

ಮೊದಲ ಹೆಜ್ಜೆಯಾಗಿ ಆಸ್ಪತ್ರೆ, ಸ್ವಯಂ ಆಡಳಿತದ ಅರ್ಥಾತ್ ಅವೇರ್‌ನಿಂದ ವಿಕೇಂದ್ರೀಕೃತ ವ್ಯವಸ್ಥೆಗೆ ಅಗತ್ಯವಾದ ವಿಧಿವಿಧಾನಗಳನ್ನು ರೂಪಿಸಿದೆ. ಅದೆಲ್ಲವನ್ನು ಸಮರ್ಪಕವಾದ ಚೌಕಟ್ಟಿನಲ್ಲಿ ಸಿದ್ಧಪಡಿಸಿದೆ. ಆಸ್ಪತ್ರೆಗೆ ಪ್ರತಿವರ್ಷವೂ ಅಗತ್ಯವಿರುವ ನಿರ್ವಹಣಾ ಹಣ ಸಂಗ್ರಹವಾಗುವಂತಹ ಕೆಲವು 'ಆದಾಯಪರ' ಗ್ರಾಮೀಣ ಕಾರ್ಯಕ್ರಮಗಳನ್ನು ರೂಪಿಸಿದೆ. (ಕುರಿಸಾಕಣೆ, ಕೋಳಿಸಾಕಣೆ, ರೇಶ್ಮೆ ವ್ಯವಸಾಯ, ತೋಟಗಾರಿಕೆ ಮತ್ತು ಹೈನುಗಾರಿಕೆ ಇತ್ಯಾದಿ).

ಸುಮಾರು ೬ ವರ್ಷಗಳ ಹಿಂದೆ ಪಡಕ್ಕಲ್‌ನ ಗ್ರಾಮಪಂಚಾಯತಿ ಕಟ್ಟಡದ ಒಂದು ಚಿಕ್ಕ ಕೊಠಡಿಯಲ್ಲಿ ಅವೇರ್ ಕ್ಲಿನಿಕ್‌ನ್ನು ಪ್ರಾರಂಭಿಸಿದ ಗಿರಿಜನರ-ಹರಿಜನ ಮತ್ತಿತರ ಬಡಜನರ ಸಮಗ್ರ ವಿಕಾಸದ ಹಾದಿಯಲ್ಲಿ ದಿಟ್ಟ ಹೆಜ್ಜೆಗಳನ್ನಿಟ್ಟುದಲ್ಲದೆ ಈಗ ಅವೇರ್ ಸಾಮಾಜಿಕ ಆರೋಗ್ಯ ಕೇಂದ್ರವು ಭದ್ರಬುನಾದಿಯೊಂದಿಗೆ ತಲೆ ಎತ್ತಿ ನಿಂತಿದ್ದು ಪ್ರಗತಿ ಪಥದತ್ತ ಸಾಗುವುದೆಂಬ ಭರವಸೆಯೊಂದಿಗೆ, ಕರ್ನಾಟಕಕ್ಕೆ ಮರಳಲು ಮನಸ್ಸು ಮಾಡಿ ಬೆಂಗಳೂರಿಗೆ ಹಿಂದಿರುಗಿದೆ.

* * *

೨

ದಟ್ಟಡವಿಯ ನಿವಾಸಿಗಳಿಗೂ ಚಿಕಿತ್ಸಾಸೌಲಭ್ಯ 'ಜೀವನಸ್ರವಂತಿ' ಪ್ರಾಜೆಕ್ಟ್

ಗೋದಾವರಿನದಿಯ ದೋಣಿಆಸ್ಪತ್ರೆ

ಗೋದಾವರಿನದಿ ಆಂಧ್ರಪ್ರದೇಶದ ದಟ್ಟಾರಣ್ಯಗಳಲ್ಲಿ ಹರಿದು ಬಂದು ಸಮುದ್ರಕ್ಕೆ ಸೇರುತ್ತದೆ. ಭದ್ರಾಚಲವು ಖಮ್ಮಂ ಜಿಲ್ಲೆಯ ಒಂದು ಪ್ರಮುಖ ಯಾತ್ರಾಸ್ಥಳ. ಅಲ್ಲಿಂದ ಸುಮಾರು 100 ಕಿಲೋಮೀಟರ್ ಅಂತರದಲ್ಲಿ ಕೂನಾವರಂ ಎಂಬ ನದೀದಂಡೆಯ ಪಟ್ಟಣವಿದೆ. ಒಂದುಕಾಲದಲ್ಲಿ ಪ್ರಸಿದ್ಧ ವ್ಯಾಪಾರೀ ಕೇಂದ್ರವೂ ಆಗಿತ್ತು. ಸುತ್ತುಮುತ್ತೆಲ್ಲ ಗೊಂಡಾರಣ್ಯಗಳು. ಅಲ್ಲಲ್ಲಿ ಗುಂಪು ಗುಡಿಸಲಲ್ಲಿ ವಾಸಿಸುವ ವನವಾಸಿಗಳು, ಆದಿವಾಸಿಗಳು, ಹರಿಜನರು ಹಾಗೂ ಇತರ ಜನರಿಗೆ ಸಂಪರ್ಕ ಸಾಧನವೆಂದರೆ ಗೋದಾವರೀ ನದಿಯೇ ಆಗಿದೆ. ಹೆಸರಿಗೆ ಮಾತ್ರ ಎಂಬಂತೆ 'ಆಶ್ರಮಶಾಲೆ'ಗಳಿರುತ್ತಿದ್ದವು. ವೈದ್ಯಕೀಯಸೌಲಭ್ಯ ತೀರ ವಿರಳ. ಸರ್ವಕಾಲಿಕ ರಸ್ತೆಗಳಿಲ್ಲ–ವಾಹನ ಸಂಚಾರದ ವ್ಯವಸ್ಥೆಯೂ ಇಲ್ಲ. ಇಂತಹ 'ದುರ್ಗಮ' ಪ್ರದೇಶದಲ್ಲಿ ಒಂದು ಆರೋಗ್ಯಕೇಂದ್ರವನ್ನು ಸ್ಥಾಪಿಸಲು ಭಾರತ ಸರಕಾರ ನಿರ್ಧರಿಸಿದ್ದು ಅದಕ್ಕೆ ದೊಡ್ಡ ಮೊತ್ತದ ಸಹಾಯಧನವು ವಿದೇಶದಿಂದ ದೊರಕಿತ್ತು. ಆದರೆ ಯಾವುದೇ ಸ್ವಯಂಸೇವಾಸಂಸ್ಥೆಯೂ ಈ ಕಾರ್ಯಕ್ರಮವನ್ನು ನಿರ್ವಹಿಸಲು ಮುಂದಾಗಿರಲಿಲ್ಲ. ಹಿರಿಯ ಅಧಿಕಾರಿಗಳ ಒಂದು ಗುಂಪು ಪಡಕ್ಕಲ್‌ಗೆ ಬಂದಿದ್ದಾಗ ಈ ಪ್ರಾಜೆಕ್ಟ್‌ನ ವಿಚಾರ ಹೇಳಿ ಅದನ್ನು ನಿರ್ವಹಿಸಲು ಅಹ್ವಾನವಿತ್ತಿತು. ಸರಿ ಮುಂದೆ 2 ವಾರಗಳಲ್ಲಿ ಕೂನಾವರಂನ 'ಆರೋಗ್ಯ ಕೇಂದ್ರವನ್ನು ಕೇಂದ್ರ ಸ್ಥಾನಮಾಡಿಕೊಂಡು ಅಲ್ಲಿಂದ 'ಲಾಂಚಿ' (ಯಾಂತ್ರೀಕೃತ ಡೀಸೆಲ್ ದೋಣಿ) ಯ ಮೂಲಕ ಸುಮಾರು 100 ಕಿಲೋಮೀಟರ್ ವ್ಯಾಪ್ತಿಯಲ್ಲಿ ನದೀ ಮಾರ್ಗದಲ್ಲಿ ಸಂಚರಿಸಿ ಚಿಕಿತ್ಸೆಯ ವ್ಯವಸ್ಥೆಯುಳ್ಳ 'ಜೀವನ ಸ್ರವಂತಿ' ಹೆಸರಿನ ಸಂಚಾರೀ ದೋಣಿ ಆಸ್ಪತ್ರೆಯನ್ನು 1982 ರಲ್ಲಿ ಪ್ರಾರಂಭಿಸಿದೆ. ಎಲ್ಲೆಲ್ಲೋ ಅಷ್ಟಷ್ಟು ಶಿಕ್ಷಣಪಡೆದಿದ್ದ

ಕೈಯಕೊಂಡರೆಡ್ಡಿ ಮೊದಲಾದ ವನವಾಸಿವರ್ಗದ ಅಭ್ಯರ್ಥಿಗಳನ್ನು ಕಲೆಹಾಕಿ 'ಕ್ಷಿಪ್ರತರಬೇತಿ' ನೀಡಿ, ಖಮ್ಮಂ ಪಟ್ಟಣದ ವೈದ್ಯರೊಬ್ಬರನ್ನು ವೈದ್ಯ ಪ್ರಮುಖರನ್ನಾಗಿಮಾಡಿ ಜೀವನಸ್ರವಂತಿಯನ್ನು ಭದ್ರ ಪಡಿಸಿದೆ. ಇದರ ಜತೆಗೆ ಅಲ್ಲಲ್ಲಿ ಉಪಕೇಂದ್ರಗಳನ್ನು ತೆರೆದು ಇಬ್ಬಿಬ್ಬರಂತೆ ಆರೋಗ್ಯ ಕಾರ್ಯಕರ್ತರನ್ನು ಗುರುತಿಸಿ, ತರಬೇತಿನೀಡಿ 'ಜೀವನ ಸ್ರವಂತಿ'ಯ ಸಂಚಾರೀ ವ್ಯವಸ್ಥೆಯನ್ನು ನಿರ್ದಿಷ್ಟ ಗೊಳಿಸಿದೆ. ವಾರದಲ್ಲಿ ಎರಡುಬಾರಿ ಸಂದರ್ಶಿಸುವ ಉಪಕೇಂದ್ರಗಳಲ್ಲಿ (ನದೀ ದಂಡೆಯಲ್ಲಿ ತುಸು ಎತ್ತರದಲ್ಲಿ ಹಾಕಿದ ಚಪ್ಪರದಂತಹ ತಾತ್ಕಾಲಿಕ ನೆರಳಲ್ಲಿ) ರೋಗಿಗಳನ್ನು ಪರೀಕ್ಷಿಸಿ, ಚಿಕಿತ್ಸೆ ಮಾಡುವುದು ಹಾಗೂ ಹೆಚ್ಚಿನ ಚಿಕಿತ್ಸೆ ಅಗತ್ಯವುಳ್ಳ ರೋಗಿಯಿದ್ದರೆ ದೋಣಿಯ ಮೂಲಕ ಕೂನಾವರಂ ಕೇಂದ್ರಕ್ಕೆ ರವಾನಿಸುವುದಕ್ಕೂ ವ್ಯವಸ್ಥೆ ಮಾಡಲಾಯಿತು.

ಒಂದುದಿನ ಮುಂಜಾನೆ 7 ಗಂಟೆಗೆ 'ಕೇಂದ್ರ' ದಿಂದ ಹೊರಟ 'ಲಾಂಚ್' ಮರುದಿನ ಸಂಜೆ 7 ಗಂಟೆಗೆ ಹಿಂದಿರುಗುವುದು ನಿಯಮಿತ ಕಾರ್ಯಕ್ರಮ. ಲಾಂಚ್ ನಡೆಸುವ ಗುಂಪು ಜತೆಗೆ 'ನಾವು'– ಮೆಡಿಕಲ್ ಟೀಮ್ ಮತ್ತು ಒಬ್ಬ ಸ್ಥಳೀಯ ಮಾರ್ಗದರ್ಶಕ ಎಲ್ಲರ ಊಟ, ವಿಶ್ರಾಂತಿ, ನಿದ್ರೆ ಎಲ್ಲವೂ ನದಿಯ ನೀರಲ್ಲಿ ತೇಲುವ– ಲಂಗರುಹಾಕಿ ನಿಂತುಕೊಂಡ ಲಾಂಚ್‌ನಲ್ಲೇ ಆಗುತ್ತಿತ್ತು. ಊಟೋಪಚಾರದ ರೇಟು ತೀರ ಹೆಚ್ಚು ಹಾಗೂ ರುಚಿ ತೀರ ಕನಿಷ್ಟ ಮಟ್ಟದ್ದಾಗಿದ್ದುದರಿಂದ ಕ್ರಮೇಣ ನಾವೇ ನಮ್ಮ ಅನ್ನವನ್ನು ತಯಾರಿಸಿಕೊಂಡು ಉಣ್ಣುವ ವ್ಯವಸ್ಥೆಗೆ ಶರಣಾದೆವು.

ಮೊದಮೊದಲು ಲಾಂಚೀ ಆಸ್ಪತ್ರೆಯನ್ನ ನೋಡಲು ಕುತೂಹಲದಿಂದ ಜನರು ಉಪಕೇಂದ್ರಗಳಿಗೆ ಬರುತ್ತಿದ್ದರೆ ಕ್ರಮೇಣ ರೋಗಿಗಳನ್ನು ಕರೆತಂದು ಕಾದಿರುವುದು ಪ್ರಾರಂಭವಾಯಿತು. ಕ್ರಮೇಣ ಜಿಲ್ಲೆಯ ಕೆಲವು ಯುವ ವೈದ್ಯರು ಬಂದು ಸೇರಿಕೊಂಡರು. ಒಬ್ಬರು ಮಹಿಳಾ ಡಾಕ್ಟರು ಸಹಿತ ನಾಲ್ವರ ಟೀಮನ್ನೂ ಶುಶ್ರೂಷಕಿಯರನ್ನೂ ಆರೋಗ್ಯ ಕಾರ್ಯಕರ್ತರ ವೃಂದವನ್ನೂ ಸಮರ್ಪಕವಾಗಿ ವ್ಯವಸ್ಥಿತಗೊಳಿಸಿದ ತರುವಾಯ ಅವರ ಜವಾಬ್ದಾರಿಯಲ್ಲಿ ಜೀವನ ಸ್ರವಂತಿ ಮುಂದೆ ಮುಂದೆ ಸಾಗುತ್ತಲೇ ಇರುತ್ತದೆ ಎಂದು ಭರವಸೆ ಬಂದ ತರುವಾಯ ನಾನು ಪಡಕ್ಕಲಿಗೆ ಹಿಂತಿರುಗಿದೆ.

* * *

೩

ಡೆನ್‌ಮಾರ್ಕ್‌ನಲ್ಲಿ ಭಾರತಮಿತ್ರ ಗುಂಪುಗಳೊಂದಿಗೆ ಸಂವಾದ

ಅಭಿವೃದ್ಧಿ ಪರದೇಶಗಳಿಗೆ ಆರ್ಥಿಕ ನೆರವು ನೀಡುವ ನೆದರ್ ಲ್ಯಾಂಡ್ಸ್ ದೇಶದ 'ನೋವಿಬ್' ಸಂಸ್ಥೆ 'ಪಡಕ್ಕಲ್'ನ ಅವೇರ್ ಸಾಮಾಜಿಕ ಆರೋಗ್ಯ ಕೇಂದ್ರ ಹಾಗೂ ಅದರ ಸಮುದಾಯ ವಿಕಾಸ ಕಾರ್ಯಕ್ರಮಗಳಿಗೆ ಕೂಡ ಆರ್ಥಿಕ ನೆರವು ನೀಡುತ್ತಿತ್ತು. 1982ರಲ್ಲಿ ಹಿಂದಿನ ಮೂರು ವರ್ಷಗಳಲ್ಲಿ ನಿರ್ವಹಿಸುತ್ತಿದ್ದ ವಿವಿಧಕಾರ್ಯಕ್ರಮಗಳನ್ನು ಪರಿಶೀಲಿಸಿ ಒಂದು ವರದಿಯನ್ನು ತಯಾರಿಸಿ 'ನೊವಿಬ್'ಗೆ ಸಲ್ಲಿಸಿದ ವರದಿ 'ವೂಲ್ಫರ್ ವರದಿ' ಎಂದು ಪರಿಚಿತವಾಯಿತು. ಸುಮಾರು 3 ವಾರಗಳ ಕಾಲ ಪಡಕ್ಕಲ್‌ನಲ್ಲಿದ್ದು ಹಳ್ಳಿಹಳ್ಳಿಗಳಲ್ಲಿ ಸಂಚರಿಸಿ ತಕ್ಕಷ್ಟು ವಿವರಗಳನ್ನು ಸಂಗ್ರಹಿಸಿ ಆ ವರದಿಯನ್ನು ತಯಾರಿಸಲಾಗಿತ್ತು. ನಾಲ್ಕು ತಿಂಗಳ ತರುವಾಯ ನೆದರ್‌ಲ್ಯಾಂಡ್ಸ್‌ನ 'ದಿ ಹೇಗ್' ನಗರದಲ್ಲಿ ನೋವಿಬ್ ಸಂಸ್ಥೆಯ 'ಕಮಿಶನ್ ಆಫ್ ಡಯಲಾಗ್ ಡೆವಲಪ್‌ಮೆಂಟ್' ಆಯೋಗದ 5ನೇ ಅಧಿವೇಶನವು ಜರುಗಲಿರುವುದಾಗಿಯೂ ಅದರಲ್ಲಿ – ಪಡಕ್ಕಲ್ ಪ್ರಾಜೆಕ್ಟ್ – ಮುಖ್ಯವಾಗಿ ಆರೋಗ್ಯ ರಕ್ಷಣಾ ಕಾರ್ಯಕ್ರಮಗಳು ಹಾಗೂ ಸಮುದಾಯ ವಿಕಾಸ ಚಟುವಟಿಕೆಗಳ ಬಗ್ಗೆ ಚರ್ಚೆ ನಡೆಯಲಿರುವುದಾಗಿಯೂ ತಿಳಿಸುವ ಪತ್ರವು ಹೈದ್ರಾಬಾದ್ ಆಡಳಿತ ಕಛೇರಿಯಿಂದ ಬಂದು ತಲುಪಿತು. 4 ದಿನಗಳಲ್ಲಿ ಈ ಎಲ್ಲ ವಿಷಯಗಳಿಗೆ ಸಂಬಂಧಪಟ್ಟ ವರದಿಗಳು, ದಾಖಲೆಗಳು ಹಾಗೂ ಅಗತ್ಯವಾದ ಇತರ ಮಾಹಿತಿಗಳನ್ನು ಒಳಗೊಂಡ ಒಂದು ಚಿಕ್ಕ ಗಂಟು ಮೂಟೆ ಹಾಗೂ ನನ್ನ ಉಡುಗೆ ತೊಡುಗೆಗಳನ್ನು ತೆಗೆದುಕೊಂಡು ಹೈದ್ರಾಬಾದ್ ತಲುಪಿದೆ. ಅವೇರ್ ಥೇರ್‌ಮನ್ ಸೇರಿದಂತೆ 5 ಜನ ಸದಸ್ಯರ ನಿಯೋಗವು ದೆಹಲಿ ಮೂಲಕ ವಿದೇಶಕ್ಕೆ ಪ್ರಯಾಣಿಸಿತು.

'ನೋವಿಬ್' ಸಂಸ್ಥೆಯು ವಿವಿಧ ದೇಶಗಳ ಸ್ವಯಂಸೇವಾ ಸಂಸ್ಥೆಗಳಿಗೆ ನೀಡುವ ಧನಸಹಾಯದ ವಿನಿಯೋಗದ ಬಗ್ಗೆ 3 ವರ್ಷಗಳ ಹಿಂದೆ ಈ 'ಕಮಿಶನ್ ಆಫ್ ಡಯಲಾಗ್-ಡೆವಲಪ್‌ಮೆಂಟ್' ಎಂಬ ಆಯೋಗವನ್ನು ಪ್ರಾರಂಭಿಸಿತ್ತು. ಅದರ ಒಂದು ಅಧಿವೇಶನವು ಹೈದ್ರಾಬಾದ್‌ನಲ್ಲಿ ಜರುಗಿದ್ದು ಆಯೋಗದ ಕಾರ್ಯವೈಖರಿಯ ಬಗ್ಗೆ ನನಗೆ ತಕ್ಕಷ್ಟು ಪರಿಚಯವಿತ್ತು ಎನ್ನಬಹುದು.

'ದಿ ಹೇಗ್' ನಗರದಲ್ಲಿ 3 ವಾರಗಳ ಅವಧಿಯಲ್ಲಿ 10 ಅಧಿವೇಶನಗಳು ನಡೆಯುವ ಕಾರ್ಯಕ್ರಮವಿದ್ದು ಅದರಲ್ಲಿ ಪಡಕ್ಕಲ್ ಆರೋಗ್ಯ ಕಾರ್ಯಕ್ರಮಗಳ ವಿಚಾರ ಚರ್ಚೆಗೆ ಎರಡನೇ ದಿನ ನಿಗದಿಮಾಡಲಾಗಿತ್ತು. ವೂಲ್ಫರ್ ವರದಿ ಆಧಾರದಿಂದ ನೋವಿಬ್‌ಮಟ್ಟಿಗೆ ಅದು ಮುಖ್ಯವಾದ ಕಾರ್‍ಯಕ್ರಮವೆಂದು ಕೂಡಾ ಭಾವಿಸಲಾಗಿತ್ತು.

ಚರ್ಚೆಯ ಪ್ರಾರಂಭದಲ್ಲಿ ನಾನು ವೂಲ್ಫರ್ ವರದಿಯಲ್ಲಿ ಅಂತರ್ಗತವಾಗಿರುವ ಹಲವಾರು ಅಂಶಗಳು ಸಂದಿಗ್ಧವಾಗಿರುವುದರಿಂದ ವರದಿಯನ್ನು ಚರ್ಚಿಸುವುದಕ್ಕೆ ಪ್ರೊ। ವೂಲ್ಫರ್ ಮಹಾಶಯರ ಉಪಸ್ಥಿತಿಯು ಅನಿವಾರ್ಯವೆಂದು ಹೇಳಿದೆ. ಮತ್ತು ಅದನ್ನು ಸಮರ್ಥಿಸುವುದಕ್ಕೆ ಕೆಲವು ಅಂಶಗಳನ್ನು ಮುಂದಿಟ್ಟೆ. ಪ್ರೊ। ವೂಲ್ಫರ್ ಕಳೆದ 2 ತಿಂಗಳಿನಿಂದ ಇನ್ನಾವುದೋ ಪ್ರಾಜೆಕ್ಟ್‌ನ ಸಮೀಕ್ಷೆಗಾಗಿ ಇಂಡೋನೇಶಿಯಾ ದೇಶಗಳಲ್ಲಿರುವುದರಿಂದ ಅವರ ಹಾಜರಾತಿ ದೊರಕುವ ಸಂಭವ ಇಲ್ಲವೆಂದು ತಿಳಿದು ಬಂದುದರಿಂದ ಏಕಪಕ್ಷಿಯವಾಗಿ ವರದಿಯನ್ನು ಚರ್ಚಿಸುವ ವಿಚಾರವನ್ನು ಕೈಬಿಟ್ಟಿರುವುದರಿಂದ ನನ್ನ ಮಟ್ಟಿಗೆ ವಿರಾಮ ದೊರೆತಂತಾಯಿತು. ಮುಂದಿನ 3 ವರ್ಷಗಳ ಕಾಲಾವಧಿಯ ಮುಂಗಡ ಬಜೆಟ್ ಪರಿಶೀಲನೆಯಲ್ಲಿ ಒಂದರ್ಧದಿನಕಾಲ ಕೆಲಸವಿತ್ತೇ ವಿನಾ ಉಳಿದ ಸಮಯ ಬಿಡುವಿನದೆಂದು ಕಂಡುಬಂದಿತು.

'ಅಭಿವೃದ್ಧಿ ಸಂವಾದ ಆಯೋಗ'ದ ಅಧ್ಯಕ್ಷತೆ ವಹಿಸಿದ್ದ ಪ್ರೊ। ಡಿ.ಲಾಂಗೆ (ಯುರೋಪಿಯನ್ ಕಾಮನ್ ಮಾರ್ಕೆಟ್ ಸ್ಥಾಪಕ ಸದಸ್ಯರಲ್ಲೊಬ್ಬರಾಗಿದ್ದ ವಿಶ್ವಖ್ಯಾತ ಆರ್ಥಿಕ ತಜ್ಞರು) ಅವರು ಸೂಚಿಸುವ ಪ್ರಕಾರ ಮುಂದಿನ ಕೆಲವು ದಿನಗಳ ಮಟ್ಟಿಗೆ 'ನೋವಿಬ್'ನೊಂದಿಗೆ ಅಭಿವೃದ್ಧಿ ಕಾರ್‍ಯಕ್ರಮಗಳನ್ನು ಪ್ರೋತ್ಸಾಹಿಸಲು ಕೈಜೋಡಿಸಿದರೆ ಡಚ್ ಯುವಜನರ ಕೆಲವು ಗುಂಪುಗಳನ್ನು ಸಂದರ್ಶಿಸಿ ಸಂವಾದ ನಡೆಸಬಹುದೆಂದರು. ನೆದರ್‌ಲ್ಯಾಂಡ್ ರಾಷ್ಟ್ರದ 3 ದೇಶಗಳಲ್ಲೂ 'ಭಾರತ ಮಿತ್ರರು' ಎಂಬ ಕೆಲವು ಗ್ರಾಮಾಭಿವೃದ್ಧಿಪರ ಸ್ನೇಹಿತರ ಗುಂಪುಗಳು ಇದ್ದು ವರ್ಷಕ್ಕೆ 2 ಬಾರಿ ವಿವಿಧ ಕಾರ್‍ಯಕ್ರಮಗಳ ಮೂಲಕ ಸಾರ್ವಜನಿಕರಿಂದ ಧನ ಸಂಗ್ರಹಿಸಿ 'ನೋವಿಬ್' ಮೂಲಕ ಭಾರತಕ್ಕೆ ಕಳುಹಿಸಿಕೊಡುತ್ತಿದ್ದರು. ಈ ಸ್ವಯಂಪ್ರೇರಿತ

ಸ್ವಯಂಸೇವಾವೃಂದಗಳಲ್ಲಿ ಹೆಚ್ಚಿನವು ಪಡಕ್ಕಲ್ ಸಾಮಾಜಿಕ ಆರೋಗ್ಯಕೇಂದ್ರದ ವಿವಿಧ ಚಟುವಟಿಕೆಗಳತ್ತ ಆಕರ್ಷಿತರಾಗಿದ್ದುದು ಅವರ ಮಾತುಗಳಿಂದ ತಿಳಿದುಬಂತು. ಇದಕ್ಕೊಂದು ಮುಖ್ಯ ಕಾರಣವೆಂದರೆ 'ನೋವಿಬ್' ತಯಾರಿಸಿ ನೆದರ್‌ಲ್ಯಾಂಡಿನ ಯುವಜನ ಗುಂಪುಗಳ ನಡುವೆ ಪ್ರದರ್ಶಿಸಲಾದ ಕೆಲವು ಪಡಕ್ಕಲ್‌ನ ಕಾರ್ಯಕ್ರಮಗಳ ಸಾಕ್ಷೀಚಿತ್ರಗಳು. ಅಷ್ಟೇ ಅಲ್ಲದೆ ಮುಂಬಯಿಯಿಂದ ಟೈಮ್ಸ್‌ಆಫ್ ಇಂಡಿಯಾ ಪ್ರತಿಕಾಲಯವು ಪ್ರಕಟಿಸುತ್ತಿದ್ದ 'ಇಲ್ಯುಸ್ಟೇಟೆಡ್ ವೀಕ್ಲಿ ಆಫ್ ಇಂಡಿಯಾ'ದ ರೀತಿಯಲ್ಲೇ ನೆದರ್‌ಲ್ಯಾಂಡ್ಸ್‌ನಲ್ಲಿ ಪ್ರಕಟವಾಗುತ್ತಿದ್ದ ಅತ್ಯಂತ ಜನಪ್ರಿಯ ವರ್ಣರಂಜಿತ ಸಚಿತ್ರ ವಾರಪತ್ರಿಕೆ 'ಮಾರ್ಗರೆಟ್'ನಲ್ಲಿ ಪ್ರಕಟವಾಗಿದ್ದ 2 ಲೇಖನಗಳು! ಪಡಕ್ಕಲ್‌ಗೆ ಭೇಟಿನೀಡಿದ್ದ ಮಿಸಸ್ ವಾರೆನ್ ಮತ್ತು ಸಂಗಡಿಗರ ವಿಸ್ತೃತವಾದ ಸಚಿತ್ರ ವರದಿಗಳು 4 ತಿಂಗಳ ಹಿಂದೆ ಪ್ರಕಟವಾಗಿರುವುದು.

ವಾರದ ಒಂದೆರಡು ದಿನಗಳಲ್ಲಿ ಸಂಜೆ 2 ಗಂಟೆಗಳ ಕಾಲ ನಗರ ಪ್ರದೇಶಗಳಲ್ಲಷ್ಟೇ ಅಲ್ಲದೇ ಯುವಕರ ಗುಂಪುಗಳ ನಡುವೆ ಕುಳಿತು ಪಡಕ್ಕಲ್ ಚಟುವಟಿಕೆಗಳ ಬಗ್ಗೆ ಸವಿಸ್ತಾರವಾದ ಮಾತುಕತೆ ನಡೆಯಿಸಿ ಇಂತಹ ಗೋಷ್ಠಿಗಳು ಕೇವಲ ನಗರ ಪ್ರದೇಶಗಳಲ್ಲಷ್ಟೇ ಅಲ್ಲದೇ ದೂರದ ಹಳ್ಳಿಗಳಲ್ಲಿ ಕೂಡ ನಡೆದದ್ದು ನನಗೆ ಆಶ್ಚರ್ಯವುಂಟುಮಾಡಿತು. ನನ್ನ ಜೊತೆ ಅಪ್ಪುಸ್ವಾಮಿ ಎಂಬ 'ಅವೇರ್'ನ ಆಡಳಿತ ವಿಭಾಗದ ಮುಖ್ಯಾಧಿಕಾರಿ ಇದ್ದರು. ಅವರು ಆಂಧ್ರರಾಜ್ಯದ ಹಿರಿಯ ಅಧಿಕಾರಿ ಹಾಗೂ ಸಮಾಜಕಾರ್ಯ ನಿರ್ವಹಣೆಯಲ್ಲಿ ಆಸಕ್ತಿಹೊಂದಿದ್ದವರು.

ಇಂತಹ ಸಮಾವೇಶಗಳಲ್ಲಿ ನಾನು ಒಬ್ಬನೇ ಇರಬೇಕಾಗಿ ಬಂದುದಕ್ಕೆ, ಡಾ। ಸಬಿತಾ ಯಾಕೆ ಬರಲಿಲ್ಲ ಎಂಬುದಕ್ಕೆ (ಅವರನ್ನು 'ನೋವಿಬ್' ಆಮಂತ್ರಿಸಿರಲಿಲ್ಲ ಅಲ್ಲದೇ ಅವೇರ್ ಕೂಡ ಈ ಬಗ್ಗೆ ಆಸಕ್ತಿವಹಿಸಿರಲಿಲ್ಲ ಎಂಬುದನ್ನು ಹೇಳದೇ), ಏನೋ ತೊಂದರೆ ಮತ್ತು ಮುಂದಿನ C.O.D.D. ಅಧಿವೇಶನಕ್ಕೆ ಬರುತ್ತಾರೆ ಎಂದು ಮಾತು ಮರೆಸುತ್ತಿದ್ದೆ.

'ಎಂಟ್ವರ್ಪ್' ಮೊದಲಾದ ಒಂದೆರಡು ನಗರಗಳನ್ನು ವಾರಾಂತ್ಯದಲ್ಲಿ ಸಂದರ್ಶಿಸಿದೆವು. ಇದೇ ಅವೇರ್ ನಿಯೋಗದವರು ಅನೇಕ ವರ್ಷಗಳ ಹಿಂದೆ ಚಿತ್ತಾಪುರದಲ್ಲಿ ಬರಗಾಲದ ಸಂದರ್ಭದಲ್ಲಿ ಪ್ರಾರಂಭಿಕ ಪ್ರಯತ್ನವಾಗಿ ವೃದ್ಧರಿಗೆ ಹಾಗೂ ಬಾಲಕರಿಗೆ ಅನ್ನಸಂತರ್ಪಣೆಯ ಒಂದು ಕಾರ್ಯಕ್ರಮವನ್ನು ಚಿತ್ತಾಪುರದ ಕೆಥೋಲಿಕ್ ಚರ್ಚ್ ಆವರಣದಲ್ಲಿ ಫಾದರ್ ಆ್ಯಂಟನಿ ಮಥೇನ್ ಕಲಾಂರವರು ಏರ್ಪಡಿಸಿ ನಮ್ಮ ಬರಗಾಲ ಸೇವಾ ಕಾರ್ಯಕ್ರಮ(25 ಗಂಜಿಕೇಂದ್ರಗಳ ನಿರ್ವಹಣೆ)ಕ್ಕೆ ಚಾಲನೆ ನೀಡಿದ್ದರು. ಅಂತಹ ಒಂದು ಚಿಕ್ಕ Photo ತೆಗೆದು ದೆಹಲಿಯ ಬಿಷಪ್ಸ್ ಕಾನ್ಫರೆನ್ಸ್ ಆಫ್ ಇಂಡಿಯಾ ಸಂಸ್ಥೆಯವರ ಮೂಲಕ ನಾವು ರವಾನಿಸಿದ್ದೆವು.

ಅನ್ನಸಂತರ್ಪಣೆಯ ಕಾರ್ಯಕ್ರಮಕ್ಕೆ 100 ರೂಪೈಗಳ ನೆರವು– ಮೊದಲ ದೇಣಿಗೆ 'ಬಿಷಪ್ಸ್ ಕಾನ್ಫರೆನ್ಸ್' ನವರಿಂದಬಂದಿತ್ತು. ಈಗ ಎಂಟ್ವರ್ಪ್ ನಗರಕ್ಕೆ ನಾವು ಹೋದಾಗ ಅವರ ಟೇಬಲ್ ಮೇಲೆ ಆ ಅನ್ನ ಸಂತರ್ಪಣೆಯ ಚಿತ್ರವೊಂದು ಇದ್ದುದನ್ನು ನಾನು ಕಂಡೆ. ಕ್ರೈಸ್ತೇತರರು ನಡೆಸುತ್ತಿದ್ದ ಬರಗಾಲ ಸೇವೆಗೆ ಈ ಕ್ರೈಸ್ತ ಧರ್ಮಾಧಿಕಾರಿಗಳು ನೆರವು, ಪ್ರಚೋದನೆ, ಪ್ರೋತ್ಸಾಹ ನೀಡಿದ್ದನ್ನು ಸ್ಮರಿಸಿ ನಾನೊಂದು ಪತ್ರ ಬರೆದಿದ್ದೆ. ಈಗ ನಾನು ಭೇಟಿ ನೀಡಿದಾಗ ಆ ಪತ್ರವನ್ನು ಹುಡುಕಿ ತೆಗೆದು ಪ್ರದರ್ಶಿಸಿದ್ದರು ಕೂಡಾ!

'ಅಮಸ್ವರಡಾಂ' ನಗರದಲ್ಲಿ 'ವಿಶ್ವದಲ್ಲಿ ಜೀತವಿಮುಕ್ತಿ' ಕಾರ್ಯಕ್ರಮಗಳ ಬಗ್ಗೆ ಒಂದು 'ಸಮಾಲೋಚನಾ ಶಿಬಿರ' ನಡೆದಿತ್ತು. ಅದರ ಸಾರಥ್ಯವನ್ನು ಹರಿಯಾಣದ ಇಟ್ಟಿಗೆ ಕುಲುಮೆಯ ಬಾಲ ಕಾರ್ಮಿಕರ ವಿಲೋಚನಾ ಕಾರ್ಯವನ್ನು ನಿರ್ವಹಿಸಿ ವಿಶ್ವಖ್ಯಾತಿ ಪಡೆದ 'ಸ್ವಾಮಿ ಅಗ್ನಿವೇಶ'ರು ಪ್ರಾರಂಭಿಕ ಭಾಷಣಮಾಡಿದ್ದರು. ಅಂದೇ ಅವರು ಭಾರತಕ್ಕೆ ಮರಳಿಹೋದರು. ನಾವು ಎರಡು ದಿವಸದ ಕಾರ್ಯಕ್ರಮದಲ್ಲಿ ಭಾಗವಹಿಸಿದೆವು. ಖಮ್ಮಂ ಜಿಲ್ಲೆಯ ಗುತ್ತಿಗೆ ಕಾರ್ಮಿಕ– ಜೀತಕೂಲಿಗಳ ವಿಮೋಚನೆಗಾಗಿ ನಮ್ಮ ಸಹಕಾರ್ಯಕರ್ತವೀರಭದ್ರಂ (ಭದ್ರಂ) ಎಂಬವರು ಹೋರಾಡಿ ಯಶಸ್ಸು ಗಳಿಸಿದ ಘಟನೆಯನ್ನು ನಾನು ವಿವರಿಸಿದೆ. ದುರದೃಷ್ಟಕರ ವಿಚಾರವೆಂದರೆ ಮುಂದೆ ಕೆಲವೇ ತಿಂಗಳಲ್ಲಿ ಒಂದು ಚಿಕ್ಕ ಆಪಾದನೆಗೆ ಬಲಿಯಾಗಿ ಜೈಲುಸೇರಿದ ಭದ್ರಂರನ್ನು ಬಿಡಿಸಲು ಅವೇರ್‌ದವರು ಪ್ರಯತ್ನಪಟ್ಟರೂ 1 ವರ್ಷಕಾಲ ಭಿದ್ರಂ ಕಂಬಿ ಎಣಿಸಬೇಕಾಗಿದ್ದು ತಪ್ಪಲಿಲ್ಲ.

C.O.D. ಕಾರ್ಯಕ್ರಮ ಮುಗಿಸಿಕೊಂಡು ನಾವು ಹೈದ್ರಾಬಾದ್‌ಗೆ ಮರಳಿಬಂದಾಗ ಸರಿಯಾಗಿ 20 ದಿನಗಳು ಕಳೆದಿದ್ದವು.

* * *

೪

ಮೈರಾಡ– ಸ್ವಿಸ್ ದೆವಲಪ್‌ಮೆಂಟ್ ಕೋಪರೇಶನ್ ಸಹಯೋಗದ ಪ್ರಾಜೆಕ್ಟ್

ಕಮಲಾಪುರದ ಜಲದಾಹಕ್ಕೆ ಕಡಿವಾಣ: ಪಿಡೊ

ಸೆಪ್ಟೆಂಬರ್ 1984. 'ಅವೇಕ್' ಸಂಸ್ಥೆಗೆ ನಮಸ್ಕಾರ ಹೊಡೆದು ಪಡಕ್ಕಲ್ಲಿನಿಂದ ಗಂಟುಮೂಟೆ ಕಟ್ಟಿಕೊಂಡು ಬೆಂಗಳೂರಿಗೆ ಬಂದೆವು. ಅಲ್ಲಿ ಎಂಟು ಹತ್ತು ದಿನಕಳೆದ್ದೆವು. ಕೆಲವು ಹಳೆಯ ಗೆಳೆಯರನ್ನೂ ಬಂಧು ಬಳಗದವರನ್ನೂ ಭೇಟಿ ಮಾಡಿದೆವು. ನಾಲ್ಕು ದಿನಗಳಮಟ್ಟಿಗೆ ನಾನು ಊರಿಗೂ ಹೋಗಿ ಬಂದೆ. ಅನಂತರ ಅಲೆಮಾರಿಯ ಮುಂದಿನ ಮಜಲು ಗುಲಬರ್ಗಾದತ್ತ ಹೊರಟೆವು. ರೈಲ್ವೆ ನಿಲ್ದಾಣದಲ್ಲೇ ಬೆಟ್ಟಿಯಾದ ವಕೀಲ ಭೀಮಸೇನರಾಯರ ಮನೆಯಲ್ಲಿ ನವರಾತ್ರಿ ಹಬ್ಬವನ್ನು ಮುಗಿಸಿಕೊಳ್ಳುವಷ್ಟರಲ್ಲಿ ಸದಾಶಿವನಗರದಲ್ಲಿ ಒಂದು 'ಬಂಗಲೆ'ಯನ್ನು ಬಾಡಿಗೆಗೆ ಹಿಡಿದು, ಅಕ್ಟೋಬರ್‌ಮೊದಲ ತಾರೀಖು 'ಮೈರಾಡ'ದ ನಾಮಫಲಕ ಹಚ್ಚಿದ್ದೂ ಆಯಿತು.

ಮರುದಿನ, (ಗಾಂಧೀಜಯಂತಿಯಂದು) ಕಮಲಾಪುರಕ್ಕೆ ಬಸ್‌ಪ್ರಯಾಣ ಮಾಡಿ, ಊರೊಳಗೆ ಕಾಲಿಡುತ್ತಿದ್ದಂತೆಯೇ ಚಿತ್ತಾಪುರದ ಮಿತ್ರರೊಬ್ಬರು – ಚಂದ್ರಮೌಳಿಮಾಸ್ತರು – ಭೆಟ್ಟಿಯಾದರು. ನಾಲ್ಕಮಾತುಗಳಲ್ಲಿ ನನ್ನ ಕೆಲಸದ ಬಗ್ಗೆ ಹೇಳಿದಾಗ ನೇರವಾಗಿ ಊರಿನ ಹಿರಿಯರೂ ಸ್ವಾತಂತ್ರ ಹೋರಾಟಗಾರರೂ ಆಗಿದ್ದ ಶಂಕರೇಗೌಡ ಪಾಟೀಲರ ಮನೆಗೆ ಕರೆದುಕೊಂಡು ಹೋದರು. ಅಲ್ಲೇ ಸಮೀಪ ಖಾದೀಭಂಡಾರದಲ್ಲಿ ಮಹಿಳಾಮಂಡಳದವತಿಯಿಂದ ನಡೆಯುತ್ತಿದ್ದ 'ಸೂತ್ರಯಜ್ಞ' (ಚರಕಾದಿಂದ ನೂಲುವ) ಸ್ಪರ್ಧೆಯ ಸಭೆಯಲ್ಲಿದ್ದ ಪಾಟೀಲರನ್ನು ಮಾತಾಡಿಸಿದೆ. ಸಂತೋಷದ ಸ್ವಾಗತ ಸಿಕ್ಕಿತು. ಜತೆಗೆ ಕಮಲಾಪುರದ 'ಮಹಿಳಾಲೋಕದ' ಪರಿಚಯವೂ ಆಯಿತು. ಅಂದೇ ಕಮಲಾಪುರದ ದಿ। ದೇಸಾಯರ ಹಳೆಯ ದೊಡ್ಡ ಮನೆಯಲ್ಲಿ ಮೈರಾಡದ ಕ್ಷೇತ್ರಕಾರ್ಯಾಲಯವನ್ನು

ಪ್ರಾರಂಭಿಸಿದ್ದೂ ಆಯಿತು. ಸಂಜೆಯ ಬಸ್ಸಿನಲ್ಲಿ ಉಸಿರುಗಟ್ಟುವ ಕಿಕ್ಕಿರಿದ ಪ್ರಯಾಣಿಕರ ಜತೆ ನಿಂತು, ನೇತಾಡಿಕೊಂಡು, ತುಸು ಹಿಂದೆ ಮುಂದೆ ನೂಕಾಡಿಕೊಂಡು, ಅಂತೂ ಗುಲಬರ್ಗಾ ತಲಪಿದೆ. (ಮನೆಯನ್ನು ಆಫೀಸಿನ ಒಂದು ಭಾಗದಲ್ಲೇ ವ್ಯವಸ್ಥೆಗೊಳಿಸಿದ್ದೆ).

ಕಲಬುರಗಿಯಲ್ಲಿ ಕಚೇರಿ, ಕಮಲಾಪುರದಲ್ಲಿ ಕ್ಷೇತ್ರಕಾರ್ಯಾಲಯ, ಎರಡನ್ನೂ ಪ್ರಾರಂಭಿಸಿದ ವಿಚಾರವಾಗಿ ಚಿಕ್ಕ ವರದಿಯನ್ನು ಬೆಂಗಳೂರಿಗೆ ಮರುದಿನ ಬರೆದು ರವಾನಿಸಿದೆ. ಅದರ ಜತೆಗೆ ಜಿಲ್ಲಾ ಸಮಗ್ರ ಗ್ರಾಮೀಣ ವಿಕಾಸ ಕಾರ್ಯಕ್ರಮದ ಅಧಿಕಾರಿ ಅನುಪ್‌ಕುಮಾರ್ ಪೂಜಾರಿ ಹಾಗೂ ಜಿಲ್ಲಾಧಿಕಾರಿಯನ್ನೂ ಭೇಟಿ ಮಾಡಿದ ಅಂಶವನ್ನೂ ಸೇರಿಸಿದೆ.

ಮೂರನೇ ದಿನವೇ ಟೆಲಿಗ್ರಾಂ ಮೂಲಕ ಸಂತೋಷವನ್ನು ವ್ಯಕ್ತಪಡಿಸುತ್ತ ಶುಭಾಷಯ ಕಳುಹಿಸಿದರು – ಮೈರಾಡದ ಕಾರ್ಯನಿರ್ವಾಹಕ ನಿರ್ದೇಶಕರಾದ ಅಲೋಶಿಯಸ್ ಫರ್ನಾಂಡಿಸ್. 'ಕಚೇರಿ'ಯ ಪ್ರಾರಂಭ, ಅಧಿಕಾರಿಗಳೊಂದಿಗೆ ಭೇಟಿ, ಕಾರ್ಯಕ್ಷೇತ್ರ ಪ್ರವಾಸಾದಿ ಪ್ರಾರಂಭಿಕ ಕಾರ್ಯಕ್ರಮಗಳನ್ನು ಖುದ್ದಾಗಿ ಪ್ರಾರಂಭಿಸಿ ನನಗೆ (ವಹಿಸಿಕೊಡಲು) ಅನುದಾನಿ ವಿದೇಶಿ ಸಂಸ್ಥೆ ಎಸ್.ಡಿ.ಸಿ. 'ಸ್ವಿಸ್ ಡೆವಲಪ್‌ಮೆಂಟ್ ಕೋ ಆಪರೇಷನ್' ಸಂಸ್ಥೆಯ ಅಧಿಕಾರಿಗಳು ಬರುವ ಕಾರ‍್ಯಕ್ರಮವಿತ್ತಂತೆ! 'ವಾಟರ್ ಶೆಡ್ ಪ್ರೋಗ್ರಾಂ' ಬಗ್ಗೆ ಹೆಚ್ಚಿನ ಮಾಹಿತಿಯಿಲ್ಲದ 'ಪ್ರಾಜೆಕ್ಟ್ ಆಫೀಸರ'ನಾದ ನನ್ನನ್ನು ಕೈಹಿಡಿದುಕೊಂಡು ಹೆಜ್ಜೆಯ ಮೇಲೆ ಹೆಜ್ಜೆ ಇಡುವುದನ್ನು ಪ್ರಾರಂಭಿಸುವ ಇರಾದೆ ಇತ್ತೇನೋ ಅವರಿಗೆ! ಹತ್ತೆಂಟು ವರ್ಷಗಳ ಹಿಂದೆ ಗುಲಬರ್ಗಾ ಜಿಲ್ಲೆಯ ಚಿತ್ತಾಪುರದಲ್ಲಿ ನಾವು ವಾಸಿಸುತ್ತಿದ್ದರಿಂದ ಅಂತಹ ಕೈತುತ್ತಿನ ಅಗತ್ಯವಿರಲಿಲ್ಲ.

ಗುಡ್ಡ ಬೆಟ್ಟಗಳ ಮೇಲೆ ಸುರಿಯುವ ಮಳೆನೀರು ಕಣಿವೆಯತ್ತ ಹರಿಯುತ್ತದೆ. ವೇಗವಾಗಿ ಓಡುವ ನೀರಿಗೆ ಕಡಿವಾಣಹಾಕಿ, ತೆವಳುತ್ತ ಹೋಗುವಂತೆ (ನಿಧಾನಗತಿಯಲ್ಲಿ ಸಾಗುವಂತೆ) ಮಾಡುವುದು; ತೆವಳುವ ನೀರನ್ನು ಹಿಡಿದಿಟ್ಟು (ಇಂಗಿಸಿ/ಸಂಗ್ರಹಿಸಿ/ಹಾಯಿಸಿ) ಬಳಸಿ ಮಳೆನೀರಿನ 'ಕೊಯಿಲ'ನ್ನು ನಿರ್ವಹಿಸುವುದು ಮತ್ತು ನೀರನ್ನು ಸಮರ್ಪಕವಾಗಿ ಬಳಸಿ, ಹೊಲಗಳಿಗೆ (ಬೆಳೆಗಳಿಗೆ) ಬಳಸುವುದು – ಇದು 'ಜಲಾನಯನ ಪ್ರದೇಶ ಅಭಿವೃದ್ಧಿ' ಕಾರ್ಯಕ್ರಮ (Watershed Development Project) ನಾನು ಈಪರಿಯ ಕಾರ‍್ಯಕ್ರಮಕ್ಕೆ ಹೊಸಬ; ತೀರ ಹೊಸಬ. ಪ್ರಾಜೆಕ್ಟ್ ಕರ್ನಾಟಕದಲ್ಲಿ ನೂತನ ಪ್ರಯೋಗ ಅದರಲ್ಲೂ ಸರಕಾರ, ವಿದೇಶೀಧನದಾನೀ ಸಂಸ್ಥೆ ಹಾಗೂ 'ಮೈರಾಡ' ಸ್ವಯಂಸೇವಾಸಂಸ್ಥೆಗಳ ಸಹಯೋಗೀ ಕಾರ್ಯಕ್ರಮ.

ವಾಟರ್ ಶೆಡ್ – ಶೆಡ್ ಎಲ್ಲಿದೆ ಸಾರ್?

ರಾಯಚೂರು ಭಾಗದಲ್ಲಿ ಜನಸಂಖ್ಯಾಯೋಜನೆಯಲ್ಲಿ ಸರ್ವೆಮಾಡುವ ಕೆಲಸದಲ್ಲಿದ್ದು, ಅಲ್ಲಿಂದ ಬಿಡುಗಡೆ ಹೊಂದಿದ್ದ ಸ್ವಯಂಪ್ರೇರಿತ ಸೇವಾಕಾಂಕ್ಷಿತೆ ಯುವ ಪದವೀಧರೆ ಕೇಳಿದ ಪ್ರಶ್ನೆ ಇದು. ಶೆಡ್ಡೇ ಇಲ್ಲ – ಮತ್ತೆಂಥ ವಾಟರ್ ಶೆಡ್ ಪ್ರೋಗ್ರಾಂ. ತಿಂಗಳೊಪ್ಪತ್ತಿನಲ್ಲಿ 'ಕಚೇರಿ'ಗೆ ಟೆಲಿಫೋನ್ ಒಂದನ್ನು ಬಿಟ್ಟು ಉಳಿದೆಲ್ಲ ಅನುಕೂಲತೆಗಳನ್ನು ಒದಗಿಸಿಕೊಂಡದ್ದಾಯಿತು. ಅಕೌಂಟೆಂಟ್, ಕ್ಯಾಷಿಯರ್, ಟೈಪ್‌ರೈಟರ್, ಎಸ್.ಎಂ.ಎಸ್. (ವಿಷಯತಜ್ಞರು), ಚಾರ್ಟ್ಸ್, ಸ್ಲೈಡ್‌ಪ್ರಾಜೆಕ್ಟರ್, ಓವರ್‌ಹೆಡ್ ಪ್ರಾಜೆಕ್ಟರ್ ಇತ್ಯಾದಿ ಇತ್ಯಾದಿ) ಎಲ್ಲವನ್ನೂ ಒದಗಿಸಿಕೊಂಡದ್ದಾಯಿತು. ಎಲ್ಲವೂ ಸಿದ್ಧವಾದವು. ಮಾಸಾಂತ್ಯದ ವರದಿ, ಸಾಪ್ತಾಹಿಕ ಕಾರ್ಯಮುನ್ಸೂಚಿ (ವರ್ಕ್ ಶೆಡ್ಯೂಲ್) ಹೀಗೆ ಪಕ್ಕಾ ಕಚೇರಿ. (ಇದಕ್ಕೆ ತಕ್ಕಂತೆ ಪೀಠೋಪಕರಣ, ನಾಮಫಲಕ, ಕಪಾಟುಗಳು, ತರಬೇತಿಗಾಗಿ ಪಾಠೋಪಕರಣಗಳು, ಶಿಬಿರ ನಿರ್ವಹಣೆಗಾಗಿ ಫಲಕಗಳು ಜಮೆಯಾದವು. ನಾನಾ ಸಲಕರಣೆಗಳು, ಹಳ್ಳಿಯ ಸಭೆಗಳಿಗಾಗಿ ಟೆಂಟ್, ಮೈಕ್, ಪೆಟ್ರೋಮ್ಯಾಕ್ಸ್ – ಏನುಂಟು ಏನಿಲ್ಲ ಎನ್ನುವಂತಿಲ್ಲ! ವಾರಕ್ಕೆ ಇಬ್ಬರಂತೆ ಬೆಂಗಳೂರಿನಿಂದ ಸ್ಟಾಫ್‌ರಿಕ್ರೂಟ್‌ಮೆಂಟ್ ಆಗಿ ಬರುತ್ತಿದ್ದರು. ಮಹಿಳಾ ವಿಭಾಗಕ್ಕೆ ಸರ್ವೇ ಕಾರ್ಯಕ್ಕೆ ..ಕ್ಕೆ...ಕ್ಕೆ.. ಆರೋಗ್ಯ ವಿಭಾಗಕ್ಕೆ ಡಾ॥ ಸಬಿತಾ ಇದ್ದೇ ಇದ್ದರು. ಕಾರ್ಯಕ್ಷೇತ್ರದ 15 ಹಳ್ಳಿಗಳಲ್ಲಿ (ಸ್ಥಳೀಯ ಕಾರ್ಯಕರ್ತರಿಗೆ ಅವರವರ ಅಂತಸ್ಸಿಗೆ ತಕ್ಕಂತೆ ಇಗ್ಗಾಲಿ–ವಾಹನ ಸೌಕರ್ಯ) ಕೊನೆಯಲ್ಲಿ ಪ್ರಾಜೆಕ್ಟ್ ಆಫೀಸಿಗೆಂದು ಒಂದು ಜೀಪು ಕೂಡ ಬಂತು. ಯಾವುದಕ್ಕೂ ಕೊರತೆ ಇರಲಿಲ್ಲ ; ಆದರೆ, ವಾಟರ್‌ಶೆಡ್ ಪ್ರೋಗ್ರಾಂ ಮಾತ್ರ ಇನ್ನೂ ಕನಸಿನಗಂಟಾಗಿಯೇ ಉಳಿದಿತ್ತು!

ಕಮಲಾಪುರದ ಜಲಾನಯನ ಪ್ರದೇಶ ಅಭಿವೃದ್ಧಿ ಪ್ರೊಜೆಕ್ಟ್ ಒಂದು ವಿಶಿಷ್ಟ ರೀತಿಯ ನಿರ್ವಹಣಾ ವಿಧಾನದ್ದು. ಭಾರತ ಸರಕಾರದ ಅನುಮೋದನೆಯೊಂದಿಗೆ ಕರ್ನಾಟಕ ರಾಜ್ಯ ಸರಕಾರವು ಸ್ವಿಜರ್‌ಲ್ಯಾಂಡ್ ಸರಕಾರದ ಅನುದಾನಿತ ಸ್ವಯಂಸೇವಾಸಂಸ್ಥೆ (ಸ್ವಿಸ್ ಡೆವಲಪ್‌ಮೆಂಟ್ ಕೋ ಆಪರೇಶನ್) ಮತ್ತು ಬೆಂಗಳೂರಿನ ಮೈರಾಡ ಸ್ವಯಂಸೇವಾಸಂಸ್ಥೆಗಳ ನಡುವೆ ಆದ ಒಪ್ಪಂದದ ಪ್ರಕಾರ ಈ ಕಮಲಾಪುರ ವಾಟರ್‌ಶೆಡ್‌ಡೆವಲಪ್‌ಮೆಂಟ್ ಪ್ರೋಗ್ರಾಂ ಅಧಿಕೃತ ಚಾಲನೆ ದೊರಕಬೇಕಾಗಿತ್ತು. ಸರಕಾರದಿಂದ ಸರಕಾರಕ್ಕೆ, ಅಲ್ಲಿಂದ ಸಂಸ್ಥೆಗಳಿಂದ ಸಂಸ್ಥೆಗಳಿಗೆ ಎಷ್ಟೋ ಬಾರಿ ಪತ್ರ ವ್ಯವಹಾರ, ನಿಯೋಗ ಭೇಟಿ. ಚರ್ಚೆಗಳು ನಡೆದದ್ದು ಅಲ್ಲಿವರೆಗೆ (ಸುಮಾರು 3೦ ತಿಂಗಳು ಕಾಲಹರಣವಾಯಿತು) ಕೊನೆಗೊಮ್ಮೆ 'ಮೈತ್ರಿಕರಾರು' ಎಂದರೆ 'ಮೆಮರಾಂಡಂ ಆಫ್ ಅಂಡರ್‌ಸ್ಟಾಂಡಿಂಗ್'ನ ಆಧಾರದ

ಮೇಲೆ ಪ್ರಾಜೆಕ್ಟ್ ತಾತ್ಕಾಲಿಕವಾಗಿ ಕಾರ್ಯಪ್ರವೃತ್ತವಾಯಿತು. ಮತ್ತೊಮ್ಮೆ 20 ತಿಂಗಳು ಕಳೆದುಹೋಗಿತ್ತು ಈ ಶುಭಗಳಿಗೆಯನ್ನು ನಾವು ಕಾಣಲು!

1980ರ ಸುಮಾರಿಗೆ ಗುಲಬರ್ಗಾ ಜಿಲ್ಲೆಯಲ್ಲಿ ಚೈತನ್ಯಶಾಲಿಗಳಾದ ಮೂವರು ಉತ್ಸಾಹಿ ತರುಣ ಅ.ಭಾ.ಸೇ. ಅಧಿಕಾರಿಗಳು ಮುಪ್ಪುರಿಗೊಂಡು ಈ ಯೋಜನೆ ಸಿದ್ಧಪಡಿಸಿದ್ದರು. ಅವರ ಪೈಕಿ ಪ್ರಸ್ತುತ ಅನೂಪ್‌ಕುಮಾರ್ ಪೂಜಾರಿ ಒಬ್ಬರೇ ಜಿಲ್ಲೆಯಲ್ಲಿ ಉಳಿದಿದ್ದರು. ಅದೇ ತಾನೇ ವಾಟರ್‌ಶೆಡ್ ಡೆವಲಪ್‌ಮೆಂಟ್ ವಿಚಾರದತ್ತ ಭಾರತಸರಕಾರ ಗಮನ ಹರಿಸಿತ್ತು. ರಾಜ್ಯ ಸರಕಾರ ಹೂಂಗುಟ್ಟಿತ್ತು. ನಿತ್ಯ ಬರಗಾಲದ ಜಿಲ್ಲೆಯೆಂದೇ ಕುಖ್ಯಾತಿಗಳಿಸಿದ್ದ ಗುಲಬರ್ಗಾ ಜಿಲ್ಲೆಯಲ್ಲಿ ಇಂಥದೊಂದು ಪ್ರಾಜೆಕ್ಟನ್ನು ನಿರ್ವಹಿಸುವ ಆಸಕ್ತಿ ಈ ತ್ರಿಮೂರ್ತಿಗಳಲ್ಲಿ ಉದ್ಭವಿಸಿತು. ಸರಕಾರೀ ಇಲಾಖೆಯ ಬಾಬಿನಲ್ಲಿ ನಂಜನಗೂಡು ಬಳಿ (ಒಂದು ಪ್ರಾಯೋಜಕ ಪ್ರಾಜೆಕ್ಟ್ ಪ್ರಾರಂಭವಾಗಿತ್ತು ಎಂಬುದರಿಂದ) ಸ್ವಯಂ ಸೇವಾಸಂಸ್ಥೆಯ ಸಹಯೋಗದೊಂದಿಗೆ ಗುಲಬರ್ಗಾ ಜಿಲ್ಲೆಯ ಕಮಲಾಪುರ (ಬೀದರ್ ಗಡಿಭಾಗ)ದಲ್ಲಿ ಪ್ರಾರಂಭಿಸುವ ಒಂದು ಕ್ರಿಯಾಯೋಜನೆಯನ್ನು ಬಹಳ ಮುತುವರ್ಜಿಯಿಂದ ಸಮರ್ಪಕವಾಗಿ ಸಿದ್ಧಪಡಿಸಿ, ಸರಕಾರದ ಮುಂದಿಟ್ಟರು. "ಮೈರಾಡ"ದ ಸಹಯೋಗದೊಂದಿಗೆ ಆಮೆಗತಿಯ ಸರಕಾರೀ ಉತ್ಸಾಹದಿಂದ "ಪೇಪರ್‌ಗಳು" ಮಾತ್ರ ಮುಂದೆ ಸರಿಯುತ್ತಿದ್ದವು ಅಂತ ಕಾಣುತ್ತದೆ. (ಈ ನಡುವೆ ಇಬ್ಬರು ಸ್ನೇಹಿತರು ಬೇರೆಡೆಗೆ ವರ್ಗವಾಗಿ ಹೋದರು. ಅನೂಪ ಪೂಜಾರಿ ಒಬ್ಬರು ಮಾತ್ರ ಗುಲಬರ್ಗಾದಲ್ಲಿ ಉಳಿದಿದ್ದರು) ಈ ಹೊತ್ತಿನಲ್ಲಿ ನಾನು ಮೈರಾಡ ಪ್ರಾಜೆಕ್ಟ ಆಫೀಸನ್ನು ಸದ್ದಿಲ್ಲದೆ ತೆರೆದೆ. ಅತ್ಯಂತ ಸಂತೋಷದಿಂದ ಪೂಜಾರಿಯವರು ನಮಗೆ ಸ್ವಾಗತ ನೀಡಿದರು. ಪ್ರಮುಖ ಅಧಿಕಾರಿಗಳ ಸಭೆ ಕರೆಧು ಪರಿಚಯಿಸಿದರು. ಜಿಲ್ಲಾಧಿಕಾರಿಯವರೊಂದಿಗೆ ಅಧಿಕೃತ ಭೇಟಿ ಏರ್ಪಡಿಸಿದರು. ಬಿ.ಡಿ.ಓ., ತಹಶೀಲ್‌ದಾರ್ ಮೊದಲಾದವರು ಕೃಷಿ, ಪಶು, ಆರೋಗ್ಯ, ಶಿಕ್ಷಣ, ಸಹಕಾರ ಮೊದಲಾದ ಇಲಾಖೆಯವರು ಸಹಕರಿಸುವಂತೆ ಆದೇಶಿಸಿದರು.

ಕಚೇರಿ ತುಂಬ ಆಫೀಸರುಗಳು; ಗ್ರಾಮಾಂತರಗಳ 'ಎನಿಮೇಟರ್'ಗಳು, ಅವರವರಿಗೆ ತಕ್ಕ ವಾಹನಗಳು, ಅಷ್ಟಿಷ್ಟು ದಿನಭತ್ತೆ (ಹಳ್ಳಿಗೆ ಹೋದರೆ ಮಾತ್ರ) ಹೀಗಾಗಿ'ಕ್ಷೇತ್ರಯಾತ್ರೆ' ಪ್ರಾರಂಭವಾಯಿತು. ಮುಂಜಾನೆ 9 ಗಂಟೆಗೆ ಕಚೇರಿಯ ಹಾಜರಿ ಪಟ್ಟಿಯಲ್ಲಿ ರುಜುಹಾಕಿ, ಸಿಕ್ಕಿದ ಕುರ್ಚಿಯಲ್ಲಿ ಕುಳಿತುಕೊಂಡು ಯಾವುದಾದರೊಂದು ಪೇಪರಿನ ಪುಟಮಗಚುತ್ತ ಅರ್ಧ-ಮುಕ್ಕಾಲು ಗಂಟೆ ಕಾಲಹರಣ ಮಾಡುವುದು, ಅನಂತರ ಇದ್ದಕ್ಕಿದ್ದ ಹಾಗೆ ಕರ್ತವ್ಯಪರಾಯಣತೆ ನೆನಪಿಗೆ ಬಂದಂತೆ ಎದ್ದುಬಿದ್ದು ಎಂದಿನಂತೆ, ಸರ್ರನೆ ವಾಹನ ಚಾಲನೆ ಮಾಡಿ ಕ್ಷೇತ್ರದತ್ತ ದೌಡಾಯಿಸುವುದು. 11 ಗಂಟೆಗೆ 'ಹಳ್ಳಿ' ತಲುಪುವುದು. ಹತ್ತಾರು

ಮನೆ, ಎರಡು ಮೂರು ಕೇರಿ ಸುತ್ತುಹಾಕುವುದು. (ವೃದ್ಧರು ವಿನಾ ಇನ್ನಾರೂ ಇರುವುದಿಲ್ಲ. ಎಲ್ಲರೂ ಹೊಲಗದ್ದೆಗಳಲ್ಲಿ ದುಡಿಯಲಿಕ್ಕೆ ಅಥವಾ ಕೂಲಿಗೆ ಹೊರಟು ಹೋಗಿರುತ್ತಿದ್ದರು). ಒಂದಿಷ್ಟುಹೊತ್ತು ಅವರಿವರ ಜತೆ ಎಂದರೆ ಬೀಡಿಅಂಗಡಿ, ಚಾದುಕಾನ್‌ನಲ್ಲಿ ಕುಳಿತಿರುತ್ತಿದ್ದ ಬೇಕಾರ್‌ಮಂದಿ (ಕೆಲಸವಿಲ್ಲದವರು), ಅವರು–ಇವರು ಅಂತ ನಾಲ್ಕಾರು ಜನರ ಜತೆಗೆ 'ಮೈರಾಡ'ಬಗ್ಗೆ ಅದು–ಇದು ಮಾತಾಡಿ, ಮತ್ತೊಮ್ಮೆ ಬರುವ ಆಶ್ವಾಸನೆ ನೀಡಿ, ವಾಪಸಾಗುತ್ತಿದ್ದರು. ವಾರಾಂತ್ಯದ ಸ್ಟಾಫ್ ಮೀಟಿಂಗ್'ನಲ್ಲಿ ಚಿಕ್ಕ ಚೊಕ್ಕ ವರದಿ ಹಾಜರುಪಡಿಸುತ್ತಿದ್ದರು.

ಎರಡು ಮೂರು ವಾರಗಳಷ್ಟು ಇದೇ ಕಾರ್ಯಕ್ರಮ ನಡೆಯುವುದನ್ನು ಕಂಡುಕಂಡು ಸಾಕಾಗಿ ಹೊಸತೊಂದು ಪಾಠ ಪಟ್ಟಿ–ಅಲ್ಲ ಕಾರ್ಯಪಟ್ಟಿ ಸಿದ್ಧಪಡಿಸಲು ಎಲ್ಲರನ್ನು ಕಲೆಹಾಕಿ 'ಸಮಾಲೋಚನಾ ಸಭೆ' ನಡೆಸಿದೆ. ಅದಕ್ಕೆ ಬಿ.ಡಿ.ಓ. ಹಾಗೂ ಹಲವು ಇಲಾಖೆಗಳ ಅಧಿಕಾರಿಗಳನ್ನೂ ಆಹ್ವಾನಿಸಲಾಗಿತ್ತು. ಕೃಷಿ ಇಲಾಖೆಯ ನೆರವಿನಿಂದ ಮಣ್ಣುಪರೀಕ್ಷೆ, ಮುಂಬರುವ ಹಂಗಾಮಿನ ಬಿತ್ತನೆಗೆ ಸೂಕ್ತವಾದ ಬೀಜ, ಗೊಬ್ಬರಗಳ ಆಯ್ಕೆ – ಮಿಶ್ರಬೆಳೆ ಪ್ರಯೋಗಗಳ ಪ್ರಚಾರ ಇತ್ಯಾದಿ ಕಾರ್ಯವನ್ನು ಪ್ರಾರಂಭಿಸುವುದು, ಪಶುಸಂಗೋಪನಾ ಇಲಾಖೆಯ ಸಹಕಾರದಿಂದ ಗ್ರಾಮಾಂತರ ಪ್ರದೇಶಗಳಲ್ಲಿ/ವಾರದ ಸಂತೆಗಳಲ್ಲಿ/ಜಾತ್ರೆಗಳಲ್ಲಿ ಪಶುಚಿಕಿತ್ಸಾ ಶಿಬಿರಗಳನ್ನು ನಡೆಸುವುದು, ಉಪಯುಕ್ತ ಪಶುಮೇವು 'ಸೈಲೋ' ಪದ್ಧತಿಯ ಪ್ರಚಾರ– ಪ್ರಾತ್ಯಕ್ಷತೆ, ಮಹಿಳೆ ಮತ್ತು ಮಕ್ಕಳ ಸಂಕ್ಷೇಮ ಇಲಾಖೆಯ ಸಹಯೋಗದಿಂದ ಗರ್ಭಿಣಿ ಬಾಣಂತಿ ಮತ್ತು ಶಿಶುಗಳ ಸಂರಕ್ಷಣಾ ಕಾರ್ಯಗಳಲ್ಲಿ ನಿರತರಾಗಿರುವ ಅಂಗನವಾಡಿ ಕಾರ್ಯಕರ್ತೆಯರು ಹಾಗೂ ಎಎನ್‌ಎಮ್‌ರ ಕಾರ್ಯಗಳಿಗೆ ಪ್ರೋತ್ಸಾಹ ನೀಡಲು ವಿಶೇಷವಾಗಿ ಸಿಹೆಚ್‌ಪಿ (ಕಮ್ಯೂನಿಟಿ ಹೆಲ್ತ್ ಪ್ರಮೋಟರ್) ಎಂಬ ಸ್ವಯಂಸೇವಕರ ಪಡೆಯನ್ನು ನಿರ್ಮಿಸುವುದು, ತರಬೇತಿ ಶಿಬಿರಗಳನ್ನು ಮಾಡುವುದು, ಮೊದಲಾದ ಕಾರ್ಯಕ್ರಮಗಳನ್ನು ಪ್ರಾರಂಭಿಸಲು ನಿರ್ಧರಿಸಲಾಯಿತು.

ಜಿಲ್ಲೆಯಲ್ಲಿ ಕುಷ್ಠರೋಗಗಳ ಚಿಕಿತ್ಸಾವಿಭಾಗವಿದ್ದು ಉಚಿತವಾಗಿ ಔಷಧಿ ನೀಡುವ ಕಾರ್ಯಕ್ರಮ ನಡೆಯುತ್ತಿದ್ದರೂ ಇತರ ಚಟುವಟಿಕೆಗಳು ಹೇಳಿಕೊಳ್ಳುವಷ್ಟಿರಲಿಲ್ಲ. ಕುಷ್ಠರೋಗ ನಿಯಂತ್ರಣ ವೈದ್ಯಾಧಿಕಾರಿ ಡಾ॥ ಬಡಶೇಶಿಯವರ ಪರಿಚಯ ಇದ್ದುದರಿಂದ ನಮ್ಮ ಕಾರ್ಯಕರ್ತರೂ ಸರಕಾರೀ ಜನಗಳೂ ಒಟ್ಟಾಗಿ ಕೆಲಸ ನಿರ್ವಹಿಸುವಂತೆ ಮಾಡಲು ಸಾಧ್ಯವಾಯಿತು. ಕುಷ್ಠರೋಗಿಗಳಿಗೆ ಒಂದಿಷ್ಟು ವಸ್ತುರೂಪದ ಸಹಾಯವನ್ನೂ ಒದಗಿಸಿದ್ದಾಯಿತು. ಜನಾಂದೋಲನದ ದೆಸೆಯಲ್ಲಿ ನಾಲ್ಕಾರು ಪ್ರಚಾರ ಕಾರ್ಯಗಳೂ ನಡೆದವು. ಮಹಾತ್ಮಾ ಗಾಂಧಿಯವರು ಸೇವಾಗ್ರಾಮ ಆಶ್ರಮದ ತಮ್ಮ ಕುಟೀರದಲ್ಲಿ ಕುಷ್ಠರೋಗಿಯಾಗಿದ್ದ ಪ್ರೊ॥ ಪರಾಚುರೆ ಶಾಸ್ತ್ರಿಜಿಯವರನ್ನು ಸ್ವತಃ ಸ್ವಹಸ್ತದಿಂದ ಉಪಚರಿಸುತ್ತಿದ್ದ ಭಾವಚಿತ್ರವನ್ನು ಸ್ಥಳೀಯ

ಕಲಾವಿದರು ರಚಿಸಿಕೊಟ್ಟರು. ಅದನ್ನು ಹಲವಾರು ಸಭೆ ಸಮಾರಂಭಗಳಲ್ಲಿ ವಿವಿಧ ಸ್ಥಳಗಳಲ್ಲಿ ಪ್ರದರ್ಶಿಸಲಾಯಿತು. ಅದು ಉತ್ತಮ ಪ್ರಚಾರ ಮಾಧ್ಯಮದಂತೆ ಆಯಿತು.

ಇಷ್ಟೇ ಅಲ್ಲದೆ, ಕುಷ್ಠ ನಿವಾರಣೆಗಾಗಿ ವಿಶೇಷವಾದ ಕಾರ್ಯಕ್ರಮವೊಂದನ್ನು ಪ್ರಾರಂಭಿಸುವ ಪ್ರಯತ್ನವೂ ನಡೆಯಿತು. ಭಾರತಸರಕಾರದ ಅನುದಾನಿತವಾದ ಆ ಕಾರ್ಯಕ್ರಮಕ್ಕೆ ವಿದೇಶೀ ನೆರವು ನೀಡುವ ಸಂಸ್ಥೆಯ ಸಹಮತ ದೊರಕದ ಕಾರಣದಿಂದಾಗಿ ಅದು ಕಾರ್ಯರೂಪಕ್ಕೆ ಬರಲಿಲ್ಲ.

ಗುಲಬರ್ಗಾ ಜಿಲ್ಲೆ 'ನಿತ್ಯ ಬರಗಾಲದ ಭೂಮಿ' ಎಂಬುದಾಗಿ ಕುಖ್ಯಾತವಾಗಿದ್ದರೂ ಮುಖ್ಯವಾಗಿ ಬೆಳೆಗಳು (ಕೃಷಿ ಉತ್ಪನ್ನಗಳು) ಕುಂಠಿತವಾಗುವ ಮಟ್ಟಿಗೆ ಸೀಮಿತವಾಗುತ್ತಿತ್ತು. ನಿರುದ್ಯೋಗ, ಬೆಳೆ ಹಾನಿ, ಹಣಕಾಸಿನ ಮುಗ್ಗಟ್ಟಿಗೂ ಕಾರಣವಾಗುತ್ತಿತ್ತು. ಜನ ಕೆಲಸ ಅರಸುತ್ತಾ ಗುಳೆಹೋಗಿರುತ್ತಾರೆ. ಅಲ್ಲದೆ ಪ್ರಸಕ್ತ ವರ್ಷ (1984–85) ಕಮಲಾಪುರ ಭಾಗದ ಹಲವಾರು ಹಳ್ಳಿಗಳಲ್ಲಿ ಮುಖ್ಯವಾಗಿ ಲಂಬಾಣಿತಾಂಡಗಳಲ್ಲಿ ಕುಡಿಯುವ ನೀರಿನ ಅಭಾವ ತೀವ್ರವಾಗಿ ಕಾಣಿಸಿಕೊಂಡಿತ್ತು. 'ನಮಗೆ ಕುಡಿಯುವ ನೀರು ದೊರಕುವಂತೆ ಸಹಾಯ ಮಾಡಿ' ಎಂಬ ಬೇಡಿಕೆ ಹಲವಾರು ಹಳ್ಳಿಗಳಿಂದ ಪ್ರತಿದಿನ ಎಂಬಂತೆ ಬರತೊಡಗಿತು. ರಾಜ್ಯ ಸರಕಾರವು ಕೆಲವೆಡೆ ಕೊಳವೆಬಾವಿ ಕೊರೆಯುವ ಯೋಜನೆಯನ್ನು ಕೈಗೆತ್ತಿಕೊಂಡಿತ್ತಾದರೂ – 'ಪ್ರಭಾವಶಾಲಿಗಳ' ಊರುಗಳಿಗೆ ಅವು ದಕ್ಕುತ್ತಿದ್ದವು. ಹೀಗಾಗಿ ಜಲಾನಯನ ಪ್ರದೇಶದಲ್ಲಿ ಜನ ಹಾಗೂ ಜಾನುವಾರುಗಳ ಸಂಕಷ್ಟ ಪರಿಹಾರದ ತುರ್ತುಕಾರ್ಯ ಕೈಗೊಳ್ಳುವ ಅನಿವಾರ್ಯತೆ ಉಂಟಾಯಿತು.

ಸೋಲಾಪುರದ ಸ್ವಯಂಸೇವಾಸಂಸ್ಥೆಯೊಂದು ಅತ್ಯಂತ ಕಡಿಮೆ ವೆಚ್ಚದಲ್ಲಿ ಕೊಳವೆಬಾವಿ ಕೊರೆದುಕೊಡುವುದಕ್ಕೆ ಮುಂದೆಬಂತು. ಇನ್ನೊಂದು ಸಂಸ್ಥೆ 'ಅಂತರ್ಜಲ ಶೋಧನೆ' ನಡೆಸಿಕೊಟ್ಟಿತು. ಜಿಲ್ಲಾಧಿಕಾರಿ ಸಿಮೆಂಟ್ 'ಕೋಟಾ' ಬಿಡುಗಡೆ ಮಾಡಿದರು. ಸಂಕ್ಷಿಪ್ತವಾದ ಆದರೆ ಪರಿಣಾಮಕಾರಿಯಾದ ನಿವೇದನಾ ಪತ್ರವನ್ನು ಸಿದ್ಧಪಡಿಸಿ ಕಳುಹಿಸಿಕೊಟ್ಟಾಗ 'ಮೈರಾಡ' ಅನುಮೋದನೆ ನೀಡಿತು. ವಾರದೊಳಗಾಗಿ ಒಂದಿಷ್ಟು ಹಣವನ್ನೂ ಕಳುಹಿಸಿಕೊಟ್ಟಿತು. ಸಮರೋಪಾದಿಯಲ್ಲಿ ಎಂಬಂತೆ ಕಮಲಾಪುರದ ಹಲವು ಹಳ್ಳಿ, ತಾಂಡಾಗಳಿಗೆ ಅನುಕೂಲವಾಗುವಂತೆ ಮೊದಲ ಹಂತದಲ್ಲೇ 20 –25 ಬೋರ್‌ವೆಲ್‌ಗಳನ್ನು ಕೊರೆಯಲಾಯಿತು ಹಾಗೂ ಕಾರ್ಯಕ್ರಮವು 4 ತಿಂಗಳುಗಳತನಕ ಮುಂದುವರಿಯಿತು. ತಮಗೆ ಅತ್ಯಗತ್ಯವಾಗಿ ಬೇಕಾಗಿದ್ದ ಕುಡಿಯುವ ನೀರನ್ನು ಒದಗಿಸಿದುದಕ್ಕಾಗಿ ಜನರು ಸಂತೋಷಪಟ್ಟರು.

ಕುಡಿಯುವ ನೀರಿನ ಸಮಸ್ಯೆಯನ್ನು ಸ್ವಲ್ಪಮಟ್ಟಿಗೆ ತೊಲಗಿಸಲು ಪ್ರಯತ್ನಿಸುತ್ತಿದ್ದಾಗ ಇನ್ನೊಂದು ಜ್ವಲಂತ ಸಮಸ್ಯೆ ಎದುರು ಬಂದು ನಿಂತಿತು.

ಕೆಲವೊಂದು ಮನೆಗಳಲ್ಲಿ ವೃದ್ಧರು ಮತ್ತು ಮಕ್ಕಳು ಮಾತ್ರ ಉಳಿದಿದ್ದು - ದುಡಿಯುವ ಕೈಗಳು ಕೆಲಸ ಹುಡುಕಿಕೊಂಡು ದೂರ ಪ್ರದೇಶಗಳಿಗೆ ಹೋಗಿದ್ದು, ಅವರು ಆಗಾಗ ಕಳುಹಿಸುತ್ತಿದ್ದ ಅಷ್ಟಿಷ್ಟು ಪುಡಿಗಾಸುಗಳನ್ನೆ ನಂಬಿ ಉಪವಾಸ -ವನವಾಸ ಅನುಭವಿಸುತ್ತಿರುವ ದೃಶ್ಯ ಕರುಳುಹಿಂಡುವಂತಿತ್ತು. ಇಂತಹವರನ್ನು ಪಟ್ಟಿ ಮಾಡಿ ಒಂದೊಂದು ಗ್ರಾಮದಲ್ಲೂ ಪ್ರತ್ಯೇಕವಾಗಿ ಗುಂಪುಗೂಡಿಸಿದಾಗ ದಿಗ್ಭ್ರಮೆ ಮೂಡಿಸುವಷ್ಟು ಸಂಖ್ಯೆಯ 'ನಿರಾಶ್ರಿತರು' ಕಾಣಿಸಿದರು. ಇವರಿಗೆ ಕನಿಷ್ಟ ದಿವಸಕ್ಕೆ ಒಂದು ಹೊತ್ತಿನ ಊಟಕ್ಕಾಗುವಷ್ಟು (ಗಂಜಿ ಜೋಳದ ನುಚ್ಚು) ಒದಗಿಸುವುದು ಅನಿವಾರ್ಯವೆಂದು ಮನಗಂಡು, ಅದಕ್ಕಾಗಿ ಪ್ರತ್ಯೇಕವಾದ 'ಗಂಜಿಕೇಂದ್ರ' ಕಾರ್ಯಕ್ರಮವನ್ನು ರೂಪಿಸಲಾಯಿತು. (ಚಿತ್ತಾಪುರದಲ್ಲಿ 10-12ವರ್ಷಗಳ ಹಿಂದೆ ಇಂತಹದೊಂದು ಕಾರ್ಯಕ್ರಮವನ್ನು ದೊಡ್ಡ ಪ್ರಮಾಣದಲ್ಲಿ ಅಲ್ಲಿಯ ಯುವಕಸಂಘದ ಮೂಲಕ ನಿರ್ವಹಿಸಿದ್ದ ಅನುಭವ ಇನ್ನೂ ನೆನಪಿನಲ್ಲಿ ಇತ್ತು.). ಮೊದಲ ದಿವಸದಂದು ಜೋಳದ ಗಂಜಿಯನ್ನು ಬೇಯಿಸುವ ಕಾರ್ಯಕ್ರಮವನ್ನು ಉದ್ಘಾಟಿಸಲು ಜಿಲ್ಲಾಧಿಕಾರಿಯವರನ್ನು ಆಹ್ವಾನಿಸಲು ಹೋಗಿ ವಿನಂತಿಸಿಕೊಂಡಾಗ ಅವರು ನಿರಾಕರಿಸಿದ್ದೇ ಅಲ್ಲದೆ, 'ಬರಗಾಲ'ದ ಭೀತಿ ಉಂಟುಮಾಡಿ ಜನರಲ್ಲಿ ಗಾಬರಿ ಹಬ್ಬಿಸುವಂಥ ಕಾರ್ಯವಿದೆಂದು ಹೇಳಿ ಕೈಬಿಡಲು ಆದೇಶಿಸಿದರು! ವಿಧಿಯಿಲ್ಲದೆ ಪ್ರೋಗ್ರಾಂನ್ನು ಅಲ್ಲೇ ಮುಕ್ತಾಯಗೊಳಿಸಬೇಕಾಯಿತು. ಇದರ ಜೊತೆಗೆ ಪಶುಸಂರಕ್ಷಣಾಕೇಂದ್ರವೊಂದನ್ನು ಕೂಡ ನಿರ್ವಹಿಸುವ ಕಾರ್ಯಕ್ರಮವಿದ್ದು ಅದನ್ನೂ ಕೈಬಿಡಲಾಯಿತು.

ಬರಗಾಲದ/ಬೆಂಗಾಡಿನ/ಬಂಜರು ಭೂಮಿ ತಜ್ಞರ ತಂಡವೊಂದು ಮೈರಾಡದ ಆಹ್ವಾನದ ಪ್ರಕಾರ ಆಗಮಿಸಿತು. ಸದಸ್ಯರು ಮೂರು ದಿವಸ ತಂಗಿ, ಸುತ್ತಾಡಿ ಹಿಂದಿರುಗಿದ ಏಳು ದಿನಗಳಲ್ಲಿ ಒಂದು ಸಮೀಕ್ಷಾ ವರದಿಯನ್ನು ಕಳುಹಿಸಿಕೊಟ್ಟರು. ದೆಹಲಿಯಲ್ಲಿನ 'ಸ್ವಿಜರ್‌ಲ್ಯಾಂಡ್' 'ಎಂಬೆಸ್ಸಿ'ಗೆ ಹೊಂದಿಕೊಂಡಿದ್ದ ಅಂತರರಾಷ್ಟ್ರೀಯ ತಜ್ಞರ ಸಮಿತಿ ಡಾ॥ ರುಡಿಹಾಗರ್ ಸಾರಥ್ಯದಲ್ಲಿ ಈ ತಂಡ ಬಂದಿತು. ಹೀಗೆ ಇನ್ನೊಂದು, ಮತ್ತೊಂದು ಸಮಿತಿಗಳೇ ಸಮಿತಿಗಳು. (ನಮ್ಮ ಹೆಚ್ಚಿನ ಸಮಯ ಇವರನ್ನು ತಿರುಗಾಡಿಸುವುದರಲ್ಲೇ ಕಳೆದು ಹೋಗುತ್ತಿತ್ತು!)

ಈ ಪ್ರಾಜೆಕ್ಟ್‌ಗೆ ತಾತ್ಕಾಲಿಕ ಸಲಹೆಗಾರರ ಬರೋಣ ಹೋಗೋಣಗಳ ನಡುವೆ ದೀರ್ಘಾವಧಿಯ ಸಲಹೆಗಾರರೊಬ್ಬರು ತಮ್ಮ ಹೆಂಡತಿ ಮತ್ತು ಆಕೆಯ 2 ಸಾಕುನಾಯಿಗಳೊಂದಿಗೆ ವಿದೇಶದಿಂದ ಬಂದಿಳಿದರು. ಅವರೇ ಡಾ॥ ಫೆರಾರಿ ದಂಪತಿ. ಅವರಿಗೊಂದು ವಾಸದ ಮನೆ. ಮನೆಕೆಲಸಕ್ಕಾಗಿ ಒಕ್ಕಲಗಿತ್ತಿ, ನಾಯಿಗಳಿಗೆ ಒಂದು ಪ್ರತ್ಯೇಕ ಕೊಠಡಿಯ ಸಿದ್ಧತೆ - ಇತ್ಯಾದಿ ಇತ್ಯಾದಿ ವ್ಯವಸ್ಥೆಗಳನ್ನು ಮಾಡಿಕೊಡಬೇಕಾಯಿತು. (ಇಲ್ಲೊಂದು ವಿಶೇಷವೇನೆಂದರೆ ಈ ಮಹಾಶಯ

ಅಂತರರಾಷ್ಟ್ರೀಯ ಕಾನೂನು ತಜ್ಞರಾಗಿದ್ದರು. ರೆಡ್‌ಕ್ರಾಸ್ ಸಂಸ್ಥೆಯಲ್ಲಿ ಹಲವು ವರ್ಷ ದುಡಿದ ಅನುಭವ. 'ವಾಟರ್‌ಶೆಡ್' ಪ್ರೋಗ್ರಾಂ ಬಗ್ಗೆ ಓದಿಕೊಂಡಿದ್ದೆಷ್ಟೋ ಅಷ್ಟೇ. ಈ ದಂಪತಿಗೆ ಕನ್ನಡ ಕಲಿಯಲು ಆಸೆಯಾದಾಗ 'ಟ್ಯೂಶನ್' ವ್ಯವಸ್ಥೆ ಮಾಡಲಾಯಿತು. ಅಂತೂ ಕೈತುಂಬ ಕೆಲಸವೇ ಕೆಲಸ (ನನಗೆ!)

ಮೈರಾಡದ ವತಿಯಿಂದ 'ವಿಷಯಪಟು'ವೊಬ್ಬರು ಧಿಡೀರ್ ಆಗಮಿಸಿದರು. ಅವರಿಗೆ 'ಕುಟ್ಟಿಸಾಬ' ಎಂದು ಅಡ್ಡಹೆಸರು – ಯಾರು ಸೂಚಿಸಿದರೋ ತಿಳಿಯದು, ಆದರೆ ಅದೇ ಖಾಯಂ ಆಯಿತು. ಜಲಾನಯನ ಪ್ರದೇಶಾಭಿವೃದ್ಧಿ ತಜ್ಞನೆಂಬುದಾಗಿ ಆಗಮಿಸಿದ ಈ ಕುಟ್ಟಿಸಾಹೇಬ ಎಂಬಿಎ ಮಾಡಿದ್ದ. ಗುಡ್ಡಗಾಡು ಪ್ರದೇಶದಲ್ಲಿಯೂ ಇದ್ದ. ಅದೆಲ್ಲ ಕೇರಳ–ತಮಿಳುನಾಡುಗಳ ಚಹಾತೋಟದ ಕಂಪನಿಗಳಲ್ಲಿ! ಇವನ ಸಲಹೆಯಂತೆ ಬೆಂಗಳೂರಿನ 'ಟರ್ಫ್ ಕ್ಲಬ್'ನಲ್ಲಿದ್ದ ಹುದ್ದೆಯ ಕುದುರೆ ಸಾಕಾಣಿಕೆ ಕೇಂದ್ರದ ಹುಲ್ಲುಗಾವಲು ಮೇಲ್ವಿಚಾರಕನಾಗಿದ್ದ ಇಂಜಿನಿಯರ್ ಈ ಮಹಾಶಯನನ್ನೂ, ಆಟ, ಕೂಟ, ಬೇಟ, ಚಿಕ್ಕ ಚಿಕ್ಕ ಹೊಡೆದಾಟಗಳಲ್ಲಿ ನಿಸ್ಸೀಮನಾಗಿದ್ದ ಇನ್ನೊಬ್ಬ ಮಹನೀಯನೊಬ್ಬನನ್ನೂ ಸಾಮಾಜಿಕ ಕೃಷಿತಜ್ಞ ಸ್ಥಾನಕ್ಕೆ ನೇಮಿಸಿ ಕೊಳ್ಳಲಾಯಿತು. ಈ ಮಹಾಶಯನ ಹೆಸರಿನ ಕೆಲವು ಅಕ್ಷರಗಳನ್ನು ಜೋಡಿಸಿ 'ಜವರಾಯಪ್ಪ' ಎಂಬುದಾಗಿ ಕರೆಯುವುದು ರೂಢಿಯಾಯಿತು. 'MSW' ಪದವೀಧರರಾಗಿದ್ದರೂ ತಿರುಗಾಡುವುದೇ ರೂಢಿಯಾಗಿದ್ದ ಇವರಿಗೆ 'ದಂಡಪಿಂಡ' ಅಡ್ಡಹೆಸರು ದಕ್ಕಿತು. ಸರಕಾರೀ ಇಲಾಖೆಯಲ್ಲಿ ನಾಲ್ಕು ವರುಷ ಇದ್ದು ಯಾವುದೋ ಒಂದು (ಪ್ರೇಮ?) ಪ್ರಕರಣದ ನಿಮಿತ್ತ ಹೊರಬಂದು ವಾಟರ್‌ಶೆಡ್ಡಿಗೆ ಸೇರಿಕೊಂಡ ಕೆ.ಎ.ಎಸ್. (ನಪಾಸ್) ಮಹಿಳೆ (ಅಡ್ಡಹೆಸರು: ನಾಗಿಣಿ). ನೆಲ ಅಳೆಯುವ ಕೆಲಸದಲ್ಲಿ ಪರಿಣಿತ ಬಿಎಲ್ ಕೋಲಾರನಿಗೆ ಚಿರಕುಮಾರ– ಹೀಗೆ ನಮ್ಮವರ ಸಂಖ್ಯಾಬಲ ಹಿಗ್ಗಿತು. ಎಕೌಂಟ್ಸ್ ವಿಭಾಗಕ್ಕೆ 'ದ್ವಾರಕೀ' ಎಂಬ ಒಂದು ಕಾಲು ಬೆಂಗಳೂರಲ್ಲಿ ಇನ್ನೊಂದು ಕಾಲು ಕಲಬುರ್ಗಿಯಲ್ಲಿ ಇರಿಸಿದ್ದ ('ತಿರುಬೋಕಿ' ನಾಮಾಂಕಿತ!) ವ್ಯಕ್ತಿ ಬಂದ. ಇವರೆಲ್ಲರ ಜತೆ ಏಗುವುದು ಪ್ರಾಜೆಕ್ಟರ್ ಆಫೀಸರ್ ಆದ ನನ್ನ ಹಾಗೂ ಕಾರ್ಯಾಲಯದ ಕಾರ್ಯದರ್ಶಿ (ಕಮ್ ಟೈಪಿಸ್ಟ್) ಆದ ವಿದ್ಯಾರ ಹೆಗಲಮೇಲಿನ ಭಾರ ಹೆಚ್ಚಿತು. ಆದರೂ ಹೇಗೋ ದಿನಗಳು ಕಳೆಯುತ್ತಿದ್ದವು. ತಿಂಗಳ ಮೊದಲ ತೇದಿಗೆ 'ಪಗಾರ'ದ ಚೆಕ್ ಕೈಗೆ ದೊರಕುತ್ತಿತ್ತು! ಬೆಂಗಳೂರಿನ 'ದಂಡಾಧೀಶ'ರು ಬಂದು 'ಹಳ್ಳಿಗೆ ಹೋಗಿ' ಬನ್ನಿ ಎಂದು ಆಜ್ಞಾಪಿಸಿದಾಗಷ್ಟೇ ಚುರುಕು ಮುಟ್ಟಿತು. ಈಗ ಮುಂಜಾನೆ ನೇರವಾಗಿ ಫೀಲ್ಡ್ ವಿಸಿಟಿಂಗ್ ಹೋಗಲು ಪ್ರಾರಂಭವಾಯಿತು. ಇನ್ನು ಕೆಲವರು ಫೀಲ್ಡ್ ಆಫೀಸಿನಲ್ಲೇ ರಾತ್ರಿ ವಸತಿ ಮಾಡುವುದು ಅನುಕೂಲವೆಂದುಕೊಂಡರು. ಬೇರೆ ಬೇರೆ ಪ್ರದೇಶಗಳ ಪ್ರಾಜೆಕ್ಟ್‌ಗಳಿಗೆ ಭೇಟಿ ಕೊಡುವುದೂ ಪ್ರಾರಂಭವಾಯಿತು. ಆರೋಗ್ಯ ಕಾರ್ಯಕ್ರಮಕ್ಕೆ ಸಂಬಂಧಿಸಿದವರು

ಮಹಾರಾಷ್ಟ್ರದ 'ಜಾಮ್‌ಖೇಡ್ ಪ್ರಾಜೆಕ್ಟ್'ಗೆ ಹೋಗಿ ಎಂದರು; ಇನ್ನು ಕೆಲವರು ಹೈದ್ರಾಬಾದಿನ ಡಿ.ಆರ್.ಡಿ.ಎಸ್. (ಡ್ರೈಲಾಂಡ್ ಡೆವಲಪ್‌ಮೆಂಟ್ ಸೊಸೈಟಿ- ಭಾರತ ಸರಕಾರ) ಸಂದರ್ಶಿಸಿದ್ದಾಯಿತು. ನಮ್ಮ ಕಮಲಾಪುರಕ್ಕೆ ಬಂದು ಕಾರ್ಯಕ್ರಮಗಳ ನಿರ್ವಹಣೆಗೆ ಸಲಹೆ ನೀಡಲು ಅಲ್ಲಿನ ಹಿರಿಯ ಅಧಿಕಾರಿ ಒಪ್ಪಿಕೊಂಡರು. ಮಳೆಗಾಲ ಸಮೀಪಿಸುತ್ತಿದ್ದಂತೆ, ಅವರ ಸಲಹೆ ಮೇರೆಗೆ ಅಂತರಬೆಳೆಯಾಗಿ (ಅಲ್ಪಾವಧಿಯ ಬೆಳೆಯಾಗಿ) ಬೆಳೆಸಲು ಅನುಕೂಲವಾದ ಧಾನ್ಯದ ತಳಿಗಳ ಬೀಜವನ್ನು ತಮಿಳುನಾಡಿಗೆ ಹೋಗಿ ಕಾರ್ಯಕರ್ತರು ಸ್ವತಃ ಖರೀದಿಸಿ ತಂದು, ಹಳ್ಳಿಗಳಲ್ಲಿ ಬಿತ್ತನೆಗೆ ಅನುಕೂಲ ಮಾಡಿಕೊಟ್ಟರು. ಮಿತವಾಗಿ ರಾಸಾಯನಿಕ ಗೊಬ್ಬರವನ್ನು ಕೊಟ್ಟಿಗೆ ಗೊಬ್ಬರದ ಜತೆಗೆ ಬೆರೆಸಿ ಬಳಸುವಂತೆ ರೈತರಿಗೆ ತಿಳುವಳಿಕೆ ನೀಡುವ ಪ್ರದರ್ಶನ- ಶಿಕ್ಷಣ ತರಬೇತಿ ವ್ಯವಸ್ಥೆಯೂ ಆಯಿತು. ನಬಾರ್ಡ್ ಬ್ಯಾಂಕಿನಲ್ಲಿದ್ದು ವಿ.ಆರ್.ಎಸ್. ಪಡೆದ ಹಿರಿಯರೊಬ್ಬರು ಈ ಕಾರ್ಯದ ನನ್ನ ನಿರ್ದೇಶಕರಾಗುತ್ತಿದ್ದ ಅರ್ಧದಲ್ಲೇ ವರ್ಗಾವಣೆಯಾಗಿ ಹೊರಟುಹೋದರು.

ಪ್ರಾಜೆಕ್ಟ್ ಪ್ರದೇಶವನ್ನಷ್ಟೇ ಅಲ್ಲದೆ ಅಕ್ಕಪಕ್ಕದ ಇನ್ನಿತರ ಗ್ರಾಮ ಹಾಗೂ ತಾಂಡಾಗಳಲ್ಲೂ ಪ್ರವೇಶಿಸಿದವು. ಕಣ್ಣಿನ ತಪಾಸಣಾ ಕಾರ್ಯಕ್ರಮಗಳನ್ನೂ ನಡೆಸಿದ ತರುವಾಯ ಸೊಂತೆ ಎಂಬ ಗ್ರಾಮದಲ್ಲಿ ಹಾಗೂ ಕಮಲಾಪುರದಲ್ಲಿ ಉಚಿತ ಶಸ್ತ್ರಚಿಕಿತ್ಸಾ ಶಿಬಿರಗಳನ್ನ ನಡೆಸಲಾಯಿತು. ಉಚಿತ ಔಷದೋಪಚಾರದ ಜೊತೆಗೆ ಅಗತ್ಯವಿದ್ದವರಿಗೆಲ್ಲ ಕನ್ನಡಕಗಳನ್ನು ಕೂಡ ಕೊಡುವುದು ಸಾಧ್ಯವಾಯಿತು. ಗುಲಬರ್ಗಾದ 'ಸೌದಾಗರ್' ಹಾಗೂ ಬೆಂಗಳೂರಿನ ಲಯನ್ಸ್‌ಕ್ಲಬ್ ಸಹಯೋಗದಿಂದ ಈ ಕಾರ್ಯ ನಡೆಯಿತು. ಈ ಎಲ್ಲ ಕಾರ್ಯಕ್ರಮಗಳಲ್ಲಿ ಉತ್ಸಾಹದಿಂದ ದುಡಿದ ಕಮಲಾಪುರದ ಯುವಕರ ಸೇವೆ ಪ್ರಶಂಸನೀಯ. ಅಷ್ಟೇ ಅಲ್ಲದೆ ಗುಲಬರ್ಗಾದ ಖಾಸಗೀ ವೈದ್ಯಕೀಯ ಕಾಲೇಜು ಹಾಗೂ ಸರ್ಕಾರೀ ಇಲಾಖೆಯ ನೆರವಿನಿಂದ ಡಾ॥ ದೇವೇಂದ್ರ ಚಿಂಚೋಳ್ಕರ್ ಅವರು ಈ ಸಂದರ್ಭದಲ್ಲಿ ಸರ್ಕಾರೀ ನೇತ್ರ ಚಿಕಿತ್ಸಾ ವಾಹನದ ಸೌಲಭ್ಯವನ್ನೂ ಒದಗಿಸುವುದಲ್ಲದೇ ತಾವೇ ಸ್ವತಃ ಎಲ್ಲಾ ಅಪರೇಶನ್‌ಗಳನ್ನು ಮಾಡಿದರು. ಅವರ ಸೇವಾಮನೋಭಾವ ಹಾಗೂ ದೃಷ್ಟಿದಾನ ಕಾರ್ಯಕೌಶಲ್ಯ ಅತ್ಯಂತ ಪ್ರಶಂಸನೀಯ ಹಾಗೂ ಆದರ್ಶಣೀಯ (ಅವರು ಈಗ ಸರಕಾರೀ ಸೇವೆಯಿಂದ ನಿವೃತ್ತರಾದರೂ ಸೇವಾಕಾರ್ಯವನ್ನು ನಡೆಸುತ್ತಿದ್ದಾರೆ ಎಂಬುದು ಸಂತೋಷಕರ)

ಒಂದಿರುಳು (ಕುಡಿದು) ಬೈಕ್‌ಏರಿ ಕಮಲಾಪುರದಿಂದ ಕಲಬುರ್ಗಿಗೆ 'ಕುದುರೆಸ್ವಾಮಿ' ಹೊರಟ. ಜತೆಗೆ ಶಿವಪುತ್ರಪ್ಪ ಎಂಬ 'ಕಾಫಿ' ಸ್ನೇಹಿತನನ್ನೂ ಹಿಂದೆ ಕೂಡಿಸಿಕೊಂಡು. ರಾತ್ರಿ ಹೊತ್ತು ಮಂದವಾದ ಗಾಳಿ ಬೀಸುತ್ತಿತ್ತು. ಮಸುಕಾಗಿ ಬೆಳದಿಂಗಳು ಹರಡಿತ್ತು. ಬೈಕಿನ ಲೈಟು ಬಹಳ ಪ್ರಕಾಶಮಾನವಾಗಿತ್ತು.

ಸ್ಪೀಡೋಮೀಟರ್‌ನಲ್ಲಿ 180KMPH ಎಂಬ ಅಂಕೆ ಸಾಮಿ ಕಣ್ಣಿಗೆ ಬಿದ್ದದ್ದೇ ತಡ– ಕುದುರೆ ಓಟದ ನೆನಪಾಯಿತೋ ಏನೋ–ಎಕ್ಸಿಲೇಟರನ್ನು ತಿರೂವಿದಿದ್ದೇ ತಿವಿದಿದ್ದು. ಇತಿಮಿತಿಯಿಲ್ಲದೆ ಬಿರುಗಾಳಿಯಂತೆ ಬೈಕ್ ಓಡತೊಡಗಿತು. ಕಾಫಿ ಮಿತ್ರ ನಿಧಾನಿಸುವಂತೆ ಎಷ್ಟು ಹೇಳಿದರೂ ಕೇಳದೆ ಇನ್ನಷ್ಟು ವೇಗವಾಗಿ ಓಡಿಸಲು ಸ್ವಾಮಿ ನಿಶ್ಚೈಸಿದ. ಅಡ್ಡರಸ್ತೆಯಿಂದ ಬರುತ್ತಿದ್ದ ಎತ್ತಿನಗಾಡಿಗೆ ಗುದ್ದಿದ ಬೈಕ್ ಹಾರಿ ದೂರದಲ್ಲಿ ನಜ್ಜುಗುಜ್ಜಾಗಿ ಬಿದ್ದಿತು. ಮೂಳೆಮುರಿದ ಸ್ವಾಮಿಗೆ ಬಾರೀ ಪೆಟ್ಟಾಗಿತ್ತು. ಕಾಫಿ ಮಿತ್ರ ರಸ್ತೆಯಲ್ಲಿ ಬಿದ್ದು ಹೊರಳಾಡುತ್ತಿದ್ದ.

ಎತ್ತಿನಬಂಡಿಯಲ್ಲಿ ಪ್ರಯಾಣಿಸುತ್ತಿದ್ದವರ ಪೈಕಿ ಒಬ್ಬಾತ, (ಅಷ್ಟೇನೂ ಗಾಯಗಳಾಗಿರದವ) ಪಕ್ಕದ ಹೋಟೆಲಿಗೆ ಹೋಗಿ, ಫೋನ್ ಮಾಡಿ ಅಂಬುಲೆನ್ಸ್, ಪೊಲೀಸ್ ಎಲ್ಲ ವ್ಯವಸ್ಥೆ ಮಾಡಿದನಂತೆ. ಮುಂಜಾನೆ 4–30ಕ್ಕೆ ನನ್ನನ್ನು ಆಸ್ಪತ್ರೆಯ ಕರೆ ಎಚ್ಚರಿಸಿತು. ಗಡಬಡಿಸಿಕೊಂಡು ಹೋದೆ. ಪರಿಸ್ಥಿತಿ ಗಂಭೀರವಾಗಿತ್ತು. ಇಬ್ಬರೂ ಜನರಲ್ ವಾರ್ಡಿನಲ್ಲಿ ಹೊರಳಾಡುತ್ತಿದ್ದರು.

ಪರಿಚಿತ ಸರ್ಜನ್ ಡಾ॥ ನರ್ಸಣಗಿಯವರನ್ನು ನಸುಕಿನಲ್ಲೇ ಭೇಟಿಮಾಡಿದೆ. ತಕ್ಷಣ ಆಸ್ಪತ್ರೆಗೆ ಬಂದು, ತನ್ನ ವಿಭಾಗಕ್ಕೆ ವರ್ಗಾಯಿಸಿ ಸೂಕ್ತ ಚಿಕಿತ್ಸೆಗೆ ಪ್ರಾರಂಭಿಸಿದರು. ರಕ್ತಪೂರಣದ ಅವಶ್ಯಕತೆ ಇತ್ತು. ಆ ಹೊತ್ತಿನಲ್ಲಿ ರಕ್ತ ಎಲ್ಲಿ ಸಿಗುವುದೋ ಏನೋ? ಕೊನೆಗೆ ನನ್ನದು ‘o + ಗ್ರೂಪ್’ ಎಂಬುದರಿಂದ ನಾನೇ ರಕ್ತದಾನಿಯಾದೆ. ಶಿವಪುತ್ರ ಹೆಚ್ಚಿನ ತೊಂದರೆ, ಕಷ್ಟಇಲ್ಲದೆ ಚೇತರಿಸಿಕೊಳ್ಳತೊಡಗಿದ. ನಾಲ್ಕಾರು ವಾರಗಳ ನಂತರ ಕುದುರೆಸ್ವಾಮಿಯನ್ನು ಅವರ ಸ್ವಗೃಹಕ್ಕೆ ತಲುಪಿಸಿ ಬರುವ ವ್ಯವಸ್ಥೆಯನ್ನು ಮಾಡಲಾಯಿತು. ಚಿಕಿತ್ಸೆಯ ವೆಚ್ಚವನ್ನು ಮೈರಾಡ ಧರಿಸಿತು.

ಅನೇಕ ಕಾರ್ಯಕ್ರಮಗಳಿಗೆ ಕಾರ್ಯನಿರ್ವಹಣೆಯ ವೆಚ್ಚಕ್ಕಾಗಿ (ಆಫೀಸಿನ ಅಕೌಂಟ್ಸ್ ವಿಭಾಗದಿಂದ) ನಾನು ಅಡ್ವಾನ್ಸ್ ಹಣ ತೆಗೆದುಕೊಳ್ಳುತ್ತಿದ್ದೆ. ಕಾರ್ಯಕ್ರಮ ಮುಗಿದ 3–4 ದಿನಗಳೊಗಾಗಿ ಬಿಲ್, ವೋಚರ್, ರಸೀದಿ ಸಹಿತ ಉಳಿಕೆಯ ಹಣವನ್ನು ಅಕೌಂಟ್ಸ್‌ನವರಿಗೆ ಒಪ್ಪಿಸಿ, ಕೈ ತೊಳೆದುಕೊಳ್ಳುತ್ತಿದ್ದೆ. ಜೂನ್ ತಿಂಗಳ ಮಳೆಯಂತೆ (ಮಲೆನಾಡಿನ ಮಳೆ) ಒಂದೇ ಸಮನೆ ಅಡ್ವಾನ್ಸ್ ಪಡೆದ ವೋಚರುಗಳು ಬಿಲ್ ಖಾತೆಯಲ್ಲಿ ದಾಖಲೆಯಾಗುತ್ತಿದ್ದವು. ಅನಿರೀಕ್ಷಿತವಾಗಿ ಒಂದುಬಾರಿ ಆ ರಿಜಿಸ್ಟರನ್ನು ತೆರೆದು ನೋಡಿದ ಡಾ॥ ಸಬಿತಾ ಕಣ್ಣಿಗೆ ಇದು ಬಿದ್ದಾಗ ಅದರಲ್ಲಿ ಒಂದು ‘ವಿಶೇಷತೆ’ ಕಾಣಿಸಿತು. ಅಡ್ವಾನ್ಸ್ ವಜಾ ಹಾಕಿ ಉಳಿದ ಹಣವನ್ನು ಆಫೀಸಿಗೆ ಹಿಂದಿರುಗಿಸಿದ್ದು ಎಲ್ಲೂ ದಾಖಲೆತಿ ಆಗಿರಲೇ ಇಲ್ಲ! ಒಟ್ಟಿನಲ್ಲಿ ಹತ್ತು –ಹನ್ನೆರಡು ಸಾವಿರ ರೂಪಾಯಿ ನನ್ನ ಹೆಸರಲ್ಲಿ ಪೆಂಡಿಂಗ್! ಈ ರೀತಿ ಅಕೌಂಟ್ಸ್ ವಿಭಾಗದಲ್ಲಿ ಅಧ್ವಾನ ನಡೆದದ್ದು ತಿಳಿದುಬಂದಾಗ ಅಕೌಂಟೆಂಟ್ ಎಲ್ಲವನ್ನೂ ಸರಿಪಡಿಸಿ ಹಣವನ್ನು ಸರಿಯಾಗಿ ದಾಖಲಿಸಿದ್ದುದರಿಂದ ಈ ವಿಷಯವನ್ನು ಮೇಲಿನವರ

ಗಮನಕ್ಕೆ ತರುವುದು ಬೇಡವೆಂದು ನಿರ್ಧರಿಸಿದೆ. ಅಲ್ಲದೆ ಗರ್ಭಿಣಿ–ಬಾಣಂತಿ ರಜೆಯ ಮೇಲೆ ಅಕೌಂಟೆಂಟ್ ಆಗಿದ್ದ 'ಜೂನ್' ರಜಾಹೋಗುತ್ತಿದ್ದುದರಿಂದ ರಜಾ ಕಳೆದ ತರುವಾಯ ಬೇರೊಂದು ಪ್ರಾಜೆಕ್ಟ್‌ಗೆ ವರ್ಗಾವಣೆಯನ್ನು ಅಪೇಕ್ಷಿಸಿದಳು. ಪ್ರಾಜೆಕ್ಟ್‌ನ ಹಣ (ಬ್ಯಾಂಕ್ ಖಾತೆಗೆ ಬಂದ ಎಲ್ಲಾ ಹಣ)ದ ಹೊಣೆಗಾರಿಕೆ ಪ್ರಾಜೆಕ್ಟ್ ಆಫೀಸರದ್ದಾದರೂ, ಮುಂದೆ ಆ ಲೆಕ್ಕಪತ್ರಗಳ ಜವಾಬ್ದಾರಿಯೆಲ್ಲ 'ಅಕೌಂಟ್ಸ್'ನವರ ಕೈಯಲ್ಲೇ ಇರುತ್ತದೆ ಎಂಬ ಆದೇಶವನ್ನು ಬೆಂಗಳೂರಿನಿಂದ ತರಿಸಿಕೊಂಡು ನಾನು ನಿಶ್ಚಿಂತನಾದೆ.

ಈಗ ಅಕೌಂಟ್ಸ್‌ಗೆ ಒಬ್ಬರು, ಕ್ಯಾಶಿಯರ್ ಇನ್ನೊಬ್ಬರು ಎಂದು ಪ್ರತ್ಯೇಕಿಸುವ ವ್ಯವಸ್ಥೆಯಾದರೂ ಜೂನ್ ತಿಂಗಳು ಬರುವ ಮೊದಲೇ ಜೂನ್ ಮತ್ತು ಅವಳ ಗಂಡ 'ಸಣ್ಣಅಲಿ' ಇಬ್ಬರೂ ವರ್ಗಾವಣೆಯಾಗಿಹೋದರು. ಅವರ ಗುರುವಿನಂತಿದ್ದ ವೆಂಕೋಬರಾಯರು ಕೂಡ ಬೇರೆಡೆಗೆ ಹೋದರು. ಕುಟ್ಟಿಸಾಹೇಬ ಹಲವಾರು ತೊಂದರೆಗಳನ್ನು ತಾನೇ ಸೃಷ್ಟಿಸಿಕೊಂಡುದರ ಪರಿಣಾಮವಾಗಿ ಬೆಂಗಳೂರಿಗೆ ಹಿಂತಿರುಗಿದ. (ಈ ಮಹಾಶಯ ಮೈರಾಡ ಸೇವೆಗೆ ಬಂದದ್ದು 'ಪ್ರಧಾನ್' ಎಂಬ ಸೇವಾ ಏಜೆನ್ಸಿಯ ಮೂಲಕ . ಅಹಮದಾಬಾದ್‌ನ ಪ್ರಸಿದ್ಧ 'ಇರ್‌ಮಾ' ಸಂಸ್ಥೆಯಲ್ಲಿ ತರಬೇತಿ ಹೊಂದಿದ ವ್ಯಕ್ತಿಗಳನ್ನು ಸೂಕ್ತ ಸ್ಥಾನಗಳಲ್ಲಿ ತುಂಬಿಸುವ ಕೆಲಸವನ್ನು (ತಕ್ಕ ಕೌಶಲ್ಯ ಸಹಿತ) ವಿಜಯ ಮಹಾಜನ್ ನಿರ್ವಹಿಸುತ್ತಿದ್ದರು. ತರಬೇತಿ ಹೊಂದಿದ ಮೇಲ್ವರ್ಗದ ಕಾರ್ಯನಿರ್ವಾಹಕರ ದೊಡ್ಡ ಪಟ್ಟಿಯೇ 'ಪ್ರಧಾನ್' ಬಳಿಯಿತ್ತು. ಮೈರಾಡ ಪಡೆದುಕೊಂಡ ವ್ಯಕ್ತಿಗಳಲ್ಲಿ ಈ ಕುಟ್ಟಿ ಸಾಹೇಬನೂ ಒಬ್ಬನಾಗಿದ್ದ. ಮುಂದೆ ಗ್ರಾಮಾಭಿವೃದ್ಧಿಯ ಸುದ್ದಿ ಬಿಟ್ಟು ಒಂದು ಜಾಹಿರಾತು ಕಂಪನಿಯನ್ನು ಸೇರಿಕೊಂಡನಂತೆ!

ಒಮ್ಮೆ ನಾವು ಹೈದರಾಬಾದ್‌ಗೆ ಪ್ರಯಾಣಿಸುತ್ತಿದ್ದ ಬಾಡಿಗೆ ವಾಹನ ಅಪಘಾತಕ್ಕೀಡಾಗಿ ನನ್ನ ಮೂಗಿಗೆ ತೀವ್ರವಾದ ಏಟು ತಗಲಿತು. ಚಿಕಿತ್ಸೆಗಾಗಿ ನನ್ನನ್ನು ಕರೆದೊಯ್ಯುವ ಪ್ರಯತ್ನದ ಬದಲು, ಪೊಲೀಸ್ ಠಾಣೆಗೆ ಹೋಗಿ ಕೇಸು ದಾಖಲಿಸುವುದು ಪ್ರಾಜೆಕ್ಟ್ ಆಫೀಸರನ ಹೊಣೆ ಎಂದು ಹೇಳಿ ಕುಟ್ಟೀಸಾಹೇಬ ನುಣುಚಿಕೊಂಡ. ಇದೇ ರೀತಿಯಲ್ಲಿ ಗುಲಬರ್ಗಾದಲ್ಲಿ ಸಂಭವಿಸಿದ ಮೋಟರ್‌ಸೈಕಲ್ ಅಪಘಾತದಲ್ಲಿ ಕುದುರೆಸಾಮಿ ತೀವ್ರ ಗಾಯಗೊಂಡು ಆಸ್ಪತ್ರೆಗೆ ಸೇರಿದ್ದಾಗಲೂ ಕೂಡ ಇದು ಪ್ರಾಜೆಕ್ಟ್‌ಆಫೀಸರೇ ನಿರ್ವಹಿಸಬೇಕಾದ ಕೆಲಸ ಎಂದು ಹೇಳಿ ಅಂದೇ ಬೆಂಗಳೂರಿಗೆ ರೈಲು ಹತ್ತಿದ.

ಪ್ರಾಸಂಗಿಕವಾಗಿ ಹೇಳುವುದಾದರೆ ಕುಟ್ಟಿ ಸಾಹೇಬ ನಮಗೆ ಎಲ್ಲಾ ಬಗೆಯ ನೆರವು ನೀಡಲು ಬಂದ ಹಿರಿಯ ಅಧಿಕಾರಿ. ಗುಲಬರ್ಗ ವಿಶ್ವವಿದ್ಯಾಲಯದ 'ಸಮಾಜ ಕಾರ್ಯ' ವಿಭಾಗದ ಮುಖ್ಯಸ್ಥರಾದ ಪ್ರೊ॥ ಶಾಸ್ತ್ರಿಯವರು ತಾವಾಗಿ ಬಂದು

ಮೈರಾಡದ ಸಹ ಯೋಗಕ್ಕೆ ಕೈಚಾಚಿದರು. ಅವರ ಹಲವಾರು ಶಿಷ್ಯರು ನಮ್ಮ ವಿವಿಧ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳಲು ಈಗಾಗಲೇ ಪ್ರಾರಂಭಿಸಿದ್ದರು.

ಗುಲಬರ್ಗದ ವಿವಿಧ ಕಾಲೇಜುಗಳಲ್ಲಿ ಎನ್.ಎಸ್.ಎಸ್. ಘಟಕಗಳಿದ್ದು ಅವರವರು ಪ್ರತ್ಯೇಕ ಪ್ರತ್ಯೇಕವಾಗಿ ವಾರ್ಷಿಕ ಕ್ಯಾಂಪ್ (ಗ್ರಾಮೀಣ ಪ್ರದೇಶದಲ್ಲಿ) ನಡೆಸುವುದು ವಾಡಿಕೆಯಾಗಿತ್ತು. ಎನ್.ಎಸ್.ಎಸ್. ಮುಖ್ಯಸ್ಥರಲ್ಲಿ ಹೆಚ್ಚಿನವರು ಪರಿಚಿತರಿದ್ದುದರಿಂದ ಇವರೆಲ್ಲರನ್ನು ಏಕಸರಣಿಯಲ್ಲಿ ಒಂದುಗೂಡಿಸಿ ಪಾಲ್ಗೊಳ್ಳುವಂತೆ ಮಾಡಿ ಒಂದು ಗ್ರಾಮೀಣ ಕಾರ್ಯಕ್ರಮವನ್ನು ಸಮರ್ಪಕವಾಗಿ ನಡೆಸುವುದಕ್ಕೆ ಮುಂದಾದೆ.ಕಲ್ಮೋಡ್ ಗುಡ್ಡದ ಮೇಲಿರುವ ಗ್ರಾಮಾಂತರ ಪ್ರದೇಶದ ಖಾಸಗೀ ಹೈಸ್ಕೂಲ್‌ಗೆ ಗುಡ್ಡದ ಬುಡದಿಂದ ಸುಮಾರ ಒಂದುವರೆ ಕಿ.ಮೀ ರಸ್ತೆ ನಿರ್ಮಾಣ ಕಾರ್ಯವನ್ನು ಎನ್.ಎಸ್.ಎಸ್. ವಿದ್ಯಾರ್ಥಿಗಳೂ ಸ್ಥಳೀಯ ಯುವಕರೂ ಮಾಡಿದ್ದು ಗಮನಾರ್ಹವಾದ ಕಾರ್ಯವಾಯಿತು. ಈ ಕಾರ್ಯಕ್ರಮದ ಮುಕ್ತಾಯ ಹಂತದಲ್ಲಿ ಗುಲಬರ್ಗದ ಶರಣಬಸವೇಶ್ವರ ಸಂಸ್ಥಾನದ (ಗುಡಿಯ) ಮುಖ್ಯಸ್ಥರಾದ ಶರಣಬಸಪ್ಪ ಅಪ್ಪ ಅವರು ಬಂದುದು ಜನರಲ್ಲೂ ವಿದ್ಯಾರ್ಥಿಗಳಲ್ಲೂ ಸಂತೋಷ ಉಂಟಾಯಿತು, ಈ ಕಾರ್ಯಕ್ರಮದ ಯಶಸ್ಸಿಗೆ ಪ್ರೊ॥ ವಸಂತ ಕುಷ್ಟಗಿಯವರು ಕೂಡಾ ಕಾರಣರಾಗಿದ್ದರು ಪ್ರೊ॥ ಕುಷ್ಟಗಿಯವರು ಗುಲಬರ್ಗದ ಇರಾಣಿ ಕಾಲೇಜಿನ ಪ್ರಾಂಶುಪಾಲರಾಗಿದ್ದರು. ಈರೀತಿಯ ಎನ್.ಎಸ್.ಎಸ್. ವಿವಿಧ ಘಟಕಗಳ 'ಮೈತ್ರಿ' ಸೇವಾಕಾರ್ಯಕ್ರಮ ಇದೇ ಮೊದಲ ಬಾರಿ ಎಂಬುದಾಗಿ ಪ್ರಶಂಸೆ ಗಳಿಸಿತು.

ಮುಂದೆ ಸ್ಥಳೀಯ ಲಯನ್ಸ್‌ಕ್ಲಬ್, ರೋಟರಿಕ್ಲಬ್, ಮಹಿಳಾಮಂಡಳಿ ಮೊದಲಾದ ವಿವಿಧ ವೇದಿಕೆಗಳಿಂದ ಮೈರಾಡದ ಮೈತ್ರೀಪಂಥದ ಕಾರ್ಯಕ್ರಮಕ್ಕೆ ಆಹ್ವಾನಗಳು ಬಂದವು. ಛಿಶ್ವವಿದ್ಯಾನಿಲಯದ ವಿಶೇಷ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳಲು ಆಹ್ವಾನಗಳು ಬರತೊಡಗಿದವು. ಜಿಲ್ಲಾ ಕೈಗಾರಿಕಾ ವಸ್ತು ಪ್ರದರ್ಶನದ ಮೇಳದಲ್ಲಿ ಬಾಳೆಗಿಡದ ನಾರಿನಿಂದ ವಿವಿಧ ಬಗೆಯ ಆಕರ್ಷಕ ಕೈಚೀಲಗಳನ್ನು ತಯಾರಿಸುತ್ತಿರುವ ಕಮಲಾಪುರ ಯುವತಿ ಸಂಘದವರಿಗೆ ಪ್ರಶಸ್ತಿ ಕೂಡ ದೊರಕಿತು.

ಹೀಗೆ 'ಮೈರಾಡ' ಕಮಲಾಪುರ (ಪ್ರಾಜೆಕ್ಟ್) ನಾನಾ ಚಟುವಟಿಕೆಗಳನ್ನು ನಿರ್ವಹಿಸುತ್ತಿದ್ದುದಲ್ಲದೆ, ಆನೆಕಾಲುರೋಗಪೀಡಿತ ಗ್ರಾಮಗಳಲ್ಲಿ ರಕ್ತ ತಪಾಸಣೆ ನಡೆಸಿ ಸರಕಾರದ ಆರೋಗ್ಯ ಇಲಾಖೆಯ ಮೂಲಕ ಚಿಕಿತ್ಸಾಸೌಲಭ್ಯ ಒದಗಿಸುವುದು ಕೂಡ ಸಾಧ್ಯವಾಯಿತು.

ಬೆಂಗಳೂರು ವಿಶ್ವವಿದ್ಯಾಲಯದ ಸಮಾಜ ಕಾರ್ಯ ವಿಭಾಗದ ಮುಖ್ಯಸ್ಥರೂ, ಸಮಾಜಕಾರ್ಯದ ಬಗ್ಗೆ ಅಧಿಕಾರವಾಣಿಯಿಂದ ಮಾತಾಡುವವರೂ ಹಲವಾರು ಗ್ರಂಥಗಳನ್ನು ಬರೆದು ಪ್ರಕಟಿಸಿದವರೂ ಆದ ಪ್ರೊ॥ ಎಚ್.ಎಂ. ಮರುಳಸಿದ್ದಯ್ಯನವರು ಗುಲಬರ್ಗಾ ವಿಶ್ವವಿದ್ಯಾನಿಲಯದ ಕಾರ್ಯಕ್ರಮಕ್ಕೆ ಆಗಮಿಸಿದ್ದಾಗ ಅವರ

ಭೇಟಿಯಾಯಿತು. ಪ್ರೊಫೆಸರರು ಇನ್ನೆರಡು ದಿವಸ ಗುಲಬರ್ಗದಲ್ಲಿ ಇರುವುದಾಗಿ ತಿಳಿಸಿದಾಗ ಈ ಸಂದರ್ಭದಲ್ಲಿ ಸ್ಥಳೀಯ ಸ್ವಯಂಸೇವಾಸಂಘಟನೆಗಳ ಹಾಗೂ ಪ್ರಮುಖ ಕಾರ್ಯಕರ್ತರ ಮೈತ್ರೀ ಸಮಾಲೋಚನಾ ಸಭೆಯನ್ನು ಏರ್ಪಡಿಸುವುದು ಸೂಕ್ತ ಎಂದು ನಿರ್ಧರಿಸಿದೆ. ಮೈರಾಡ ಕಾರ್ಯಾಲಯದಲ್ಲಿ 20 ಸಂಘಟನೆಗಳ ಸದಸ್ಯರು ಸೇರಿ ಸ್ವಯಂಸೇವಾಕಾರ್ಯ–ಸಮಾಜ ಕಾರ್ಯಗಳ ಬಗ್ಗೆ ವಿಚಾರ ವಿನಿಮಯ ನಡೆಸಿದರು. ಎಲ್ಲದಕ್ಕಿಂತ ಮಿಗಿಲಾಗಿ ಇಷ್ಟೊಂದು ವ್ಯಕ್ತಿಗಳು–ಸಂಘಟನೆಗಳು ಈ ಕ್ಷೇತ್ರದಲ್ಲಿವೆ ಎಂಬುದು ಕೂಡಾ ತಿಳಿದುಬಂತು. ಈ ಸಂಘಗಳ 'ಸಂಘಟನೆ' ಉಪಯುಕ್ತ ವೇದಿಕೆಯಾಗಲಿದೆ ಎಂಬ ಅಂಶವೂ ಸ್ಪಷ್ಟವಾಯಿತು (ಇದು ಸಾಧ್ಯವಾಗಲು 1995ರವರರೆಗೆ ಕಾಯಬೇಕಾಯಿತು.)

ಮೈರಾಡದ ಮತ್ತೊಂದು ವಾರ್ಷಿಕ ಬಜೆಟ್ ತಯಾರಿಸುವ ಸಮಯ ಬಂತು. ಸಾಂಪ್ರದಾಯಿಕ ಸಮಾಲೋಚನೆಯೂ ನಡೆಯಿತು. ಆದರೆ ಈ ಬಗ್ಗೆ ಸಹಯೋಗಿಗಳ ಅಸಡ್ಡೆ, ನಿರ್ಲಕ್ಷ್ಯ, ಕೆಲವರ ನಿರಾಸಕ್ತಯಿಂದಾಗಿ ನಾಲ್ಕು ತಿಂಗಳ ಲೇಖಾನುದಾನದ ಪಟ್ಟಿಯನ್ನು ಮಾತ್ರ ಸಲ್ಲಿಸಿದೆ. ಆಶ್ಚರ್ಯವೆಂದರೆ ಇದಕ್ಕೆ ಬೆಂಗಳೂರಿನ ಆಡಳಿತ ಕಛೇರಿಗೆ ಯಾವ ಆಕ್ಷೇಪವನ್ನೂ ಎತ್ತಲಿಲ್ಲ! ಇದಕ್ಕೆ ನಿಜವಾದ ಕಾರಣ ಬೇರೆಯೇ ಇತ್ತು. ಹಿರಿಯ ನಿವೃತ್ತ ಬ್ಯಾಂಕ್ ಅಧಿಕಾರಿಯೊಬ್ಬರು ಮೈರಾಡದ 'ಪರ್ಸನಲ್ ಫೈನಾನ್ಸ್ ವಿಭಾಗ'ವನ್ನು ವಹಿಸಿಕೊಂಡು ಹೊಸ ವ್ಯವಸ್ಥೆ ಜಾರಿಗೆ ಸಿದ್ದತೆಗಳಾಗುತ್ತಿದ್ದವು.

ಜೂನ್ ತಿಂಗಳು ಏಕದಂ ಹೊಸ ಹುರುಪು ಕಾಣಿಸತೊಡಗಿತು. ವಿದೇಶೀ ತಜ್ಞರು, ಸ್ವದೇಶೀ ಅನುಭವಿಗಳು ಅಂತ ಹಲವು ಮಂದಿಯ ಭೇಟಿ ಮೇಲಿಂದ ಮೇಲೆ ನಡೆಯಿತು. ಸ್ವತಃ ಮೈರಾಡದ ಇ.ಡಿ. ಫರ್ನಾಂಡಿಸರೇ ಎರಡು ದಿನಗಳ ಮಟ್ಟಿಗೆ ಗುಲಬರ್ಗದಲ್ಲಿ ಕ್ಯಾಂಪ್ ಹಾಕಿ 'ವಾಟರ್‌ಶೆಡ್ ಮ್ಯಾನೇಜಮೆಂಟ್ ಮಿಶನ್'ನ್ನು ಸ್ಪಷ್ಟವಾಗಿ ನಿರೂಪಿಸುವ ಸಮಾಲೋಚನಾ ಕಾರ್ಯಕ್ರಮವನ್ನು ನಿರ್ವಹಿಸಿದರು. ನೀರು ಮತ್ತು ಮಣ್ಣು ಮಾತ್ರವಲ್ಲದೆ ಜನಸಮುದಾಯದ ಸಮಗ್ರ ವಿಕಾಸವೂ ಜಲಾನಯನ ಪ್ರದೇಶ ಅಭಿವೃದ್ಧಿಯ ಅಂತರ್ಗತ ಕಾರ್ಯಗಳೆಂಬುದಾಗಿ ನಾವು ಹೇಳಿದ ಅಂಶವನ್ನು ಒಪ್ಪಿಕೊಂಡು ಮಿಶನ್‌ನಲ್ಲಿ ಅದನ್ನು ಸೇರಿಸಿದರು. ಕಾರ್ಯಕ್ರಮವು ಸುಲಭ ಸಾಧ್ಯವಲ್ಲದಿದ್ದರೂ, ಬಡವರು ಕೂಡಾ ಭಾಗವಹಿಸುವಂತೆಯೂ ಅಧಿಕಾರವಾಣಿಯಿಂದ ಮಾತಾಡುವಂತೆಯೂ ಅವಕಾಶ ಒದಗಿಸಲಾಯಿತು. 'ಪಿಡೋ' ಎಂದರೆ 'ಪಾರ್ಟಿಸಿಪೇಟಿವ್ ಇಂಟಿಗ್ರೇಟೆಡ್ ಡೆವಲಪ್‌ಮೆಂಟ್ ಆಫ್ ವಾಟರ್‌ಷೆಡ್' ಎಂದು ಹೊಸ ರೂಪ ನಾಮಧೇಯವನ್ನು ನೀಡಿದರು. ಇಂತಹುದೇ ಕಾರ್ಯಕ್ರಮಗಳನ್ನು ಇತರೆಡೆಗಳಲ್ಲೂ ನಿರ್ವಹಣೆಗೆ ಸಾಧ್ಯವಾಗುವಂತಿರಬೇಕೆಂಬುದನ್ನು ಸಹ ಸೂಚಿಸಲಾಯಿತು. ಸರಕಾರದ

ದೃಷ್ಟಿಕೋನಕ್ಕಿಂತ ಇದು ಸ್ಪಷ್ಟವಾಗಿ ದೂರದರ್ಶಿ–ಮಾರ್ಗದರ್ಶಿ ಹಾಗೂ ಸಮಾಜಮುಖಿವಾಗಿತ್ತು.

ಈ ನಡುವೆ ದೆಹಲಿಯ ಎಸ್‌ಡಿಸಿ ಕಡೇರಿಯಿಂದ ಬಂದ ತಜ್ಞರು ಕಳೆದ ಹಲವು ತಿಂಗಳ ಪ್ರಾಜೆಕ್ಟ್ ಕಾರ್ಯಗಳನ್ನು ವಿಸ್ತೃತವಾಗಿ ವಿವರವಾಗಿ ವಿಶ್ಲೇಷಿಸಿ ವರದಿ ತಯಾರಿಸಿದರು. ಜಲಾನಯನ ಈ ಪ್ರೋಗ್ರಾಂ ಅಂತರ್ಗತವಾಗಿ ಇತರ ಕಾರ್ಯಕ್ರಮಗಳು ಪ್ರಾರಂಭವಾಗಿರುವುದನ್ನು ಶ್ಲಾಘಿಸಿದರು. ಕಮಲಾಪುರ (ಮೈರಾಡದ ಪಾರ್ಟಿಸಿಪೇಟಿವ್ ಇಂಟೆಗ್ರೇಟೆಡ್ ಡೆವಲಪಮೆಂಟ್ ಆಫ್ ವಾಟರ್‌ಶೆಡ್) ಕಾರ್ಯ ಪ್ರಾರಂಭವಾಗಲು ಮುಂದಿನ ಕಾರ್ಯಕ್ರಮದ ರೂಪುರೇಖೆಗಳನ್ನು ಪ್ರತ್ಯೇಕವಾಗಿ ರೂಪಿಸುವ ಅಗತ್ಯವಿದೆ ಎಂದು ಸೂಚಿಸಿತು.

ಕಮಲಾಪುರದ 'ಮೈರಾಡ – ಸ್ವಿಸ್ ಡೆವಲಪ್‌ಮೆಂಟ್ ಕೋ ಆಪರೇಶನ್' ಸಹಯೋಗದ ಜಲಾನಯನ ಪ್ರದೇಶ ಅಭಿವೃದ್ಧಿ ಕಾರ್ಯಕ್ರಮಕ್ಕೆ (ಪಿಡೋ) ಎಂಬ ಅಂಕಿತದಿಂದ ಕಾರ್ಯಗತವಾಗುವ ಮುಹೂರ್ತ ಬಂದಿತು. ಕರ್ನಾಟಕದ ಮಟ್ಟಿಗೆ ಸ್ವಯಂಸೇವಾ ಸಂಸ್ಥೆಯು ಸಹಯೋಗದಿಂದ ವಿದೇಶೀ ಆರ್ಥಿಕನೆರವಿನೊಂದಿಗೆ ನಿರ್ವಹಣೆಗೊಂಡ ಮೊದಲನೇ ಜಲಾನಯನ ಪ್ರದೇಶ ಅಭಿವೃದ್ಧಿ ಕಾರ್ಯಕ್ರಮವು ಈ ಕಮಲಾಪುರ ಪಿಡೋ ಪ್ರಾಜೆಕ್ಟ್ ಆಗಿತ್ತು.

ಭಾರತ ಸರಕಾರ ಹಾಗೂ ಸ್ವಿಸ್ ಸರಕಾರಗಳ ಸಮ್ಮತಿಯಿಂದ ಕರ್ನಾಟಕ ರಾಜ್ಯ ಸರಕಾರದ ಮೈರಾಡ (ಮೈಸೂರು ರಿಲೀಫ್ ಅಂಡ್ ಡೆವಲಪ್‌ಮೆಂಟ್ ಏಜೆನ್ಸಿ) ಎಂಬ ಸ್ವಯಂಸೇವಾಸಂಸ್ಥೆ ಹಾಗೂ ಎಸ್.ಡಿ.ಸಿ. (ಸ್ವಿಸ್ ಡೆವಲಪಮೆಂಟ್ ಕೋ–ಆಪರೇಷನ್ ಸೇವಾಸಂಸ್ಥೆ) ಗಳ ಸಹಯೋಗದಿಂದ ಗುಲಬರ್ಗ ಜಿಲ್ಲೆಯ ಕಮಲಾಪುರದಲ್ಲಿ ಜಲಾನಯನ ಪ್ರದೇಶ ಅಭಿವೃದ್ಧಿ (ವಾಟರ್ ಡೆವಲಪ್‌ಮೆಂಟ್) ಕಾರ್ಯಕ್ರಮವನ್ನು ಪ್ರಾರಂಭಿಸಲು ಅಧಿಕೃತ ಮುದ್ರೆ (ಒಪ್ಪಿಗೆನೀಡಿದ ಪತ್ರ) ಜೂನ್ ತಿಂಗಳ ಕೊನೆಯಲ್ಲಿ ನನ್ನ ಕೈಸೇರಿತು. ಈ ಬಗ್ಗೆ ವಿವರಗಳನ್ನೆಲ್ಲಾ ಕಲೆಹಾಕಿ ಮುಂದಿನ ವ್ಯವಸ್ಥೆಗೆ ಅಣಿಯಾಗುವುದಕ್ಕೆ ಸಿದ್ಧತೆಮಾಡುತ್ತಿದ್ದಾಗ ಜುಲೈ ತಿಂಗಳ ಕೊನೆಯಲ್ಲಿ ಪೂರ್ವನಿರ್ಧಾರಿತ ವಾರ್ಷಿಕ ರಜಾಕಾಲಾವಧಿಯ 30 ದಿನಗಳನ್ನು ಬಳಸಿಕೊಂಡು ಆಂಧ್ರ ಪ್ರದೇಶದ ಕೆಲವು ಪ್ರಾಜೆಕ್ಟ್‌ಗಳನ್ನು ಸಂದರ್ಶಿಸಿದೆ.

ಆಗಸ್ಟ್ ತಿಂಗಳಲ್ಲಿ ಮೈಸೂರು ಜಿಲ್ಲೆಯ ಹೆಗ್ಗಡೆದೇವನಕೋಟೆಯ 'ಮೈರಾಡ ಪ್ಲಾನ್ ಪ್ರಾಜೆಕ್ಟ್‌ಗೆ ವರ್ಗಾಯಿಸಿದ ಆಜ್ಞಾಪತ್ರ ಕೈಸೇರಿತು. ಒಂದೆರಡು ದಿನಗಳಲ್ಲಿ ಕಮಲಾಪುರ ವಾಟರ್‌ಶೆಡ್ ಪ್ರಾಜೆಕ್ಟ್‌ಗೆ ವಿದಾಯ ಹೇಳಿದೆ.

* * *

ನಿರ್ಲಕ್ಷಿತ ಜನರ ಮಕ್ಕಳೆಡೆಗೆ ನೆರವಿನತ್ತ ಹೆಚ್.ಡಿ.ಕೋಟೆ ಪ್ರಾಜೆಕ್ಟ್

ಮೈರಾಡದ ಮೈತ್ರಿಪಥ

Foster Parants (Plan) Associationನ ಕಾರ್ಯಕ್ರಮದ ಪ್ರಕಾರ ಬಡ ಕುಟುಂಬದ ಪ್ರಾಥಮಿಕ ಶಾಲಾವಯಸ್ಸಿನ ಒಂದು ಮಗುವನ್ನು ವಿದೇಶೀ ಅಭಿಮಾನಿಯೊಬ್ಬರು ಪೋಷಿಸಲು ಸ್ವೀಕರಿಸುವುದೂ 'ಪ್ಲಾನ್' ಸಂಸ್ಥೆಯ ಮೂಲಕ ಆ ಕುಟುಂಬದ ಅಭಿವೃದ್ಧಿಗೆ ಅರ್ಥಿಕ ನೆರವು ನೀಡುವುದೂ ಕಾರ್ಯಕ್ರಮದ ಉದ್ದೇಶ. ಇದಕ್ಕಾಗಿ ಮಗುವಿನ ಭಾವಚಿತ್ರ, ಕುಟುಂಬದ ವಿವರಗಳನ್ನು ದಾಖಲೆ ಮಾಡಿಕೊಳ್ಳುವುದ ಕಾರ್ಯದಲ್ಲಿ ತೊಡಗಿದಾಗ ನವ ಕಾರ್ಯಕರ್ತರೆಲ್ಲ ವಿದೇಶೀ ಪರ ಏಜೆಂಟರೆಂದೂ ಮತಾಂತರ ಮಾಡಲು ಹುನ್ನಾರು ನಡೆಸುತ್ತಿದ್ದಾರೆ ಎಂಬ ಭಯವಿತ್ತು. ನಾವು ಯಾರೂ ಅಂತಹ ದುಷ್ಕೃತ್ಯಗಳನ್ನು ಮಾಡಲು ಬಂದವರಲ್ಲ, ಗ್ರಾಮಾಭಿವೃದ್ಧಿಯ ಕಾರ್ಯಗಳನ್ನು ನಿರ್ವಹಿಸಲು ಬಂದವರು ಎಂಬುದನ್ನು ಜನರು ಅರಿತುಕೊಳ್ಳುವುದಕ್ಕೆ ಶಕ್ಯವಾಗಲಿಲ್ಲ. ಸಂಸ್ಥೆಯ ಕಾರ್ಯಕರ್ತರು ಹಳ್ಳಿಗಳಲ್ಲೇ ವಾಸ ಮಾಡುತ್ತಾರೆ; ಸಾದಾಜೀವನ ನಡೆಸುತ್ತಾರೆ (ಪ್ರಮಾಣಕ್ಕೆ ಮಾತ್ರ ಮೋಟಾರು ಸೈಕಲ್‌ಗಳು), ಅಲ್ಲದೆ ಯಾವುದೇ ಸ್ವಾರ್ಥಪರ ಕಾರ್ಯಗಳಲ್ಲಿ ನಿರತರಾಗುತ್ತಿಲ್ಲವೆಂಬುದು ಅರಿದಾದಾಗ ನಮಗೆ ಸಹಕಾರ ದೊರೆಯಿತು.

ಮೈಸೂರು ಮಾನಂದವಾಡಿ ಅಂತರಪ್ರಾಂತೀಯ ರಸ್ತೆ ಹಾದುಹೋಗುವ ಕಾಡುಪ್ರದೇಶ 'ಹೆಗ್ಗಡದೇವನ ಕೋಟೆ' (HDಕೋಟೆ) ತಾಲೂಕು. 2 ನದಿಗಳು ಕೆಲವು ದೊಡ್ಡ ಜಲಾಶಯಗಳವೆ. ಹಲವು ಪಟ್ಟಣಗಳಿವೆ. ಕಾಡಿನ ನಡುವೆ ಗುಡಿಸಲು ಸಮೂಹದ ಗಿರಿಜನರ 'ಹಾಡಿ'ಗಳಿವೆ. ಕೃಷಿಭೂಮಿಯಿದೆ. ಜನವಸತಿಗಳಿವೆ. 'ಕಾಲೋನಿ' ಗಳೆಂಬ ಹೆಸರಿನ ನವನಿರ್ಮಿತ ಕಿರುಗೃಹಗಳಲ್ಲಿ ವಾಸಿಸುವ ನಾಮಧಾರಿಗಳು, ಹರಿಜನರು ಹಾಗೂ ಇತರ ವರ್ಗದ ಜನರಿದ್ದಾರೆ. ಪಾಠಶಾಲೆಗಳಿವೆ. ಪ್ರಾಥಮಿಕ ಆರೋಗ್ಯ ಕೇಂದ್ರಗಳಿವೆ. ಅರಣ್ಯ ಇಲಾಖೆಯ

ದೊಡ್ಡ ಪಡೆಯೇ ಇದೆ. ಇತರ ಇಲಾಖೆಗಳ ಕಾರ್ಯಾಲಯಗಳೂ ಇವೆ. ಹೀಗಿದ್ದರೂ ಕೂಡ ಹೆಚ್.ಡಿ. ಕೋಟೆ ತಾಲೂಕು ತೀರ ನಿರ್ಲಕ್ಷಿತ ಪ್ರದೇಶವಾಗಿಯೇ ಇದೆ. ಕಾಡುವಾಸಿಗಳಂತೆಯೇ ನಾಡುಜನಗಳು ಕೂಡ ತೀರ ಹಿಂದುಳಿದ ಪ್ರದೇಶದ ನಿವಾಸಿಗಳಾಗಿಯೇ ಉಳಿದಿದ್ದಾರೆ. ಒಂದೆರಡು ಸ್ವಯಂಸೇವಾ ಸಂಸ್ಥೆಗಳು ಅಷ್ಟಿಷ್ಟು ಅಭಿವೃದ್ಧಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಕೆಲಸ ಮಾಡುತ್ತಿದ್ದವು ಎಂಬುದು ಕೂಡಾ ನಿಜವೇ.

'ಮೈರಾಡ' ಬೆಂಗಳೂರು ಮೂಲದ ಸ್ವಯಂಸೇವಾಸಂಘಟನೆಯಾಗಿದ್ದು, ಹುಣಸೂರು ಬಳಿ ಟಿಬೆಟಿನ ನಿರಾಶ್ರಿತರ ಪುನರ್ವಸತಿ ಕಾರ್ಯವನ್ನು ನಿರ್ವಹಿಸಿದ ಸಂಸ್ಥೆ. ಹೆಗ್ಗಡ ದೇವನ ಕೋಟೆಯ 'ಹ್ಯಾಂಡ್ ಕ್ರೇನ್ಸ್' (ರಾಜೇಂದ್ರಪ್ರಸಾದ ವೃತ್ತ)ದ ಬಳಿ ಮೈರಾಡದ ಕಾರ್ಯಾಲಯವಿದೆ. ನಾನು ಅಲ್ಲಿ ಮೈರಾಡದ ಆರೋಗ್ಯಕಾರ್ಯಕ್ರಮಗಳ ಸಂಯೋಜಕನಾಗಿ ಸೇರಿಕೊಂಡೆ. ಜತೆಗೆ ಡಾ॥ ಸಬಿತಾ (ನನ್ನ ಹೆಂಡತಿ) ಇದ್ದುದರಿಂದ ಸಮಗ್ರ ಗ್ರಾಮೀಣ ವಿಕಾಸ ಕಾರ್ಯವನ್ನು ಆರೋಗ್ಯ ಕ್ರಮಗಳ ಮೂಲಕ ನಿರ್ವಹಿಸಲು ಅನುಕೂಲವಾಯಿತು.

ಹೆಚ್.ಡಿ. ಕೋಟೆ ಪ್ರಾಜೆಕ್ಟ್ ನಿರ್ಲಕ್ಷಿತ ಪ್ರದೇಶದ ಬಡ ಕುಟುಂಬದ ಒಂದು ಮಗುವನ್ನು ಪೋಷಿಸುವುದಕ್ಕೆ ಮುಂದೆಬಂದು ಧನಸಹಾಯ ನೀಡುವ ವಿದೇಶೀಯರ ನೆರವಿನಿಂದ ಪೋಷಿತ ಮಗುವನ್ನೂ, ಅದರ ತಾಯಿತಂದೆ ಹಾಗೂ ಸೋದರ ಸೋದರಿಯರನ್ನೂ ಸ್ಥಳೀಯ ಶಾಲೆಗೆ ಶಿಕ್ಷಣಕ್ಕೆ ಪ್ರೇರೇಪಿಸುವುದಲ್ಲದೆ ಹಾಗೂ ಪ್ರೋತ್ಸಾಹಿಸಿ ನೆರವು ನೀಡುವ ಕಾರ್ಯವನ್ನು ಕೈಗೆತ್ತಿಕೊಂಡು ಪೋಷಿತ ಮಗುವಿನ ಶಿಕ್ಷಣ–ಆರೋಗ್ಯ ಹಾಗೂ ಬಡ ಕುಟುಂಬದ ಅಭಿವೃದ್ಧಿ ಕಾರ್ಯಗಳನ್ನು ಒಂದೊಂದಾಗಿ ಪ್ರಾರಂಭಿಸಲಾಯಿತು. ಹಳ್ಳಿಶಾಲೆಗಳಲ್ಲಿ ಶಿಕ್ಷಕರ ಕೊರತೆ ಇದ್ದಲ್ಲಿ ಸ್ಥಳೀಯ ಯುವಕರನ್ನು ವಿನಂತಿಸಿಕೊಂಡು ಶಿಕ್ಷಣ ಕಾರ್ಯಕರ್ತರಾಗಿ ಸೇರಿಸಿಕೊಂಡು ಸರಕಾರನಿರ್ಧರಿತ ವೇತನವನ್ನೂ ನೀಡಿ ಶಾಲಾಶಿಕ್ಷಣ ಕಾರ್ಯ ಕ್ರಮದಲ್ಲಿ ತೊಡಕು ಉಂಟಾಗದಂತೆ ಮಾಡಿದಾಗ ಸರಕಾರವು ಒಪ್ಪಿಗೆ ಕೊಟ್ಟಿತು. ಮಕ್ಕಳಿಗೆ ಪಠ್ಯಪುಸ್ತಕಗಳಿಂದ ತೊಡಗಿ ಉಡುಪು ತೊಡುಪುಗಳ ತನಕದ ಹಲವು ಅಗತ್ಯಗಳನ್ನು ಪೂರೈಸುವ ಪ್ರಯತ್ನವೂ ನಡೆಯಿತು.

ಬಡಕುಟುಂಬದ ಕಿರುಹಿಡುವಳಿಗಾರರು ತಮ್ಮ ಒಂದೋ–ಎರಡೋ ಎಕರೆ ಜಮೀನಿನಲ್ಲಿ ಬೆಳೆಸುತ್ತಿದ್ದ ಧಾನ್ಯವು ಕುಟುಂಬರ ಪೋಷಣೆಗೆ ಸಾಕಾಗುತ್ತಿರಲಿಲ್ಲ. ಅಂತಹ ಪರಿಸ್ಥಿತಿಯಲ್ಲಿ ಹೈನುಗಾರಿಕೆ, ತೋಟಗಾರಿಕೆ, ಮೀನುಸಾಕಾಣಿಕೆ, ಮೊದಲಾದ ಉಪವೃತ್ತಿಗಳನ್ನು ಕೈಗೊಳ್ಳಲು ಪ್ರೋತ್ಸಾಹಿಸಲಾಯಿತು. ಊದುಬತ್ತಿ ತಯಾರಿಸುವ ಮೈಸೂರಿನ ಕೆಲವು ಕಂಪೆನಿಗಳ ಜೊತೆಯಲ್ಲಿ ಒಪ್ಪಂದ ಮಾಡಿಕೊಂಡು, ಗೃಹಿಣಿಯರು ಗ್ರಾಮಕೇಂದ್ರದಲ್ಲಿ ಊದಿನಕಡ್ಡಿ ತಯಾರಿಸುವುದನ್ನು ಪ್ರಾರಂಭಿಸಿದರು.

ವನವಾಸಿಗಳ ಅಭಿವೃದ್ಧಿಗಾಗಿ ರಾಜ್ಯಸರಕಾರವು ಒದಗಿಸುತ್ತಿದ್ದ ಹಣದಲ್ಲಿ ಅತ್ಯಲ್ಪ ಮೊತ್ತವಷ್ಟೇ ನಿಜವಾದ ಫಲಾನುಭವಿಗಳಿಗೆ ತಲಪುತ್ತಿತ್ತು. ಇದನ್ನು ತಪ್ಪಿಸಲು ವಿವಿಧ ಕಾಡುಕುರುಬರ ಸಂಘಗಳನ್ನು ಹಲವು ಸಂಸ್ಥೆಗಳು ತೊಡಗಿಸಿದ್ದವು. ಅಂತಹವರ ಜತೆಗೆ ಕೈಜೋಡಿಸುವ ಮೂಲಕ ಕಾಡುಉತ್ಪನ್ನಗಳನ್ನು ಸಂಗ್ರಹಿಸಿ ಲ್ಯಾಂಡ್ ಸೊಸೈಟಿ (ಸಹಕಾರೀ ಸಂಘ)ಗಳ ಮೂಲಕ ಮಾರುಕಟ್ಟೆಗೆ ತಲುಪಿಸಿ ಯೋಗ್ಯ ಬೆಲೆಗೆ ಮಾರಾಟ ಮಾಡಲು ಅನುಕೂಲವಾಯಿತು. ಜೇನುಸಂಗ್ರಹ, ಔಷಧೀಯ ಗಿಡಮೂಲಿಕೆಗಳ ಸಂಗ್ರಹ, ಮಾರಾಟಾದಿಗಳನ್ನು ಸಹ ಪ್ರೋತ್ಸಾಹಲಾಯಿತು.

ಹೆಚ್.ಡಿ. ಕೋಟೆ ತಾಲೂಕಿನ ಕೃಷಿಕರನ್ನು ತಪ್ಪುದಾರಿ ತುಳಿಯುವಂತೆ ಮಾಡುತ್ತಿದ್ದ 'ತಂಬಾಕು' ಕಂಪೆನಿಗಳ ಹಿಡಿತದಿಂದ ಚಿಕ್ಕ ಹಿಡುವಳಿಗಾರರನ್ನು ತಪ್ಪಿಸಲು 'ಚಿಕೋರಿ' ಗಡ್ಡೆ ಬೆಳೆಯುವಂತೆ ಪ್ರೇರೇಪಿಸಿ, ಅದನ್ನು ಸ್ಥಳಕ್ಕೇ ಬಂದು ನಗದಿ ಹಣನೀಡಿ ಖರೀದಿಸುವ ವ್ಯಾಪಾರೀಸಂಸ್ಥೆಯೊಂದು HD ಕೋಟೆಗೆ ಕಾಲಿಡುವಂತೆಯೂ ಮಾಡಲಾಯಿತು.

ಆರೋಗ್ಯ ರಕ್ಷಣೆಯ ಕಾರ್ಯಕ್ರಮಗಳು

ಪ್ರಾಜೆಕ್ಟ ಪ್ರಾರಂಭವಾದಂದಿನಿಂದಲೇ ಎಂದರೆ ಸುಮಾರು 2 ವರ್ಷಗಳಿಂದಲೇ ಮೆಡಿಕಲ್ ಇಂಟರ್ನಿಗಳಾಗಿ ಕೊನೇ ಹಂತದಲ್ಲಿರುತ್ತಿದ್ದ ಇಬ್ಬರು ಎಂ.ಬಿ.ಬಿ.ಎಸ್ ಸ್ನಾತಕರನ್ನು ಹೆಚ್.ಡಿ. ಕೋಟೆಗೆ ಕಳುಹಿಸುತ್ತಿದ್ದರು. ಅವರು ಶಿಸ್ತಿನ ಸಿಪಾಯಿಗಳಂತೆ ದಿನಕ್ಕೊಂದು ಗ್ರಾಮಾಂತರ ಕೇಂದ್ರಕ್ಕೆ ಜೀಪ್‌ನಲ್ಲಿ ಹೋಗಿ, ಜನರನ್ನು ಕಲೆಹಾಕಿದ ಮೈರಾಡ ಕಾರ್ಯಕರ್ತರ ನೆರವಿನಿಂದ ರೋಗಿಗಳ ಹೆಸರು ವಯಸ್ಸು ಇತ್ಯಾದಿಗಳು, ಮುಖ್ಯವಾದ ತೊಂದರೆಗಳನ್ನು ಬರೆದುಕೊಂಡು ಔಷಧಿ ವಿತರಣೆ ಮಾಡಿ ಬರುತ್ತಿದ್ದರು. ಮರುದಿನ ಇನ್ನೊಂದು ಕೇಂದ್ರಕ್ಕೆ. ಹೀಗೆ 2 ತಿಂಗಳ ಅವಧಿಯಲ್ಲಿ 30–35 ಕೇಂದ್ರಗಳಿಗೆ ಭೇಟಿನೀಡಿ ಸಕ್ರಮವಾಗಿ ಕಾಣುವಂತೆ ವರದಿಯನ್ನು ತಯಾರಿಸಿ ಮೈರಾಡದ ಪ್ರಾಜೆಕ್ಟ್ ಆಫೀಸರಿಗೆ ಅದನ್ನು ಸಲ್ಲಿಸಿ ಮೈಸೂರಿಗೆ ಹಿಂತೆರಳುತ್ತಿದ್ದರು. ಇದರಿಂದ ಏನು ಪ್ರಯೋಜನವಾಗಿದೆ ಎಂಬುದನ್ನು ಪರಿಶೀಲಿಸಲು ಪ್ಲಾನ್ ಸಂಸ್ಥೆ (ಮೈರಾಡ ಹೆಚ್.ಡಿ. ಕೋಟೆ ಪ್ರಾಜೆಕ್ಟಗೆ ಆರ್ಥಿಕ ನೆರವು ಒದಗಿಸುವ ಅಮೇರಿಕನ್ ಸೇವಾ ಸಂಘಟನೆ) ಲಿಂಡಾ ಮೆಟ್ಕಾಫ್ ಎಂಬ ತಜ್ಞೆಯನ್ನು ಸಮಕಾಲೀನ ಪರೀಶೀಲನೆಗಾಗಿ ಕಳುಹಿಸಿದ್ದು ಆ ವರದಿಯನ್ನುನೋಡಿ ಮೈರಾಡದ 'ಆಡಳಿತ' ಬೆಚ್ಚಿ ಬೀಳುದಂತಾಯಿತು. ಸಮುದಾಯ ಆರೋಗ್ಯ ಕಾರ್ಯಕ್ರಮದ ಕನಸು ಸಹ ಇರದ ಈ ಇಲ್ಲಿನ 'ವೈದ್ಯಕೀಯ' (ಚಿಕಿತ್ಸಾ) ಕಾರ್ಯಕ್ರಮವನ್ನು ತೀವ್ರವಾಗಿ ತರಾಟೆಗೆ

ತೆಗೆದುಕೊಂಡಿತು. ಇದರಿಂದಾಗಿ ಸಮುದಾಯ ಆರೋಗ್ಯ ಕಾರ್ಯಕ್ರಮವನ್ನು ನಿರ್ವಹಿಸುವುದಕ್ಕೆ ಅಪೇಕ್ಷಣೀಯವೆಂದು ನಮ್ಮನ್ನು ಹೆಚ್.ಡಿ. ಕೋಟೆ ಪ್ರಾಜೆಕ್ಟ್‌ಗೆ ಕಮಲಾಪುರ ಪ್ರಾಜೆಕ್ಟ್‌ನಿಂದ ರವಾನಿಸಿದ್ದರು.

ರೋಗಿಗಳಿಗೆ ಸಂಪೂರ್ಣ ಚಿಕಿತ್ಸೆ

ಹೆಚ್.ಡಿ. ಕೋಟೆ 'ಮೈರಾಡ ಕ್ಯಾಂಪೆಸ್‌ನಲ್ಲಿ ಒಂದು ಸಾಮಾನ್ಯ ಕುಟೀರವನ್ನು 'ಆಕ್ರಮಿಸಿ' ಡಾ॥ ಸಬಿತಾ ಚಿಕಿತ್ಸಾ ಕಾರ್ಯವನ್ನು ಪ್ರಾರಂಭಿಸಿದ್ದರಿಂದ ರೋಗಿಗಳು ಸಮಾಧಾನದ ಉಸಿರುಬಿಡುವಂತಾಯಿತು. ಚಿಕಿತ್ಸೆಗೆ ಬಂದವರಾರೂ ನಿರಾಶರಾಗಲಿಲ್ಲ. ಇಲ್ಲಿ ನಮಗೆದುರಾದ ಸಂಕಷ್ಟವೆಂದರೆ 'ಉಚಿತಚಿಕಿತ್ಸೆ'– ಪೋಷಿತಮಗು ಹಾಗೂ ಆ ಕುಟುಂಬದ ಸದಸ್ಯರಿಗೆ ಮಾತ್ರ ಸೀಮಿತ. ಇತರರಿಗೆ ಸಲಹೆ–ಔಷಧಿಗಳನ್ನು ಖರೀದಿಸಿ ಕೊಳ್ಳುವಂತೆ ಸೂಚನೆ. ಇದು ತುಸು ತೊಡಕಿನ ಕೆಲಸ; ಅಷ್ಟೇಅಲ್ಲದೆ ಅಸಮಾಧಾನಕರವಾದ ಭೇದಭಾವದ್ದಾಗಿದ್ದುದರಿಂದ, ಪೋಷಿತಮಗುವಿನ ಹಾಗೂ ಆ ಕುಟುಂಬಗಳನ್ನು ಗುರುತಿಸುವ ಸಲುವಾಗಿ 'ಗುರುತುಚೀಟಿ' ತೋರಿಸುವುದನ್ನು ಕಡ್ಡಾಯ ಮಾಡಬೇಕಾಯಿತು. ಸುಮಾರು 17 ಸಾವಿರದ ಕುಟುಂಬಳಿಗೆ ಗುರುತುಚೀಟಿ ಕೊಡುವುದು ಸುಲಭದ ಕೆಲಸವಾಗದಿದ್ದರೂ ಸಮರ್ಪಕವಾಗಿ ಅದನ್ನು ನಿರ್ವಹಿಸಲು ಸಾಧ್ಯವಾಯಿತು.

ಚಿಕಿತ್ಸಾ ವಿಭಾಗವನ್ನು ಡಾ॥ ಸಬಿತಾ ಪಾಲಿಗೆ ಬಿಟ್ಟು 'ಹಾಡಿ'– ಗ್ರಾಮ ಹಳ್ಳಿಗಳತ್ತ ಸಾಗಿದೆ. ಜೀಪ್ ಡ್ರೈವರು 'ಜಾರ್ಜ್' ಪ್ರಾದೇಶಿಕ ಸ್ಥಿತಿಗತಿಗಳನ್ನೂ ಸಂಚಾರದ ಸಾಧ್ಯತೆಗಳನ್ನೂ ತಿಳಿದಿದ್ದುದರಿಂದ ಪ್ರತಿದಿನ 4–6 ಗ್ರಾಮಗಳನ್ನೂ ಕೆಲವು ವನವಾಸಿಗಳ ಹಾಡಿಗಳನ್ನೂ ಹೊಕ್ಕು–ಹೊರಟುಬರುವುದು ಸಾಧ್ಯವಾಯಿತು. ಅಲ್ಲಿನ ಕಾರ್ಯಕರ್ತರನ್ನು ಮೈರಾಡ ಉದ್ಯೋಗಿಳನ್ನೂ ಅಲ್ಲದೆ ಸರಕಾರೀ ಆರೋಗ್ಯ ಕೇಂದ್ರಗಳ ಪರಿಚಯವನ್ನೂ ಮಾಡಿಕೊಂಡು ಎರಡು ತಿಂಗಳಲ್ಲಿ ಒಂದು ಸಮಗ್ರ ಚಿತ್ರವನ್ನು ರೂಪಿಸಲು ಸಾಧ್ಯವಾಯಿತು.

ಬಹುಜನರ ಅಪೇಕ್ಷೆಯ ಮೇರೆಗೆ ಮೈರಾಡದ ನಾಲ್ಕು ವಲಯಗಳಲ್ಲಿ ವಾರಕ್ಕೆ ಒಂದು ನಿಶ್ಚಿತದಿನ 'ಕ್ಲಿನಿಕ್' ನಡೆಸುವ ಕ್ರಮವನ್ನು ಅನುಸರಿಸಿದೆವು. ಅವರಿಗೆ ಇತರ ದಿನಗಳಲ್ಲಿ ರೋಗಿಗಳು ಸರಕಾರೀ ಪ್ರಾಥಮಿಕ ಆರೋಗ್ಯಕೇಂದ್ರಗಳಿಗೆ ಹೋಗಿ ವೈದ್ಯಾಧಿಕಾರಿಗಳು ಕೊಡುವ ಚಿಕಿತ್ಸೆಗೆ ಅವಶ್ಯಕವಾದ ಔಷಧಿಗಳನ್ನು ಮೈರಾಡದ ಕೇಂದ್ರ ಕ್ಲಿನಿಕ್‌ನಿಂದ ಒದಗಿಸುವ ಕ್ರಮವನ್ನೂ ಪ್ರಾರಂಭಿಸಿದೆವು. ತುರ್ತುಪರಿಸ್ಥಿತಿಯಲ್ಲಿ ರೋಗಿಯನ್ನು ಮೈಸೂರಿನ ಒಂದು ಸ್ವಯಂಸೇವಾ ಸಂಸ್ಥೆಯ ಸುಸಜ್ಜಿತ ಚಿಕಿತ್ಸಾಲಯಕ್ಕೆ ಕಳುಹಿಸಿಕೊಡುವ ವ್ಯವಸ್ಥೆಯನ್ನು ಮಾಡಲಾಯಿತು.

ಮಾತ್ರವಲ್ಲದೆ ಆ ಎಲ್ಲಾ ವೆಚ್ಚವನ್ನು ನೇರವಾಗಿ ಚಿಕಿತ್ಸಾಲಯಕ್ಕೆ ಮೈರಾಡವೇ ನೀಡುವ ಕ್ರಮವನ್ನೂ ರೂಢಿಗೆ ತಂದದ್ದಾಯಿತು.

ಇದರಿಂದ ಹಿಂದೆ ಬಳಕೆಯಲ್ಲಿದ್ದ 'ರಿಎಂಬರ್ಸ್‌ಮೆಂಟ್' ವಿಧಾನದಲ್ಲಿದ್ದ ಲೋಪದೋಷಗಳನ್ನೂ ಆಗೊಮ್ಮೆ ಈಗೊಮ್ಮೆ ಸಂಭವಿಸುತ್ತಿದ್ದ ದುರುಪಯೋಗವನ್ನೂ ತಡೆಗಟ್ಟಲು ಸಾಧ್ಯಾವಾಯಿತು. ಅಗತ್ಯವಾದಾಗಲೆಲ್ಲ ಚಿಕಿತ್ಸೆ ವಿಳಂಬವಿಲ್ಲದೆ ದೊರಕುವಂತಾಯಿತು.

'ಎಲ್ಲವೂ ಪುಕ್ಕಟೆ'ಯೆಂಬ ಭಾವನೆಯ ಬದಲು 'ನಿಮ್ಮ ಸಹಭಾಗಿತ್ವ ಸಹಯೋಗದಿಂದ ಸಮರ್ಪಕ ರೋಗೋಪಚಾರ–ಚಿಕಿತ್ಸೆ' ಎಂಬ ಸೂತ್ರವನ್ನು ಅನುಸರಿಸಿ ಪ್ರತಿಯೊಂದು ಪೋಷಿತಕುಟುಂಬವೂ ವಾರ್ಷಿಕ 12 ರೂಪ್ಯಾಗಳ ವಂತಿಗೆಯಲ್ಲಿ ಪ್ರತಿ ವರ್ಷವೂ ನೀಡಿ ಇಡೀ ಕುಟುಂಬಕ್ಕೆ ಆರೋಗ್ಯ ರಕ್ಷಣಾ ಕವಚ ದೊರಕುವ ವ್ಯವಸ್ಥೆ ಪ್ರಾರಂಭವಾಯಿತು. ಇದರಲ್ಲಿ ಮುಖ್ಯವಾದ ವಿಚಾರವೆಂದರೆ ಆಯಾಗ್ರಾಮದ ಆರೋಗ್ಯನಿಧಿಯ ಹಣ ಆಯಾ ಗ್ರಾಮದಲ್ಲಿರುವ ಮೈರಾಡ ಕಾರ್ಯಕರ್ತರು ಹಾಗೂ ಪೋಷಿತಕುಟುಂಬಗಳ ಪ್ರತಿನಿಧಿಗಳ ಸಂಯುಕ್ತ ಆಢಳಿತ ಮಂಡಳಿಯ ಹೆಸರಿನಲ್ಲಿ ಸ್ಥಳೀಯ ಬ್ಯಾಂಕ್ ಪೋಸ್ಟಾಫೀಸ್‌ನಲ್ಲಿ ಇದುವುದರಿಂದ ಅಗತ್ಯ ಪ್ರಸಂಗಗಳಲ್ಲಿ ಹಣ ದೊರಕಲು ಆಗುತ್ತಿದ್ದ ವಿಳಂಬವನ್ನು ನಿವಾರಿಸುವುದು ಸಾಧ್ಯವಾಯಿತು. ಈ ಕಾರ್ಯಕ್ರಮದ ಯಶಸ್ಸನ್ನು ಕಂಡು ಮೈರಾಡದ 'ಆಡಳಿತ' 'ಗ್ರಾಮ ಆರೋಗ್ಯ ನಿಧಿ'ಯಲ್ಲಿ ಜಮೆಯಾದ ಮೊತ್ತಕ್ಕೆ ಸಮೂಹ ಅನುದಾನವನ್ನು ಪ್ರತಿ ವರ್ಷವೂ ನೀಡಲು ಉಪಕ್ರಮಿಸಿತು. ಮೈರಾಡದ ಕ್ರಮಗಳಲ್ಲಿ ಒಂದು ಗ್ರಾಮಸಂಘದ ಕ್ಷೇಮಾಭಿವೃದ್ಧಿನಿಧಿ ಇಟ್ಟಿದ್ದರೂ ಅದರ ನಿಯಮಾವಳಿಗಳು ಆಢಳಿತಾಧಿಕಾರಿಗಳ ಅಸಡ್ಡೆಯಿಂದ ಆಗುತ್ತಿದ್ದ ವಿಳಂಬ ಕೂಡ ಇಳಿಮುಖವಾಯಿತು ಎಂದು ಹೇಳಬಹುದು. 'ನಿಧಿ'ಯಲ್ಲಿ ಕೂಡಿಟ್ಟ ಹಣದಿಂದ ವಿದ್ಯಾಭ್ಯಾಸಕ್ಕೆ ಅನಿವಾರ್ಯವಾದಾಗ ಹಣವನ್ನು ಸಾಲವಾಗಿ ಬಡ್ಡಿರಹಿತವಾಗಿ ಕೊಡುವ ಉಪಕ್ರಮವನ್ನು ಪ್ರಾರಂಭಿಸಿದಾಗ ಉಪಯುಕ್ತತೆ ಇನ್ನಷ್ಟು ಹೆಚ್ಚಾಯಿತು.

ಹೆಚ್. ಡಿ. ಕೋಟೆ ತಾಲೂಕಿನ ಹೆಚ್ಚಿನ ಭಾಗವು ಕಾಡು-ಹಾಡಿ-ಹಳ್ಳಿಗಳಿಂದ ಕೂಡಿದ್ದು ಆರೋಗ್ಯ ರಕ್ಷಣೆಯ ಸರಕಾರೀ ಕಾರ್ಯಕ್ರಮಗಳು ಹೆಸರಿಗೆ ಮಾತ್ರ ರೂಢಿಯಲ್ಲಿತ್ತು. ಶಿಶುಮರಣ, ಗರ್ಭಿಣಿ ಬಾಣಂತಿಯರ ಅನಾರೋಗ್ಯ, ಅಪೌಷ್ಟಿಕತೆ ವ್ಯಾಪಕವಾಗಿತ್ತು. ಗ್ರಾಮಕ್ಕೊಬ್ಬಳು ತರಬೇತಿ ಹೊಂದಿದ ಪಾರಂಪರಿಕ ಸೂಲಗಿತ್ತಿ ಎಂಬ ಗುರಿಯನ್ನಿಟ್ಟುಕೊಂಡು ಹಳ್ಳಿಯ ಸೂಲಗಿತ್ತಿಯರಿಗೆ ಪುನಶ್ಚೇತನ ತರಬೇತಿ ಶಿಬಿರಗಳನ್ನು ನಿರಂತರವಾಗಿ ನಡೆಸಿಕೊಂಡು ಬಂದುದು ಉತ್ತಮ ಪರಿಣಾಮವನ್ನು

ಕಂಡಿತು. ಹಳ್ಳಿ ಮನೆಯಲ್ಲಿಯೂ ನಿರ್ಮಲ ಹೆರಿಗೆ ಎಂಬುದನ್ನು ಕಾರ್ಯಗತಗೊಳಿಸಲು ಈ ಸೂಲಗಿತ್ತಿಯರಿಗೆ ಅಗತ್ಯವಾದ ತರಬೇತಿ, ಕಿರಿಯ ಸಾಧನಗಳ ಚೀಲವನ್ನು ವಿತರಿಸಿದೆವು. ಇವರು ಕುಟುಂಬ ಯೋಜನೆಯ ಪ್ರಚಾರಕರೂ ಆದರು. ಮಕ್ಕಳ ಚುಚ್ಚುಮದ್ದುಗಳು ಮತ್ತು ಪೋಲಿಯೋಡ್ರಾಪ್ಸ ಕಾರ್ಯಕ್ರಮದ ಯಶಸ್ಸು 'ಪ್ಲಾನ್' ಸಂಸ್ಥೆಯ ಪ್ರಶಂಸೆಯನ್ನೂ ಗಳಿಸಿತು. ಮುಂದೆ, ಮೈರಾಡ ಕ್ಯಾಂಪಸ್‌ನಲ್ಲಿ ಸುಸಜ್ಜಿತವಾದ ಒಂದು ತರಬೇತಿ ಕೇಂದ್ರವನ್ನೇ ಶಾಶ್ವತವಾಗಿ ನಿರ್ಮಿಸಲು ೧೭ ಲಕ್ಷ ರೂಪಾಯಿಗಳ ವಿಶೇಷ ದೇಣಿಗೆಯೂ ದೊರಕಿತು.

"Award of excellence" ಎಂಬ ನಕ್ಷತ್ರ ಚಿಹ್ನೆಯ ಪ್ರಶಸ್ತಿಯೂ ದೊರಕಿತು.

ಕುಡಿಯಲು ಶುಚಿಯಾದ ನೀರಿಗಾಗಿ ಜಿಲ್ಲಾ ಪಂಚಾಯತಿಯ ಸಹಯೋಗ ಮತ್ತು ಮನೆಗೊಂದು ಸುಲಭ ಶೌಚಾಲಯ ತೀರ ಕಮ್ಮಿ ವೆಚ್ಚದಲ್ಲಿ ನಿರ್ಮಿಸಲು ಜನರನ್ನು ಪ್ರೇರೇಪಿಸಿದ್ದರಿಂದ ಆ ಕಾರ್ಯಕ್ರಮವೂ ಕ್ರಮೇಣ ರೂಢಿಯಾಯಿತು. ಪೌಷ್ಟಿಕ ಆಹಾರದ ಕೊರತೆಯಿರುವ ಮಕ್ಕಳಿಗೆ ವಿಶೇಷ ನೆರವನ್ನು ನೀಡಲು ಸರಕಾರದ ಕಾರ್ಯಕ್ರಮದೊಂದಿಗೆ ಕೈ ಜೋಡಿಸಿತು. ಅಂಗವಿಕಲರಿಗೆ ಮುಖ್ಯವಾಗಿ ದೃಷ್ಟಿಹೀನರಿಗೆ ಸೂಕ್ತವಾದ ತರಬೇತಿ ನೀಡಲು ಬೆಂಗಳೂರಿನ ಸ್ವಯಂಸೇವಾಸಂಸ್ಥೆಯ ತಜ್ಞರ ತಂಡವನ್ನು ಸಂಪರ್ಕಿಸಿ ತರಬೇತಿ ಹಾಗೂ ಪುನರ್ವಸತಿಗಳ ವ್ಯವಸ್ಥೆ ಮಾಡಲಾಯಿತು.

ಹೆಚ್.ಡಿ. ಕೋಟೆ ತಾಲೂಕಿನಲ್ಲಿ ವಿವಿಧ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಅತ್ಯಗತ್ಯವಾಗಿ ಬೇಕಾಗಿದ್ದ ಉಪಕರಣಗಳನ್ನು ಉಚಿತವಾಗಿ ನೀಡಿದ್ದಲ್ಲದೆ ತಾಲೂಕು ಕೇಂದ್ರದ ಆಸ್ಪತ್ರೆಗೆ ಒಂದು Xray unit ಸಹ ನೀಡಲಾಯಿತು. ಹಂಪಾಪುರ ಆರೋಗ್ಯ ಕೇಂದ್ರದಲ್ಲಿ ಸಾರ್ವಜನಿಕರ ನೆರವಿನಿಂದ ಹೆರಿಗೆ ವಾರ್ಡ್‌ನ್ನು ನಿರ್ಮಿಸಿ ಅದಕ್ಕೆ ಅಗತ್ಯವಾದ ಸಲಕರಣೆಗಳನ್ನು ದಾನ ಮಾಡಿದುದನ್ನು ಸರಕಾರವು ಪ್ರಶಂಸಿಸಿತು.

೫ ವರ್ಷಗಳ ಹೆಚ್.ಡಿ. ಕೋಟೆ ಪ್ರಾಜೆಕ್ಟ "Award of Excellence" ಗೌರವದೊಂದಿಗೆ ೬೦ ನೇ ವಯಸ್ಸಿನ ಕೊನೆಯಲ್ಲಿ ಮೈರಾಡಕ್ಕೆ ವಿದಾಯ ಹೇಳಿದೆ.

* * *

೬

ಹೈದರಾಬಾದ್ ಕರ್ನಾಟಕದಲ್ಲಿ

ರಾಷ್ಟ್ರವೀರ ಸ್ವಾಮಿ ರಾಮಾನಂದ ತೀರ್ಥ ಟ್ರಸ್ಟ್

ನಿಜಾಂಶಾಹಿ ವಿರುದ್ಧ ಹೋರಾಟ ನಡೆಸಿದ ಸ್ವಾತಂತ್ರ್ಯವೀರರ ಸಂಸ್ಮರಣೆ

ಗುಲ್ಬರ್ಗದ ನೂತನವಿದ್ಯಾಲಯದ ಆವರಣದಲ್ಲಿರುವ ರಾಷ್ಟವೀರ ಸ್ವಾಮಿರಾಮಾನಂದ ತೀರ್ಥ ಸ್ಮಾರಕ ಟ್ರಸ್ಟ್ ಹೈದ್ರಾಬಾದ್ ನಿಜಾಂಶಾಹಿಯ ವಿರುದ್ಧದ ಸ್ವಾತಂತ್ರ್ಯ ಚಳುವಳಿಯ ನೆನಪಿನಂತೆ ಮುಸುಕು ಮುಸುಕಾಗಿದ್ದ ದಿನಗಳಲ್ಲಿ ಅದರ ನಿರ್ದೇಶಕರಾಗಿ ಕೆಲಸಮಾಡುವ ಅವಕಾಶ ನನಗೆ ದೊರಕಿತು. ಸ್ವಾಮಿ ರಾಮಾನಂದ ತೀರ್ಥರು ವಿಜಾಪುರ ಜಿಲ್ಲೆಯ ಸಿಂದಗಿಯಲ್ಲಿ ಹುಟ್ಟಿದವರು. ಅವರ ಸ್ವಾತಂತ್ರ್ಯ ಚಳುವಳಿಯ ಕೇಂದ್ರವಾಗಿದ್ದದ್ದು ಮರಾಠವಾಡದ 'ಮೊಮಿನಾಬಾದ್'. ಹಾಗೂ ಹೈದ್ರಾಬಾದ್ ಶಾಲಾಶಿಕ್ಷಕರಾಗಿದ್ದ ಖೇಡಗೀಕರ್ ಸನ್ಯಾಸ ಸ್ವೀಕರಿಸಿದರು; ಸ್ವಾತಂತ್ರ್ಯ ಹೋರಾಟದ ನೇತೃತ್ವ ವಹಿಸಿದರು. ಅವರ ಅದ್ಭುತ ಸಂಘಟನಾ ಕೌಶಲ್ಯ ಅಚಲ ಶ್ರದ್ಧೆ, ಹಾಗೂ ಭಾರತದ ಹಿರಿಯ ನಾಯಕರ ಜತೆಗಿದ್ದ ಸಂಪರ್ಕದಿಂದ ಹೈದ್ರಾಬಾದ್ ಸಂಸ್ಥಾ ಕಾಂಗ್ರೆಸ್ಸನ್ನು ಸುಸಂಘಟಿತ ಹೋರಾಟದ ಸಂಘಟನೆಯಾಗಿ ಮಾರ್ಪಡಿಸಿ, ಚಳುವಳಿ ನಡೆಸಿ ಅದನ್ನು ಅಹಿಸಾಂತ್ಮಕವಾಗಿ ಮುನ್ನಡೆಸಿ 20 ವರ್ಷಗಳ ಕಾಲ (1928–48) ಅಹರ್ನಿಶಿ ದುಡಿದು ವಿಜಯಿಗಳಾದರು. ಅನಂತರ ಕೆಲಕಾಲ ರಾಜಕೀಯದಲ್ಲಿ ಇದ್ದರೂ ಗಾಂಧೀಜಿಯವರ ವಿಧಾಯಕ ಕಾರ್ಯಕ್ರಮಗಳ ಅನುಷ್ಠಾನದಲ್ಲಿ ತೊಡಗಿಸಿಕೊಂಡರು. ಯಾವ ಅಧಿಕಾರದಲ್ಲೂ ಇಲ್ಲದೆ ಸನ್ಯಾಸಿ ಜೀವನವನ್ನೇ ಸಾಗಿಸಿದ ಸ್ವಾಮಿಜಿಯವರ ಮರಣಾನಂತರ (20 ವರ್ಷಗಳ ತರುವಾಯ) ಸಂಸ್ಮರಣಾ ಸಮಿತಿಯೊಂದು ಪ್ರಾರಂಭವಾಯಿತು. ಆಗಿನ ಪ್ರಧಾನಿ 'ತೆಲುಗುಬಿಡ್ಡ ಪಿ.ವಿ. ನರಸಿಂಹರಾಯರು ಅಧ್ಯಕ್ಷರು; ವಿಖ್ಯಾತ ಶಿಕ್ಷಣತಜ್ಞ ಗೋವಿಂದ

ಭ್ಯಾ ಶ್ರಾಪ್ ಕಾರ್ಯದರ್ಶಿಗಳು ಹಾಗೂ ಗುಲಬರ್ಗದ ಜಗನ್ನಾಥ ಚಂದ್ರಿಕೆಯವರು ಪ್ರಧಾನ ಸಂಚಾಲಕರಾಗಿದ್ದರು (ಇವೆರೆಲ್ಲರೂ ಹೈದ್ರಾಬಾದ್ ಚಳುವಳಿಯಲ್ಲಿ ಸ್ವಾಮೀಜಿಯವರ ಸಹವರ್ತಿಗಳಾಗಿದ್ದವರು.)

1992ನೇ ಇಸವಿಯಲ್ಲಿ ನಾನು ಗುಲ್ಬರ್ಗದಲ್ಲಿ ಟ್ರಸ್ಟ್‌ನ ಕಾರ್ಯಕ್ರಮಗಳನ್ನು ಪ್ರಾರಂಭಿಸಿದಾಗ ಹೊರಗಿನಿಂದ ಬಂದ ನನ್ನನ್ನು ಹಿಂದಕ್ಕೆ ಹೋಗಿ ಎಂಬ ಪಿಸುಮಾತಿನ ಗುಲ್ಲೆಬ್ಬಿಸಿ ನಾನು ಸ್ವಾತಂತ್ರ್ಯಹೋರಾಟಗಾರನಲ್ಲ ಎಂದು ಆಕ್ಷೇಪಿಸಿ ಅಷ್ಟೇ ಅಲ್ಲ ಆದಷ್ಟು ಬೇಗನೆ ನೂತನ ವಿದ್ಯಾಲಯದಿಂದ 'ಕಚೇರಿ' ಯನ್ನು ಹೊರಸಾಗಿಸಲು ಕೂಡ ಸೂಚಿಸಿದರು. ಸ್ವಾತಂತ್ರ್ಯ ಹೋರಾಟಗಾರರ 'ಸಂತತಿ' ಕ್ಷೀಣಿಸುತ್ತಿತ್ತು. ಹೊಸಪೀಳಿಗೆಗೆ ಚಳುವಳಿಗಳ ರೂಪರೇಶೆಗಳೆಲ್ಲ ಬೇರೆಯೇ ಆಗಿದ್ದವು. ಆಶೆ, ಆಸಕ್ತಿಗಳೇ ಬೇರೆ! ಗಾಂಧೀತತ್ವ ಸಿದ್ಧಾಂತಗಳೂ ವಿಧಾಯಕ ಕಾರ್ಯಕ್ರಮಗಳೂ ಅವರ ಕೆಲಸಕ್ಕೆಬಾರದ ಪಳೆಯುಳಿಕೆಗಳು ಎಂಬ ಭಾವನೆಯು ಬಲವಾಗಿ ಬೆಳೆದು ಬಿಟ್ಟಿದ್ದವು!

ಸದ್ದಿಲ್ಲದೆ ನಾನು ಗ್ರಾಮಗಳತ್ತ ಮುಖಮಾಡಿದೆ. ಜನಜಾಗೃತಿಗೆ ಗ್ರಾಮ ಪಂಚಾಯತಿಗಳಿಂದಲೆ ತೊಡಗಿದೆ. ಗ್ರಾಮ ಪಂಚಾಯತಿ ಚುನಾವಣೆ ನಡೆದು 'ಕಾದ್ದಿರಿಸಿದ' ಸ್ಥಾನಗಳಲ್ಲಿ ಮಹಿಳೆಯರು ಹಿಂದುಳಿದ ಜನಾಂಗದವರು ಹಾಗೂ ಬಡವರೂ ಕೂಡ ಆಯ್ಕೆಗೊಂಡಿದ್ದರು. ಅವರಲ್ಲಿ ಹೆಚ್ಚಿನವರು ವಿದ್ಯಾವಂತರಾಗಿರಲಿಲ್ಲ! ಇಂತಹ ಸಂದರ್ಭಗಳಲ್ಲಿ ಕುರ್ಚಿಯಹಿಂದೆ ತಾವಿದ್ದುಕೊಂಡು ರಾಜಕಾರಣಿಗಳು ತಮಗೆ ಬೇಕಾದವರಿಗೆ ಸರಕಾರಿ, ಸವಲತ್ತುಗಳು ದೊರಕುವಂತೆ ಮಾಡುತ್ತಿದ್ದರು. ಮುಗ್ಧ ಹಾಗೂ ಅನನುಭವಿಗಳಾದವರಿಗೆ ಗ್ರಾಮಪಂಚಾಯತಿ ಕಾರ್ಯಕ್ರಮಗಳ ಬಗ್ಗೆ ಹಾಗೂ ಸದಸ್ಯರ ಹೊಣೆಗಾರಿಕೆಗಳ ಬಗ್ಗೆ ತಿಳುವಳಿಕೆ ನೀಡುವ ತರಬೇತಿ ಶಿಬಿರಗಳನ್ನು ಅಲ್ಲಲ್ಲಿ ಏರ್ಪಡಿಸಿದೆ. ಅಷ್ಟೇಅಲ್ಲದೆ. ಅಧ್ಯಕ್ಷ ಉಪಾಧ್ಯಕ್ಷ ಸ್ಥಾನಗಳಿಗೆ ಆಯ್ಕೆಯಾಗಿದ್ದ ಮಹಿಳೆಯರ ಗುಂಪಿಗೆ ಪ್ರತ್ಯೇಕ ಸಮಾಲೋಚನಾ ಶಿಬಿರ ಏರ್ಪಡಿಸಿ ಗ್ರಾಮಪಂಚಾಯತಿ ಕಾರ್ಯಕ್ರಮಗಳು, ಹಣಕಾಸಿನ ಇತಿಮಿತಿಗಳು, ಅಭಿವೃದ್ಧಿ ಕಾರ್ಯಕ್ರಮಗಳು ಮೊದಲಾದ ಅಂಶಗಳ ಸ್ವರೂಪವನ್ನು ವಿವರಿಸಿ ಹೇಳಲಾಯಿತು.

ಈ ರೀತಿಯ ತರಬೇತಿ ಶಿಬಿರಗಳು ಉಪಯುಕ್ತವಾಗುತ್ತಿರುವುದರಿಂದ, ಸರಕಾರದ ಕಾರ್ಯಕ್ರಮಗಳ ಮೂಲಕ ನಿರ್ವಹಿಸುವಂತೆ ಪ್ರಯತ್ನ ಮಾಡಿದಾಗ, ಅಧಿಕಾರಿಗಳಿಂದ ಉದಾಸೀನತೆಯೂ ರಾಜಕಾರಣಿಗಳಿಂದ ತಿರಸ್ಕಾರವೂ ನಮ್ಮ ಪಾಲಿಗೆ ದೊರಕಿತು.

ನವಸಾಕ್ಷರರಿಗೆ ಕೂಡ ಅರ್ಥವಾಗುವಂತೆ ಸರಳಶೈಲಿಯಲ್ಲಿ ವಿವರಗಳನ್ನು ನೀಡುವ 'ಗ್ರಾಮಪಂಚಾಯತಿ ಶಾಸನ ಪರಿಚಯ' ಎಂಬ ಕಿರುಹೊತ್ತಗೆಯನ್ನು

ಗ್ರಾಮೋದಯ ಪ್ರಕಾಶನದ ಸಹಯೋಗದಲ್ಲಿ ಮುದ್ರಿಸಿ ವಿತರಿಸಲಾಯಿತು. ಖಾದೀ ಗ್ರಾಮೋದ್ಯೋಗ ಸಂಘದವರು ಸಹಕರಿಸಿದ್ದರಿಂದ ನಮ್ಮ ಕೆಲಸ ತುಸು ಸುಲಭವಾಯಿತು. ಮುಂದೆ ಖಾದೀ ಗ್ರಾಮೋದ್ಯೋಗ ನಿರತರ ಸಮ್ಮೇಳನದ ಜತೆಗೆ ಸ್ವಾತಂತ್ರ್ಯ ಹೋರಾಟಗಾರರ ಸಮ್ಮೇಳನವನ್ನೂ ಗುಲಬರ್ಗದಲ್ಲಿ ಜರುಗಿಸಿದಾಗ 4 ದಶಕಗಳ ಹಿಂದೆ ಭುಜಕ್ಕೆ ಭುಜಕೊಟ್ಟು ನಿಜಾಂಶಾಹಿಯ ವಿರುದ್ಧ ಹೋರಾಡಿದ ಗೆಳೆಯರ ಭೇಡಿಯಾಗಲು ಅವಕಾಶ ದೊರೆತುದು ಅವರಿಗೆ ಸಂತೋಷವನ್ನೂ, ತೃಪ್ತಿಯನ್ನೂ ಉಂಟು ಮಾಡಿತು.

ಹೈದ್ರಾಬಾದ್ ಕರ್ನಾಟಕದ ರಾಯಚೂರು, ಬೀದರ್, ಗುಲಬರ್ಗ (ಮತ್ತು ಈಚೆಗೆ ಸೃಷ್ಟಿಯಿಂದ ಯಾದಗಿರಿ ಮತ್ತು ಕೊಪ್ಪಳ) ಜಿಲ್ಲೆಗಳಲ್ಲಿ ಸ್ವಯಂಸೇವಾ ಸಂಸ್ಥೆಗಳು ಅಲ್ಲಲ್ಲಿ ಕಾರ್ಯ ನಿರತವಾಗಿದ್ದರೂ ಒಂದು ಸುಸಂಘಟಿತ 'ವೇದಿಕೆ' ಇರಲಿಲ್ಲ ಎಂಬುದರಿಂದ ಗುಲಬರ್ಗ ವಿಶ್ವವಿದ್ಯಾಲಯದ ಸಮಾಜಕಾರ್ಯ ವಿಭಾಗದವರ ಸಹಕಾರದೊಂದಿಗೆ ಜಿಲ್ಲೆಯ ಸ್ವಯಂಸೇವಾಸಂಘಗಳ ಸಮಾವೇಶವನ್ನು ಏರ್ಪಡಿಸಿ ಜಿಲ್ಲಾ ಸ್ವಯಂಸೇವಾ ಸಂಘಗಳ ಒಕ್ಕೂಟವನ್ನು ಕೂಡ ರಚಿಸಿ ಅದನ್ನು ನೋಂದಣಿ ಮಾಡುವುದರ ಮೂಲಕ, ಸರಕಾರದೊಂದಿಗೆ ನೇರ ವ್ಯವಹರಿಸಲು ಅಧಿಕೃತ ವ್ಯವಸ್ಥೆಯನ್ನು ಸಿದ್ಧಗೊಳಿಸುವ ಕಾರ್ಯದಲ್ಲಿ ಟ್ರಸ್ಟ್ ಪ್ರಮುಖ ಪಾತ್ರವಹಿಸಿತು. ಈ ಕಾರ್ಯದಲ್ಲಿ ಚಂದ್ರಕಾಂತ ಮಾಸೂರ್‌ಕರ್ ಮನಃಪೂರ್ವಕವಾಗಿ ಕೆಲಸ ಮಾಡಿದ್ದರಿಂದ ಈ ಕಾರ್ಯ ಸಾಧ್ಯವಾಯಿತೆಂಬುದನ್ನು ಇಲ್ಲಿ ಜ್ಞಾಪಿಸಿಕೊಳ್ಳ ಬಹುದು.

ಎರಡು ವರ್ಷಗಳ ಕೊನೆಯಲ್ಲಿ ಬೆಂಗಳೂರಿನಿಂದ ರಾಮ ಸುಧಾ ಟ್ರಸ್ಟ್ ಕಾರ್ಯಕ್ರಮಗಳನ್ನು ನಿರ್ವಹಿಸಲು ಆಹ್ವಾನ ಬಂದಿದ್ದರಿಂದ ಗುಲ್ಬರ್ಗದಿಂದ ನಿರ್ಗಮಿಸಿದೆ.

* * *

೭

ಮಹಾನಗರದ ನೆರೆಹೊರೆಯ ಗ್ರಾಮಗಳಲ್ಲಿ ರಾಮಸುಧಾ ಟ್ರಸ್ಟ್

ಮಹಿಳಾ ಸಮೃದ್ಧಿಯೋಜನೆ

ಬೆಂಗಳೂರು ನಗರದಂತಹ 'ಶಹರು'ಗಳಲ್ಲಿ 'ಸಮಾಜಸೇವಾಸಕ್ತ'ರ ಕೆಲವು ಸಂಘಸಂಸ್ಥೆಗಳಿರುತ್ತವೆ. ಭಾನುವಾರ ಮುಂಜಾನೆಯ ಉಪಾಹಾರ ಮುಗಿಸಿ ಕಾರಿನಲ್ಲಿ ಹೊರಟು–ಮಧ್ಯಾಹ್ನದ ಊಟದ ವೇಳೆಗೆ ಸ್ವಲ್ಪಮುಂಚೆ ಮನೆ ತಲುಪುವ–ಹಾಗೂ ಈ ನಡುವಿನ 'ಎಡೆ' ಸಮಯದಲ್ಲಿ ಯಾವುದಾದರೂ ಒಂದು ಹಳ್ಳಿಯಲ್ಲೋ ಕೊಳಪೆಯಲ್ಲೋ 'ಕೊಳಚೆ'ಯಲ್ಲೋ ಒಂದಷ್ಟು. ದಾನ ಮಾಡಿ\ನೀಡಿ ಸಂತೋಷದಿಂದ ಹಿಂದಿರುಗುವ ಗ್ರಾಮಸೇವಾ ನಿರತ ದುರಂಧರಿಣಿಯರೂ ಇರುತ್ತಾರೆ. ಇಂತಹವರ ನಡುವೆಯೇ ಪ್ರಾರಂಭವಾದರೂ ಅರ್ಥ ಪೂರ್ಣವಾದ 'ಗ್ರಾಮೀಣ ವಿಕಾಸ ಕಾರ್ಯಕ್ರಮಗಳಲ್ಲಿ ಸ್ವಲ್ಪಮಟ್ಟಿಗಾದರೂ ಕಾರ್ಯ ನಿರ್ವಹಿಸಿದ ಒಂದು ಸ್ವಯಂಸೇವಾಸಂಸ್ಥೆ: 'ರಾಮ ಸುಧಾ ಟ್ರಸ್ಟ್'

ಬೆಂಗಳೂರಿನಿಂದ ಸುಮಾರು 35 ಕಿಲೋಮೊಟರ್ ದೂರದ ಹಳೇಸಂಪಿಗೆ ಹಳ್ಳಿ, ಮಂಟಪಗ್ರಾಮಗಳಲ್ಲಿ ಹಾಗೂ ಆನೇಕಲ್ ಪಟ್ಟಣದ ಆಸುಪಾಸಿನ ಗೆರಟಿಗೆಗಳ ಬೆಲೆ ಮತ್ತು ಸುತ್ತ ಮುತ್ತಲಿನ ಮೂರುನಾಲ್ಕು ಗ್ರಾಮಗಳಲ್ಲಿ ಕಾರ್ಯಕ್ರಮಗಳ ವಿಸ್ತರಣೆ ನಡೆಸಿದ ಕೃತಕೃತ್ಯವಾದ 'ರಾಮಸುಧಾ' ಸಂಸ್ಥೆಯಲ್ಲಿ 3–4 ವರ್ಷಗಳ ಕಾಲ (1996–99) ನಾನು ಮತ್ತು ಪತ್ನಿ ಡಾ॥ ಸಬಿತಾ ಕಾರ್ಯಪ್ರವೃತ್ತರಾದೆವು. ವಾರದಲ್ಲಿ 3–4 ಬಾರಿ (ಕಾರಿನಲ್ಲಿ) ಹೋಗಿಬರುತ್ತಿದ್ದರೂ ಗ್ರಾಮೀಣ ಜನರಲ್ಲಿ ಸಾಕಷ್ಟು ಹೊಕ್ಕುಬಳಕೆ ಇತ್ತು. ಅದರಲ್ಲಿಯೂ ಮಹಿಳೆಯರ ಹಾಗೂ 'ಯುವತಿ' ಯರ ಗುಂಪು ನಮ್ಮ 'ಉದ್ದೇಶಿತ' ಗುಂಪಾಗಿತ್ತು. ಇವರಿಗೆ ಸಾಕಷ್ಟು ಬಿಡುವಿತ್ತು. ಹೇಳಿಕೊಳ್ಳುವಂಥಾ ಬಡತನ ಕಾಡುತ್ತಿರಲಿಲ್ಲ; ತಕ್ಕಮಟ್ಟಿಗೆ ವಿದ್ಯಾವಂತೆಯರು ಹಾಗೂ ವಿವಾಹವಯಸ್ಕರು. ಇವರ ಈ ಜೀವನದಲ್ಲಿ ನಾವು ಪ್ರಾರಂಭಿಸಿದ

ಕಾರ್ಯಕ್ರಮ 'ಗೃಹಾಲಂಕರಣ'ದ ತರಬೇತಿ. ತಮಗೆ ಬೇಕಾದ ಗೃಹಾಲಂಕರಣದ ವಸ್ತುಗಳನ್ನು ತಾವೇ ಮಾಡಿಕೊಳ್ಳುವ ನಿಟ್ಟಿನಲ್ಲಿ ಕೆಲವು ತರಬೇತಿ ಶಿಬಿರಗಳನ್ನು ಗ್ರಾಮದಲ್ಲಿ ಏರ್ಪಡಿಸಿದೆವು. ಕರಕುಶಲ ತಜ್ಞೆ ಬಳ್ಳಾರಿಯ ಲಕ್ಷ್ಮಿದೇವಿ ಮತ್ತು ಅವರ ಗೆಳತಿಯರು ಇಂತಹ ಶಿಬಿರಗಳಲ್ಲಿ 'ಅಲಂಕೃತಮೂರ್ತಿ, ಸುಂದರವಾದ ಬೊಂಬೆ, ಮೊದಲಾದವುಗಳನ್ನು ಹಳೇಬಟ್ಟೆಗಳು ಮರದಪುಡಿ- ಬತ್ತದಹೊಟ್ಟು ಮೊದಲಾದುವನ್ನು ಬಳಸಿ ತಯಾರಿಸಿ ಅವುಗಳಿಗೆ ಸಸ್ಯಜನ್ಯ ನೈಸರ್ಗಿಕ ಬಣ್ಣವನ್ನು ಸವರಿ ಅಪ್ಪಟ ಪರಿಸರ ಸ್ನೇಹಿ (ಪ್ಲಾಸ್ಟಿಕ ರಹಿತ) ವಸ್ತುಗಳನ್ನು ವಿವಿಧ ವಿನ್ಯಾಸಗಳಲ್ಲಿ ರಚಿಸುವ ಕುಶಲ ಕಲೆಯನ್ನು ಕಲಿಸಿ ಕೊಟ್ಟರು. ಕೆಲವರು ಕಸೂತಿ, ಕೈಹೊಲಿಗೆಯ ಉಡುಪು ತಯಾರಿಕೆ ಹೀಗೆ ಗೃಹೋಪಯೋಗಿ ಅಲಂಕರಣೆಗಳನ್ನು ಕಲಿತುಕೊಂಡು ತಮ್ಮ ಮನೆಗಳನ್ನು ಶೃಂಗರಿಸಲು ಪ್ರಾರಂಭಿಸಿದರು. ಕಿಟಿಕಿ-ಬಾಗಿಲುಗಳಿಗೆ ತಾವೇ ಕೈಯಿಂದ ಹೊಲಿಗೆ ಹಾಕಿಗೆ ಪರದೆಗಳನ್ನು ಅಳವಡಿಸಿಕೊಂಡರು. ಹೊಲಿಗೆಯಂತ್ರದ ಸಾಮಾನ್ಯ ಬಳಕೆಯ ಮೂಲಕ ಮಹಿಳೆಯರ ನಿತ್ಯದ ಉಡುಪುಗಳು, ಮಕ್ಕಳ ಶಾಲೆಯ ಉಡುಪು ಅಂಗಿಚಡ್ಡಿಗಳನ್ನು ನಿತ್ಯ ಬಳಕೆಯ ಉಡುಪನ್ನು ತಯಾರಿಸಿದರು. ಕುರ್ಚಿ-ಮೇಜುಗಳ 'ಆವರಣ'ಗಳು ತುಂಬಾ ಜನಪ್ರಿಯವಾದವು.

ಇದೇ ಸಂದರ್ಭದಲ್ಲಿ ಭಾರತ ಸರಕಾರವು ಪ್ರಾರಂಭಿಸಿದ 'ಮಹಿಳಾ ಸಮೃದ್ಧಿಯೋಜನೆ' ಎಂಬ ಉಳಿತಾಯದ ಹಣ ಶೇಖರಣೆಯ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವಂತೆ ಮಹಿಳೆಯರನ್ನು ಪ್ರೇರೇಪಿಸಿದೆವು. ಒಂದು ವರ್ಷದ ಅವಧಿಯಲ್ಲಿ ಸ್ಥಳೀಯ ಅಂಚೆಕಟ್ಟೆಯಲ್ಲಿ ಹತ್ತಾರು ಕಂತುಗಳಲ್ಲಿ 100 ರೂಪಾಯಿಗಳನ್ನು ಮಹಿಳೆ ತನ್ನ ಹೆಸರಿನಲ್ಲಿ ಜಮಾಮಾಡಿದರೆ, ಅದಕ್ಕೆ ಸರಕಾರವು 20 ರೂಪಾಯಿಗಳ 'ಬಡ್ಡಿ' ಯನ್ನು ನೀಡುತ್ತದೆ. ಇದರ ಜತೆಗೆ ಪ್ರಾಜೆಕ್ಟ್‌ನಿಂದ 10 ರೂಪ್ಯಾ ಪ್ರೋತ್ಸಾಹ ಧನವನ್ನು ಕೊಡುತ್ತದೆ ಎಂಬುದರಿಂದ ಯುವತಿಯರು ತಾವಾಗಿ ಮಹಿಳಾ ಸಮೃದ್ಧಿಯೋಜನೆಗೆ ಸೇರಿಕೊಂಡರು. ಇದಕ್ಕಾಗಿ ಹಣಕ್ಕೆ ಹಿರಿಯರನ್ನು ಪೀಡಿಸದೆ, ತಾವು ಉಗುರುಗಳಿಗೆ ಹಚ್ಚುವ ರಂಗು, ಕೆನ್ನೆಗೆ ಬಳಿಯುವ ರೂಜು, ತಲೆಗೂದಲಿಗೆ ಉಪಯೋಗಿಸುವ ಶ್ಯಾಂಪೂಗಳ ಬದಲು ನಿಸರ್ಗದತ್ತವಾದ ಮೂಲದ್ರವ್ಯ'ಗಳನ್ನು ಎಂದರೆ ಅರಿಶಿಣ-ಸೀಗೆಕಾಯಿಪುಡಿ- ಇತ್ಯಾದಿಗಳನ್ನು ರೂಢಿಸಿಕೊಳ್ಳುವ ಮೂಲಕ ಉಳಿಸಿಕೊಂಡ ಹಣವನ್ನು ಮಹಿಳಾಸಮೃದ್ಧಿಯೋಜನೆಗೆ ಸೇರಿ ಹಣ ಕಟ್ಟಿದರು. ಇದರಿಂದ ಉತ್ಸಾಹಗೊಂಡ ತಾಯಂದಿರು ಕೂಡ ತಮ್ಮ ತಮ್ಮ ಹೆಸರಲ್ಲಿ ಮಹಿಳಾಸಮೃದ್ಧಿಯೋಜನೆಯ ಸದಸ್ಯತ್ವ ಪಡೆದುಕೊಂಡರು, ಹಣ ಜಮಾಮಾಡಲು ಮುಂದೆ ಬಂದರು.

ರಾಮಸುಧಾಟ್ರಸ್ಟ್‌ನ ಕಾರ್ಯಾಲಯಕ್ಕೆ ಬಂದು ತಮ್ಮ ಗ್ರಾಮಕ್ಕೆ ಬರುವಂತೆ ಯುವಕರು ಆಹ್ವಾನಿಸಿದರು. ಕೆಲವು ಮಂದಿ ಯುವಕರು ತಮ್ಮ ಊರಲ್ಲಿ ಇದ್ದ

ಅಂಗನವಾಡಿ ಕೇಂದ್ರವು ಕಾರಣಾಂತರಗಳಿಂದ ಮುಚ್ಚಿಹೋಗಿದ್ದು ಚಿಕ್ಕಮಕ್ಕಳಿಗೆ ತುಂಬಾ ಅನಾನುಕೂಲವಾಗಿದೆ ಎಂಬುದು ಅವರ ಅಹವಾಲಾಗಿತ್ತು. ಸಂಬಂಧಪಟ್ಟ ಇಲಾಖೆಯವರನ್ನು ಸಂಪರ್ಕಿಸಿ, ವಿನಂತಿಸಿಕೊಂಡರೂ ಪ್ರಯೋಜನವಾಗದ ಕಾರಣ ಸ್ವಯಂಸೇವಾಸಂಸ್ಥೆಯ ನೆರವಿಗಾಗಿ ಬಂದಿದ್ದರು. ಅವರ ಅಪೇಕ್ಷೆಯಂತೆ, ಅಲ್ಲಿಗೆ ಹೋದಾಗ ಗ್ರಾಮಸ್ಥರು ತುಂಬಾ ಉತ್ಸಾಹದಿಂದ ಸ್ವಾಗತ ನೀಡಿದರು. 'ಅಂಗನವಾಡಿ' ಯ ಬದಲು 'ಬಾಲವಾಡಿ' ಕೇಂದ್ರವನ್ನು ಪ್ರಾರಂಭಿಸಲು ನಿರ್ಧರಿಸಿದಾಗ, ಗ್ರಾಮದ ಪ್ರವೇಶದ್ವಾರದಲ್ಲಿದ್ದ ಆಂಜನೇಯ ಗುಡಿಯಲ್ಲಿ ಸ್ಥಳ ಒದಗಿಸುವುದಾಗಿ ಕೂಡ ಹೇಳಿದರು. ಸುಮಾರು 20 ಮಕ್ಕಳನ್ನು ಓರ್ವ 'ಶಿಕ್ಷಣ' ಸಹಾಯಕಿಯರನ್ನು ಕೂಡ ಗುರುತಿಸಿದ್ದರು. ಮಕ್ಕಳಿಗಾಗಿ ಕೆಲವು ಆಟದ ವಸ್ತುಗಳು, ಚಿತ್ರಪಟಗಳು ಮೊದಲಾದ 'ಕಲಿಕಾ ಸಾಧನ' ಗಳನ್ನು ಒದಗಿಸಿದ ಮೇಲೆ ಮಕ್ಕಳ ಸಂಖ್ಯೆ 30ಕ್ಕೇರಿತು, ಇನ್ನೊಂದಿಷ್ಟು ಸೌಕರ್ಯಗಳನ್ನು ಕೂಡ ಒದಗಿಸಿಕೊಟ್ಟುದರಿಂದ ಬಾಲವಾಡಿ ಸರಿಯಾಗಿ ಕಾರ್ಯ ನಿರ್ವಹಿಸಲು ಅನುಕೂಲವಾಯಿತು.

ಊರಿಗೊಂದು ಕಿರು ನೀರುಸರಬರಾಜು ಯೋಜನೆಯ ಮೂಲಕ 'ವಾಟರ್ ಟ್ಯಾಂಕ'ನ್ನು ಸರಕಾರ ಕೊಟ್ಟಿದ್ದರೂ ಅದನ್ನು ಸರಿಯಾಗಿ ನಿರ್ವಹಿಸಲು ಯಾವ ವ್ಯವಸ್ಥೆಯೂ ಇರಲಿಲ್ಲ. ದನಕರುಗಳಿಗೆ ಅಲ್ಲೇ ನೀರು ಕುಡಿಸುತ್ತಿದ್ದರು; ಮೈ ತೊಳೆಸುತ್ತಿದ್ದರು. ಬಟ್ಟೆ ಒಗೆಯುವುದರಿಂದ ತೊಡಗಿ ಇತರ ಎಲ್ಲಾ ರೀತಿಯ ಕಾರ್ಯಗಳನ್ನು ಅಲ್ಲೇ ಮಾಡುತ್ತಿದ್ದುದರಿಂದ ಟ್ಯಾಂಕನ ಸುತ್ತಾಮುತ್ತಾ ಹೊಲಸು- ಕೆಸರು ತುಂಬಿತ್ತು. ಯುವಕರೊಂದಿಗೆ ಸಮಾಲೋಚಿಸಿ ಗ್ರಾಮದಲ್ಲಿದ್ದ 3 ಬೀದಿಗಳಿಗೂ ಕೊಳಾಯಿ ಹಾಕಿಸುವ ಕಾರ್ಯವನ್ನು ಟ್ರಸ್ಟ್ ಮಾಡಿಸಲು ಮುಂದಾದಾಗ, ಯುವಕರು ಶ್ರಮದಾನದಿಂದ ಉಳಿದ ಕೆಲಸಗಳನ್ನು ಮಾಡುವುದಾಗಿ ಹೇಳಿದರು. 3 ಭಾನುವಾರಗಳ ಶ್ರಮದಾನದಿಂದ ಕೊಳಾಯಿ ನೀರು ಪ್ರತಿ 7–8 ಮನೆಗೊಂದು 'ನಲ್ಲಿ' ಯ ಮೂಲಕ ದೊರಕುವ ವ್ಯವಸ್ಥೆಯಾಯಿತು. ಪಶುಗಳಿಗೆ ನೀರು ಕುಡಿಯಲು ಕಲ್ಲಿನ ಮರಿಗೆಯನ್ನು ಹಾಕಿಸುವುದು, ಟ್ಯಾಂಕ್‌ನ ನೀರನ್ನು ಫೇಲಾಗದಂತೆ ನೋಡಿಕೊಳ್ಳುವುದು ಮೊದಲಾದ ಕೆಲಸಗಳನ್ನು 'ಮಹಿಳಾ ಮಂಡಳಿ' ಯವರು ಸ್ವಯಂಪ್ರೇರಣೆಯಿಂದ ಮಾಡಲು ಮುಂದೆಬಂದರು. ಸರಕಾರದ ಕಡೆಯಿಂದ ಕ್ರಮೇಣ ಸುಲಭಶೌಚಾಲಯದ ವ್ಯವಸ್ಥೆ ಕೂಡ ಆಯಿತು.

ಸ್ಥಳೀಯರ ಅಪೇಕ್ಷೆಯಂತೆ ಗ್ರಾಮ ಪಂಚಾಯತ್ ಕಾರ್ಯಾಲಯದ ಪಕ್ಕದಲ್ಲೇ ಒಂದು ಉಚಿತ ವಾಚನಾಲಯದನ್ನು ಪ್ರಾರಂಭಿಸಲಾಯಿತು.

ಯುವಕನೊಬ್ಬ ವಾಚನಾಲಯದ ಉಸ್ತುದಾರಿ ನೋಡಿಕೊಳ್ಳಲು ತಾನಾಗಿ ಮುಂದೆ ಬಂದ.

ಮಂಟಪ ಹಿರಿಯಪ್ರಾಥಮಿಕ ಶಾಲೆಯು ಸರಕಾರದ ಶಿಕ್ಷಣ ಇಲಾಖೆ ಹಾಗೂ ಗ್ರಾಮಸ್ಥರ ನಡುವಣ ಭಿನ್ನಾಭಿಪ್ರಾಯದಿಂದ ಅವನತಿಗಿಳಿದಿತ್ತು. 7 ತರಗತಿಗಳಿಗೆ 5 ಜನ ಶಿಕ್ಷಕರು. 4 ಕ್ಲಾಸ್‌ರೂಂ. ಶಿಕ್ಷಕರ ಪೈಕಿ ಒಬ್ಬರು ಸದಾ ಗೈರುಹಾಜರು. ಇನ್ನಿಬ್ಬರು ದುರಭ್ಯಾಸಿ. ಒಂದುದಿನ ಶಾಲಾ ವಿದ್ಯಾರ್ಥಿಗಳ ಹಾಗೂ ಶಿಕ್ಷಕರ ನಿಯೋಗವು 'ರಾಮ ಸುಧಾಟ್ರಸ್ಟ್' ಕಾರಾಲಯಕ್ಕೆ (ಬೆಂಗಳೂರಿಗೆ) ಬಂದು ಅಧ್ಯಕ್ಷರನ್ನು ತಮ್ಮೂರಿಗೆ ಆಹ್ವಾನಿಸಿದರು. ಶಾಲೆಯ ಪದ್ಧತಿಯನ್ನು ಕಣ್ಣಾರೆ ಕಂಡ ಅಧ್ಯಕ್ಷ ಡಾ॥ ಎ.ಎಚ್. ರಾಮರಾವ್, ಶಾಲೆಯ ಹಲವಾರು ಕೊಂದುಕೊರತೆಗಳನ್ನು ನಿವಾರಿಸುವ ಕಾರ್ಯವನ್ನು ರಾಮಸುಧಾ ಟ್ರಸ್ಟ ಮಾಡುವುದಾಗಿ ಹೇಳಿದರು. ಶಿಕ್ಷಣ ಇಲಾಖೆಯ ಸಂಬಂಧಪಟ್ಟ ಅಧಿಕಾರಿಗಳನ್ನು ಸಂಪರ್ಕಿಸಿ ಖಾಲಿಯಾಗಿದ್ದ ಶಿಕ್ಷಕರ ಸ್ಥಾನಗಳನ್ನು ತುಂಬಿಸುವಂತೆ ಮಾಡಿದರು. ಶಾಲೆಗೆ ಬೇಕಾದ ಪೀಠೋಪಕರಣಗಳು, ಪಾಠೋಪಕರಣಗಳು, ಆಟದ ಸಾಧನಗಳು, ವಾಚನಾಲಯಕ್ಕೆ ಪುಸ್ತಕಗಳು ಹೀಗೆ ಹಲವಾರು ಸವಲತ್ತುಗಳನ್ನು ಒದಗಿಸಲಾಯಿತು.

ಶಾಲಾಕಟ್ಟಡದ ವಿಸ್ತಾರಣಾ ಕಾರ್ಯವನ್ನು ಸರಕಾರವು ಕೈಗೆತ್ತಿಕೊಂಡಿದ್ದು ಕೊಠಡಿಗೆ ಬುನಾದಿ ಹಾಕಿದ್ದರೂ 12 ವರ್ಷಗಳ ನಂತರದೂ ಅಷ್ಟಕ್ಕೇ ನಿಂತಿತ್ತು. ಟ್ರಸ್ಟ್ ಮೂಲಕ ಆ ಕೊಠಡಿಯ ನಿರ್ಮಾಣವನ್ನು ಶೀಘ್ರಗತಿಯಿಂದ ಮುಗಿಸಿತು. ಜೊತೆಗೆ ಇನ್ನೊಂದು ಕೊಠಡಿಯನ್ನೂ ನಿರ್ಮಿಸಿಕೊಡಲಾಯಿತು. ಶಾಲೆಗೆ ಸುಣ್ಣಬಣ್ಣ ಬಳಿದು ಹೊಸರೂಪ ನೀಡಿದ್ದೂ ಆಯಿತು. ಕೊನೆಗೊಮ್ಮೆ ಶಿಕ್ಷಣ ಮಂತ್ರಿ ಶ್ರೀ ಗೋವಿಂದೇಗೌಡರು ಬಂದು ಪುನಃಶ್ಚೇತನ ಕಾರ್ಯವನ್ನು ಅಧಿಕೃತಗೊಳಿಸಿದರು.

ಶಾಲೆಯ ವಿದ್ಯಾರ್ಥಿಗಳ ಮೂಲಕ ಸಾಕ್ಷರತಾ ಆಂದೋಲನದಲ್ಲಿ ಒಂದು ನೂತನ ವಿಧಾನವನ್ನು ಇಲ್ಲಿ ರೂಪಿಸಿದ್ದಾಯಿತು.

6–7ನೇ ತರಗತಿಗಳ ವಿದ್ಯಾರ್ಥಿಗಳು ತಮ್ಮ ತಮ್ಮ ಮನೆಗಳಲ್ಲೇ, ಓರ್ವ ಹಿರಿಯರಿಗೆ ನಿರಕ್ಷರಸ್ತರಾಗಿದ್ದವರಿಗೆ ಅನುಕೂಲವಾದ ವೇಳೆಯಲ್ಲಿ ಅಕ್ಷರಾಭ್ಯಾಸ ಮಾಡಿಸುವ ನೂತನ ವಿಧಾನವನ್ನು ರಾಮಸುಧಾ ಟ್ರಸ್ಟ್ ಕಾರ್ಯರೂಪಕ್ಕೆ ತಂದಿತು. 6 ತಿಂಗಳ ಕಾಲದಲ್ಲಿ ಸುಮಾರು 35 ಜನ ಶ್ರಮರಹಿತವಾಗಿ ಅಕ್ಷರಸ್ತರಾದರು.

ವಿಶೇಷತಃ ಬೆಂಗಳೂರಿಲ್ಲಿ ವಿಕಲ ಚೇತನರ ಸಂಸ್ಥೆಯ ಅಪೇಕ್ಷೆಯ ಮೇರೆಗೆ ರಾಮಸುಧಾ ಟ್ರಸ್ಟ್ ಶ್ರೀಮತಿ ವಾಣಿ ಜಯರಾಂ ಅವರ ಸಂಗೀತ ಕಾರ್ಯಕ್ರಮ ನಡೆಸಿದರು. ಈ ಸಂದರ್ಭಧಲ್ಲಿ ಮಂಟಪ ಗ್ರಾಮದ ಪ್ರಯೋಗಗಳನ್ನು ಕೇಳಿದ ವಾಣೀಜೀಯವರು ತಾವು ಸ್ವತ: ಭೇಟಿ ನೀಡಿ, ಮಕ್ಕಳಿಗೆ ಸಂಗೀತ ಸುಧೆಯನ್ನು ಸವಿಯುವ ಅವಕಾಶ ಒದಗಿಸಿದ್ದರು.

ಮಂಟಪ ಗ್ರಾಮದ ಸಮೀಪ ಬೆಂಗಳೂರಿನ ಹಿರಿಯ ಶಿಕ್ಷಣ ಸಂಸ್ಥೆಯೊಂದರ ಶಿಕ್ಷಣ (ತರಬೇತಿ) ಕೇಂದ್ರವೊಂದಿತ್ತು. ಸುತ್ತು ಮುತ್ತಲಿನ 2–3 ಹೈಸ್ಕೂಲ್ ವಿದ್ಯಾರ್ಥಿಗಳಿಗೆ ಬೆಂಗಳೂರಿನ ಎಕ್ಸಲೆಂಟ್ ಟ್ಯುಟೋರಿಯಲ್ಸ್ ರವರ ಸಹಯೋಗದಿಂದ ಉಚಿತ ಟ್ಯೂಶನ್ ಕ್ಲಾಸ್‌ಗಳನ್ನು ನಿರ್ವಹಿಸಿದ್ದಲ್ಲದೆ, ಎಕ್ಸಲೆಂಟ್ ಪಬ್ಲಿಕೇಶನ್‌ನವರ ಅತ್ಯಂತ ಉಪಯುಕ್ತ ಗೈಡ್ ಪುಸ್ತಕಗಳನ್ನೂ ವಿತರಿಸಲಾಯಿತು. ಗ್ರಾಮೀಣ ವಿದ್ಯಾರ್ಥಿಗಳಿಗೆ ಈ ಸಹಾಯವು ತುಂಬಾ ಪ್ರಯೋಜನಕಾರಿಯಾಗಿತ್ತು.

ಈ ಎಲ್ಲ ಸೇವಾಕಾರ್ಯಕ್ರಮಗಳನ್ನು ಗಮನಿಸಿದ ಕರ್ನಾಟಕ ಸರಕಾರವು ರಾಮಸುಧಾ ಟ್ರಸ್ಟನ್ನು ಅಭಿನಂದಿಸಿ, ಅಧ್ಯಕ್ಷ ಡಾ॥ ಎ.ಎಚ್. ರಾಮರಾಯರಿಗೆ ರಾಜ್ಯೋತ್ಸವ ಪ್ರಶಸ್ತಿ ನೀಡಿ ಗೌರವಿಸಿತು.

ಬಿಹಾರ್ ರಾಜ್ಯದಲ್ಲಿ ವಿಶ್ವಆರೋಗ್ಯ ಸಂಸ್ಥೆಯ ಕಾರ್ಯಕ್ರಮದಲ್ಲಿ ಕೆಲಸಮಾಡಲು ಆಹ್ವಾನ ಬಂದುದರಿಂದ ನಾನು ರಾಂಚಿಗೆ ತೆರಳಿದೆ.

* * *

೮

ಕುಷ್ಟರೋಗ ನಿರ್ಮೂಲಕ್ಕೆ ಸೆ. ವಿಶ್ವ ಆರೋಗ್ಯ ಸಂಸ್ಥೆಯ ಕಾರ್ಯಕ್ರಮ

ಬಿಹಾರ-ಜಾರ್ಖಂಡ ಆದಿವಾಸಿಗಳಿಗೆ ಎಂ.ಡಿ.ಟಿ. ಚಿಕಿತ್ಸೆ

ಜಗತ್ತಿನಲ್ಲಿ ಅತಿಹೆಚ್ಚು ಕುಷ್ಟ ರೋಗಿಗಳಿರುವ ದೇಶ-ಭಾರತ. ಬಿಹಾರ, ಜಾರ್ಖಂಡ, ಅಸ್ಸಾಂ, ಉತ್ತರಪ್ರದೇಶಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಕುಷ್ಟರೋಗಿಗಳಿದ್ದಾರೆ. 2010ನೇ ಇಸವಿಯೊಳಗಾಗಿ ವಿಶ್ವವನ್ನು ಕುಷ್ಟರೋಗ ಮುಕ್ತವಾಗಿ ಮಾಡುವ ನಿರ್ಣಯವನ್ನು ಮಾಡಿದ ವಿಶ್ವ ಆರೋಗ್ಯ ಸಂಸ್ಥೆ (W.H.O) ಯ ಸಲಹೆಯಂತೆ ರಾಜ್ಯ ಸರಕಾರಗಳು ಸ್ವಯಂಸೇವಾಸಂಸ್ಥೆಗಳ ನೆರವನ್ನು ಕೇಳಿದವು. ಕುಷ್ಟರೋಗ ಚಿಕಿತ್ಸಾ ಕಾರ್ಯದಲ್ಲಿ ನಿರತರಾಗಿದ್ದ ವಿವಿಧ ಸ್ವಯಂಸೇವಾಸಂಸ್ಥೆಗಳ ಒಂದು ಒಕ್ಕೂಟವು ಭಾರತದಲ್ಲೂ ಇತರೆಡೆಗಳಲ್ಲೂ ನಿರ್ಮಾಣಗೊಂಡವು.

ಭಾರತದಲ್ಲಿ 'ಹಿಂದ್ ಕುಷ್ಟ ನಿವಾರಣಾ ಸಂಸ್ಥೆ'ಯೂ ಅನೇಕ ಆಶ್ರಮಗಳೂ ಕೆಲಸ ಮಾಡುತ್ತಿದ್ದವು. ಚೆನ್ನೈ ಮೂಲದ ಡೇಮಿಯನ್ ಫೌಂಡೇಶನ್ (ಡಿ.ಎಫ್.ಪಿ.ಡಿ) ಇವುಗಳಲ್ಲಿ ಪ್ರಮುಖವಾದ ಸಂಸ್ಥೆಯಾಗಿತ್ತು. ಸರಕಾರದ ಹಾಗೂ ಒಕ್ಕೂಟದ ಕೇಳಿಕೆಯ ಮೇರೆಗೆ ವಿಶ್ವ ಆರೋಗ್ಯ ಸಂಸ್ಥೆಯ ಕುಷ್ಟರೋಗ ನಿರ್ಮೂಲನಾ ಕಾರ್ಯದಲ್ಲಿ ಕೈ ಜೋಡಿಸಲು ಡಿ.ಎಫ್.ಪಿ.ಡಿ ಬಿಹಾರ್ ಮತ್ತು ಜಾರ್ಖಂಡ್ ಪ್ರದೇಶಕ್ಕೆ ಧಾವಿಸಿತು.

'ರಾಂಚಿ'ಯಲ್ಲಿ ಡಿ.ಎಫ್.ಪಿ.ಡಿ ಯ ಕಾರ್ಯಾಲಯವಿದ್ದು ಬಿಹಾರ್ ಪ್ರಾಂತ್ಯದ ವಿವಿಧ ಜಿಲ್ಲೆಗಳಲ್ಲಿ ಉಪ ಕಾರ್ಯಾಲಯಗಳನ್ನು ತೆರೆದು ಕರ್ನಾಟಕ, ತಮಿಳುನಾಡು, ಆಂಧ್ರಪ್ರದೇಶ ಮೊದಲಾದ ಕಡೆಗಳಿಂದ ಉತ್ಸಾಹೀ ವೈದ್ಯರನ್ನೂ ಸಹಾಯಕರನ್ನೂ ಕಲೆಹಾಕಿ ಕಾರ್ಯಾರಂಭ ಮಾಡಿತು. ವಸ್ತುತಃ ನಿದ್ರಾವಸ್ಥೆಯಲ್ಲಿದ್ದ ಬಿಹಾರದ ಕುಷ್ಟರೋಗ ವಿಭಾಗದ ವೈದ್ಯರು ಹಾಗೂ ಚಿಕಿತ್ಸಾ ಸಹಾಯಕರನ್ನು ಸಂಪರ್ಕಿಸಿ ಕುಷ್ಟರೋಗಿಗಳನ್ನು ಪರೀಕ್ಷಿಸಿ, ದೊಡ್ಡ ಪಟ್ಟಿಯನ್ನು ಸಿದ್ಧಪಡಿಸಿತು. ವಿಶ್ವ ಆರೋಗ್ಯ ಸಂಸ್ಥೆಯ ಮೂಲಕ ದೊರಕುತ್ತಿದ್ದ ಉಚಿತ

M.D.T ಔಷಧವನ್ನು ರೋಗಿಗಳಿಗೆ ವಿತರಿಸುವುದು ಹಾಗೂ ಅವರಿಗೆ ನಿಯಮಿತ ಕಾಲಾವಧಿಯಲ್ಲಿ ಸಂಪೂರ್ಣ ಪ್ರಮಾಣದ ಚಿಕಿತ್ಸೆ ನೀಡಿ ರೋಗ ಮುಕ್ತರನ್ನಾಗಿ ಮಾಡಿತು. ಕೆಲವರಲ್ಲಿ ಕಾಣಿಸಿ ಕೊಳ್ಳುತ್ತಿದ ಪ್ರತಿಕ್ರಿಯೆ (ರಿಯಾಕ್ಷನ್) ಗೂ ಸೂಕ್ತ ಔಷಧೋಪಚಾರ ನೀಡಲಾಗುತ್ತಿತ್ತು.

ನಾನು ಪ್ರಾರಂಭದಲ್ಲಿ ಬಿಹಾರಿನ ಜಿಲ್ಲೆಯಲ್ಲಿಯೂ ಅನಂತರ ಜಾರ್ಖಂಡದ ಗೊಡ್ಡ ಹಾಗೂ ದೇಶ್ರಘರ್ ಜಿಲ್ಲೆಗಳಲ್ಲೂ ಕುಷ್ಠರೋಗ ಚಿಕಿತ್ಸಾ ಕಾರ್ಯವನ್ನು ನಿರ್ವಹಿಸಿದೆ. ಹಿಂದೆ ಕುಷ್ಠರೋಗಕ್ಕೆ ಚಿಕಿತ್ಸೆಯೇ ಇಲ್ಲ ಎಂಬ ಅಭಿಪ್ರಾಯವಿತ್ತು. ಕ್ರಮೇಣ ಹೊಸ ಹೊಸ ಔಷಧಿಗಳು ರೂಢಿಗೆ ಬಂದು ಈ M.D.T ಮಾತ್ರೆಗಳನ್ನು ತಪ್ಪದೆ 6 ತಿಂಗಳ ಕಾಲ ಸೇವಿಸಿ ರೋಗ ವಿಮುಕ್ತಿ ಎಂಬ ಪ್ರಚಾರವಾಯಿತು. ಕ್ರಮೇಣ ಕೇವಲ ಒಂದು ಬಾರಿ ಸೇವಿಸಿದರೂ ಕುಷ್ಠರೋಗದ ರೋಗಾಣುಗಳನ್ನು ಸಂಪೂರ್ಣ ನಿರ್ನಾಮಗೊಳಿಸುವುದು ಸಾಧ್ಯವಾಗುತ್ತಿದೆ. ಕುಷ್ಠರೋಗಿಗಳಲ್ಲಿ ಉಂಟಾಗುತ್ತಿದ್ದ ಅಂಗವಿಕಲತೆ, ಸ್ಪರ್ಶಜ್ಞಾನ ಹೀನತೆ, ಮೊದಲಾದ ಬಾಧೆಗಳಲ್ಲಿ ಹೆಚ್ಚಿನವನ್ನು ಸರಿಪಡಿಸುವಂತಹ ಶಸ್ತ್ರಚಿಕಿತ್ಸೆ, ಹಾಗೂ ಬಾಹ್ಯೋಪಚಾರಗಳಿಂದ ವಿಕಲಾಂಗತೆಯನ್ನು ಸ್ವಲ್ಪಮಟ್ಟಿಗೆ ತಗ್ಗಿಸುವುದು ಕೂಡ ಸಾಧ್ಯವಾಗಿದೆ.

ನಾನು ಸುಮಾರು 4 ವರ್ಷಗಳ ಕಾಲ ಬಿಹಾರ್-ಜಾರ್ಖಂಡ್ ಭಾಗದಲ್ಲಿ ಕುಷ್ಠರೋಗ ನಿರ್ಮೂಲನಾ ಕಾರ್ಯದಲ್ಲಿ ಭಾಗವಹಿಸಿದ್ದೆ. ಜನರಲ್ಲಿ ಕುಷ್ಠರೋಗದ ಬಗ್ಗೆ ಇದ್ದ ಮೂಢನಂಬಿಕೆ, ಅಜ್ಞಾನ, ಭಯ ಮತ್ತು ತಿರಸ್ಕಾರ ನಿರ್ವಹಿಸಬೇಕಾಗುತ್ತಿತ್ತು. ರೋಗಿಗಳು ಚಿಕಿತ್ಸೆಗೆ ಮುಂದೆ ಬರುತ್ತಿರಲಿಲ್ಲ. ಅದಕ್ಕಾಗಿ ಚರ್ಮರೋಗ ಪರೀಕ್ಷಾ ಶಿಬಿರಗಳನ್ನು ಏರ್ಪಡಿಸಿ, ಅಲ್ಲಿ ಕುಷ್ಠರೋಗಿಗಳನ್ನು ಗುರುತಿಸುವುದಕ್ಕೆ ಮುಂದಾದರೂ ಕ್ರಮೇಣ ಜನರು ನೇರವಾಗಿ ಕುಷ್ಟ ಚಿಕಿತ್ಸಾ ಕೇಂದ್ರಗಳಿಗೆ ಬಂದು MDT ತೆಗೆದುಕೊಂಡು ಹೋಗವುದಕ್ಕೆ ಪ್ರಾರಂಭಿಸಿದ ಎರಡು ವರ್ಷಗಳ ತರುವಾಯ Modified Leprocy Elimination Compaign (MLEC) ಅಂದರೆ ಪರಿಷ್ಕೃತ ಕುಷ್ಠರೋಗ ಶಿರ್ಮೂಲನಾ ಕಾರ್ಯಕ್ರಮ ಎಂಬ ನೂತನ ವಿಧಾನದಿಂದ ಅಲ್ಲಿ-ಇಲ್ಲಿ ಅವಿತಿದ್ದ ಕುಷ್ಟ ರೋಗಿಳನ್ನು ಸಹ ನೋಡಿ, ಚಿಕಿತ್ಸೆ ನೀಡುವುದಕ್ಕೆ ಮುಂದಾದೆವು.

ಬಿಹಾರ ಸರಕಾರವು ಪ್ರತಿ ಜಿಲ್ಲೆಯಲ್ಲೂ ಕುಷ್ಠರೋಗ ನಿಯಂತ್ರಣ ಘಟಕವನ್ನು ಸ್ಥಾಪಿಸಿ ಅನೇಕ ಡಾಕ್ಟರು ಹಾಗೂ ಸಾವಿರಾರು ಕ್ಷೇತ್ರ ಕಾರ್ಯ ಕರ್ತರನ್ನು ನೇಮಕ ಮಾಡಿದ್ದರೂ ಅವು ಜಡತ್ವದಿಂದ ಇದ್ದುದರಿಂದ ಪುನಶ್ಚೇತನ ಶಿಬಿರಗಳನ್ನು ನಡೆಸಿ ಅವರನ್ನು

ನಮ್ಮ ಜತೆಯಲ್ಲಿ ಕರೆದುಕೊಂಡು ಹೋಗುವಂತೆ ಮಾಡುವುದಕ್ಕೆ ಪ್ರಾರಂಭಿಸಿದೆವು. ನಮಗೆ ಸಂಚಾರಕ್ಕೆ ವಾಹನ, ದಿನಭತ್ತೆ, ರಾತ್ರೆ ವಾಸ್ತವ್ಯ ಮಾಡುವುದಕ್ಕೆ ತಕ್ಕಷ್ಟು ಅನುಕೂಲತೆ ಇದ್ದುದರಿಂದ ನಮ್ಮ ಖರ್ಚಿನಲ್ಲಿ ಅವರನ್ನು ಕಾರ್ಯ ಪ್ರವೃತ್ತರನ್ನಾಗಿಸಲು ತೊಡಗಿದವು. ಇವರಲ್ಲಿ ಹೆಚ್ಚಿನವರು ಸ್ಥಳೀಯರೇ ಆಗಿದ್ದುದರಿಂದ ನಮಗೆ 'ಮಾರ್ಗದರ್ಶಿ'ಗಳಾಗಿ ಕೆಲ ಮಾಡಲು ಸಂಕೋಚವಿಲ್ಲದೆ ಮುಂದೆಬಂದರು. ಬಿಹಾರದ ರಸ್ತೆಗಳು ತೀರ ಕೆಟ್ಟುಹೋಗಿದ್ದವು. ಗ್ರಾಮಾಂತರ ಪ್ರದೇಶಗಳಲ್ಲಿ ಎತ್ತಿನಗಾಡಿ ಸಹ ಹೋಗುವುದು ಕಷ್ಟ ಎಂಬ ಪರಿಸ್ಥಿತಿಯಿತ್ತು. ಇನ್ನು ದಟ್ಟಡವಿಗಳಲ್ಲಿಂತೂ ಎಷ್ಟೋ ಬಾರಿ ಕಿಲೋಮಿಟರ್ ಗಟ್ಟಲೆ ನಡೆದುಕೊಂಡು ಹೋಗುವ ಪ್ರಮೆಯವೂ ಬರುತ್ತಿತ್ತು. ಮೂಲ ನಿವಾಸಿ ವನವಾಸಿಗಳು ವಾಸಿಸುವ ಗುಂಪುಮನೆಗಳಿಗೆ ತೋಲಗಳೆಂದು ಹೆಸರು. ದುರ್ಗಮವಾದ ಇಂತಹ ಸ್ಥಳಗಳಿಗೆ ಭೇಟಿ ನೀಡಿ, ಕುಷ್ಟರೋಗಿಗಳನ್ನು ಪರೀಕ್ಷಿಸಿ ಔಷಧಿ ಕೊಡುವ ಕೆಲಸವನ್ನು ಸಮರ್ಪಕವಾಗಿ ಮಾಡುವುದು ಸಾಧ್ಯವಾಯಿತು. ವಾರದ ಸಂತೆಗಳಲ್ಲಿ ಸ್ಥಳೀಯ ಜಾತ್ರೆ-ಉತ್ಸವಗಳಲ್ಲಿ ಶಿಬಿರವನ್ನು ನಿರ್ವಹಿಸಿದೆವು. ಗೊಡ್ಡಾ ಜಿಲ್ಲೆಯ ಅಂಚು ಅಂಚಿನಲ್ಲಿ ಒಂದು ಭಾರತದ ಸೇನಾ ನಿವಾಸವಿದೆ. ಅದರ ಆಚೆಗಿನ ಗುಡ್ಡದ ಇನ್ನೊಂದು ಮೈ ಬಾಂಗ್ಲಾದೇಶ. ಇಲ್ಲಿ ಕೂಡ MLEC ಎಂದರೆ ಪರಿಷ್ಕೃತ ಕುಷ್ಟರೋಗ ನಿರ್ಮೂಲನಾ ಕಾರ್ಯಕ್ರಮವನ್ನು ಹಮ್ಮಿಕ್ಕೊಂಡೆವು.

ನಾಲ್ಕನೇ ವರ್ಷದ ಪ್ರಾರಂಭಕ್ಕೇ ಪಾದ್ಯದಲ್ಲಿ ಒಂದು ಬೃಹತ್ ಆರೋಗ್ಯ ಮೇಳ ಜರುಗಿದಾಗ ಅದರಲ್ಲಿ ಗಮನಾರ್ಹವಾದ ಪ್ರಮಾಣದಲ್ಲಿ ಕುಷ್ಟರೋಗ ನಿರ್ಮೂಲನ ಕಾರ್ಯಕ್ರಮ ಯಶಸ್ವಿಯಾದುದು ದಾಖಲೆಯಾಯಿತು. ನವಾನ್ ಜಿಲ್ಲೆಯ ಒಂದು ಗ್ರಾಮ 'ಕುಷ್ಟ ವಿಮುಕ್ತ' ವೆಂದು ಸರಕಾರವು ದಾಖಲಿಸಿತು.

ನವಾನ್ ಜಿಲ್ಲೆಯ ಒಂದು ಗ್ರಾಮ 'ಕುಷ್ಟ ವಿಮುಕ್ತ' ವೆಂದು ಸರಕಾರವು ದಾಖಲಿಸಿತು.

ಬಿಹಾರದ ಬೆವರಿಳಿಸುವ ಬೇಸಗೆ, ಮೈ ನಡುಗಿಸುವ ಚಳಿ, ಅಸಮರ್ಥಕವಾದ ಸಂಚಾರ ವ್ಯವಸ್ಥೆ ಮೊದಲಾದವುಗಳಿಂದ ಆರೋಗ್ಯದಲ್ಲಿ ಏರುಪೇರು ಕಾಣಿಸ ತೊಡಗಿ ಅಲೆಮಾರಿ ವೈದ್ಯನ ಸಂಚಾರೀ ಜೀವನವನ್ನು ಇಷ್ಟಕ್ಕೇ ನಿಲ್ಲಿಸುವ ನಿರ್ಧಾರ ಮಾಡಿ ಡಿಎಫ್‌ಪಿಡಿಗೆ ರಾಜೀನಾಮೆ ಕೊಟ್ಟು ಬೆಂಗಳೂರಿಗೆ ಮರಳಿದೆ.

* * *

೯

ಪಶ್ಚಿಮ ಕರಾವಳಿಯಲ್ಲಿ ಫ್ರೀಡಂ ಫೌಂಡೇಶನ್ ಪ್ರಾಜೆಕ್ಟ್

ಏಡ್ಸ್‌ರೋಗಿಗಳ ಶುಶ್ರೂಷಾಕೇಂದ್ರದ ನಿರ್ವಹಣೆ

ಸುಮಾರು ನಾಲ್ಕು ವರ್ಷಗಳ ಕಾಲ ಬಿಹಾರ-ಜಾರ್ಖಂಡ್ ರಾಜ್ಯಗಳಲ್ಲಿ ವಿಶ್ವಆರೋಗ್ಯಸಂಸ್ಥೆಯ ಕುಷ್ಟರೋಗ ನಿರ್ಮೂಲನಾ ಕಾರ್ಯಕ್ರಮದಲ್ಲಿ ಡೇವೇಯನ್ ಫೌಂಡೇಶನ್ ಎಂಬ ಚೆನ್ನೆ (ಮದ್ರಾಸ್) ಮೂಲದ ಸ್ವಯಂಸೇವಾಸಂಸ್ಥೆಯ ಮೂಲಕ ಕಾರ್ಯ ನಿರ್ವಹಿಸಿ ಬೆಂಗಳೂರಿಗೆ ಹಿಂದಿರುಗಿದೆ. ಉತ್ತರಭಾರತದ ಆ ವಿಪರೀತದ ಬಿಸಿಲು-ಚಳಿಗಳನ್ನು ಇನ್ನೊಂದುಬಾರಿ ಎದುರಿಸುವುದು ಬೇಡ ಎಂಬುದರಿಂದ ವಿಶ್ರಾಂತ ಜೀವನವನ್ನು ಬಯಸಿ ಬೆಂಗಳೂರಿಗೆ ಬಂದೆ. ಅಷ್ಟೇ ಅಲ್ಲದೆ ಬೆಂಗಳೂರಲ್ಲೇ ಇದ್ದ ಸಬಿತಾ ಆರೋಗ್ಯವೂ ಏರುಪೇರಾಗುತ್ತಿತ್ತು.

ಹತ್ತು ಹದಿನೈದು ದಿನಗಳು ಕಳೆಯುವಷ್ಟರಲ್ಲಿ ತುಮಕೂರು ಅರಣ್ಯ ಸಂರಕ್ಷಣಾಧಿಕಾರಿಗಳಿಂದ ಒಂದು ವಿನಂತಿ ಬಂತು: ಗ್ರಾಮಾಂತರ ಪ್ರದೇಶದಲ್ಲೂ ಕಣ್ಮರೆಯಾಗುತ್ತಿರುವ ಪಾರಂಪರಿಕ ಗೃಹವೈದ್ಯ-ಗಿಡಮೂಲಿಕೆ ಮನೆ ಮದ್ದಿನ ವಿವರಗಳನ್ನು ಸಂಗ್ರಹಿಸಿ, ಗ್ರಂಥರೂಪದಲ್ಲಿ ಪ್ರಕಟಿಸಲು ಪ್ರಯತ್ನ ನಡೆದಿದ್ದು, ಆ ಕೆಲಸವನ್ನು ಸಮರ್ಪಕವಾಗಿ ನಿರ್ವಹಿಸಲು ನನ್ನ ಸಹಯೋಗವನ್ನು ಅಪೇಕ್ಷಿಸಿದರು. ಒಪ್ಪಿಕೊಂಡೆ. ತುಮಕೂರಿನಿಂದ 10-12 K.M ಅರಣ್ಯದಲ್ಲಿರುವ ನಾಮದ ಚಿಲುಮೆ ಅತಿಥಿಗೃಹದಲ್ಲಿ ಸುಮಾರು 5 ತಿಂಗಳ ಕಾಲ ಇದ್ದು 'ಸಸ್ಯ ಸಂರಕ್ಷಣೆ ಹಸಿರು ಆರೋಗ್ಯ' ಎಂಬ ಪುಸ್ತಕವನ್ನು ಸಿದ್ಧಪಡಿಸಿದೆ. ಕಿರುಸಂಭಾವನೆ ಕೂಡ ದೊರಕಿತು. ಆದರೆ ಬೆಂಗಳೂರು ವಾಸಕ್ಕೆ ಮನಸ್ಸು ಒಪ್ಪಲಿಲ್ಲ. 'ನಗರ ಜೀವನವೇ ಬೇಡ' ಎನಿಸಿತು. ಮತ್ತೆ ಪ್ರಕೃತಿಯ ಮಡಿಲಿಗೆ ಹಿಂತಿರುಗಿ ಹೋಗಬೇಕೆಂಬ ಹಂಬಲ ಬಲವಾಯಿತು. ಸಬಿತಾ ಕೂಡ ಇದನ್ನೇ ಅಪೇಕ್ಷಿಸಿದ್ದರಿಂದ 'ಕರಾವಳಿ' ಯ ಕಡೆಗೆ ಮುಖಮಾಡಿದೆವು. ಉಡುಪಿಯ ಸಂತೆಕಟ್ಟೆಬಳಿ 'ಶ್ರೀನಗರ'ದಲ್ಲಿ ಡಾ॥ ಎಂ.ವಿ. ಭಟ್ಟರ ಮನೆ ಇತ್ತು. (ಆತ ಇನ್ನೂ ಬಿಹಾರದಲ್ಲೇ ಇದ್ದ). ನಮ್ಮ ಅಪೇಕ್ಷೆ

ತಿಳಿದಾಗ ರಮಾ (ಮನೆಯೊಡತಿ) ಸಂತೋಷದಿಂದ ಸ್ವಾಗತಿಸಿದಳು. ನಾವು ಸುಮಾರು ಎಂಟು ತಿಂಗಳಕಾಲ ಅಲ್ಲಿದ್ದೆವು.

ಒಂದು ದಿನ ಇದ್ದಕ್ಕಿದ್ದ ಹಾಗೆ ಪತ್ರಿಕಾ ಪ್ರಕಟಣೆಯೊಂದನ್ನು ಕಣ್ಣಿಗೆ ಬಿತ್ತು: ಬೆಂಗಳೂರಿನ 'ಫ್ರೀಡಂ ಫೌಂಡೇಶನ್' ಸಂಸ್ಥೆ 'ಕಾಪು' ಬಳಿ (ಉಡುಪಿಯಿಂದ ಸುಮಾರು 15 K.M ದೂರದಲ್ಲಿ 'ಏಡ್ಸ್' ಶುಶ್ರೂಷಾಕೇಂದ್ರ ಕೇಂದ್ರವನ್ನು ಪ್ರಾರಂಭಿಸುತ್ತಿದ್ದು ಅದರ ನಿರ್ವಹಣೆಗಾಗಿ ಸೇವಾಸಕ್ತರಿಂದ ಸಹಯೋಗವನ್ನು ಅಪೇಕ್ಷಿಸಿತ್ತು. ನಾನು ಕುತೂಹಲದಿಂದ ಅಲ್ಲಿಗೆ ಹೋದೆ (ಜತೆಗೆ, ರಜೆಯಲ್ಲಿ ಊರಿಗೆ ಬಂದಿದ್ದ ಡಾ॥ Mr.Bhat ಕೂಡ ಇದ್ದರು. ಇತ್ತೀಚೆಗಷ್ಟೇ 'ಕೇಂದ್ರ' ಪ್ರಾರಂಭವಾಗಿತ್ತು. ಕೆಲವು 'ಸ್ಟಾಫ್' ನೇಮಕ ಗೊಂಡಿದ್ದರು. ದೊಡ್ಡದೊಂದು ಕಟ್ಟಡ ಪ್ರಶಾಂತವಾದ ತೆಂಗಿನ ತೋಟದ ನಡುವೆ ಇದ್ದು N.H. 7ರ ಅಂಚಿನಲ್ಲೇ ಫ್ರೀಡಂ ಫೌಂಡೇಶನ್ ಎಂಬ ನಾಮಫಲಕವೂ ಇತ್ತು. ಓರ್ವ ಶುಶ್ರೂಷಕಿ, ಒಬ್ಬರು ವಿಸಿಟಿಂಗ್ ವೈದ್ಯರು ಮತ್ತು ಇಬ್ಬರು–ಮೂವರು ಸ್ಟಾಪ್ (+ ಅಡುಗೆ ವ್ಯವಸ್ಥೆ. ಇಷ್ಟೇ. ಒಬ್ಬ ಒಳರೋಗಿ (ಮುಂಬೈಯಿಂದ ಬಂದಾತ) ಮಂಚದಮೇಲೆ ಪವಡಿಸಿದ್ದ. ಕೇಂದ್ರದ ವ್ಯವಸ್ಥೆಗಳನ್ನು ಸಮರ್ಪಕವಾಗಿ ಸಂಯೋಜಿಸಲು ನನ್ನನ್ನು ಆಹ್ವಾನಿಸಿದರು.

ಬೆಂಗಳೂರು ಹಾಗೂ ದಾವಣಗೆರೆ ನಗರ ಪ್ರದೇಶಗಳನ್ನು ಬಿಟ್ಟರೆ ಅತಿಹೆಚ್ಚು ಏಡ್ಸ್ ರೋಗ ಹಬ್ಬುತ್ತಿರುವುದು ಕರ್ನಾಟಕ ಕರಾವಳಿ ಜಿಲ್ಲೆಗಳಲ್ಲಿ! (ಏಡ್ಸ್ ರೋಗಿಗಳ ದುರವಸ್ಥೆಯನ್ನು ಈಗಾಗಲೇ ಬಿಹಾರ–ಜಾರ್ಕಂಡ್‌ಗಳಲ್ಲಿ ನಾನು ಕಣ್ಣಾರೆ ಕಂಡಿದ್ದೆ) ತಾತ್ಕಾಲಿಕವಾಗಿ ಪ್ರಾಜೆಕ್ಟ್ ಕೋ–ಆರ್ಡಿನೇಟರ್ ಆಗಿ ಕಾರ್ಯನಿರ್ವಹಿಸಲು ಮುಂದಾದೆ.

ನಮ್ಮ ಮುಂದೆ ಅಗಾಧವಾದ ಕೆಲಸವಿತ್ತು; ವಿಸ್ತಾರವಾದ ಕಾರ್ಯಕ್ಷೇತ್ರವಿತ್ತು; ಕಾಳ್ಗಿಚ್ಚಿನಂತೆ ಹಬ್ಬುವ ಮಾರಕರೋಗವಿತ್ತು. ಕೇವಲ 3–4 ಜನ ಉತ್ಸಾಹೀ ಕಾರ್ಯಕರ್ತರ ಪಡೆಯೊಂದಿಗೆ ಮಹತ್ಕಾರ್ಯ ಸಾಧನೆಗೆ ತೊಡಗಿದೆ. ಸುತ್ತು ಮುತ್ತಲಿನ 15–20 ಕಿಲೋಮೀಟರ್ ಪರಿಧಿಯಲ್ಲಿರುವ ಎಲ್ಲಾ ವೈದ್ಯರನ್ನೂ ಸಂಘಸಂಸ್ಥೆಗಳನ್ನೂ ಸಂದರ್ಶಿಸಿ, ಏಡ್ಸ್ ಬಗ್ಗೆ ತಿಳವಳಿಕೆನೀಡಿ 'ಲಕ್ಷಣ' ಕಂಡುಬಂದ ವ್ಯಕ್ತಿಯನ್ನು ಶುಶ್ರೂಷೆಗಾಗಿ ಕೇಂದ್ರಕ್ಕೆ ಕಳಿಸುವಂತೆಯೂ ಏಡ್ಸ್‌ರೋಗ ಹಬ್ಬದಂತೆ ತಡೆಗಟ್ಟುವ ವಿಧಾನದ ಕುರಿತು ಜನಜಾಗೃತಿ ಮೂಡಿಸುವ ಪ್ರಯತ್ನವನ್ನು ಮಾಡಲು ಮುಂದಾದೆವು. ಶಿಕ್ಷಣ ಸಂಸ್ಥೆಗಳು, ಗ್ರಾಮಪಂಚಾಯತಿಗಳು, ಯುವಸಂಘಟನೆಗಳು ಹಾಗೂ ಸ್ಥಳೀಯ ಖಾಸಗೀ ವೈದ್ಯರನ್ನೂ, ಕ್ರೈಸ್ತ ಮಿಶನರಿಸಂಸ್ಥೆಗಳನ್ನೂ ಭೇಟಿಮಾಡಿದೆ; ಕೆಲವೊಂದು ಸ್ಥಳಗಳಲ್ಲಿ ಭಾಷಣ, ಕರಪತ್ರ ವಿತರಣೆಗೆ ವ್ಯವಸ್ಥೆಯನ್ನು ಮಾಡಿದೆ. ಕೆಲವು ಕಾಲೇಜುಗಳಲ್ಲಿ ವಿದ್ಯಾರ್ಥಿ ಸಂಘಗಳ ಸಹಕಾರದಿಂದ ಹೆಚ್ಚು ಜನಸಂಪರ್ಕ ಹಾಗೂ ಪ್ರಚಾರ ಕಾರ್ಯ ಸಾಧ್ಯವಾಯಿತು. ಆಯುರ್ವೇದ ಕಾಲೇಜಿನಲ್ಲಿ ವಿದ್ಯಾರ್ಥಿಗಳಿಗೆ ವಿಶೇಷ ಶಿಬಿರವೊಂದನ್ನು ಏರ್ಪಡಿಸಲಾಯಿತು.

ಉಡುಪಿ ಜಿಲ್ಲಾ ಆಸ್ಪತ್ರೆಯ ವೈದ್ಯರನ್ನು ಮುಖ್ಯವಾಗಿ ಏಡ್ಸ್ ವಿಭಾಗದವರನ್ನು ನಾಲ್ಕಾರು ಸಲ ಭೇಟಿಯಾದ ನಂತರ ರೋಗಿಗಳ ರಕ್ತಪರೀಕ್ಷೆ ಮೊದಲಾದ 'ತಪಾಸಣೆಗೆ' ಬೇಕಾದ ಅನುಕೂಲತೆಗಳನ್ನು ಪಡೆದುಕೊಳ್ಳುವುದು ಸಾಧ್ಯವಾಯಿತು. 'ರಕ್ತನಿಧಿ' (Blood Bank) ಅಧಿಕಾರಿಗಳ ನೆರವು ಸಹ ಲಭ್ಯವಾಯಿತು.

ಕ್ರಮೇಣ 'ರೋಗಿಗಳು' ಬರಲಾರಂಭಿಸಿದರು. ಹಳೇ ರೋಗಿಗಳು, ಹೊಸರೋಗಿಗಳು, ಭಯಭೀತರು, ಸಂದೇಹಗ್ರಸ್ತರು ಹೀಗೆ ವಿವಿಧ ವರ್ಗದವರೂ ಬರತೊಡಗಿರು. ರೋಗತಪಾಸಣೆ, ಶುಶ್ರೂಷೆ, ಕೌನ್ಸೆಲಿಂಗ್ ಹೀಗೆ ರೋಗ ಪರೀಕ್ಷಾ ಕಾರ್ಯ ಚುರುಕುಗೊಂಡಿತು. ಒಳರೋಗಿಗಳ ಸಂಖ್ಯೆ ನಿರೀಕ್ಷೆಗೂ ಮೀರಿತು. ವೈದ್ಯರ ನೆರವು ಅನಿವಾರ್ಯವಾಯಿತು. ಬೆಂಗಳೂರಿಂದ ವೈದ್ಯೆಯೊಬ್ಬರು ಬಂದು ಕಾಪುವಿನಲ್ಲಿ ಮನೆ ಮಾಡಿದ್ದರಿಂದ ರೋಗಿಗಳಿಗೆ ಹೆಚ್ಚಿನ ಶುಶ್ರೂಶೆಯ ವ್ಯವಸ್ಥೆ ಸಾಧ್ಯವಾಯಿತು. ರೋಗಿಗಳಿಗೆ ಉತ್ತಮ ಪೌಷ್ಟಿಕ ಆಹಾರ, ಕೌನ್ಸಲಿಂಗ್, ಔಷಧೋಪಚಾರಗಳ ಜತೆಗೆ ಯೋಗಾಸನ, ಒಂದಿಷ್ಟು ದಣಿವಿರದ ಆಟಗಳು, ನಿಧಾನವಾಗಿ ರೂಢಿಗೆ ಬಂದವು. ವಾರಕ್ಕೊಮ್ಮೆ ಭಜನೆ ಇತ್ಯಾದಿ ಕಾರ್ಯಕ್ರಮಗಳು ಕೂಡ ಪ್ರಾರಂಭವಾದವು. ನಮ್ಮಲ್ಲಿ ರಕ್ತಪರೀಕ್ಷೆ ಮೊದಲಾದವಕ್ಕೆ ಅಗತ್ಯವಾದ ಪರಿಕರಗಳು, 'ಲ್ಯಾಬೋರೇಟರಿ' ಇದ್ದಿಲ್ಲ. ಅದಕ್ಕಾಗಿ 'ಕಾಪು' ಬಳಿಯು ಖಾಸಗೀ ವೈದ್ಯರೊಬ್ಬರ ನೆರವು ಮೊದಲಿಗೆ ದೊರಕಿತು. ಮುಂದೆ ಉಡುಪಿ ಜಿಲ್ಲಾ ಆಸ್ಪತ್ರೆಯ ನೆರವು ನೀಡಲು ಮುಂದಾಯಿತು.

ಅನಿರೀಕ್ಷಿತವಾಗಿ ಒಂದು ದಿವಸ ಸ್ಥಳೀಯ ಶಾಸಕ-ಮಂತ್ರಿ ವಸಂತ ಸಾಲ್ಯಾನ್ ಭೇಟಿನೀಡಿ ರೋಗಿಗಳ ಹಾಗೂ ಅವರಿಗೆ ದೊರಕುವ ಚಿಕಿತ್ಸಾ ಸೌಲಭ್ಯಗಳನ್ನು ನೋಡಿದ ತರುವಾಯ 'ಲ್ಯಾಬೋರೇಟರಿ' ಯ ಅಗತ್ಯವನ್ನು ಅವರಿಗೆ ಮನವರಿಕೆ ಮಾಡಿಕೊಟ್ಟಾಗ, ಸರಕಾರದ ನೆರವನ್ನು ಒದಗಿಸುವುದಾಗಿ ಭರವಸೆ ಇತ್ತ ಕೂಡಲೇ ಪ್ರಾಜೆಕ್ಟ ಪ್ರಸ್ತಾವನೆಯನ್ನು ಬೆಂಗಳೂರಿಗೆ ರವಾನಿಸಿದೆ.

ಗಾಂಧೀಜಯಂತಿ ದಿವಸ ಉಡುಪಿಯ ಲಯನ್ಸ್‌ಕ್ಲಬ್‌ನವರ ಒಂದು ಪ್ರಾತಿನಿಧಿಕ ಗುಂಪು ಬಂದು ಒಳರೋಗಿಗಳಿಗೆ ಹಣ್ಣುಗಳನ್ನು ನೀಡಿದ್ದಲ್ಲದೆ ಸಾಂತ್ವನ ಹೇಳುವ ಕಾರ್ಯವನ್ನೂ ಪ್ರಾರಂಭಿಸಿದರು. ಕ್ರಮೇಣ ರೋಗಿಗಳ ಆಪ್ತರು-(ಮಂಗಳೂರು 'ಮುಂಬೈ' ವಾಸಿಗಳು) ಬಂದು ತಕ್ಕಷ್ಟು 'ಹಣದಾನ' ನೀಡುವುದಕ್ಕೆ ತೊಡಗಿದರು. ರೋಗಿಗಳಲ್ಲಿ ಅನುಕೂಲ ಇದ್ದವರು ತನ್ನ ಕೈಲಾದಷ್ಟು ಹಣ ನೀಡುವುದು ಪ್ರಾರಂಭವಾಯಿತು.

ಮೂರು ತಿಂಗಳುಗಳಲ್ಲಿ ದೂರ ದೂರದಿಂದ ಕೂಡ ರೋಗಿಗಳ ಬಂದು ಚಿಕಿತ್ಸೆ, ಕೌನ್ಸ್‌ಲಿಂಗ್, ಶುಶ್ರೂಷೆ ಪಡೆದುಕೊಡುವುದು ಹೆಚ್ಚು ಹೆಚ್ಚು ವಿಸ್ತರಿಸ ತೊಡಗಿತು. ಈ ನಡುವೆ 'ಫ್ರೀಡಂ ಫೌಂಡೇಶನ್' ನ ಬೆಂಗಳೂರಿನ ಆಡಳಿತಕಚೇರಿಯ

ಅಧಿಕಾರಿಗಳು ಅಪರೂಪಕ್ಕೆ ಬಂದು ಹೋಗುತ್ತಿದ್ದರೂ 'ಪ್ರಧಾನ' ವ್ಯಕ್ತಿ (ಅಧ್ಯಕ್ಷರು) ಬಂದಿರಲಿಲ್ಲ. ಕೊನೆಗೊಂದು ದಿನ ಅವರು ಬಂದರು. ಲ್ಯಾಬೋರೇಟರಿ ಇನ್ನೂ ಪ್ರಾರಂಭವಾಗಿರಲಿಲ್ಲ; 10 ಒಳರೋಗಿಗಳಿಗೆ ವ್ಯವಸ್ಥೆ ಇದ್ದರೆ ಒಳರೋಗಿಗಳ ಸಂಖ್ಯೆ ಹೆಚ್ಚಾಗತೊಡಗಿತು.

ಹೆಚ್ಚುವರಿಯಾಗಿ ಸ್ಟಾಫ್ ಹಾಗೂ ಇತರ ಸೌಲಭ್ಯಗಳನ್ನು ಒದಗಿಸಿಕೊಳ್ಳುವುದು ಅನಿವಾರ್ಯವಾಯಿತು. ಇದರೊಂದಿಗೇ ಖರ್ಚು ವೆಚ್ಚಗಳ ಪ್ರಮಾಣವೂ ವೃದ್ಧಿಸಿತು. ಬೆಂಗಳೂರಿನ ಆಡಳಿತ ಕಚೇರಿ ಈಗ ಸಾಧ್ಯವಾದಷ್ಟು ಸ್ಥಳೀಯ ಸಂಪನ್ಮೂಲ ಎಂದರೆ ಸಂಘ ಸಂಸ್ಥೆಗಳಿಂದ ದೇಣಿಗೆ ಪಡೆಯಲು ಪ್ರಯತ್ನಿಬೇಕೆಂದು ಸೂಚಿಸಿತು. ಅದು ಅಷ್ಟಾಗಿ ಫಲಪ್ರದವಾಗಲಿಲ್ಲವಾದರೂ ಭಾರತ ಸರಕಾರದ ಸಂದರ್ಶಕ ವೃಂದವು ಬಂದು ಪರಿಶೀಲಿಸಿ ಬಹಳ ಸಂತೋಷ ಪಟ್ಟು ಧನಸಹಾಯ ನೀಡುವಂತೆ ಕೇಂದ್ರ ಸರಕಾರಕ್ಕೆ ಶಿಫಾರಸು ಮಾಡಿತು. ತಿಂಗಳೊಳಗಾಗಿ ಮೊದಲ ಕಂತು ಕೈಸೇರಿತೆಂದು ಬೆಂಗಳೂರಿನ ಆಡಳಿತ ಕಚೇರಿಯ ಸಭೆಯಲ್ಲಿ ತಿಳಿದುಬಂತು. ಇಷ್ಟರಲ್ಲಿ ವೈಯಕ್ತಿಕವಾಗಿ ನನಗೆ ಬೆಂಗಳೂರಿಗೆ ಮರಳುವ ಅನಿವಾರ್ಯತೆ ಉಂಟಾಯಿತು. ನೆಲಮಂಗಲದ ಬಳಿ ಅರಸಿನ ಕುಂಟೆ ಗ್ರಾಮದಲ್ಲಿ ನೂತನವಾಗಿ ನಿರ್ಮಾಣವಾಗುತ್ತಿರುವ ಆದರ್ಶನಗರದಲ್ಲಿ ಒಂದು ಸ್ವಂತ ಮನೆಯನ್ನು ಕಟ್ಟುವುದಕ್ಕೆ ನಿರ್ಧರಿಸಿದ್ದರಿಂದ ಹೊಸದಾಗಿ ಫ್ರೀಡಂಫೌಂಡೇಶನ್ ಸೇರಿದ ಯುವಕ ಅಧಿಕಾರಿಗೆ ಕಾರ್ಯಕ್ರಮದ ಜವಾಬ್ದಾರಿಯನ್ನು ಹಸ್ತಾಂತರಿಸಿ ನಾನು ಬೆಂಗಳೂರಿಗೆ ಹಿಂತಿರುಗಿದೆ.

* * *

ಭಾಗ - 3

ಬಾಳಸಂಜೆಯ ದಿನಗಳು

ಭಾಗ–3

ನೆಲಮಂಗಲದ ಬಳಿ ಅರಸಿನ ಕುಂಟೆ ಗ್ರಾಮದಲ್ಲಿ 'ಮಾನಸ' ಮನೆಯಲ್ಲಿ ನೆಲೆಯೂರಿದಾಗ

ಬಾಳಸಂಜೆಯ ದಿನಗಳು

ಸುಮಾರು 50 ವರ್ಷಗಳಕಾಲ ವೈದ್ಯಕೀಯಕ್ಷೇತ್ರದ ವಿವಿಧ ರಂಗಗಳಲ್ಲಿ ವಿವಿಧ ಸ್ಥಳಗಳಲ್ಲಿ ಹಾಗೂ ಸ್ಥರಗಳಲ್ಲಿ ಕೆಲಸ ಮಾಡಿ 2002ರ ಮಧ್ಯಭಾಗದಲ್ಲಿ ಬಿಹಾರ್ ಝಾರ್ಖಂಡದಿಂದ ಬೆಂಗಳೂರಿಗೆ ಮರಳಿದೆ. ನಗರವಾಸವೆಂದರೆ ನರಕವಾಸವೆಂದು ಹೇಳುವುದುಂಟು. 'ಕಾಂಕ್ರೀಟ್‌ಕಾಡು', ಉಸಿರುಗಟ್ಟುವ ದಿನಚರಿ, ಕಲುಷಿತ ಹವೆ, ಕಿವಿಗಡಚಿಕ್ಕುವ ಸದ್ದು–ಗದ್ದಲ, ಅವಸರನಗರ... ಎಲ್ಲವೂ ಅಸಹನೀಯವೆಂದು ಕಾಣತೊಡಗಿತು. ಇಂತಹ ಪ್ರದೇಶದಲ್ಲಿ ವಿಶ್ರಾಂತ ಜೀ...ವ...ನವನ್ನು ಕಳೆಯುವುದು ಸಾಧ್ಯವೇ ಇಲ್ಲ ಎನ್ನುವುದರಲ್ಲಿ ನಮ್ಮಿಬ್ಬರದೂ ಸಹಮತವೇ. ಆದರೆ – ಪರಿಹಾರವೇನು ಎಂಬುದು ಮಾತ್ರ ಗೋಚರಿಸದ ವಿಷಮ ಪರಿಸ್ಥಿತಿಗೆ ಸಿಲುಕಿಕೊಂಡೆವು. ಈ ನಡುವೆ ಮಗ ನಾರಾಯಣನಿಗೆ ಕ್ಷಿಪ್ರದಲ್ಲಿಯೇ ವರ್ಗಾವಣೆಯಾಗಬಹುದು ಎಂಬ ವದಂತಿಯೂ ಇತ್ತು. ಆಕಾಶವಾಣಿ ಕೇಂದ್ರದಲ್ಲಿ ಉದ್ಯೋಗಿಯಾಗಿದ್ದುದರಿಂದ–ಬೆಂಗಳೂರಿನಿಂದ ವರ್ಗಾವಣೆಯಾದರೆ–ಇನ್ನೊಂದು ನಗರಕ್ಕೆ–ಒಟ್ಟಿನಲ್ಲಿ ನರಕವಾಸ ತಪ್ಪಿದ್ದಲ್ಲ–ಎಂಬುದರಿಂದ ಎಲ್ಲಾದರೂ ಒಂದು ನೆಮ್ಮದಿಯ ಕಿರುತಾಣವನ್ನು ನಿರ್ಮಿಸಿಕೊಂಡು ಕಾಲಯಾಪನೆ ಮಾಡುವ ಹಂಬಲವುಂಟಾಯಿತು – ಅರ್ಥಾತ್ ವೃತ್ತಿನಿಮಿತ್ತ ಇನ್ನೂ ನಾಲ್ಕೈದು ಬಾರಿ ವರ್ಗಾವಣೆಯಾಗಬಹುದಾದ 'ಮಗ'ನ ಜತೆಗೇ ಇರುವುದು ಸಾಧ್ಯವೇ? ವರ್ಗವಾದಲ್ಲಿಗೆ ಹೋಗುವುದು ಅವರಿಗೆ ಅನಿವಾರ್ಯವಾದರೂ ನಾವು ನಮ್ಮಷ್ಟಕ್ಕೆ ಇರುವುದರ ಬಗ್ಗೆ ವಿಚಾರ ಮಾಡಲೇಬೇಕಾಯಿತು.

ಕೆಲವು ವರ್ಷಗಳಹಿಂದೆ – ನಾವು ಹೆಚ್.ಡಿ. ಕೋಟೆಯಲ್ಲಿದ್ದಾಗ – ನಾರಾಯಣ ಅದೇತಾನೆ ಬೆಂಗಳೂರು ಆಕಾಶವಾಣಿಯಲ್ಲಿ ಉದ್ಯೋಗಿಯಾಗಿದ್ದ. ಅವನ ಗೆಳೆಯರು 'ಸೈಟ್' ಖರೀದಿಸುವ ಪ್ರಯತ್ನ ಮಾಡುತ್ತಿದ್ದರು. ಬೆಂಗಳೂರಿನಲ್ಲಿ

'ನೆಲದಬೆಲೆ' ಆಗಲೇ ಗಗನಕ್ಕೇರಿತ್ತು. ಹೀಗಾಗಿ ಸ್ಥಳಾಪೇಕ್ಷಿಗಳ ದೃಷ್ಟಿ ಗ್ರಾಮಾಂತರ ಪ್ರದೇಶಗಳತ್ತ ಹೊರಳಿತು. ಬೆಂಗಳೂರಿನಿಂದ ಸುಮಾರು 25–30 ಕಿಲೋಮೀಟರ್ ದೂರದಲ್ಲಿ ನೆಲಮಂಗಲದ ಬಳಿಯ ಅರಸಿನಕುಂಟೆ ಗ್ರಾಮದಲ್ಲಿ ಹೊಸ ವಿಸ್ತರಣೆಗಳು ತಯಾರಾಗುತ್ತಿರುವ ವಿಚಾರ ತಿಳಿದು– ಅಲ್ಲಿಗೆ ಹೋಗಿ ನೋಡಿಕೊಂಡು ಬಂದದ್ದಾಯಿತು. ಹಳ್ಳಿಯ ಪರಿಸರ ಸ್ವಲ್ಪ ಮಟ್ಟಿಗಾದರೂ ಉಳಿದಿದ್ದ ಗ್ರಾಮಾಂತರ ಪ್ರದೇಶ ಅದು. ಅಲ್ಲೊಂದು ಇಲ್ಲೊಂದು ಮನೆಗಳು ತಲೆಎತ್ತುತ್ತಿದ್ದರೂ ನಿರ್ಮಲವಾದ ವಾತಾರಣವಿತ್ತು. ಅಲ್ಲಲ್ಲಿ ಗಿಡಮರಗಳು– ಚಿಕ್ಕಪುಟ್ಟ ತೋಪುಗಳು, ಗ್ರಾಮಾಂತರ ಪ್ರದೇಶದ ಕುಡಿಯುವ ನೀರು ಸರಬರಾಜು ಯೋಜನೆಯಡಿ ಒದಗಿಸಿರುವ ನಲ್ಲಿನೀರು, ಕಚ್ಚಾರಸ್ತೆ ಇತ್ಯಾದಿ ಇತ್ಯಾದಿ ವ್ಯವಸ್ಥೆ ಇತ್ತು. ರಾಷ್ಟ್ರೀಯ ಹೆದ್ದಾರಿಯಿಂದ ತುಸುದೂರದಲ್ಲಿ ಇದ್ದರೂ – ತುಸು ಎತ್ತರದ ಗುಡ್ಡದ ಮೇಲ್ತುದಿಯ ಸಮೀಪ ಇರುವ ಒಂದು ಸೈಟನ್ನು ಖರೀದಿಸುವ ಆಸಕ್ತಿ ನಾರಾಯಣನಿಗಿತ್ತು. 30X40 ಸೈಟಿನ ಬೆಲೆ 50–60 ಸಾವಿರವಾಗಿದ್ದರೂ (ಆಗಿನ ಮಟ್ಟಿಗೆ ನಮಗೆ ಅದೊಂದು ದೊಡ್ಡ ಮೊತ್ತವೇ) ಮೈರಾಡದಲ್ಲಿ ದುಡಿಯುತ್ತಿದ್ದಾಗ ಉಳಿಸಿದ್ದ ಸ್ವಲ್ಪಹಣದ ಜೊತೆಗೆ ಒಂದಿಷ್ಟು ಹಣ ಅಲ್ಲಿಂದ ಇಲ್ಲಿಂದ ಕೈಸಾಲ ತೆಗೆದುಕೊಂಡು ಹಣ ಹೊಂದಿಸಿದ್ದಾಯಿತು. ಸೈಟ್ ರಿಜಿಸ್ಟ್ರೇಶನ್ ಮಾಡಿಸಿಕೊಳ್ಳುವಂತೆ ನಾರಾಯಣನಿಗೆ ಹೇಳಿದೆ. ರಿಜಿಸ್ಟ್ರೇಶನ್ ಆಗಿ ಖಾತಾ ವಗೈರೆ ಸುಸೂತ್ರವಾಗಿ ಕೈಗೆ ಬಂದವು.

ಈಗ ಸುಮಾರು 10–12 ವರ್ಷಗಳನಂತರ ಇದೊಂದು ವರ–ಪ್ರಸಾದವಾಗಿಬಿಟ್ಟಿತು. ಅಲ್ಲೊಂದು ಚಿಕ್ಕಮನೆಯುನ್ನು ಕಟ್ಟುವುದೆಂದು ತೀರ್ಮಾನಿಸಿದಾಗ ಆದರ್ಶನಗರದಲ್ಲೇ ಇದ್ದ ಸಹೃದಯ ಇಂಜಿನಿಯರ್ ನರಸಿಂಹಮೂರ್ತಿಯವರು ಸಂತೋಷದಿಂದ ಸಹಾಯಹಸ್ತವನ್ನು ಚಾಚಿದರು. ಕಟ್ಟಡ ನಿರ್ಮಾಣದ ಭರಾಟೆಯ ದಿನಗಳಾದರೂ ಗ್ರಾಮ ಪಂಚಾಯತಿ ಸ್ಥಳವಾದ್ದರಿಂದ ಬ್ಯಾಂಕ್‌ಗಳು ಸಾಲಕೊಡಲು ಹಿಂದು ಮುಂದು ನೋಡಿ ಕೈಯಾಡಿಸಿಬಿಟ್ಟವು. ಕೊನೆಗೆ ಖಾಸಗಿ ಫೈನಾನ್ಸ್‌ನಿಂದ ಸಾಲದ ಇಮ್ಮಡಿ ಹಣ ಸ್ಥಿರಠೇವಣಿ ಇದ್ದುದನ್ನು ಆಧಾರವಾಗಿ ಕೊಟ್ಟು ಸಾಲ ಪಡೆದುದ್ದಾಯಿತು. ಮನೆ ವಾಸಕ್ಕೆ ಸಿದ್ಧವಾಗುತ್ತಿದ್ದಂತೆಯೆ ನಾರಾಯಣನ ಟ್ರಾನ್ಸ್‌ಫರ್ ಆರ್ಡರ್ ತಯಾರಾಗುತ್ತಿದ್ದು ಗೃಹಪ್ರವೇಶದ ಹೊತ್ತಿಗೆ ಸರಿಯಾಗಿ ಕಾರವಾರಕ್ಕೆ ವರ್ಗಾವಣೆ ಮಾಡಿದ ಆದೇಶ ಕೈಸೇರಿತು. ಬೆಂಗಳೂರಿನಲ್ಲಿ ಸುಮಾರು 12–13 ವರ್ಷ ಇದ್ದುದರಿಂದ ವರ್ಗಾವಣೆಯನ್ನು ಮುಂದೂಡಲು ಪ್ರಯತ್ನಿಸಲಿಲ್ಲ. 'ಇನ್ನೆಷ್ಟುದಿನ ಒಂದೆ ಸ್ಟೇಷನ್‌ನಲ್ಲಿ ಇರಬೇಕು ಅಂತ ಇದ್ದೀರಿ' ಎಂಬ ಪ್ರಶ್ನೆ ಕೇಳಿಸಿಕೊಳ್ಳುವ ಇಚ್ಛೆ ಇಲ್ಲದ್ದರಿಂದ ಕಾರವಾರಕ್ಕೆ ಹೋಗಿ ಕೆಲಸಕ್ಕೆ ಸೇರಿಕೊಂಡ ವರದಿಯೊಂದಿಗೆ

ಹಿಂದಿರುಗಿದ ಮೇಲೆ ಬಿಡಾರ ಸ್ಥಳಾಂತರದ ಬಗ್ಗೆ ಖಚಿತ ನಿರ್ಧಾರ ಮಾಡಲೇಬೇಕಾಯಿತು. ಅವನಿಗೆ ಇನ್ನು ಸುಮಾರು 20 ವರ್ಷ ಮಿಕ್ಕಿ ಸರ್ವೀಸ್ ಇರುವುದರಿಂದ 4–6 ಟ್ರಾನ್ಸ್‌ಫರ್‌ಗಳು ಆಗೇ ಆಗುತ್ತವೆ. ಆಕಾಶವಾಣಿ ಕೇಂದ್ರಗಳು ಪಟ್ಟಣಗಳಲ್ಲೇ ಇರುವುದು ಅನಿವಾರ್ಯವಾದ್ದರಿಂದ ನಾವು ಅಲ್ಲೆಲ್ಲಾ ಹೋಗಿ ಇರಲು ಸಾಧ್ಯವೇ? ಅಂತಹ ಇಚ್ಛೆ ಇಲ್ಲದೆ ಇಲ್ಲೇ ಅರಸಿನಕುಂಟೆ – ಆದರ್ಶನಗರದ ಮಾನಸದಲ್ಲೇ ಉಳಿಯಲು ನಿರ್ಧರಿಸಿದೆವು.

ಇನ್ನು ಉಳಿದದ್ದು ಮನೆ ಕಟ್ಟಡ ಅಲ್ಲ – ಮನೆಯ ಒಳಗಿನ ಸಾಧನ ಸಾಮಗ್ರಿಗಳ ವಿಚಾರದ್ದು. ಊಟದ ತಟ್ಟೆಗಳು ಬಟ್ಟಲುಗಳಿಂದ ಹಿಡಿದು ಎಲ್ಲವೂ ಎರಡೆರಡು ಬಿಡಾರಗಳಿಗೆ ಸಾಕಾಗುವಷ್ಟು ಇರಲಿಲ್ಲ. ಹಾಗಂತ ಅಗತ್ಯದ ಯಾವುದೊಂದನ್ನೂ ಕಮ್ಮಿ ಮಾಡುವಂತೆಯೂ ಇರಲಿಲ್ಲ. ಏನು ಮಾಡುವುದೆಂದು ತಲೆಕೆರೆದುಕೊಳ್ಳುತ್ತಿರುವಾಗ ಸಂಚಾರೀ ಉದ್ಯೋಗವನ್ನು ಮುಂದುವರಿಸಲೇಬೇಕಾಗಿರುವ ನಾರಾಯಣ ಈಗಿನ ಮನೆವಸ್ತುಗಳನ್ನೆಲ್ಲ ತೆಗೆದುಕೊಂಡು ಹೋಗುವುದೆಂದೂ ನಾವು 'ಮಾನಸ'ದಲ್ಲಿಯೇ ಉಳಿಯುವುದರಿಂದ ಅಗತ್ಯವಾದ ಸರಂಜಾಮುಗಳನ್ನು ಹೊಸದಾಗಿ ಖರೀದಿಸುವುದೆಂದೂ ನಿರ್ಧರಿಸಿದೆವು. ನಿರ್ಧಾರ ಮಾಡಿದ್ದೇನೋ ಆಯಿತು – ಆದರೆ ಅದಕ್ಕೆ ತಗುಲುವ ಹಣ – ಸಣ್ಣಮೊತ್ತವೇನಲ್ಲ. ಹೇಗೆ ನಿಭಾಯಿಸುವುದೆಂದು ಚಿಂತಿಸುತ್ತಿರುವಾಗ ಇಂತಹ ಸಮಯದಲ್ಲಿ ಗೌರಿ (ಈಗ ಗೌರೀ ಹಾವನೂರ) ಮತ್ತು ಅವಳ ಗೆಳತಿ ವಿದ್ಯಾ ಶೆಟ್ಟಿ ತಮ್ಮೆಲ್ಲ 'ಖರೀದಿ' ತಾಳ್ಮೆ–ಜಾಣ್ಮೆಗಳನ್ನು ಬಳಸಿ ಧಾರಾಳ ಕನ್‌ಸೆಶನ್‌ನಲ್ಲಿ ಅಗತ್ಯದ ಸಲಕರಣೆಗಳೆಲ್ಲವನ್ನು ವಸ್ತುಗಳನ್ನು ತಂದುಕೊಟ್ಟು ನಮ್ಮ 'ಶ್ರಮ'ವನ್ನು ಹಗುರಗೊಳಿಸಿದ್ದನ್ನು ಉಲ್ಲೇಖಿಸಲೇಬೇಕು (ವಿದ್ಯಾಶೆಟ್ಟಿ ಸೋದರಮಾವ ಡಾ|| ಪ್ರಭಾಕರ ಹೆಗ್ಡೆ ಮತ್ತು ನಾನು ಮೈಸೂರಿನಲ್ಲಿ ಸಹಪಾಠಿಗಳಾಗಿದ್ದುದು ಹಾಗೂ 'ನಿಯೋ ಸ್ಟುಡೆಂಟ್‌ಹೋಂ'ನ ಪ್ರಮುಖ ಸದಸ್ಯರಾಗಿದ್ದದೂ ನೆನಪಿಗೆ ಬರುತ್ತದೆ.)

ಅಂತೂ ಇಂತೂ 1.11.2003ರಂದು ಅರಸಿನಕುಂಟೆ ಗ್ರಾಮದ ಆದರ್ಶನಗರದ 'ಮಾನಸ'ದಲ್ಲಿನಾವು ಒಲೆ ಹಚ್ಚಿದಾಗ ಇದೇ 'ಅಲೆಮಾರಿ ಧನ್ವಂತರಿಯ' 'ಕೊನೆಯ ಡೇರೆ' ಎಂದು ಹೇಳಿಕೊಂಡು ಹಾಲು ಬಿಸಿ ಮಾಡಿ ಕಾಫಿ ಮಾಡಿಕೊಂಡು ಕುಡಿದೆವು.

ದಿನಗಳಮೇಲೆ ದಿನಗಳು ಉರುಳಿದುವು. ತಿಂಗಳು ಕಳೆಯಿತು. ಡಿಸೆಂಬರ್‌ನ ಚಳಿಯಲ್ಲೇ ಬಸ್/ರೈಲು ಪ್ರಯಾಣ ಮಾಡಿ ಹುಬ್ಬಳ್ಳಿ ಮಾರ್ಗವಾಗಿ ಕಾರವಾರ ತಲುಪಿದೆವು. ಮೊಮ್ಮಗಳು ಹಿಮ ತನ್ನ ಹುಟ್ಟುಹಬ್ಬಕ್ಕೆ ಬಂದುದಕ್ಕೆ ತುಂಬಾ ಸಂತೋಷಪಟ್ಟಳು. ಆದಿತ್ಯ (ಮೊಮ್ಮಗ) ಅಜ್ಜಿಯನ್ನು ಅಂಟಿಕೊಂಡೇ ಇದ್ದು –

ಈಗಾಗಲೇ ಕಾರವಾರ ವಾಸದ ಪ್ರಭಾವವಾದ ಪ್ರಧಾನ ಲಕ್ಷಣವೆಂದರೆ ಕೊಂಕಣಿ/ ಮರಾಠಿ ಭಾಷೆಗಳನ್ನು ಅಷ್ಟಿಷ್ಟು ಕಲಿತಿದ್ದ. ಅದರ ಹೊಸತಾಗಿ ಕಲಿತುಕೊಂಡುದರ ಪ್ರಯೋಗವನ್ನು ಅಜ್ಜಿಯಮೇಲೆ ಮಾಡಲಾರಂಭಿಸಿದ. ಸಮುದ್ರ ಕಿನಾರೆ – ರವೀಂದ್ರನಾಥ ಟಾಗೋರ್‌ಬೀಚ್‌ನಿಂದ ಹಿಡಿದು ಹಲವಾರು ಪ್ರೇಕ್ಷಣೀಯ ಸ್ಥಳಗಳನ್ನು, ಸೀಬರ್ಡ್ ಪ್ರಾಜೆಕ್ಟನ್ನು ಸಂದರ್ಶಿಸಿದ್ದಾಯಿತು. ಕಾರವಾರದಲ್ಲೊ ಮೈರಾಡದ ಪ್ರಾಜೆಕ್ಟ್ ಎಂಬ ಬೋರ್ಡ್ ಇದ್ದದ್ದನ್ನು ಕಂಡು ಮರುದಿನ ಫೋನ್ ಮಾಡಿದಾಗ ಗೆಳೆಯ ರಾಮಚಂದ್ರಭಟ್ಟರು ಉತ್ತರಿಸಿದ್ದರಿಂದ ಮತ್ತೊಮ್ಮೆ ಹಳೇ ನೆನಪುಗಳ ಮೆಲುಕಾಟ ನಡೆಯಿತು. 8–10 ದಿನಗಳ ನಂತರ ಆದರ್ಶನಗರ ಮಾನಸಕ್ಕೆ ಮರಳಿ ಬಂದು ಸೇರಿಕೊಂಡೆವು. ಕ್ರಮೇಣ ಗುರುತು ಪರಿಚಯ ಹಲವು ಪ್ರಮುಖರ – ಅರ್ಥಾತ್ 'ವೃದ್ಧಾಪ್ಯದವ'ರೊಂದಿಗೆ ಆಯಿತು. ಹೈದರಾಬಾದ್ ಕರ್ನಾಟಕದ ವಿಶಿಷ್ಟ ನುಡಿಯವರೊಬ್ಬರನ್ನು ಭೇಟಿ ಮಾಡಿದೆ. ಅವರ ಹೆಸರು ಭೀಮಸೇನರಾಯರೆಂದೂ – ಪ್ರೊ॥ ವಸಂತ ಕುಷ್ಟಗಿಯವರಜತೆಗೆ ಇದ್ದು ಹೈದ್ರಾಬಾದಿನಲ್ಲಿ ಕಾಲೇಜು ಶಿಕ್ಷಣ ಪಡೆದರೆಂದೂ ತಿಳಿಯಿತು. ಸುದೀರ್ಘ ಕಾಲ 'ಯುನೆಸ್ಕೋ' ಸೇವೆಯನ್ನು ದೆಹಲಿ ಹಾಗೂ ನ್ಯೂಯಾರ್ಕ್‌ಗಳಲ್ಲಿ ಮುಗಿಸಿಕೊಂಡು ವಿಶ್ರಾಂತಿ ಜೀವನದ ಹಂಬಲದಿಂದ ಅವರೂ ಆದರ್ಶನಗರಕ್ಕೆ ಬಂದವರು. ಹೀಗಾಗಿ ಬಹುಬೇಗ ಸ್ನೇಹ ಕುದುರಿತು.

ಆದರ್ಶನಗರರದಲ್ಲೊಂದು ಗಣೇಶಮಂದಿರವಿದೆ. ನರಸಿಂಹಮೂರ್ತಿ, ರಾಮಮೂರ್ತಿ ಮೊದಲಾದ ಹಲವು ಉತ್ಸಾಹಿ (ಮಧ್ಯವಯಸ್ಕರ)ನೇತೃತ್ವದಲ್ಲಿ ದೇವಸ್ಥಾನದ ನಿರ್ಮಾಣ ಕಾರ್ಯವು ಪ್ರಾರಂಭವಾಗಿತ್ತು. ಗಣೇಶ ದೇವಸ್ಥಾನದಲ್ಲಿ ಗಣೇಶ ಚೌತಿ, ಯುಗಾದಿ ಮೊದಲಾದ ಧಾರ್ಮಿಕ ಕಾರ್ಯಕ್ರಮಗಳು ಉತ್ಸಾಹದಿಂದ ಆಚರಣೆಯಾಗುತ್ತಿದ್ದರೂ, ಸಾಹಿತ್ಯ ಚಟುವಟಿಕೆಗಳು ಇರಲಿಲ್ಲ. ಯಾವುದೋ ಒಂದು ಸಂದರ್ಭದಲ್ಲಿ ಮಾತುಕತೆಯ ನಡುವೆ ನಾಲ್ಕಾರು ವರ್ಷಗಳ ಹಿಂದೆ ಸಬಿತಾ ಬರೆದು ಪ್ರಕಟಿಸಿದ 'ಹೆಸರಿಡದ ಕವನ ಸಂಕಲನ' ಪುಸ್ತಕದ ಕೆಲವು ಕವಿತೆಗಳನ್ನು ಹಾಡುವ 'ಕಾವ್ಯಸಂಜೆ'ಯ ಚಿಕ್ಕ ಕಾರ್ಯಕ್ರಮ ರೂಪುಗೊಂಡಿತು. ಕಮಲಾಮೂರ್ತಿ, ಡಾ॥ ಮಮತಾ ಮೊದಲಾದವರು ಅಭಿಮಾನದಿಂದ ಓಡಾಡಿ ಸಭೆಯನ್ನು ಸಂಘಟಿಸಿದರು. ಹಿರಿಯ ಸಾಹಿತಿ ಡಾ॥ ಹೆಚ್.ಎಸ್. ಗೋಪಾಲರಾಯರ ಅಧ್ಯಕ್ಷತೆಯಲ್ಲಿ ಕಾರ್ಯಕ್ರಮ ನಡೆಯಿತು. ಸಂಗೀತ ಶಿಕ್ಷಕಿಯೂ ಸಾಹಿತ್ಯಾಭಿಮಾನಿಯೂ ಆದ ಪ್ರೇಮಾ ರಾಮಮೂರ್ತಿಯವರು ಮಧುರ ಕಂಠದಿಂದ ನಾಲ್ಕಾರು ಕವನಗಳನ್ನು ಹಾಡಿ ಶ್ರೋತೃಗಳನ್ನು ರಂಜಿಸಿದರು. ಅಂದೇ ಸಾಹಿತ್ಯ ಸಂಸ್ಕೃತಿ ವಿಕಾಸ ವೇದಿಕೆ ರೂಪುಗೊಂಡಿತು. ಇದಕ್ಕೂ ಮುನ್ನ ಡಾ॥ ಮಮತಾ ಚೆನ್ನಬಸಪ್ಪನವರ ನೇತೃತ್ವದಲ್ಲಿ 'ಸ್ವಸಹಾಯ ಸೇವಾ ಸಂಘ'ವೊಂದು ಸ್ವಯಂ ಪ್ರೇರಿತವಾಗಿ ಮಕ್ಕಳ ಉದ್ಯಾನವನ

ಪುನಶ್ಚೇತನಾದಿ ಕಾರ್ಯಕ್ರಮಗಳನ್ನು ನಡೆಸಲು ಪ್ರಾರಂಭಿಸಿದ್ದು, ಸಾಹಿತ್ಯ-ಸಂಸ್ಕೃತಿ ವಿಕಾಸ ವೇದಿಕೆಯೊಂದಿಗೆ ವಿಲೀನಗೊಂಡಿತು. ತಿಂಗಳ ಮೂರನೇ ಭಾನುವಾರ 'ಸಾಹಿತ್ಯಸಂಜೆ' ಕಾರ್ಯಕ್ರಮವನ್ನು ಪ್ರಾರಂಭಿಸಿತು. ಮಕ್ಕಳ ದಿನಾಚರಣೆಯನ್ನು ಕೂಡ ಸ್ಥಳೀಯ ಶಾಲೆಗಳ ಸಹಯೋಗದಿಂದ ಆಚರಿಸಿತು.

ಆದರ್ಶನಗರ ಸಾಹಿತ್ಯ ಮತ್ತು ಸಾಂಸ್ಕೃತಿಕ ವಿಕಾಸ ವೇದಿಕೆಯನ್ನು ಹುಟ್ಟುಹಾಕಿ ಪ್ರತಿ ತಿಂಗಳ ಮೂರನೇ ಭಾನುವಾರ ಸಂಜೆ ಸಾಹಿತ್ಯ, ಸಂಗೀತ, ಮತ್ತಿತರ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ವ್ಯವಸ್ಥೆಗೊಳಿಸುವುದಕ್ಕೆ ಪ್ರಾರಂಭಿಸಿದ್ದಾಯಿತು. ಸ್ವಾರಸ್ಯಕರವಾದ ಉತ್ತಮ ಕಾರ್ಯಕ್ರಮಗಳು ನಡೆದವು. ಹಲವು ಹಿರಿಯ ಮಹನೀಯರನ್ನು ಸಾಂಧರ್ಭಿಕವಾಗಿ ಸನ್ಮಾನಿಸಿದ್ದೂ ಆಯಿತು. ಎರಡು ಮೂರು ಸಂದರ್ಭಗಳಲ್ಲಿ ಸ್ಥಳೀಯರು ಬರೆದ ಪುಸ್ತಕಗಳ ಬಿಡುಗಡೆ ಸಹ ನಡೆಯಿತು. ಕಮಲಾಮೂರ್ತಿ, ಪ್ರೇಮಾಮೂರ್ತಿ. ಜಯಲಕ್ಷ್ಮಿ ನೆಲಮಂಗಲ, ಸರಸ್ವತಿ ನಾಗಭೂಷಣ್ ಕಾವ್ಯ ರಸಘಳಿಗೆಗಳನ್ನು ನಿರ್ವಹಿಸಿದರು. ಬೆಂಗಳೂರಿನ ಗಾಯತ್ರಿ ಪ್ರಕಾಶ್ ಸೋದರಿಯರು ವಿಶೇಷ ಕಾರ್ಯಕ್ರಮದಿಂದ ಶ್ರೋತೃಗಳನ್ನು ಆನಂದತುಂದಿಲರನ್ನಾಗಿಸಿದರು. ವಸಂತೋತ್ಸವದಂತಹ ಕಾರ್ಯಕ್ರಮಗಳೂ ನಡೆದವು. ದಕ್ಷಿಣ ಕನ್ನಡದ ಯಕ್ಷಗಾನ ತಾಳಮದ್ದಲೆ ಕಾರ್ಯಕ್ರಮವು ನಡೆಯಿತು.

ನೆಲಮಂಗಲದ ಇತಿಹಾಸಕ್ಕೆ ಸಂಬಂಧಿಸಿದ ಶಾಸನಗಳ ಹಾಗೂ ಉತ್ಖನನಗಳ ಅಧ್ಯಯನದ ಮೂಲಕ ಇಲ್ಲಿನ ಇತಿಹಾಸದ ಮೇಲೆ ಬೆಳಕು ಬೀರುವ ಕೃತಿಯೊಂದನ್ನು ಡಾ॥ಎಚ್.ಎಸ್. ಗೋಪಾಲರಾಯರು ಲೋಕಾರ್ಪಣೆ ಮಾಡಿದರು. ಕಮಲಾಮೂರ್ತಿಯವರ ಹನಿಗವನಗಳೂ 'ಪುನ್ನಾಗ' ಕಥಾಗುಚ್ಛವೂ ಬೆಳಕುಕಂಡವು. ಇನ್ನೊಂದು ಗಮನಾರ್ಹ ಸಂಗತಿ ಎಂದರೆ ಅಜ್ಜಿ ಡಾ॥ಸಬಿತಾ ಮರಕಿಣಿಯವರು ಹವಿಗನ್ನಡ ಭಾಷೆಯಲ್ಲಿ ಬರೆದ ಮೊದಲ ಕಾದಂಬರಿ 'ಮುಗಿಲು ಬಿರಿಯಿತು' ಕೃತಿಯನ್ನು ಮೊಮ್ಮಗಳು ಕುಮಾರಿ ಹಿಮಾ ಬಿಡುಗಡೆಮಾಡಿದ್ದು. ಅಷ್ಟೇ ಅಲ್ಲದೆ ಸಾಹಿತ್ಯ-ಸಂಸ್ಕೃತಿಸೇವೆಯಿಂದ 'ವಿಷಚಿಕಿತ್ಸೆ' ಗ್ರಂಥ 'ವಿಜ್ಞಾನ ವಿಶೇಷ' ಕೃತಿಗಳೂ ಪ್ರಕಟವಾದವು. ನಮ್ಮ ಕುಟುಂಬದ ತಂದೆ, ತಾಯಿ ಹಾಗೂ ಮಗ -ಹೀಗೆ ಮೂವರ ಕೃತಿಗಳು ಏಕಕಾಲಕ್ಕೆ ನಮ್ಮ ಈ ವೇದಿಕೆಯಿಂದ ಲೋಕಾರ್ಪಣೆಗೊಂಡಿದೆ. (ಈ ಕೃತಿಗಳಿಗೆ ಕರ್ನಾಟಕ ಸರಕಾರದ ವಿಶೇಷ ಪ್ರೋತ್ಸಾಹಧನ ಕೂಡ ಲಭ್ಯವಾಗಿದೆ.) ಡಾ॥ಸಬಿತಾ ಮರಕಿಣಿಯವರ ಸಣ್ಣಕತೆಗಳ ಸಂಕಲನ 'ಮಾಂಗ್ಣೀ ಮಾಸ್ತ್ರಂಗೆ ನಮಸ್ಕಾರ' ಎಂಬ ಪುಸ್ತಕವಂತೂ ಲೋಕಾರ್ಪಣೆಗೊಂಡ ತರುವಾಯ ಮಂಗಳೂರು, ಕಾಸರಗೋಡು, ಪುತ್ತೂರು, ಕುಂಬಳೆ ಮೊದಲಾದ ಊರುಗಳ ಬಹು ಬೇಡಿಕೆಯ ಹವಿಗನ್ನಡ ಪುಸ್ತಕವೆನಿಸಿತು. ಒಟ್ಟಿನಲ್ಲಿ ವೇದಿಕೆ ಅಬ್ಬರವಿಲ್ಲದೆ – ಇದ್ದರೂ ಕ್ರಿಯಾತ್ಮಕವಾಗಿ ತನ್ನ ಸಹಜತೆಯಲ್ಲೇ ಮುಂದುವರಿಯುತ್ತಾ ಇದ್ದು

ಕನ್ನಡ ಸಾಹಿತ್ಯ ಸರಸ್ವತಿಗೆ ಆಗಾಗ ಪುಷ್ಪಗಳನ್ನು ಸಮರ್ಪಿಸುತ್ತಿರುವುದು ಗಮನಾರ್ಹ. 60 ವರ್ಷಗಳಹಿಂದೆ ನಾನು ಸಂಪಾದಿಸಿ ಪ್ರಕಟಿಸಿದ ಹವಿಗನ್ನಡ (ಹವ್ಯಕ ಕನ್ನಡದ) ತೊಟ್ಟಿಲು ತೂಗುವ ಪದಗಳ ಎರಡನೇ ಮುದ್ರಣಕೂಡ ಇಲ್ಲಿ ಲೋಕಾರ್ಪಣೆಯಾಯಿತು. 'ಮನೆಮದ್ದು' ಕಿರುಪುಸ್ತಕ ಹಾಗೂ 'ಹಳೇಮರಕ್ಕೆ ಹೊಸ ಚಿಗುರು'ಎಂಬ ಹವಿಗನ್ನಡವಾದ ಕೃತಿ ಅಪಾರ ಆಸಕ್ತಿಯನ್ನು ಹವ್ಯಕ ಸಾಹಿತ್ಯ ವರ್ತುಲದಲ್ಲಿ ಕೆರಳಿಸಿವೆ. ನಮ್ಮ ವೇದಿಕೆಯಿಂದ ಲೋಕಾರ್ಪಣೆಗೆ ಬಂದ ಪುಸ್ತಕಗಳು ಸರಕಾರದ ಸಗಟು ಖರೀದಿ ಪಟ್ಟಿಯಲ್ಲಿ ಸೇರಿಕೊಂಡಿವೆ.

ಈಗ ಗೃಹಾಭಿಮುಖವಾಗೋಣ. ಕಾರವಾರದ ಕರಾವಳಿ ಹವೆಯ ಸವಿಯನ್ನು ವರ್ಷಕ್ಕೊಮ್ಮೆ ಸವಿಯುತ್ತೇವೆ. ಹೆಚ್ಚಾಗಿ ಡಿಸಂಬರ್‌ನಲ್ಲಿ (ಅರಶಿನಕುಂಟೆಯ ಚಳಿಗೆ ಅಂಜಿ) ಹಾಗೂ ಹಿಮಾಳ ಹುಟ್ಟುಹಬ್ಬ ಕೂಡ ಆ ತಿಂಗಳಲ್ಲೇ ಇದ್ದ ಕಾರಣ ಹೇಳುತ್ತ ತಪ್ಪದೆ ಹಾಜರಾಗುತ್ತಿದ್ದೇವೆ. ಆದಿತ್ಯ ಮಾತ್ರ ಸೆಪ್ಟೆಂಬರ್‌ನಲ್ಲಿ ಬರುವ ತನ್ನ ಹುಟ್ಟುಹಬ್ಬವನ್ನು ನೆನಪು ಮಾಡಿಕೊಳ್ಳೋದೇ ಇಲ್ಲ ಎಂದು ಹುಸಿಮುನಿಸು ತೋರಿಸುತ್ತಿದ್ದಾನೆ. ಬೇಸಿಗೆ ರಜದ ಒಂದಷ್ಟು ದಿನಗಳನ್ನು ಕಾರವಾರದ ಕಡಲಿಂದೀಚೆಗೆ ಬಂದು ಅರಸಿನಕುಂಟೆಯ ಆದರ್ಶನಗರದಲ್ಲಿ ಸಂತೋಷದಿಂದ ಕಳೆಯುತ್ತಾರೆ. ಆದಿತ್ಯನ ಜೊತೆ ಯಾವಾಗಲೂ ಶ್ರೇಯಸ್ ತೇಜಸ್ ಚೇತನ್ ಕೇತನ್ ಅಂತ ಒಂದು ಗುಂಪೇ ಇಲ್ಲಿ ಕಾದಿರುತ್ತಾರೆ. ಹಿಮ ಮಾತ್ರ (ಸಮವಯಸ್ಕರಿಲ್ಲದ ಕಾರಣ) ಅಜ್ಜಿ ಮೊಮ್ಮಗಳ ಆಪ್ತಸಂವಾದದಲ್ಲಿ ನಿರತಳಾಗುತ್ತಾಳೆ. ಒಂದೆರಡು ದಿವಸ ಪ್ರೇಕ್ಷಣೀಯ ಸ್ಥಳಗಳಿಗೆ ಕಿರುಪ್ರವಾಸ ಹೋಗುತ್ತಾರೆ. ಬೆಂಗಳೂರಿನ ಮೆಟ್ರೋ–ಪೆಟ್ರೋ ಮಲ್ಟಿ ಕಾಂಪ್ಲೆಕ್ಸ್‌ಗಳಲ್ಲಿ ವಾರ್ಷಿಕ ಖರೀದಿಯ ಸವಿಯನ್ನು ಅನುಭವಿಸುತ್ತಾಳೆ. ಮತ್ತೊಂದಿಷ್ಟುದಿನ ಗುಲ್ಬರ್ಗಾಕ್ಕೆ ಹೋಗಿ (ಅಜ್ಜ ವಸಂತ ಕುಷ್ಟಗಿಯವರ ಜತೆಗೆ) ಬಿಸಿಲಲ್ಲಿ ಒಣಗಿ ರಜಾಕಾಲ ಮುಗಿಯುತ್ತಿದ್ದಂತೆ ಕಾರವಾರಕ್ಕೆ ತಲುಪುತ್ತಾರೆ.

ಈ ವರ್ಷ (2010) ಮಾತ್ರ ಎಲ್ಲಾ ಉಲ್ಟಾಪಲ್ಟಾ ಆಗಿಬಿಟ್ಟಿದೆ. ಹಿಮ ಪದವೀಪೂರ್ವಕಾಲೇಜು ಶಿಕ್ಷಣ ಮುಗಿಸಿ ಸಿಇಟಿಯಲ್ಲಿ ಭಗೀರಥ ಪ್ರಯತ್ನದಿಂದ ಗಮನಾರ್ಹ ಅಂಕ ಗಳಿಸಿ ಶಿವಮೊಗ್ಗ ಸರಕಾರೀ ಮೆಡಿಕಲ್ ಕಾಲೇಜಿನಲ್ಲಿ MBBSಗೆ ಪ್ರವೇಶ ದೊರಕಿಸಿದ್ದಾಳೆ. ಆದಿತ್ಯ ಮಾತ್ರ ಹಾಯಾಗಿ ತನ್ನದೇ ಉಳಿತಾಯದ ಹಣದಿಂದ ಗೇರ್ ಸಹಿತವಾದ ಒಂದು ಸೈಕಲ್ ಖರೀದಿಸಿದ್ದಾನೆ. ಈಗ ನಾರಾಯಣ ಭಟ್ಟರಿಗೆ ಕಾರವಾರದಿಂದ ಹಾಸನಕ್ಕೆ ವರ್ಗವಾಗಿದೆ. ಆತನ ಭೇಟಿಯ ಶ್ರಮ ಒಂದಿಷ್ಟು ಕಮ್ಮಿಯಾಗಿದೆ.

ಅಮೇರಿಕಾದ ಮೊಮ್ಮಕ್ಕಳ ಪರಿವಾರ ಕಳೆದವರ್ಷ (2008ರಲ್ಲಿ) ಭಾರತಕ್ಕೆ ಆಗಮಿಸಿತ್ತು. ಹಾವನೂರಜ್ಜ ಡಾ॥ ಶ್ರೀನಿವಾಸ ಹಾವನೂರರ ಸನ್ಮಾನ – ಅಮೋಘನ

ಬ್ರಹ್ಮೋಪದೇಶ (ಉಪನಯನ) ಇತ್ಯಾದಿ ಇತ್ಯಾದಿ ಕಾರ್ಯಕ್ರಮಗಳಿದ್ದವು. ಎರಡೂ ಮನೆಗಳ ನಡುವೆ ಒಡಾಡಿಕೊಂಡು ಮಕ್ಕಳು ಸಂತೋಷದಿಂದ ಕಾಲ ಕಳೆದಿದ್ದರು. ಅದೇ ಸಂದರ್ಭದಲ್ಲಿ ನೆಲಮಂಗಲ ಅಜ್ಜಿ (ಡಾ॥ ಸಬಿತಾ)ಗೆ ಹವಿಗನ್ನಡ ಸಾಹಿತ್ಯದ ಪ್ರತಿಷ್ಠಿತ ಸನ್ಮಾನ ಕರ್ಕಿ ವೆಂಕಟ್ರಮಣ ಶಾಸ್ತ್ರಿ ಸ್ಮಾರಕ 'ಹವಿಗನ್ನಡ ಸೂರಿ ಪ್ರಶಸ್ತಿ' ಪ್ರದಾನವಾಯಿತು. ಈ ಎರಡು ಸನ್ಮಾನಗಳು ಒಂದೇದಿನ ಬೆಂಗಳೂರಿನ ಬೇರೆಬೇರೆ ಸ್ಥಳಗಳಲ್ಲಿ(ಬೆಂಗಳೂರಲ್ಲೇ) ನಡೆದಿದ್ದರಿಂದ ಎಲ್ಲರೂ ಇತ್ತ ಅತ್ತ ಓಡಾಡಿದ್ದೇ ಓಡಾಡಿದ್ದು. ಸಂಭ್ರಮ ಪಟ್ಟದ್ದೇ ಪಟ್ಟದ್ದು.

2004ರಲ್ಲಿ ಕರ್ನಾಟಕ ಸರಕಾರವು (ಸಮಾಜ ಸೇವೆಗಾಗಿ) ರಾಜ್ಯೋತ್ಸವ ಪ್ರಶಸ್ತಿ ನೀಡಿ ನನ್ನನ್ನು ಸನ್ಮಾನಿಸಿದ್ದನ್ನು ಚುಟುಕಾಗಿ ಹೇಳಬೇಕು. ನಾನು ಆಗ ಉಡುಪಿಯಲ್ಲಿದ್ದೆ. (ಡಾ॥ ಎಂ.ವಿ. ಭಟ್ ಹೊಸನಿವಾಸ 'ವಿಶ್ರಾಮ'ದ ಗೃಹಪ್ರವೇಶ ಸಮಾರಂಭದಲ್ಲಿ ಓಡಾಡುತ್ತಿದ್ದೆ.) ಹೀಗಾಗಿ ನನಗೆ ತುಸು ವಿಳಂಬವಾಗಿ ಮಾಧ್ಯಮಗಳಲ್ಲಿ ಪ್ರಕಟವಾದ ನಂತರವೇ ಈ ವಿಚಾರ ತಿಳಿದದ್ದು. ಕೊನೆಗೆ ರಾತ್ರೋರಾತ್ರಿ ಬಸ್‌ಹಿಡಿದು ಬೆಂಗಳೂರು ತಲುಪಿ ಸಮಾರಂಭಕ್ಕೆ ಹಾಜರಾಗಿ – ಪ್ರಶಸ್ತಿ ಸ್ವೀಕರಿಸಿದೆ. ಇದರ ಪರಿಣಾಮವೋ ಎಂಬಂತೆ ಹಲವಾರು ಸ್ಥಳಗಳಿಗೆ ಅನಿರೀಕ್ಷಿತವಾದ ಪ್ರವಾಸ, ಸನ್ಮಾನ ಭಾಷಣಗಳನ್ನು ಮಾಡಲೇ ಬೇಕಾಯಿತು. ನನಗೆ ಒಂದಿಷ್ಟು ಹಣವೂ ಖರ್ಚಾಯಿತು.(ಯಾವುದೇ ಕಾರ್ಯಕ್ರಮಕ್ಕೆ ಹೋದರೂ ಪ್ರವಾಸ ವೆಚ್ಚ ತೆಗೆದುಕೊಳ್ಳುತ್ತಿಲ್ಲ.) ಒಂದು ಸಂತೃಪ್ತಿಯ ವಿಷಯ ಏನೆಂದರೆ ಈಗ ಕಾಲೇಜ್ ಆಗಿರುವ ಹುಟ್ಟೂರು ಅಡ್ಯನಡ್ಕ ಶಾಲೆ 45 ವರ್ಷಗಳನಂತರ ಈಗ 'ಪ್ರಶಸ್ತಿ' ದೊರಕಿದ ಸಂದರ್ಭದಲ್ಲಿ ಆಹ್ವಾನಿಸಿ ಈ ಹಳೆ ವಿದ್ಯಾರ್ಥಿಗೆ ಪುನರಾಶೀರ್ವಾದ ಮಾಡಿದ್ದು. ನನಗದು ನೆಮ್ಮದಿ ಸಂಗತಿ. ಕಾರವಾರ, ಕಾಂತಾವರ, ನೆಲಮಂಗಲ ಹಲವೆಡೆ ಸನ್ಮಾನಗಳು ನಡೆದವು.

ಸುಮಾರು 30ವರ್ಷಗಳ ಹಿಂದೆ ಚಿತ್ತಾಪುರ ಬಿಟ್ಟವರು ಮತ್ತೆ ಅಲ್ಲಿಗೆ ಹೋಗಿರಲಿಲ್ಲ. 'ಶಿಶುವಿಹಾರವಾಗಿ ಪ್ರಾರಂಭಿಸಿದ ಆ ಶಾಲೆ ಈಗ ಮಂಗಳೂರಿನ 'ಬೆಥನಿ ಶಿಕ್ಷಣಸಂಸ್ಥೆ'ಯ ಆಡಳಿತದಲ್ಲಿ ಉತ್ತಮ ವಿದ್ಯಾಲಯವಾಗಿ ಬೆಳೆದಿದೆ. ಹೈಸ್ಕೂಲ್ ಆಗಿದೆ. ಅಲ್ಲಿಗೆ ನಾವೆಲ್ಲರೂ ಹೋಗಿ ಇದ್ದಾಗ ಜನಸಂತಯೇ ಸೇರಿದ್ದಲ್ಲದೆ, ಹಳ್ಳಿಹಳ್ಳಿಗಳಿಂದ ತಮ್ಮ ಮೈಸೂರು ದವಾಖಾನೆ ಡಾಕ್ಟರು ಅಲ್ಲ ಡಾಕ್ಟರಿಣಿ (ಡಾ॥ ಸಬಿತಾ) ಅವರ ಭೇಟಿಗೆಂದು ಬಂದುದು ಒಂದು ಅಪೂರ್ವಘಳಿಗೆ. ನಾವು ಹಿಂದೆ ಅಲ್ಲಿದ್ದಾಗ ಮಾಡಿದ ಕಿಂಚಿತ್ ಸೇವೆಯನ್ನು ಮರೆಯದೆ – ಮತ್ತೆ ಅದೇ ವಿಶ್ವಾಸದಿಂದ ಆತ್ಮೀಯತೆಯಿಂದ ಗೌರವಾದರಗಳನ್ನು ವ್ಯಕ್ತಪಡಿಸಿದ್ದು ಮರೆಯಲಾರದ ಸಂದರ್ಭನಮಗೆ. 'ಶಿಶುವಿಹಾರ' ಶಾಲೆಯಲ್ಲಿ ಮೊದಲನೇ ಪ್ರಾಧ್ಯಾಪಿಕೆಯಾಗಿ ಅಪಾರ ಸಂಖ್ಯೆಯ ಶಿಷ್ಯ–ಶಿಷ್ಯೆಯರಿಗೆ "ಶಿಕ್ಷಣದೀಕ್ಷೆ" ನೀಡಿದ ತಮ್ಮ ಪ್ರೀತಿಯ

ಸಿಸ್ಟರ್ (ದಿವಂಗತ) ರೊಸೆಟ್ ಅವರ ನೆನಪಿಗಾಗಿ ಒಂದು ಗ್ರಂಥಭಂಡಾರವನ್ನು ಆ ಶಾಲೆಗೆ ಸಮರ್ಪಿಸಿದರು. ಗೌರಿ, ಸುಚೇತ, ಶೈಲಜಾ, ನಾರಾಯಣ, ಮಲ್ಲಿಕಾರ್ಜುನ. ಕುತುಬುನ್ನೀಸ, ಹೀಗೆ ಹಲವಾರು ಹಳೇ ವಿದ್ಯಾರ್ಥಿಗಳ ಸ್ವಯಂಪ್ರೇರಿತ ಕಾಣಿಕೆಯಾಗಿತ್ತು ಗುರುದಕ್ಷಿಣೆಯಾಗಿತ್ತು ಆ ಸರಸ್ವತೀ ನಿಧಿ.

ಚಿತ್ತಾಪುರದ ಹಿರಿಯ ಜೀವಗಳಲ್ಲೊಬ್ಬರಾದ ದಿ॥ ಬಸಪ್ಪ ಸಜ್ಜನ ಶೆಟ್ಟಿಯವರು ಸ್ವಾತಂತ್ರ್ಯ ಹೋರಾಟಗಾರರು. ಪ್ರಗತಿಪರ ಕೃಷಿಕರು. ಗಾಂಧೀವಾದಿ ಹಾಗೂ ಬಡ ಜನ ವರ್ಗದ ಉನ್ನತಿಗಾಗಿ ಸೇವೆಸಲ್ಲಿಸಿದವರು. ಅವರು ನಮಗೆ ನೀಡಿದ ಸಹಕಾರ-ಬೆಂಬಲಗಳು ಚಿತ್ತಾಪುರದ ನಮ್ಮ ಜೀವನವನ್ನು ಸುಗಮಗೊಳಿಸಲು ನೆರವಾಗಿದೆ. ಅವರ ಸ್ಮರಣಾರ್ಥ ವಿಶಿಷ್ಟ ಕಾರ್ಯಕ್ರಮವೊಂದು ರೂಪುಗೊಳ್ಳುತ್ತಿದ್ದು 'ಸಜ್ಜನರ ಸಂಗದಲ್ಲಿ ಚಿತ್ತಾಪುರದ ಚಿತ್ರ' ಎಂಬ ನನ್ನ ಪುಸ್ತಕ ಪ್ರಕಟಣೆಗೆ ಸಿದ್ಧವಾಗಿದೆ.

ವಿಶ್ರಾಂತಿ ದಿನಗಳ ಮನಶ್ಶಾಂತಿ

ಮುಂಜಾವಿನ ಸಕ್ಕರೆನಿದ್ದೆ ಇನ್ನೂ ರೆಪ್ಪೆಗಳಿಂದ ಕರಗುತ್ತಿದ್ದಂತೆಯೇ ಉಷಃಕಾಲದ ದಿನಚರಿ ಪ್ರಾರಂಭ. ಮುಖದ ಮೇಲೊಂದಿಷ್ಟು ತಣ್ಣೀರು ಚಿಮುಕಿಸಿ, ಬಾಯಿಮುಕ್ಕಳಿಸುತ್ತಿರುವಾಗಲೇ ಅಡಿಗೆಮನೆಯತ್ತ ಕಾಲು ತಾನಾಗಿ ಸಾಗುತ್ತದೆ. ಸ್ಟೌನಮೇಲೆ ಚಿಕ್ಕ ಬೊಗುಣಿಯಲ್ಲಿ ಒಂದು ಕಪ್ ನೀರು ಕುದಿಸಿ, ಅದಕ್ಕೊಂದು ಚಮಚ ಬ್ರೂ ಪುಡಿಹಾಕಿ ಎರಡು ಚಮಚ ಸಕ್ಕರೆ ಸುರಿದು ಕಪ್ಪು ಕಾಫಿಯ ಕಪ್ಪಿನೊಂದಿಗೆ ಚಾವಡಿಗೆ ಬಂದು ಟಿ.ವಿ.ಯ ಕಿವಿಹಿಂಡಿ ಯಾವುದೋ ಒಂದು ಸುಪ್ರಭಾತವನ್ನೋ ಶರಣರ ವಚನವನ್ನೋ ದಾಸರ ಪದವನ್ನೋ ನೋಡುತ್ತಾ ಹತ್ತು ನಿಮಿಷ ಕಳೆಯುವುದು. ಅನಂತರ ಒಂದರ ಹಿಂದೆ ಒಂದರಂತೆ ಬರುವ ಹಾಲಿನ ಪಾಕೇಟ್, ದಿನಪತ್ರಿಕೆಯ ಸುರುಳಿ, ತೋಟದಿಂದ ಕಿತ್ತುತಂದ ತಾಜಾ ತರಕಾರಿ – ಸೊಪ್ಪುಗಳ ಬುಟ್ಟಿಯನ್ನು ಹೊತ್ತುಕೊಂಡು ಮನೆಬಾಗಿಲಿಗೇ ಬಂದು ಮಾರಾಟಮಾಡುವ ಹಳ್ಳಿಯ ಹೆಂಗಸರು..ರು.. ಇವರ ಸರತಿ ಮುಗಿಯುತ್ತಿದ್ದಂತೆ ಮನೆಯ ಕಿರುಅಂಗಳದಿಂದ ಹಿಡಿದು ಅಡುಗೆ ಕೋಣೆ – ದೇವರ ಗೂಡಿನ ವರೆಗೆ ಪ್ರತಿಯೊಂದನ್ನು ಬಳಿದು ತಿಕ್ಕಿ – ತೊಳೆದು ಒಪ್ಪ-ಓರಣಗೊಳಿಸುವ ಉಸ್ತುವಾರಿಯ ಲಕ್ಷ್ಮಿಯ ಪರಿವಾರ ಹಾಜರ್. ಸೂರ್ಯನ ಮುಖದರ್ಶನವಾಗುತ್ತಿದ್ದಂತೆಯೇ ಸ್ವಲ್ಪ ಹೊತ್ತು ಕೈ ಬಡಿಗೆ ಸಹಿತದ ತಿರುಗಾಟ, ಪೇಪರ್ ಓದುವುದು, ಟಿ.ವಿ. ವಾರ್ತೆಯನ್ನು ಕಣ್ಣು ಮುಚ್ಚಿಕೊಂಡೇ ಆಲಿಸುವುದು, ಎಂಟು ಗಂಟೆ ಗಂಟೆಯಾಗುತ್ತಲೇ (ಈಗ 8–30) ಅಡಿಗೆಮನೆಯತ್ತ ನಾಲ್ಕಾರುಬಾರಿ ದೃಷ್ಟಿಹಾಯಿಸುವುದು, ಟೇಬಲ್‌ಮೇಲೆ ತಟ್ಟೆ ಇರಿಸಿದ ಸದ್ದು ಕೇಳಿಸುತ್ತಿದ್ದಂತೆಯೇ ಠಣ್ಣನೆ ಜಿಗಿದು ಕುರ್ಚಿಯಲ್ಲಿ ಕುಳಿತು ಬ್ರೇಕ್‌ಫಾಸ್ಟ್‌ನ್ನು ಆಸೆಗಣ್ಣುಗಳಿಂದ

ಎದುರುನೋಡುವುದು. ಇಷ್ಟು ಅವಸರ ಯಾಕೇನೋ ಇನ್ನೊಂದು ಎರಡು ನಿಮಿಷ ಕಾಯಲಿಕ್ಕಾಗಲ್ವ ಎಂಬ ನಿತ್ಯದ ಟೀಕೆ ಸಂದೇಶ ವಾಕ್ಯದ ಹಿಂದೆಯೇ ದೊರಕುವ ಇಡ್ಲಿ ಸಾಂಬಾರ್/ದೋಸೆ ಚಟ್ನಿ/ಉಪ್ಪಿಟ್ಟು/ ಗುಳಿಯಪ್ಪ (ಈ ಪೈಕಿ ಯಾವುದಾದರೊಂದು) – ಹೀಗೆ ದಿನದ ಚರ್ಯೆ – ಅಲ್ಲ ದಿನನಿತ್ಯದ ಚರ್ಯೆ ನಡೆಯುತ್ತಲೇ ಇರುತ್ತದೆ. ಇದೀಗ ವಿಶ್ರಾಂತ ಜೀವನದ ಬದುಕು ಬಾಳ್ವೆ ಪೂರ್ವಾರ್ಧ ದಿವಸ.

ಹೀಗೆ ಪ್ರಾರಂಭವಾದ ದಿನ–ಚರಿಯಲ್ಲಿ ಸಹಚರಿಯೊಂದಿಗೆ ಕೂಡ (ತೀರ) ಪರಿಮಿತವಾದ ಮಾತುಕತೆ. ಮತ್ತೊಂದಿಷ್ಟು ವಿಶ್ರಾಂತಿ. 11 ಗಂಟೆಗೊಂದು ಲೋಟ ತಾಜಾ ಹಣ್ಣಿನ ರಸ. ವಿಶ್ರಾಂತಿ. ಮೊಮ್ಮಕ್ಕಳು–ಅವರ ಗಲಾಟೆ–ಲಗಾಟೆಗಳಿಲ್ಲ. ಆಟ–ಕಾದಾಟಗಳ ಸುಳಿವಿಲ್ಲ. ಸಂಜೆ 'ವಾಕಿಂಗ್' ಕರೆದುಕೊಂಡು ಹೋಗುವ ಅಲ್ಲಿ ಒಂದು ಪಾಕೆಟ್ ಕಳ್ಳೇಕಾಯಿ ಸುಲಿದು ಕೊಡುತ್ತಿದ್ದುದೆ ಮಾಯವಾಗಿ ಬಿಟ್ಟಿದೆ – ಸ್ಕೂಲ್‌ವ್ಯಾನ್‌ಬಂತು ಓಡು, ಬ್ಯಾಗ್‌ತೊಗೊಂಡುಬಾ–ಲೇಟಾಯಿತು ಎಂದೆಲ್ಲಾ ರಸಗಳಿಗೆಗಳೆಲ್ಲ ಎಲ್ಲಿ ಮಾಯವಾದವೋ.

ನಾಷ್ಟಾ ಮುಗಿಸಿ ಕೋಣೆ ಸೇರಿಕೊಂಡು ಪುಸ್ತಕ ಕೈಗೆತ್ತಿಕೊಂಡು–ಓದು ಬದಲು ಪುಟ ಮಗುಚುತ್ತೇನೆ. ಪೆನ್ Note ಬುಕ್ ಹಿಡಿದು ಬರೆಯುವುದಕ್ಕೆ ತೊಡಗಿದರೆ– ಅದು ಕೇವಲ ಗೀಚುವುದರಲ್ಲಷ್ಟೇ ಪರ್ಯವಸಾನವಾಗುತ್ತದೆ. ಕಿರುಗುಟ್ಟುವ ಕರ್ಣಪಿಶಾಚಿ (ಮೊಬೈಲ್ ಫೋನ್) ರಾಂಗ್‌ನಂಬರ್ ಎಸ್ – ಇಲ್ಲ ಕಾರವಾರಕ್ಕೆ ಹೋಗಿದ್ದಾರೆ ಇತ್ಯಾದಿ ಉತ್ತರಗಳು – ಇದು....ಇಂದ ನಿಮಗೆ ಉಚಿತಕರೆ – ನಿಮಗೊಂದು – ವೀಕೆಂಡ್ ಸೌಲಭ್ಯದ ಜಾಹೀರಾತು – ಟಕ್ ಅಂತ ಫೋನ್ ಬಂದ್‌ಮಾಡೋದು. ಹಾಗೂ ಹೀಗೂ ಮಧ್ಯಾಹ್ನದವರೆಗೂ ಕಾಲಹರಣ. ಯಾರಾದರೊಬ್ಬರ ಪತ್ರವೋ – ಇನ್ನೇನೋ ಟಪ್ಪಾಲ್ ಬರುತ್ತದೆ.

ಮಧ್ಯಾಹ್ನದ ಅಡುಗೆಯ ಯೋಜನೆ ಮುಗಿಸುವುದರಲ್ಲಿ ಪಕ್ಕದಮನೆಯ ಜಯಶ್ರೀ ತಮ್ಮ ಕೈತೋಟದ ಗಿಡಗಳಿಂದ ಕಿತ್ತು ತಂದ ನಾಲ್ಕಾರು ಅರಳಿದ ಹೂಗಳನ್ನು ಕೈತಟ್ಟೆಯಲ್ಲಿ ಇರಿಸಿಕೊಂಡು ತೆಗೆದುಕೊಂಡು ಬರುತ್ತಿದ್ದ ಹಾಗೆ ಓಡಿಬಂದು ಅಜ್ಜಿಗೆ ಪುಷ್ಪ ನಾನು ಕೊಡ್ತೇನೆ ಎಂದು ಅಮ್ಮನಕೈಯಿಂದ ಹೂವಿನ ಕೈಬುಟ್ಟಿಯನ್ನು ಸೆಳೆದುಕೊಂಡು ಅರೆತೆರೆದ ಬಾಗಿಲಿನಿಂದ ಒಳಬರುವ ಪಕ್ಕದಮನೆಯ ತಾಯಿ ಮಗ ಅವರಜೊತೆ ನಾಲ್ಕುನಿಮಿಷ ಮಾತುಕತೆ – ನಿಮ್ಮಲ್ಲೇನು ಅಡುಗೆ ಇಂದು ಇತ್ಯಾದಿ ಸಂಭಾಷಣೆ ಅನಂತರ ಅವರ ಮನೆಯಲ್ಲಿ ಟೆಲಿಫೋನ್ ಗುರುಗುಟ್ಟುವ ಸದ್ದು ಕೇಳಿ ನಾಗಾಲೋಟದಿಂದ ಹೋಗಿ ಬಿಡುವುದು. (ಎಲ್ಲ ಘಟನಾವಳಿ ನಮ್ಮವರ ದಿನಚರಿಯಿಂದ ಆಯ್ದ ಭಾಗ)

ಅವರು ಸ್ನಾನ ಮುಗಿಸಿ, ಪೂಜೆ ಎಂದು ದೇವರ ಫೋಟೋ ಮುಂದೆ ಒಂದಿಷ್ಟು ಹೊತ್ತು ಮೀಸಲಿಟ್ಟು ಕೈ ಮುಗಿಯುತ್ತಾರೆ. ಕೊನೆಗೆ 10.30ರ ಸುಮಾರಿಗೆ ಊಟದ ಮೇಜಿನ ಒಂದು ಬದಿಯಲ್ಲಿ ಇಟ್ಟ ಔಷಧಿ ಭಂಡಾರದಿಂದ ಇನ್ಸುಲಿನ್ ಚುಚ್ಚುಮದ್ದು ಸಿರಂಜ್ ತೆಗೆದುಕೊಂಡು ಸ್ವಯಂ ಚುಚ್ಚಿಕೊಂಡು ಉಪಾಹಾರಕ್ಕೆ ನಮ್ಮವರು ತೊಡಗುವಾಗ ಸರಿಯಾಗಿ 11 ಗಂಟೆ. ಶೆಟ್ಟರ ಅಂಗಡಿಯಿಂದ ಏನಾದರೂ ದಿನಸಿ ಬೇಕಾಗಿದ್ದರೆ, ಆಗಾಗ ಬರೆದಿಟ್ಟು ಚೀಟಿಯನ್ನು ಫೋನ್‌ಮೂಲಕ ರವಾನಿಸುವುದು. ಅವರು ಬಂದು ಡೆಲಿವರಿಕೊಟ್ಟಾಗ ತೆಗೆದು ಒಳಗಿರಿಸುವುದು..ದು..ದು. ನನ್ನಪಾಲಿನ ಹೊಣೆ.

ಅಮ್ಮನವರು ಒಳಗಿನ ಕೋಣೆ ಸೇರಿ ವಿಶ್ರಾಂತಿಗೆ ಸಿದ್ಧರಾದ ಕೂಡಲೆ ಹೊರಗಿನ ಕೊಠಡಿಯಲ್ಲಿ ನಾನು ಏನಾದರೂ ಬರೆಯುವ ಪ್ರಯತ್ನ ಮುಂದುವರಿಸುತ್ತೇನೆ. ಹೊಸಮನೆ ಎಂಬುದರಿಂದ ಗೇಟ ಟಕಟಕ ಸದ್ದು ಮಾಡಿ ಹಾಜರಾಗುವ ಮಾರಾಟಗಾರರು – Sample ನೋಡಿ ಎನ್ನುವ ಒಂದಕ್ಕೆ ಇನ್ನೊಂದು ಫ್ರೀ... ಅವರನ್ನೆಲ್ಲಾ ಅವರವರ ಅಂತಸ್ತಿಗೆ ತಕ್ಕಂತೆ ಬೇಡ, ಮುಂದೆ ಹೋಗಿ, Dont waste your time- mine too ಹೀಗೆ ನಾನಾ ವಿಧವಾಗಿ ಗೋಗರೆದು ಓಡಿಸಿ ಮತ್ತೆ ಲೇಖನಿ ಎತ್ತುತ್ತೇನೆ. ಆದರೆ ಬರವಣಿಗೆ ಮಾತ್ರ (ಅಂದಿನ ಮಟ್ಟಿಗೆ) ಮುಂದೆ ಸಾಗುವುದಿಲ್ಲ.

ಇಂತಹ ವಿಶ್ರಾಂತ ಗಳಿಗೆಗಾಗಿ ಎಷ್ಟುವರ್ಷಗಳಿಂದ ಮರು ನೋಡುತ್ತಿದ್ದೆವೋ ಏನೊ.. ಮಧ್ಯಾಹ್ನದ ಊಟ ಅನಂತರ ಒಂದು ಗಂಟೆ ವಿಶ್ರಾಂತಿ ನಾಲ್ಕುಗಂಟೆಗೆ ಚಹಾ (ಒಂದಿಷ್ಟು ಬಾಯಾಡಿಸಲು ತಿಂಡಿ) ಹೀಗೆ ಗಂಟೆಗಳು ಉರುಳುತ್ತಲೇ ಇರುತ್ತವೆ. ಸಂಜೆಗೆ ಕಮಾಲಾಮೂರ್ತಿ ಬರುತ್ತಾರೆ. ಆಚೆಮನೆಯ ನರ್ಸ್ ಸರೋಜಮ್ಮನ ಮಗಳು ಪಾರ್ವತಿ ತನ್ನ ಪುಟ್ಟ ಮಗುವನ್ನೆತ್ತಿಕೊಂಡು ಬರ್ತಾಳೆ. ಹೀಗೆ ಮನೆಯ ಮುಂದಿನ ಕಿರು ಅಂಗಳದಲ್ಲಿ ಮಹಿಳಾ ಮಂಡಳಿ ಸೇರಿರುತ್ತದೆ. ಈ ಅನೌಪಚಾರಿಕ ಸಭೆಯಲ್ಲಿ ನನಗೆ ಕೆಲಸವಿಲ್ಲ ಎಂದುಕೊಂಡು ಕರ್ಣಪಿಶಾಚಿಯನ್ನು ಕೊರಳಿಗೆ ಮಾಲೆಯಂತೆ ಇಳಿಬಿಟ್ಟು ಗಾಳಿಸೇವನೆಗೆ ಹೊರಡುತ್ತೇನೆ. ಮರಳಿದಾಗ ಮನೆಬಾಗಿಲು ಬಂದ್‌ಆಗಿರುತ್ತದೆ. ಸ್ತ್ರೀವೃಂದ ಸಂಜೆಗಾಳಿಗೆ ಮೈಯೊಡ್ಡಲು ಮಕ್ಕಳ ಪಾರ್ಕ್‌ನತ್ತ ಹೋಗಿರುತ್ತಾರೆ.

ಕತ್ತಲು ಕವಿಯುತ್ತದೆ. ವಿದ್ಯುತ್ ಸರಬರಾಜಿದ್ದಾಗ ಬಲ್ಬು ಬೆಳಕು ಚೆಲ್ಲುತ್ತದೆ. ಇಲ್ಲದಿದ್ದರೆ ಕ್ಯಾಂಡಲ್. ಮತ್ತೆ ಕರೆಂಟ್ ಬಂದಾಗT.V. ಅನಂತರ ರಾತ್ರಿ ಊಟ. ಇನ್ನೊಂದೆರಡು ಸೀರಿಯಲ್‌ಗಳು T.V. ಯ ಹತ್ತು ಗಂಟೆ ವಾರ್ತೆ ... ಎಂದು ಹೇಳುತ್ತ ನಿದ್ರಾಲೋಕದತ್ತ ಪಯಣ – ಒಂದು ದಿನ ಮುಗಿಯಿತು.

ಈ 'ಯಾಂತ್ರಿಕ' ದಿನಚರಿಯಲ್ಲಿ ಒಂದು ಮಾಂತ್ರಿಕತೆ ಇದೆ. ಸಮಾಧಾನವಿದೆ, ನೆಮ್ಮದಿಯೂ ಇದೆ. ಕ್ರಮೇಣ ಬರವಣಿಗೆ ಭಾಷಣ, ಸಭೆ ಇತ್ಯಾದಿ ಚಟುವಟಿಕೆಗಳು ಹೆಚ್ಚಿನ ತೊಂದರೆಯಿಲ್ಲದೆ ಪ್ರಾರಂಭವಾಗುತ್ತವೆ. ಸಂಚಾರ, ಪ್ರವಾಸ ಒಂದಿಷ್ಟು ಕಮ್ಮಿಯಾಗಿದೆ. ಕೈ ಬಡಿಗ, ಊರುಗೋಲು ಅಭ್ಯಾಸವಾಗಿ ಬಿಟ್ಟಿದೆ. ದೂರ ಪ್ರವಾಸ ಆದಷ್ಟು ಕಮ್ಮಿ ಆಗಿ ಬಿಟ್ಟಿದೆ. ಸಿಟಿಗೆ ಹೋಗಬೇಕಾದಾಗ ಊರಿಗೊಬ್ಬನೇ ಎಂಬಂತಿರುವ 'ಆಟೋ ಆಶ್ರಯಪಡೆಯ... ಮೊದಲು ದೀಪಕ್ ಅಂತ ಇದ್ದ. ಮತ್ತೆ ರಮೇಶ್, ಇತ್ತೀಚೆಗೆ ಅವನೂ ದೂರ ಹೋಗಿ ಬಿಟ್ಟಿದ್ದಾನೆ. ಇನ್ನೊಬ್ಬರನ್ನು ತಯಾರುಮಾಡುತ್ತೇನೆ ಅಂತ ಅಂಗಡಿ ಶೆಟ್ಟರು ಆಶ್ವಾಸನೆಕೊಟ್ಟಿದ್ದಾರೆ. ಸ್ಥಳೀಯ ಭೇಟಿಗಳಿಗೆ ಅಥವಾ ನೆಲಮಂಗಲಕ್ಕೆ ಹೋಗಿ ಬರಬೇಕಾದರೆ ನರಸಿಂಹಮೂರ್ತಿಯವರೋ ರಘುಪತಿ ಭಟ್ಟರೋ ತಮ್ಮ ದ್ವಿಚಕ್ರವಾಹನದಲ್ಲಿ ನೆರವಾಗುತ್ತಾರೆ. ಅನಿವಾರ್ಯವಾದರೆ ಪಕ್ಕದ ಅಡ್ಡರಸ್ತೆಯ ಪ್ರತಾಪ್ 'ಕಾರ್' ತೆಗೆದುಕೊಂಡು ಬರುತ್ತಾನೆ (ಬಾಡಿಗೆಗೆ ಇಟ್ಟ ಖಾಸಗೀದಾರರು). ಅಂತು ಇಂತು ಹೇಗೋ ಏನೋ ಬದುಕು ಜಟಕಾಬಂಡಿ ಸಾಗುತ್ತಿದೆ.

❋ ❋ ❋

ವಿದಾಯ.....

'ಅಲೆಮಾರಿಯ ಕತೆ' ಯನ್ನು ಬರೆಯುವ ನಿರ್ಧಾರ ಮಾಡಿದ್ದೇ ಬಹಳ ವಿಳಂಬವಾಗಿತ್ತು. ಆಯುಸ್ಸಿನ ಮುಳ್ಳು ಎಪ್ಪತ್ತೈದರ ಆಚೆಗೆ ಹೊರಳಿತ್ತು. ಅಷ್ಟರೊಳಗಾಗಿಯೇ ದೃಷ್ಟಿಮಂದವಾಗತೊಡಗಿತ್ತು. ಬರೆಯಲು ತೊಡಗಿದರೆ ಲೇಖನಿ ಮುಂದಕ್ಕೆ ಸಾಗುತ್ತಿರಲಿಲ್ಲ! ಎಲ್ಲಕ್ಕೂ ಹೆಚ್ಚಾಗಿ 'ಮರೆವು' ತನ್ನ ಆಧಿಪತ್ಯವನ್ನು ಬಿಗಿಗೊಳಿಸಲು ತಯಾರಾಗಿತ್ತು. ಇನ್ನು ನಿಧಾನಿಸುವುದು ಬೇಡ ದಿನದಿನಕ್ಕೆ ಅಷ್ಟಿಷ್ಟು ಅಂತ ಬರೆಯಲು ಪ್ರಾರಂಭಿಸು ಅಂತ ಸ್ನೇಹಿತರಾದ ಪ್ರೋ|| (ಡಾ) ಎಚ್. ಎಂ. ಮರುಳಸಿದ್ಧಯ್ಯ ಹಾಗೂ ಸೂ.ವೆಂ.ಆರಗ ಒತ್ತಾಯಿಸತೊಡಗಿದರು. ಯಾವುಯಾವುದೋ ನೆಪ ಹೇಳಿ ಇನ್ನು ಮುಂದೂಡುವುದು ಸಾಧ್ಯವಾಗದೆಂದು ಖಚಿತವಾದಾಗ ಬರೆಯಲು ಪ್ರಾರಂಭಿಸಿದೆ. ಬರೆಯಲು ಪ್ರಾರಂಭಿಸಿದಾಗ ಇನ್ನೊಂದು ತೊಡಕು ತಲೆದೋರಿತು. ನೆನಪುಗಳು ಮಾಸುವ ಮುನ್ನವೇ ಪ್ರಾಜೆಕ್ಟಗಳ ಬಗ್ಗೆ ಬರೆಯಲೋ ಅಥವಾ 'ಆತ್ಮಕತೆ'ಯ ಶಂಖವನ್ನು ಊದಲೋ ಎಂಬ ದ್ವಂದ್ವ ಎದುರಾಯಿತು. ಯಥಾಪ್ರಕಾರ ಮತ್ತೆ ವಿಳಂಬ ಮರುಳುಸಿದ್ಧಯ್ಯ ನವರು ಮಾತ್ರ ಫೋನ್ ಮಾಡಿ ಎಲ್ಲಿವರೆಗೆ ತಲಪಿತು ಎಂದು ವಿಚಾರಿಸುತ್ತಲೇ ಇದ್ದರು. ಅದು ಹೇಗೋ ಬರೆಯದ ವಿಚಾರ ತಿಳಿದ ರಾಮಚಂದ್ರ ಉಚ್ಚಿಲರು (ಚರಾ) ತಮ್ಮ ಗಡಸು ಧ್ವನಿಯಿಂದ ಎಲ್ಲೆಗ್‌ದೀ ನಾವು ಕಲ್ಲು (ನಾಳೆಗೆ ಎಂದಿಟ್ಟರೆ-ಕೆಲಸ ಹಾಳು) ಎಂದು ಬೆದರಿಕೆ ಹಾಕ ತೊಡಗಿದರು. ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಪ್ರದಾನದ ವೇಳೆ ಬೆಂಗಳೂರಲ್ಲಿ ಭೇಟಿಯಾದ ಡಾ|| ನಾ. ಮೊಗಸಾಲೆ (ತಮ್ಮ ಆತ್ಮಕತೆಯನ್ನು ಆಗಲೇ ಬರೆದು ಮುಗಿಸಿದವರು) ಇನ್ನು ಮೀನ-ಮೇಷ ಎಣಿಸುವುದು ಬೇಡ ಎಂದು ಒತ್ತಾಯಿಸಿದರು. ಅಷ್ಟೇ ಸಾಲದೆಂಬಂತೆ ಕಾಂತಾವರದ ಕನ್ನಡ ಸಂಘದ ಸನ್ಮಾನದ ವೇಳೆಗೆ ಕೆಲವು ಜನ ಹಿರಿಯರಿಂದಲೂ 'ಬರೆದುಬಿಡಿ' ಎಂದು ಹೇಳಿಸಿದರು. ಇನ್ನು ಸುಮ್ಮನಿರುವುದು ಸಾಧ್ಯವಾಗದೆಂದು ಅಂತೂ ಇಂತೂ ಬರೆಯಲು ತೊಡಗಿದೆ.

ಮೊದಲು ಪ್ರಾಜೆಕ್ಟ್‌ಗಳ ಕತೆಯನ್ನು ಬರೆಯುವುದು ಸರಿ ಎಂದು ಪೆನ್ ಎತ್ತಿಕೊಂಡರೆ ಅದು ಹನುಮಂತನ ಬಾಲದಂತೆ ವಿಸ್ತರಿಸುತ್ತಲೇ ಹೋಯಿತು (ಅಲ್ಲಲ್ಲಿ ಕೆಲವಂಶಗಳನ್ನು

ತೆಗೆದು ಹಾಕಿ 'ಸಂಸ್ಕಾರ' ಮಾಡುವ ಪ್ರಯತ್ನವನ್ನು ಕೈಕೊಂಡೆ. ಹೀಗಾಗಿ ಅಲ್ಲಲ್ಲಿ ಇಷ್ಟಿಷ್ಟು ಮೊಟಕು ಮೊಟಕಾದ ಆದರೆ ಮುಖ್ಯಾಂಶವೇನೂ ಬಿಟ್ಟು ಹೋಗಿರದ ಕಂತೆ ತಯಾರಾಯಿತು.

ಇನ್ನೊಂದು ಅಂಶವೆಂದು ನನ್ನ ಸ್ವಂತ ಕತೆಯನ್ನು ಭಟ್ಟಿ ಇಳಿಸಲು ತೊಡಗಿದೆ. ಅದನ್ನು ಕುಗ್ಗಿಸಿ, ಚುಟುಕಾಗಿಸುವ ಪ್ರಯತ್ನವನ್ನು ಮಾಡಿದೆ. ಈ ನಡುವೆ, 25 ವರ್ಷಗಳ ಕಾಲ ಪ್ರಾಜೆಕ್ಟಗಳ ಕಾಲ ಜತೆಯಾಗಿ ದುಡಿದ ಸಬಿತಾ ಅನುಭವಗಳನ್ನು ಪ್ರತ್ಯೇಕವಾಗಿ ಬರೆಯುವಂತೆ ಅದರನ್ನು ಪ್ರಸಲಾಯಿಸಿದೆ. ಮೊದಲು ಅದಕ್ಕೆಲ್ಲ ಕಿವಿಗೊಡದಿದ್ದರೂ, ಕೊನೆಗೆ 'ಹುಂ' ಎಂದು ಒಪ್ಪಿಗೆ ಕೊಟ್ಟದ್ದರಿಂದ ನನ್ನ ಕತೆ-ಪ್ರಾಜೆಕ್ಟ್ ಪುರಾಣಗಳಲ್ಲಿ ಅವರ ಪಾಲಿನ ಕಾರ್ಯವನ್ನು ಕೈಬಿಟ್ಟೆ. ಆದರೆ ಅದನ್ನು ಅವರು ಬರೆಯುವುದಕ್ಕೆ ಪ್ರಾರಂಭಿಸಲೇ ಇಲ್ಲ!

ಅರಸಿನಕುಂಟೆ ಗ್ರಾಮದಲ್ಲಿ ಒಂದು ಕಿರು ಸಾಹಿತ್ಯ ಸಂಘವಿದೆ. ಅದರ ಪ್ರಮುಖರಾದ ಡಾ।। ಎಚ್.ಎಸ್. ಗೋಪಾಲರಾಯರು, ಕಮಲಾಮೂರ್ತಿ ಮೊದಲಾದವರು ಬರೆದು ಮುಗಿಸಿಬಿಡಿ ಎಂದು ಒತ್ತಾಯಿಸಲು ತೊಡಗಿದರು. ನನ್ನ ಓರೆಕೋರೆ ಅಕ್ಷರಗಳನ್ನು ಓದಿ ಹಸ್ತ ಪ್ರತಿ ತಯಾರಿಸಲು ಶ್ರೀಮತಿ ಜಯಶ್ರೀ ರಘುಪತಿಭಟ್, ಶಶಿಕಲಾ ಮತ್ತು ನಳಿನಾ ಮುಂದೆ ಬಂದರು. ಬೆರಳಚ್ಚು ತಯಾರಿಸಿ ಕೊಡಲು ಶಂಕರ ದೀಕ್ಷಿತರು (ಮತ್ತು ಬೆಂಗಳೂರಿನ ಮಂಜುನಾಥ ಉಪಾಧ್ಯಾಯರು) ತಪ್ಪೊಪ್ಪುಗಳನ್ನು ನೋಡಲು ನಾರಾಯಣ ಶಾನಭಾಗರು, ಅಕೃಭ ಹೀಗೆ ದೊಡ್ಡ ಪರಿವಾರವೇ ಸಿದ್ಧವಾಯಿತು. ಇಷ್ಟೆಲ್ಲಾ ಅಂತೂ ಅಲೆಮಾರಿಯ ಕತೆಯನ್ನು ಕಾಗದಕ್ಕಿಳಿಸಿದೆ.

ಈ ನಡುವೆ ಸಂಭವಿಸಿದ ಅನೇಕ ದು:ಖದ ಘಟನೆಗಳಿಂದಾಗಿ 'ಅಲೆಮಾರಿಕಂತೆ' ಎಲ್ಲೆಲ್ಲೋ ಚದರಿ ಹೋಗಿತ್ತು. ಅದು ಈಗ ಪುಸ್ತಕ ರೂಪದಲ್ಲಿ ಪ್ರಕಟವಾಗಿದೆ. ಇದಕ್ಕಾಗಿ ಡಾ।। ನಾ. ಮೊಗಸಾಲೆಯವರನ್ನು ಶ್ರೀಯುತ ರಾಜೀವಲೋಚನ ಅವರನ್ನು ಅಭಿನಂದಿಸುತ್ತೇನೆ.

ಅನುಬಂಧ

ಡಾ॥ ಎಂ.ಬಿ. ಮರಕಿಣಿಯವರ ಪ್ರಕಟಿತ ಕೃತಿಗಳು

ವೈದ್ಯಕೀಯ

ಆರೋಗ್ಯ ರಕ್ಷಣೆ (2004)

ವಿಷ ವೈದ್ಯಶಾಸ್ತ್ರ (1977)

ವಿಷ ಚಿಕಿತ್ಸೆ (2007)

ಅಡುಗೆ ಮನೆಯ ಔಷಧಿಗಳು (2010)

ಕರಾವಳಿಯ ವನೌಷಧಿಗಳು (2010)

ಹಾಸ್ಯ-ವಿಡಂಬನೆ

ಗಾಜಿನ ಮನೆಯಲ್ಲಿ ಧನ್ವಂತರಿ (2000)

ಮೊಗ್ಲಾಯರ ಮಧ್ಯೆ ಧನ್ವಂತರಿ (2002)

ಬರಗಾಲದಲ್ಲಿ ಧನ್ವಂತರಿ, ತೆಲಂಗಾಣದಲ್ಲಿ ಧನ್ವಂತರಿ

ರೂಪರಾಶಿಗಳ ಸಂತೆ (1953)

ಇತರ ಕೃತಿಗಳು

ನೂರು ಘಟನೆ ಸಾವಿರ ನೆನಪುಗಳು (2004)

ಕೆಲವು ನೆನಪುಗಳು

ಬರಗಾಲದ ಅಗ್ನಿಕುಂಡ ಮತ್ತು ಇತರ ಬರಹಗಳು (2009)

ಆಧುನಿಕ ಮನೋವಿಜ್ಞಾನ (1958)

ಸಂಪಾದಿತ

ಮುಂಗಾರು ಮುಗಿಲು (ಕಥಾಸಂಕಲನ)

ದಕ್ಷಿಣ ಕನ್ನಡದ ಜನಪದ ಗೀತೆಗಳು (ಹವ್ಯಕರ ಹಾಡುಗಳು)(1962)

ಪ.ಗೋ ಸಂಸ್ಮರಣೆ

ಬಿದ್ದದ್ದು ಗರಿಯಲ್ಲ ಹಕ್ಕಿಯೇ (ಕುಞ್ಞಿಹಿತ್ಲುರಾಮಚಂದ್ರ ಸ್ಮಾರಕ ಕೃತಿ) (2003)

ನವಸಾಕ್ಷರರಿಗಾಗಿ

ಆರೋಗ್ಯಭಾಗ್ಯ

ಮಕ್ಕಳ ರಕ್ಷಣಾ ಕವಚ

ಮನೆಮದ್ದುಗಳು (2009)

ಗ್ರಾಮ ಪಂಚಾಯತಿ ಶಾಸನ ಪರಿಚಯ (1993)

ಡಾ। ಸಬಿತಾರೊಂದಿಗೆ ರಚಿಸಿದ ಕೃತಿಗಳು

ಆರೋಗ್ಯ ರಕ್ಷಣೆ ಭಾಗ- 1	1995
ಚುಚ್ಚುಮದ್ದಿನ ರಕ್ಷಾಕವಚ	1992
ಜಂತುಹುಳುಗಳು	1993
ತುರಿಸುವ ಕಜ್ಜಿ	1993
ನಾವು ಕುಡಿಯುವ ನೀರು	1992
ನಿತ್ಯ ಬಳಕೆಯ ವಿಷ ವಸ್ತುಗಳು	1992

ನೈರ್ಮಲ್ಯ ರಕ್ಷಣೆ	1992
ಮಕ್ಕಳಿಗೆ ಮಾರಕ ಅತಿಸಾರ ಭೇದಿ	1992
ಮದ್ದಿಲ್ಲದ ರೋಗ ಏಡ್ಸ್	1993
ಮಸಾಲೆಮದ್ದು	1993
ಸುಲಭ ಚಿಕಿತ್ಸೆ	1992
ಸುಲಭ ಚಿಕಿತ್ಸೆಯ ಮನೆಮದ್ದುಗಳು	2007



ಅಲೆಮಾರಿ ವೈದ್ಯನ ಆತ್ಮಕತೆ ಎನ್ನುವುದ ಪ್ರಸಿದ್ಧ ಸಾಹಿತಿ ಮತ್ತು ವೈದ್ಯ ಲೇಖಕ ಡಾ.ಎಂ.ಬಿ.ಮರಕ್ಕಿಣಿ ಅವರ ಆತ್ಮಕತೆ. ಅದರ ವೈಶಿಷ್ಟ್ಯ ಇರುವುದು ಅದನ್ನು ಓದುತ್ತಾ ಹೋದ ಹಾಗೆ, ಅದು ಅವರೊಂದಿಗೆ ಸಂಪರ್ಕಕ್ಕೆ ಬಂದವರಲ್ಲಿ ಮುಖ್ಯರಾದವರೆನ್ನಬಹುದಾದವರ ಆತ್ಮಚರಿತ್ರೆಯ ಪುಟ್ಟ ಪುಟಪುಟಗಳನ್ನು ತೆರೆದಿಡುವುದರಲ್ಲಿ. ತಮ್ಮ ವೃತ್ತಿ ಜೀವನದ ಕೆಲವು ಘಟನೆಗಳನ್ನು ಮತ್ತು ಅಲೆಮಾರಿಯಾಗಿ ಅಂಡಲೆದ ಭಾಗಗಳಲ್ಲಿನ ನೆಲದ ಬದುಕಿನ ಸಂಕಟಗಳನ್ನು ಅವರು ಅನಾವರಣಗೊಳಿಸುವಾಗ, ಅವು ಕತೆಯ ಸ್ವರೂಪ ಪಡೆಯುವ ಬಗೆ ಅಪರೂಪದ್ದು. ವೈದ್ಯನಾಗಬೇಕೆನ್ನುವ ಹಂಬಲ ಇಲ್ಲದೇ ವೈದ್ಯನಾಗಬೇಕಾದ ಸಂದರ್ಭ ಬಂದ ಮೇಲೆ ಅವರು ಆ ವೃತ್ತಿಗೆ ಸಲ್ಲಿಸಿದ ನ್ಯಾಯ ಎಲ್ಲ ಕಾಲದಲ್ಲೂ ಎಲ್ಲಾ ವೈದ್ಯರಿಗೂ ಆದರ್ಶ ಮತ್ತು ಮಾದರಿ ಎನ್ನುವ ರೀತಿಯದ್ದು. ಅವರ ಬರವಣಿಗೆಯ ದಾಟಿ ಪ್ರಸಿದ್ಧ (ವೈದ್ಯ) ಸಾಹಿತಿಯಾಗಿದ್ದ 'ರಾಶಿ' (ಡಾ. ಎಂ. ಶಿವರಾಂ) ಅವರಿಗೆ ಸಮೀಪದಾಗಿದ್ದು ಹಾಸ್ಯ, ವ್ಯಂಗ್ಯ, ವಿಷಾದ ಮಾನವಾಂತಕರಣಗಳೆಲ್ಲ ಇಲ್ಲಿ 'ಸಾವಯುವ ಸಮಗ್ರೀಕರಣ'ದ ಬಲದಲ್ಲಿ ಇವೆ ಎನ್ನುವುದರಿಂದ ಅದಕ್ಕೆ ಅದೇ ಸಾಟಿ ಎಂಬಂತೆ ಆಗಿದೆ. ಬದುಕು ಎನ್ನುವುದು ತನ್ನದು ಮಾತ್ರ ಎನ್ನುವ ಹಕ್ಕು ಯಾರಿಗೂ ಇಲ್ಲ. ಅದು ತನ್ನಷ್ಟೇ ಪರರದ್ದು ಎಂಬ ಒಳಹರಿವೊಂದು ಇಡೀ ಕೃತಿಯ ಉದ್ದಕ್ಕೂ ಇದ್ದು ಅದಕ್ಕೆ ಕಾರಣ ಅವರ ವೈಚಾರಿಕತೆಯಷ್ಟೇ ಅಲ್ಲ, ಸಾಹಿತ್ಯ ಸಾಂಸ್ಕೃತಿಕ ಸಾಮಾಜಿಕ ಕಾಳಜಿ ಮತ್ತು ಜೀವನ ಪ್ರೀತಿ ಕೂಡಾ. ನೆಮ್ಮದಿಯಾಗಿ ಅವರು ಒಂದೇ ಕಡೆ ಇದ್ದು ಕೈ ತುಂಬ ಸಂಪಾದಿಸಬಹುದಾಗಿದ್ದರೂ, ಅವರು ಅದನ್ನು ಧಿಕ್ಕರಿಸಿ ಬದುಕು ಒಡ್ಡಿದ ಸವಾಲುಗಳನ್ನು ಎದುರಿಸಿದ್ದು ಅವರ ಜೀವನೋತ್ಸಾಹಕ್ಕೆ ಸಾಕ್ಷಿ. ಅವರು ರಾಜಮಾರ್ಗದಲ್ಲಿ ನಡೆಯದಿರಬಹುದು. ನಿಜ, ಆದರೆ ಅವರು ನಡೆದ ದಾರಿಗೆ ಕೊನೆ ಇರುವುದು ಗಾಂಧೀಜಿ ಕಂಡ ಗ್ರಾಮಸ್ವರಾಜ್ಯದಲ್ಲಿ. ಸಂತೆಯೊಳಗೆ ಇದ್ದೂ ಸಂತ ಎಂದು ಅನಿಸಿಕೊಳ್ಳದೇ ಸಂತನೇ ಆಗಿ ಈಗಲೂ ಇರುವ ಅವರ ಹೆಗಲ ಮೇಲೆ ಇದ್ದುದು ಒಂದು ಪುಟ್ಟ 'ಮಾರಾಪು' (ಚೀಲ). ಅದರೊಳಗೆ ಇದ್ದುದನ್ನೆಲ್ಲ ಅವರು ಮೊಗೆಮೊಗೆದು ಕೊಡಬಹುದಗಿದ್ದರೂ ಕೊಟ್ಟದ್ದು ಕಡಿಮೆ ಬಚ್ಚಿಟ್ಟದ್ದು ಹೆಚ್ಚು. ಆ ಬಚ್ಚಿಟ್ಟಿದ್ದರಲ್ಲಿ ಒಂದಷ್ಟನ್ನು ಬಿಚ್ಚಿ ಇಲ್ಲಿ ಕೊಟ್ಟದ್ದು ನೋಡಿದರೆ ಅವರು ಇನ್ನಷ್ಟು ಬಿಚ್ಚಿಕೊಡಬಹುದಿತ್ತಲ್ಲ ಎನ್ನುವ ಆಸೆ ಇದನ್ನು ಓದಿದವರಲ್ಲಿ ಮೂಡಬಹುದು. ಅಲ್ಲಮ ಹೇಳಿದ 'ಶಬ್ದದಿಂದ ನಿಶ್ಯಬ್ದದೆಡೆಗೆ' ಎನ್ನುವ ಮಾತು ಇರುವುದೇ ಆದರೆ, ಅದು ಹೀಗೂ ಇದ್ದೀತು ಎನ್ನುವಂತೆ ಈ ಕೃತಿ ಇದೆ ಎಂದರೆ ಅದು ಸಹಜವೂ ಹೌದು ಅಸಹಜವೂ ಅಲ್ಲ!

ಡಾ. ನಾ. ಮೊಗಸಾಲೆ

ಶ್ರೀನಿವಾಸ ಪುಸ್ತಕ ಪ್ರಕಾಶನ